ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭರ್ತೃಹರಿ ಹಂಗಾಮಿ ಸ್ಪೀಕರ್

ಲೋಕಸಭೆಯ ಹಂಗಾಮಿ ಸಭಾಧ್ಯಕ್ಷರನ್ನಾಗಿ ಏಳು ಬಾರಿಯ ಸಂಸದ, ಚುನಾವಣೆಗೂ ಮುನ್ನ ಬಿಜೆಪಿ ಸೇರಿದ್ದ ಬಿಜೆಡಿ ನಾಯಕ ಭರ್ತೃಹರಿ ಮಹತಬ್ ಅವರನ್ನು ಆಯ್ಕೆ ಮಾಡಲಾಗಿದೆ.

ಪುಟ ತೆರೆದಂತೆ...

ಸಂವಿಧಾನವನ್ನು ಪಾತಾಳಕ್ಕೆ ತಳ್ಳಿದ್ದ ಇಂದಿರಾ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ಪ್ರತಿದಿನದ ಅಭ್ಯಂಗದಿಂದ ರೋಗನಿರೋಧಕ ಶಕ್ತಿ ಹೆಚ್ಚಳ!
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
ಸಂ.ಗಮ | 7

ವಿಶ್ವದೆಲ್ಲೆಡೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಮೆರುಗು



ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ತೋರಣಗಲ್ಲಿನ ಜೆಎಸ್‌ಡಬ್ಲ್ಯು ಟೌನ್‌ಶಿಪ್ ವಿದ್ಯಾನಗರದಲ್ಲಿ ಏರ್ಪಡಿಸಲಾಗಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಕಾರ್ಮಿಕ ಸಚಿವ ಸಂತೋಷ್ ಲಾಡ್, ವಿಧಾನ ಪರಿಷತ್ ಸದಸ್ಯ ಗೋವಿಂದರಾಜ್, ನಟಿ ಶ್ರೀಲೀಲಾ ಪಾಲ್ಗೊಂಡಿದ್ದರು.

10ನೇ ವರ್ಷದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಭಾಗವಾಗಿ ಭಾರತ ಸೇರಿದಂತೆ ವಿಶ್ವದೆಲ್ಲೆಡೆಯ ಜನರು ಯೋಗಾಸನ ಮಾಡುವ ಮೂಲಕ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಮೆರುಗು ತಂದರು. ಕಾಶ್ಮೀರದ ಶ್ರೀನಗರದಲ್ಲಿರುವ ದಾಲ್ ಸರೋವರದ ತಟದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪ್ರಧಾನಿ ನರೇಂದ್ರ ಮೋದಿ ಅವರು ಹಲವು ಆಸನಗಳನ್ನು ಪ್ರದರ್ಶಿಸುವ ಮೂಲಕ ಯೋಗಾಭ್ಯಾಸ ಮಾಡುವಂತೆ ಜನರನ್ನು ಹುರಿದುಂಬಿಸಿದರು. ಭಾರಿ ಸಂಖ್ಯೆಯಲ್ಲಿ ಸೇರಿದ್ದ ವಿದ್ಯಾರ್ಥಿಗಳು, ಮೋದಿ ಅವರೊಂದಿಗೆ ವಿವಿಧ ಆಸನಗಳನ್ನು ಹಾಕಿ ಸಂಭ್ರಮಿಸಿದರು. ಅವರೊಂದಿಗೆ ಸೆಲ್ಫಿ ತೆಗೆದುಕೊಂಡರು. ಬಳ್ಳಾರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯೋಗಾಸನ ಮಾಡಿದರು.

ಶ್ರೀನಗರದ ದಾಲ್ ಸರೋವರ ತೀರದಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ.

ಮಾತಂದ್ರೆ ಮಾತು

ಮಾಜಿ ಸಿಎಂ ಯಡಿಯೂರಪ್ಪ ಹಾಗೂ ವಿಜಯೇಂದ್ರ ಜತೆ ಹೊಂದಾಣಿಕೆ ಆಗುವಂತೆ ಮನವೊಲಿಕೆ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆ ನೀಡುವುದಾಗಿ ಹೇಳಿದ್ದಾರೆ. ವಿಜಯೇಂದ್ರಗೇ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆ ಇಟ್ಟುಕೊಂಡು, ನಾನು ರಾಜ್ಯಾಧ್ಯಕ್ಷನಾಗುತ್ತೇನೆಂದು ಹೇಳಿದ್ದೇನೆ.

ಬಸನಗೌಡ ಯತ್ನಾಳ
ಶಾಸಕ

ದಾರಿದೀಪೋಕ್ತಿ

ಮನೆ ಎಷ್ಟು ಸಣ್ಣದಿದೆ, ದೊಡ್ಡದಿದೆ ಎಂಬುದಕ್ಕೆ ಮಹತ್ವ ನೀಡಬಾರದು. ಮನಸ್ಸು, ಹೃದಯ ಎಷ್ಟು ದೊಡ್ಡದಿದೆ ಎಂಬುದಕ್ಕೆ ಒತ್ತು ನೀಡಬೇಕು. ಹೃದಯ ಮುಷ್ಟಿ ಗಾತ್ರದಷ್ಟಿರ ಬಹುದು. ಆದರೆ ಸ್ನೇಹ, ಮಮತೆ, ಕರುಣೆ ಮಾತ್ರ ಬೆಟ್ಟದಷ್ಟಿರುವಂತೆ ನೋಡಿಕೊಳ್ಳಬೇಕು. ಹೆಚ್ಚು ಹಣ ಇಲ್ಲದಿದ್ದರೇನಂತೆ, ಗುಣದಲ್ಲಿ ಬಡತನವಿರಬಾರದು.

ವಕ್ರತುಂಡೋಕ್ತಿ

ಒಂದು ಸಮಸ್ಯೆಯನ್ನು ಚರ್ಚಿಸಲು ಗುಂಡು ಪಾರ್ಟಿ ಪ್ರಶಸ್ತ ಸ್ಥಳ ಅಲ್ಲ ಅಂದ್ರೆ, ಆ ಸಮಸ್ಯೆ ಬೇಗ ಬಗೆಹರಿಯುವುದಿಲ್ಲ ಎಂದು ನಿರ್ಧರಿಸಬಹುದು.

ಸ್ನೇಹಿತನಿಂದ 40ರಿಂದ 50 ಲಕ್ಷ ಸಾಲ ತೆಗೆದುಕೊಂಡಿದ್ದ ದರ್ಶನ್

ಸಾಲ ಕೊಟ್ಟ ಮೋಹನ್‌ರಾಜ್ ನಾಪತ್ತೆ, ಪೊಲೀಸ್ ನೋಟಿಸ್ ಜಾರಿ

ದೋಸ್ತ್‌ನಿಂದ ಸಾಲ ದಾಸನಿಗೆ ಐಟಿ ಶೂಲ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪದಲ್ಲಿ ಭಾರಿ ಸಂಕಷ್ಟಕ್ಕೆ ಸಿಲುಕಿರುವ ನಟ ದರ್ಶನ್‌ಗೆ, ಮತ್ತೊಂದು ಸಂಕಷ್ಟ ಎದುರಾಗುವುದು ಬಹುತೇಕ ಖಚಿತವಾಗಿದೆ.

ರೇಣುಕಾಸ್ವಾಮಿ ಹತ್ಯೆಯಾಗುತ್ತಿದ್ದಂತೆ ಈ ಪ್ರಕರಣದಿಂದ ತಪ್ಪಿಸಿಕೊಳ್ಳಲು ಲಕ್ಷ ಲಕ್ಷ ಲಂಚ ನೀಡಲು ಮುಂದಾಗಿದ್ದ ದರ್ಶನ್, ಇದಕ್ಕಾಗಿ 40ರಿಂದ 50 ಲಕ್ಷ ರು.ಗಳನ್ನು ಸ್ನೇಹಿತನ ಬಳಿ ನಗದು ರೂಪದಲ್ಲಿ ಸಾಲ ಪಡೆದಿದ್ದಾರೆ. ಇದರಿಂದ ಇದೀಗ ಸಾಲ ಕೊಟ್ಟಿದ್ದ ಸ್ನೇಹಿತ ಹಾಗೂ ದರ್ಶನ್ ಇಬ್ಬರಿಗೂ ಐಟಿ ಆತಂಕ ಶುರುವಾಗಿದೆ.

ಖಳ ನಾಯಕ

ದರ್ಶನ್‌ಗೆ ಈ ಪ್ರಮಾಣದಲ್ಲಿ ರಾತ್ರೋರಾತ್ರಿ ಸಾಲದ ರೂಪದಲ್ಲಿ ಹಣ ನೀಡಿರುವುದು ಮಾಜಿ ಕಾರ್ಪೋರೇಟರ್ ಹಾಗೂ ಬಿಬಿಎಂಪಿಯ ಮಾಜಿ ಉಪಮೇಯರ್ ಆಗಿದ್ದ ಮೋಹನ್ ರಾಜ್ ಎನ್ನುವುದು ತಿಳಿದುಬಂದಿದೆ. ಇದೀಗ ಪೊಲೀಸರು ಮೋಹನ್ ರಾಜ್‌ಗೆ ನೋಟಿಸ್ ನೀಡಿದ್ದಾರೆ. ಆದರೆ ಪ್ರಕರಣದಲ್ಲಿ ತನ್ನ ಹೆಸರು ಕೇಳಿಬರುತ್ತಿದ್ದಂತೆ, ತಲೆಮರೆಸಿಕೊಂಡಿರುವ ಮೋಹನ್ ರಾಜ್ ತಮ್ಮ ಮೊಬೈಲ್ ಸ್ವಿಚ್ ಆಫ್ ಮಾಡಿದ್ದಾರೆ.

ಪ್ರಮುಖವಾಗಿ ಮೋಹನ್‌ರಾಜ್ ಅವರ ಬಳಿ ಯಾವ ಕಾರಣಕ್ಕಾಗಿ ದರ್ಶನ್ ಇಷ್ಟೊಂದು ಹಣ ಪಡೆದಿದ್ದರು ಎನ್ನುವ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಒಂದು ವೇಳೆ ಕೊಲೆ ಪ್ರಕರಣದ ಮಾಹಿತಿಯಿದ್ದರೂ, ಅದನ್ನು ಪೊಲೀಸರಿಗೆ ಏಕೆ ತಿಳಿಸಲಿಲ್ಲ? ಅಥವಾ ಈ ಪ್ರಕರಣದಲ್ಲಿ ಮೋಹನ್ ಅವರ ಪಾತ್ರವೇನು ಎನ್ನುವ ಬಗ್ಗೆ ಪೊಲೀಸರು ತನಿಖೆ ನಡೆಸುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ. ಒಂದು ವೇಳೆ ವಿಚಾರಣೆಗೆ ಹಾಜರಾಗದಿದ್ದರೆ, ಮೋಹನ್‌ರಾಜ್ ಅವರನ್ನು ಬಂಧಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

- ಪವಿತ್ರಾಗೌಡ ನೀಡಿದ ಪ್ರಚೋದನೆಯೇ ಕೊಲೆಗೆ ಕಾರಣವೆಂದ ಪೊಲೀಸರು
- ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ 38 ಸ್ಥಳ ಮಹಜರು, 138 ವಸ್ತು ಜಪ್ತಿ
- ಸಾಲ ಕೊಟ್ಟಿದ್ದ ಮೋಹನ್ ರಾಜ್ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆ
- ಮೊಬೈಲ್ ಪತ್ತೆಗೆ ಪೌರಕಾರ್ಮಿಕರ ಬಳಕೆ, ಬಿಬಿಎಂಪಿಗೆ ಸಮಾಜ ಕಲ್ಯಾಣ ಇಲಾಖೆ ನೋಟಿಸ್
- ದರ್ಶನ್ ಪರ ವಾದ ಮಂಡಿಸಲಿರುವ ಹಿರಿಯ ವಕೀಲ ಸಿ.ವಿ.ನಾಗೇಶ್

ಪವಿತ್ರಾ ಕಿಂಗ್‌ಪಿನ್

ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಕಿಂಗ್ ಪಿನ್ ಪವಿತ್ರಾ ಗೌಡ ಎಂದು ರಿಮ್ಯಾಂಡ್ ಕಾಪಿಯಲ್ಲಿ ಉಲ್ಲೇಖಿಸಲಾಗಿದೆ. ಎ1, ಎ3ರಿಂದ ಎ7, ಎ11, ಎ12, ಎ13, ಹಾಗೂ ಎ16 ಸೇರಿ ಒಟ್ಟು 10 ಮಂದಿ ಆರೋಪಿಗಳನ್ನು ಕೊಲೆ ಪ್ರಕರಣದ ನೇರ ಭಾಗಿಗಳೆಂದು ಹೇಳಲಾಗಿದೆ. ಆದರೆ ಎ2 ಆರೋಪಿ ದರ್ಶನ್ ಹೆಸರನ್ನು ಕೊಲೆಯಲ್ಲಿ ನೇರ ಭಾಗಿಯೆಂದು ಹೆಸರಿಸಿಲ್ಲ. ಆದರೆ ದರ್ಶನ್ ಹಣ ಹಾಗೂ ಇತರೆ ಆರೋಪಿಗಳನ್ನು ಒಳಗೊಂಡ ತನ್ನ ಅಭಿಮಾನಿ ಬಳಗವನ್ನು ಬಳಸಿಕೊಂಡು ಕೃತ್ಯದಲ್ಲಿ ಭಾಗಿಯಾಗಿದ್ದಾನೆ ಎಂದು ಉಲ್ಲೇಖಿಸಲಾಗಿದೆ. ಅಪಹರಣ ಮತ್ತು ಸಾಕ್ಷ್ಯ ನಾಶ ಆರೋಪ ಹೊರಿಸಲಾಗಿದೆ. ಎ1 ಆರೋಪಿ ಪವಿತ್ರಾಗೌಡ ಕೃತ್ಯದ ರೂವಾರಿ ಎಂದು ತಿಳಿಸಲಾಗಿದ್ದು, ಈಕೆಯ ಪ್ರಚೋದನೆ ನೀಡಿ ಇತರೆ ಆರೋಪಿಗಳೊಂದಿಗೆ ಸೇರಿ ಕೊಲೆಗೆ ಒಳಸಂಚು ರೂಪಿಸಿರುವುದು ಮತ್ತು ಕೃತ್ಯದಲ್ಲಿ ಭಾಗಿಯಾಗಿದ್ದಾರೆ ಎಂದು ರಿಮ್ಯಾಂಡ್ ಕಾಪಿಯಲ್ಲಿ ಉಲ್ಲೇಖಿಸಲಾಗಿದೆ. ಪವಿತ್ರಾ ಗೌಡಗೆ ವಿಚಾರಣಾಧೀನ ಕೈದಿ ನಂಬರ್ 6024 ನೀಡಲಾಗಿದೆ. ಸದ್ಯ ಮಹಿಳಾ ವಿಭಾಗದ ಡಿ-ಬ್ಯಾರಕ್‌ನಲ್ಲಿದ್ದಾರೆ.

ತೆರಿಗೆ ಇಲಾಖೆಗೆ ಪತ್ರ

10ಲಕ್ಷಕ್ಕಿಂತ ಹೆಚ್ಚು ವ್ಯವಹಾರ ನಡೆದರೆ ಅದು ಆದಾಯ ತೆರಿಗೆ ಇಲಾಖೆಯಿಂದ ವಿಚಾರಣೆ ನಡೆಯ ಬೇಕಿದೆ. ಈ ಪ್ರಕರಣದಲ್ಲಿ ಸುಮಾರು 70 ಲಕ್ಷ ವಶಕ್ಕೆ ಪಡೆದಿರುವುದರಿಂದ, ಪೊಲೀಸ್ ಇಲಾಖೆಯು ಆದಾಯ ತೆರಿಗೆ ಇಲಾಖೆಗೆ ಪತ್ರ ಬರೆಯಲು ಮುಂದಾಗಿದೆ.

ವಲಸಿಗ ಪದವೀಧರರಿಗೆ ಗ್ರೀನ್ ಕಾರ್ಡ್: ಟ್ರಂಪ್



ವಾಷಿಂಗ್ಟನ್: ಅಮೆರಿಕದ ಕಾಲೇಜು ಗಳಿಂದ ಪದವಿ ಪಡೆಯುವ ವಲಸಿಗ ವಿದ್ಯಾರ್ಥಿಗಳಿಗೆ ಪೌರತ್ವ ನೀಡುವುದಾಗಿ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭರವಸೆ ನೀಡಿದ್ದಾರೆ. ಗ್ರೀನ್ ಕಾರ್ಡ್ ಹೊಂದಿರುವವರ ಸಂಗಾತಿ ಮತ್ತು ಮಕ್ಕಳಿಗೆ ಪೌರತ್ವ ನೀಡುವ ಯೋಜನೆ ಬಗ್ಗೆ ಜೋ ಬೈಡನ್ ಹೇಳಿಕೆ ಬೆನ್ನಲ್ಲೇ ಟ್ರಂಪ್ ಕೂಡ ಇದೇ ರೀತಿಯ ಘೋಷಣೆ ಮಾಡಿದ್ದಾರೆ.

5 ರಿಂದ 6 ಲಕ್ಷಕ್ಕೆ ನೆಟ್ ಪ್ರಶ್ನೆ ಪತ್ರಿಕೆ ಮಾರಾಟ

ದೆಹಲಿ: ನೆಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ ಸಂಬಂಧ ಸಿಬಿಐ ತನಿಖೆ ಆರಂಭಿಸಿದ್ದು 5-6 ಲಕ್ಷ ರು.ಗೆ ಪ್ರಶ್ನೆ ಪತ್ರಿಕೆ ಮಾರಾಟವಾಗಿದೆ ಎಂದು ತಿಳಿದುಬಂದಿದೆ. ಪ್ರಶ್ನೆ ಪತ್ರಿಕೆ ಸೋರಿಕೆ ಸಂಬಂಧ ಅಪರಿಚಿತ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಹಜ್ ಯಾತ್ರೆ: 98 ಭಾರತೀಯರು ಸಾವು



ದೆಹಲಿ: ಈ ಬಾರಿ 1,75,000 ಭಾರತೀಯರು ಮೆಕ್ಕಾಗೆ ತೆರಳಿದ್ದು, 98 ಮಂದಿ ಮೃತಪಟ್ಟಿದ್ದಾರೆ. ಹೆಚ್ಚಿನವರು ದೀರ್ಘಕಾಲದ ಕಾಯಿಲೆ, ವಯೋಸಹಜ ಆರೋಗ್ಯ ಸಮಸ್ಯೆಯಿಂದ ಮೃತಪಟ್ಟಿದ್ದಾರೆ. ಕಳೆದ ವರ್ಷ 187 ಜನ ಮೃತಪಟ್ಟಿದ್ದರು ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ತಿಳಿಸಿದ್ದಾರೆ.

ಮಹಾರಾಷ್ಟ್ರದಲ್ಲಿನ ಕನ್ನಡ ಶಾಲೆಗಳಿಗೆ 24 ಮರಾಠಿ ಶಿಕ್ಷಕರ ನೇಮಕಕ್ಕೆ ಆಕ್ಷೇಪ

ಮಹಾ ಸರಕಾರಕ್ಕೆ ಪತ್ರ



ಬೆಂಗಳೂರು: ಮಹಾರಾಷ್ಟ್ರದ ಗಡಿ ಗ್ರಾಮ ಗಳಲ್ಲಿರುವ ಕನ್ನಡ ಶಾಲೆಗಳಿಗೆ ಮರಾಠಿ ಶಿಕ್ಷಕರನ್ನು ನೇಮಿಸಿರುವ ಕ್ರಮವನ್ನು ಖಂಡಿಸಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಕೂಡಲೇ ಈ ಲೋಪವನ್ನು ಸರಿಪಡಿಸಿಕೊಳ್ಳಿ ಎಂದು ಮಹಾರಾಷ್ಟ್ರ ಸರಕಾರಕ್ಕೆ ಪತ್ರ ಬರೆದಿದ್ದಾರೆ.

ಗಡಿ ಭಾಗವಾದ ಮಹಾರಾಷ್ಟ್ರದ ಜತ್ ಮತ್ತು ಸೊಲ್ಲಾಪುರ ಜಿಲ್ಲೆಗಳಲ್ಲಿನ ಕನ್ನಡ ಶಾಲೆಗಳಿಗೆ 24 ಮರಾಠಿ ಶಿಕ್ಷಕರನ್ನು ನೇಮಕ ಮಾಡಿರುವುದು ಭಾರಿ ವಿವಾದಕ್ಕೆ ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಸರಕಾರಕ್ಕೆ ಪತ್ರ ಬರೆದಿರುವ ತಂಗಡಗಿ, ಆ ಶಾಲೆಗಳಿಗೆ ಕನ್ನಡ ಶಿಕ್ಷಕರನ್ನು ನೇಮಕ ಮಾಡುವಂತೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಶಿವರಾಜ್ ತಂಗಡಗಿ, ಈ ಹಿಂದೆಯೂ ಕೇರಳ ಸರಕಾರ ಇದೇ ರೀತಿ ಕಾಸರಗೋಡಿನಲ್ಲಿನ ಕನ್ನಡ ಶಾಲೆಯೊಂದಕ್ಕೆ ಮಲಯಾಳಂ ಭಾಷೆಯ ಶಿಕ್ಷಕರನ್ನು ನೇಮಿಸಿತ್ತು. ನಮ್ಮ ಮಧ್ಯ ಪ್ರವೇಶದ ಬಳಿಕ ಕೇರಳ ಸರಕಾರ ಕನ್ನಡ ಶಿಕ್ಷಕರನ್ನು ನೇಮಿಸಿತ್ತು. ಇದೀಗ ಮಹಾರಾಷ್ಟ್ರದ ಶಿಕ್ಷಣ ಸಚಿವರಿಗೆ ಪತ್ರ ಬರೆದು ಅಲ್ಲಿನ ವಾಸ್ತವ ಸ್ಥಿತಿ ಬಗ್ಗೆ ತಿಳಿಸಲಾಗಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಡ್ಡಾಯವಾಗಿ ಕನ್ನಡ ಭಾಷಾ ಮಾಧ್ಯಮದಲ್ಲಿ ಪಾಠ ಮಾಡುವ ಶಿಕ್ಷಕರನ್ನೇ ಕನ್ನಡ ಮಾಧ್ಯಮ ಶಾಲೆಗಳಿಗೆ ಮಹಾರಾಷ್ಟ್ರ ಸರಕಾರ ನೇಮಿಸಬೇಕು. ಹೀಗಾಗಲೇ ಈ ವಿಚಾರದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೂ ಚರ್ಚೆ ನಡೆಸಿದ್ದೇನೆ. ಗಡಿಭಾಗದಲ್ಲಿ ಕನ್ನಡ ಭಾಷೆ ಹಾಗೂ ಕನ್ನಡ ಶಾಲೆ ಉಳಿವಿಗೆ ನಮ್ಮ ಸರಕಾರ ವಿಶೇಷ ಕಾಳಜಿ ಹೊಂದಿದೆ ಎಂದು ಸ್ಪಷ್ಟಪಡಿಸಿದರು.

ಪಕ್ಷ ವ್ಯವಸ್ಥೆಯಿಲ್ಲದ ಅಕಾಡೆಮಿಗಳಿಲ್ಲ

ಅಕಾಡೆಮಿ ಅಧ್ಯಕ್ಷರೊಂದಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಕಚೇರಿಯಲ್ಲಿ ಸಭೆ ನಡೆಸಿರುವುದು ಭಾರಿ ವಿವಾದವಾಗಿದ್ದರೂ, ಈ ವಿಷಯವನ್ನು ಸಚಿವ ಶಿವರಾಜ್ ತಂಗಡಗಿ ಸಮರ್ಥಿಸಿಕೊಂಡಿದ್ದಾರೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷ ವ್ಯವಸ್ಥೆ ಇಲ್ಲದೆ ಸರಕಾರವಿಲ್ಲ, ಸರಕಾರವಿಲ್ಲದೇ ಅಕಾಡೆಮಿ-ಪ್ರಾಧಿಕಾರಗಳಿಲ್ಲ. ಪಕ್ಷ ವ್ಯವಸ್ಥೆಯ ಆಧಾರದ ಮೇಲೆ ಎಲ್ಲ ಸರಕಾರಗಳು ಅಸ್ತಿತ್ವಕ್ಕೆ ಬರುತ್ತವೆ. ಈಗ ರಾಜ್ಯದಲ್ಲಿರುವುದು ಕಾಂಗ್ರೆಸ್ ಸರಕಾರ ಎಂದೇ ಎಲ್ಲರೂ ಕರೆಯುವುದು. ಅಲ್ಲದೇ, ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಷ್ಟೇ ಅಲ್ಲ, ಉಪ ಮುಖ್ಯಮಂತ್ರಿಯೂ ಹೌದು. ಹಾಗಾಗಿ, ಪಕ್ಷದ ಕಚೇರಿಗೆ ಅಕಾಡೆಮಿ ಅಧ್ಯಕ್ಷರನ್ನು ಕರೆದಿದ್ದಾರೆ. ಅದರಲ್ಲಿ ತಪ್ಪು ಏಕೆ ಹುಡುಕಬೇಕು? ಎಂದು ಪ್ರಶ್ನಿಸಿದರು.

ಕಳ್ಳಬಟ್ಟಿ ದುರಂತ: ಮೃತರ ಸಂಖ್ಯೆ 50ಕ್ಕೆ

ಚೆನ್ನೈ: ಕರುಣಾಪುರಂನಲ್ಲಿ ನಡೆದ ಕಳ್ಳಬಟ್ಟಿ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 50ಕ್ಕೆ ಏರಿದೆ. ಚಿಕಿತ್ಸೆ ಪಡೆಯುತ್ತಿರುವ 118 ಮಂದಿಯಲ್ಲಿ 30 ಜನರ ಸ್ಥಿತಿ ಗಂಭೀರ ವಾಗಿದೆ. ಮೂವರು ಚೇತರಿಸಿಕೊಂಡಿದ್ದಾರೆ. ಗುರುವಾರದವರೆಗೆ ಮೃತಪಟ್ಟ 29 ಜನರ ಪಾರ್ಥಿವ ಶರೀರವನ್ನು ಅವರ ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ.

ಸಿಲಿಂಡರ್ ಸ್ಫೋಟ: ಒಬ್ಬ ಸಾವು, 9 ಮಂದಿಗೆ ಗಾಯ

ಕಲಬುರಗಿ: ಇಲ್ಲಿನ ಸಪ್ತ ಗಿರಿ ಆರೇಂಜ್ ಹೋಟೆಲ್‌ನಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಒಬ್ಬ ಮೃತಪಟ್ಟು, ಒಂಬತ್ತು ಕಾರ್ಮಿಕರಿಗೆ ಗಾಯಗಳಾಗಿವೆ. ಇಬ್ಬರ ಸ್ಥಿತಿ ಗಂಭೀರ ವಾಗಿದೆ. ಬೆಳಗ್ಗೆ 6.15ರ ಸುಮಾರಿಗೆ ಸಿಲಿಂಡರ್ ಸ್ಫೋಟಗೊಂಡಿದೆ. ಗಾಯಗೊಂಡ ಇಬ್ಬರನ್ನು ಜಿಮ್ಸ್‌ನ ಟ್ರಾಮಾ ಸೆಂಟರ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದವರನ್ನು ಜಿಮ್ಸ್ ಸಾಮಾನ್ಯ ವಾರ್ಡ್‌ಗೆ ದಾಖಲಿಸಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಪಕ್ಷದ ಕಚೇರಿಯಲ್ಲಿ ಸಾಹಿತಿಗಳ ಸಭೆ



ಕೆಲಸ ಕೊಡಿಸುವುದಾಗಿ ಹೇಳಿ ಸಲಿಂಗಕಾಮಕ್ಕೆ ಬಳಕೆ: ಜೆಡಿಎಸ್ ಕಾರ್ಯಕರ್ತನ ದೂರು

ಯುವಕನ ವಿರುದ್ಧ ಸೂರಜ್ ಆಪ್ತ ಪ್ರತಿ ದೂರು

ಸೂರಜ್ ರೇವಣ್ಣನ ವಿರುದ್ಧವೂ ಲೈಂಗಿಕ ದೌರ್ಜನ್ಯ ಆರೋಪ

ಬೆಂಗಳೂರು: ದೇಶಾದ್ಯಂತ ಸುದ್ದಿ ಮಾಡಿದ ಪೆನ್‌ಡ್ರೈವ್ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜೈಲುಪಾಲಾದ ಬೆನ್ನಿಗೇ, ಅವರ ಹಿರಿಯ ಸಹೋದರ, ಶಾಸಕ ಸೂರಜ್ ರೇವಣ್ಣ ವಿರುದ್ಧ ಯುವಕನೊಬ್ಬನನ್ನು ಅಸಹಜ ಲೈಂಗಿಕ ಕ್ರಿಯೆಗೆ ಬಳಸಿಕೊಂಡು ದೌರ್ಜನ್ಯವೆಸಗಿದ ಆರೋಪ ಕೇಳಿಬಂದಿದೆ.

ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ, ಅರಕಲಗೂಡು ಕ್ಷೇತ್ರದ ಜೆಡಿಎಸ್ ಕಾರ್ಯಕರ್ತನೊಬ್ಬನನ್ನು ಕೆಲಸ ಕೊಡಿಸುವ ನೆಪದಲ್ಲಿ ತೋಟದ ಮನೆಗೆ ಕರೆಸಿಕೊಂಡು ಸಲಿಂಗ ದೌರ್ಜನ್ಯ ಎಸಗಿದ್ದಾರೆಂದು ದೂರಲಾಗಿದೆ. ಈ ಸಂಬಂಧ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹಸಚಿವರು ಮತ್ತು ಹಾಸನ ಪೊಲೀಸ್ ವರಿಷ್ಠಾಧಿಕಾರಿಗೆ ಯುವಕ ದೂರು ನೀಡಿದ್ದಾನೆ. ಇದಲ್ಲದೇ ಖುದ್ದು ಸುದ್ದಿವಾಹಿನಿಗಳ ಮುಂದೆ ಹಾಜರಾಗಿ ಹೇಳಿಕೆ ನೀಡಿದ್ದಾನೆ.

ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಹಲವು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಪೊಲೀಸರ ತನಿಖೆ ಎದುರಿಸುತ್ತಿರುವ ಬೆನ್ನಲ್ಲೇ, ಅಣ್ಣ ಸೂರಜ್ ರೇವಣ್ಣ ವಿರುದ್ಧ ಸಲಿಂಗ ಲೈಂಗಿಕ ದೌರ್ಜನ್ಯದ ಆರೋಪ ಕೇಳಿಬಂದಿರುವುದು ದೇವೇಗೌಡರ ಕುಟುಂಬವನ್ನು ಮತ್ತೆ ಮುಜುಗರಕ್ಕೆ ತಳ್ಳಿದೆ. ಈ ಘಟನೆ ಜೂನ್ 16ರ ರಾತ್ರಿ ಚನ್ನಪಟ್ಟಣ ತಾಲ್ಲೂಕಿನ ಗನ್ನಿಕಡದ ತೋಟದ ಮನೆಯಲ್ಲಿ ನಡೆದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಕೆಲಸ ಕೊಡಿಸುವುದಾಗಿ ತೋಟದ ಮನೆಗೆ ಕರೆಸಿಕೊಳ್ಳ ಲಾಗಿತ್ತು. ಅಲ್ಲಿ ಬಲವಂತವಾಗಿ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

→ 4

- ತೋಟದ ಮನೆಗೆ ಕರೆಸಿಕೊಂಡು ಲೈಂಗಿಕ ದೌರ್ಜನ್ಯ: ಯುವಕ ದೂರು
- ಸಂತ್ರಸ್ತನೊಂದಿಗಿನ ಚಾಟಿಂಗ್, ಆಡಿಯೊ ವೈರಲ್
- ಅಸಹಜ ಲೈಂಗಿಕ ಕ್ರಿಯೆಯಿಂದ ಖಿನ್ನತೆಗೆ ಜಾರಿದ ಸಂತ್ರಸ್ತ
- ಪ್ರಕರಣ ಬಹಿರಂಗಪಡಿಸದಿರಲು ಹಣದ ಆಮಿಷ ಒಡ್ಡಿರುವ ಬಗ್ಗೆ ದೂರು

ಪ್ರತಿದೂರು ದಾಖಲು

ಶಾಸಕ ಸೂರಜ್ ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯದ ದೂರು ನೀಡಿದ ಯುವಕನ ವಿರುದ್ಧ ಸುಳ್ಳು ಆರೋಪ ಮಾಡಿ ಹಣಕ್ಕಾಗಿ ಬೇಡಿಕೆ ಇಟ್ಟಿದ್ದಾನೆಂದು ಹೊಳೆನರಸೀಪುರ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸೂರಜ್ ಆಪ್ತ ಶಿವಕುಮಾರ್ ಎನ್ನುವವರು ದೂರು ದಾಖಲಿಸಿದ್ದಾರೆ. ''ಯುವಕನೊಬ್ಬ ಸೂರಜ್ ರೇವಣ್ಣ ವಿರುದ್ಧ ಲೈಂಗಿಕ ಕಿರುಕುಳದ ದೂರು ದಾಖಲಿಸುವುದಾಗಿ ಬೆದರಿಕೆ ಹಾಕಿದ್ದು, ಐದು ಕೋಟಿ ಹಣ ನೀಡದಿದ್ದರೆ ಲೈಂಗಿಕ ದೌರ್ಜನ್ಯ ಕೇಸ್ ದಾಖಲಿಸುತ್ತೇನೆ ಎಂದು ಬೆದರಿಕೆ ಹಾಕಿದ್ದಾನೆ'' ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕಾಡಾನೆ ದಾಳಿ: ಮೂವರು ಆರಣ್ಯ ವೀಕ್ಷಕರಿಗೆ ಗಾಯ

ಚಾಮರಾಜನಗರ: ಹನೂರು ತಾಲೂಕಿನ ಮಲೆ ಮಹದೇಶ್ವರ ವನ್ಯಧಾಮದ ಪಿ.ಜಿ.ಪಾಳ್ಯ ವನ್ಯಜೀವಿ ವಲಯದಲ್ಲಿ ಗುರುವಾರ ರಾತ್ರಿ ಕಾಡಾನೆ ದಾಳಿಯಿಂದ ಆನೆ ಕಾರ್ಯಪಡೆಯ ಮೂವರು ಸಿಬ್ಬಂದಿ ಗಾಯಗೊಂಡಿದ್ದಾರೆ.

ಮುನಿಯಪ್ಪ, ನಾಗರಾಜು, ಜಡೇಸ್ವಾಮಿ ದಾಳಿಗೆ ಒಳಗಾದವರು. ಗುಂಡಿಮಾಳ ಗ್ರಾಮದ ಮುಖ್ಯ ರಸ್ತೆಯಲ್ಲಿ ಗ್ರಾಮದೊಳಗೆ ಆನೆ ನುಗ್ಗುತ್ತಿರುವುದನ್ನು ಗಮನಿಸಿದ ಸಿಬ್ಬಂದಿ ತಡೆಯಲು ಮುಂದಾಗಿದ್ದಾರೆ. ಆಗ ಆನೆ ದಾಳಿ ನಡೆಸಿದ್ದು, ಮುನಿಯಪ್ಪ ಅವರ ತಲೆ, ನಡುಭಾಗಕ್ಕೆ ಗಂಭೀರ ಪೆಟ್ಟಾಗಿದೆ. ನಾಗರಾಜು ಕೈಗೆ ಹಾಗೂ ಜಡೇಸ್ವಾಮಿ ಕಾಲಿಗೆ ಪೆಟ್ಟಾಗಿದೆ.

ಕೇಜ್ರಿ ಜಾಮೀನಿಗೆ ಹೈಕೋರ್ಟ್ ತಡೆ

ದೆಹಲಿ: ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್‌ಗೆ ನೀಡಿರುವ ಜಾಮೀನು ಪ್ರಶ್ನಿಸಿ ಇ.ಡಿ ಸಲ್ಲಿಸಿರುವ ಅರ್ಜಿ ವಿಚಾರಣೆ ಮುಗಿಯುವವರೆಗೂ ದೆಹಲಿಯ ವಿಶೇಷ ನ್ಯಾಯಾಲಯ ಗುರುವಾರ ಮಂಜೂರು ಮಾಡಿದ್ದ ಜಾಮೀನು ಆದೇಶ ಜಾರಿ ಮಾಡಲಾಗುವುದಿಲ್ಲ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಏಳು ಸಚಿವರನ್ನು ಒಳಗೊಂಡ ಸಮಿತಿ ಪುನರ್ ರಚನೆ

ಜಿಎಸ್‌ಟಿ ಮಂಡಳಿಗೆ ಕೃಷ್ಣ ಬೈರೇಗೌಡ

ದೆಹಲಿ: ಜಿಎಸ್‌ಟಿ ವ್ಯವಸ್ಥೆಯ ತೆರಿಗೆ ಪ್ರಮಾಣ ಸರಳಗೊಳಿಸಲು ರಚಿಸಿರುವ ಏಳು ಸಚಿವರನ್ನು ಒಳಗೊಂಡ ಸಮಿತಿಯನ್ನು ಪುನರ್ ರಚಿಸಲಾಗಿದೆ.

ಬಿಹಾರದ ಡಿಸಿಎಂ ಸಾಮ್ರಾಟ್ ಚೌಧರಿ ಈ ಸಮಿತಿಯ ಸಂಚಾಲಕರಾಗಿ, ಕೃಷ್ಣ ಬೈರೇಗೌಡ, ಉತ್ತರಪ್ರದೇಶದ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನಾ, ಗೋವಾದ ಸಾರಿಗೆ ಸಚಿವ ಮೌವಿನ್ ಗೊಡಿನ್ಹೋ, ರಾಜಸ್ಥಾನದ ವೈದ್ಯಕೀಯ ಮತ್ತು ಆರೋಗ್ಯ ಸೇವಾ ಸಚಿವ ಗಜೇಂದ್ರ ಸಿಂಗ್, ಪಶ್ಚಿಮ ಬಂಗಾಳದ ಹಣಕಾಸು ಸಚಿವರಾದ ಚಂದ್ರಿಮಾ ಭಟ್ಟಾಚಾರ್ಯ ಮತ್ತು ಕೇರಳದ ಹಣಕಾಸು ಸಚಿವ ಕೆ.ಎನ್.ಬಾಲಗೋಪಾಲ್ ಈ ಸಮಿತಿಯ ಉಳಿದ ಸದಸ್ಯರಾಗಿದ್ದಾರೆ.

ಸಮಿತಿ ಕೆಲಸ ಏನು?: ಜಿಎಸ್‌ಟಿ ದರ ಸರಳೀಕರಣ, ಯಾವ ವಿಭಾಗಕ್ಕೆ ವಿನಾಯಿತಿ ಸೌಲಭ್ಯ ನೀಡಬೇಕು, ಜಿಎಸ್‌ಟಿ ವರಮಾನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸಿ ವರದಿ ಸಲ್ಲಿಸುವುದು ಈ ಸಮಿತಿಯ ಜವಾಬ್ದಾರಿಯಾಗಿದೆ.

ಚನ್ನಪಟ್ಟಣದಲ್ಲಿ ಡಿಸಿಎಂ ಶಿವಕುಮಾರ್ ಸೋಲಿಸಲು ಈಗಿನಿಂದಲೇ ದೋಸ್ತಿಗಳ ಸಮರಾಭ್ಯಾಸ

ಮೂರೂ ಕ್ಷೇತ್ರಗಳ ಉಪಚುನಾವಣೆಯಲ್ಲಿ ಗೆಲುವಿಗಾಗಿ ಕಾಂಗ್ರೆಸ್-ಎನ್‌ಡಿಎ ತಂತ್ರ ಪ್ರತಿತಂತ್ರ

ಡಿಕೆ ತಂತ್ರಕ್ಕೆ ಮೈತ್ರಿಯಲ್ಲಿ ಒಗ್ಗಟ್ಟಿನ ಮಂತ್ರ

ಬೆಂಗಳೂರು: ಮಾಜಿ ಮುಖ್ಯಮಂತ್ರಿ, ಹಾಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿರುವ ಚನ್ನಪಟ್ಟಣದಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪರ್ಧಿಸುವ ಕುರಿತು ಚರ್ಚೆಯ ಬೆನ್ನಲ್ಲೇ, ಮೈತ್ರಿ ನಾಯಕರು ಎಚ್ಚೆತ್ತುಕೊಂಡಿದ್ದಾರೆ.

ಚನ್ನಪಟ್ಟಣ ಡಿ.ಕೆ.ಶಿವಕುಮಾರ್ ಹಾಗೂ ಕುಮಾರಸ್ವಾಮಿ ಅವರಿಗೆ ಪ್ರತಿಷ್ಠಿತ ಕ್ಷೇತ್ರವಾಗಿದೆ. ಡಿಕೆಶಿ ಚನ್ನಪಟ್ಟಣದಿಂದ ಸ್ಪರ್ಧಿಸಿದರೆ, ಸಹಜವಾಗಿಯೇ ಕಾಂಗ್ರೆಸ್‌ಗೆ 'ಅಲೆ' ಹೆಚ್ಚಾಗುತ್ತದೆ. ಆದ್ದರಿಂದ ಡಿಕೆಶಿ ಸ್ಪರ್ಧೆಯ ಬಗ್ಗೆ ಅಧಿಕೃತ ಘೋಷಣೆಗೂ ಮೊದಲೇ ಬಿಜೆಪಿ-ಜೆಡಿಎಸ್ ನಾಯಕರು ಸ್ಥಳೀಯ ಮಟ್ಟದಲ್ಲಿ ಚುನಾವಣಾ ಸಿದ್ಧತೆ ಆರಂಭಿಸಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ.

ಈಗಾಗಲೇ ಈ ಸಂಬಂಧ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಕುಮಾರಸ್ವಾಮಿ ಮಾತನಾಡಿದ್ದು, ಚನ್ನಪಟ್ಟಣವನ್ನು ಶತಾಯಗತಾಯ ಗೆಲ್ಲಿಸಿಕೊಂಡು ಬರಬೇಕು. ಒಂದು ವೇಳೆ ಉಪಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಗೆ ಗೆಲುವು ಸಿಕ್ಕರೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬಹುದೊಡ್ಡ ಹಿನ್ನಡೆಯಾಗಲಿದೆ ಎನ್ನುವ ಬಗ್ಗೆ ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ಎದುರಾಗಲಿರುವ ಮೂರು ಉಪಚುನಾವಣೆಯಲ್ಲಿ ಸಂಡೂರು, ಶಿಗ್ಗಾವಿಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ನಿಲ್ಲಿಸಿ, ಚನ್ನಪಟ್ಟಣದಿಂದ ಜೆಡಿಎಸ್ ಅಭ್ಯರ್ಥಿಯನ್ನು ನಿಲ್ಲಿಸಲು ಚಿಂತನೆ ನಡೆಸಲಾಗಿದೆ. ಆದ್ದರಿಂದ ಇದೀಗ, ಚನ್ನಪಟ್ಟಣದಿಂದ ಯಾರೇ ಅಭ್ಯರ್ಥಿಯಾದರೂ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಬಿಜೆಪಿ ಕಾರ್ಯಕರ್ತರೂ ಪೂರ್ಣ ಪ್ರಮಾಣದಲ್ಲಿ ಜೆಡಿಎಸ್ ಅಭ್ಯರ್ಥಿ ಪರ ಕೆಲಸ ಮಾಡಬೇಕು ಎನ್ನುವ ಸೂಚನೆ ರವಾನಿಸಲಾಗಿದೆ.

→ 4



- ಸಂಡೂರು, ಶಿಗ್ಗಾವಿಯಲ್ಲಿ ಬಿಜೆಪಿ ಅಭ್ಯರ್ಥಿ ನಿಲ್ಲಿಸಿ, ಚನ್ನಪಟ್ಟಣದಿಂದ ಜೆಡಿಎಸ್ ಅಭ್ಯರ್ಥಿ ನಿಲ್ಲಿಸಲು ಚಿಂತನೆ
- ಟಿಕೆಟ್ ಹಂಚಿಕೆ ವಿಷಯದಲ್ಲಿ ಗೊಂದಲವಾಗದಂತೆ, ಎಲ್ಲರನ್ನೂ ವಿಶ್ವಾಸಕ್ಕೆ ಪಡೆಯುವ ನಿಟ್ಟಿನಲ್ಲಿ ಬಿಜೆಪಿ-ಜೆಡಿಎಸ್ ಪ್ರಯತ್ನ

ಜೆಡಿಎಸ್‌ನಿಂದ ಯೋಗೇಶ್ವರ್ ಕಣಕ್ಕೆ?

ಇನ್ನು ಚನ್ನಪಟ್ಟಣದ ಮೇಲೆ ಕಣ್ಣಿಟ್ಟಿರುವ ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಅವರಿಗೆ ಟಿಕೆಟ್ ಸಿಗದಿದ್ದರೆ ಮುಂದಿನ ದಿನದಲ್ಲಿ ಮೈತ್ರಿ ವಿರುದ್ಧ ತಿರುಗಿಬೀಳುವ ಸಾಧ್ಯತೆಯಿದೆ. ಆದ್ದರಿಂದ ಮೈತ್ರಿ ನಾಯಕರಿಗೆ ಇದೀಗ ಯೋಗೇಶ್ವರ್ ಅವರನ್ನು ಸಮಾಧಾನಪಡಿಸುವುದು ಹೇಗೆ ಎನ್ನುವ ಗೊಂದಲ ಶುರುವಾಗಿದೆ. ಒಂದು ವೇಳೆ ಬಿಜೆಪಿ ಚಿಹ್ನೆಯಲ್ಲಿ ಯೋಗೇಶ್ವರ್ ಸ್ಪರ್ಧಿಸಿದರೆ, ಕಾಂಗ್ರೆಸ್‌ಗೆ ಲಾಭವಾಗಲಿದೆ. ಹಾಗೆಂದು, ಜೆಡಿಎಸ್‌ಗೆ ಸೀಟು ಬಿಟ್ಟುಕೊಟ್ಟರೆ ಯೋಗೇಶ್ವರ್ ಮುನಿಸಿಕೊಳ್ಳುವ ಸಾಧ್ಯತೆಯಿದೆ.

ಸಮಾಚಾರ ಸಣ್ಣದಲ್ಲ

ಬಾಲಕನ ಅಪಹರಣ ಆರೋಪಿಗಳ ಬಂಧನ

ಬೆಂಗಳೂರು: ಬಾಲಕನೋರ್ವನನ್ನು ಸಿನಿಮಾ ಶೈಲಿಯಲ್ಲಿ ಅಪಹರಣ ಮಾಡಿದ ಪ್ರಕರಣ ಎಲೆಕ್ಟ್ರಾನಿಕ್ ಸಿಟಿ ಸಮೀಪದ ಚಿಕ್ಕತೋಗೂರು ಬಳಿ ನಡೆದಿದೆ. ಆರೋಪಿ ಮೊಹಮದ್ ಜಶಿಮುದ್ದೀನ್ ಶೇಕ್(24) ಎಂಬಾತನಿಂದ 9 ವರ್ಷದ ಬಾಲಕನ ಅಪಹರಣ ವಾಗಿತ್ತು. ಮೊಹಮ್ಮದ್ ಜಶಿಮುದ್ದೀನ್ ಜಾರ್ಖಂಡ್ ಮೂಲದವನಾಗಿದ್ದು, ಬಾಲಕನನ್ನು ಐಸ್‌ಕ್ರೀಮ್ ಆಮೀಷ ತೋರಿಸಿ ಅಪಹರಣ ನಡೆದಿತ್ತು. ಕೊನೆಗೆ ಬಾಲಕನನ್ನ ರಕ್ಷಿಸಿದ ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಆರೋಪಿ ಮೊಹಮದ್ ಜಶಿಮುದ್ದೀನ್ ಶೇಕ್‌ನನ್ನು ಬಂಧಿಸಿದ್ದಾರೆ. ಪೊಲೀಸರ ಕ್ಷಿಪ್ರ ಕಾರ್ಯಾಚರಣೆ ಯಿಂದ ಬಾಲಕ ಪೋಷಕರ ಮಡಿಲು ಸೇರಿದ್ದಾನೆ. ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾಮೀನು; ಎಸ್‌ಐಟಿ ಅರ್ಜಿ ವಿಚಾರಣೆ ಮುಂದಕ್ಕೆ

ಬೆಂಗಳೂರು: ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣ ಸಂಬಂಧಿಸಿ ಕೆ.ಆರ್.ನಗರ ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಆರೋಪಿಯಾಗಿರುವ ಮಾಜಿ ಸಚಿವ ಎಚ್. ಡಿ. ರೇವಣ್ಣ ಅವರ ಜಾಮೀನು

ರದ್ದು ಕೋರಿ ಎಸ್‌ಐಟಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಮುಂದೂಡಿದೆ.

ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣಗೆ ಮೇ 13ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ನೀಡಿತ್ತು. ಈ ಜಾಮೀನು ರದ್ದುಪಡಿಸುವಂತೆ ಕೋರಿ ಎಸ್‌ಐಟಿ ಅರ್ಜಿ ಸಲ್ಲಿಸಿದೆ. ಆದರೆ, ಅರ್ಜಿಗೆ ರೇವಣ್ಣ ಸಲ್ಲಿಸಿರುವ ಆಕ್ಷೇಪಣೆಗೆ ಪ್ರತಿ ಆಕ್ಷೇಪಣೆ ಸಲ್ಲಿಸಲು ಎಸ್‌ಐಟಿ ಕಾಲಾವಕಾಶ ಕೋರಿದ ಹಿನ್ನೆಲೆಯಲ್ಲಿ ಅರ್ಜಿ ವಿಚಾರಣೆಯನ್ನು ನ್ಯಾಯಾಲಯ ಮುಂದೂಡಿದೆ. ಸಂತ್ರಸ್ತೆ ಅಪಹರಣ ಸಂಬಂಧ ಆಕೆಯ ಪುತ್ರ ನೀಡಿದ ದೂರಿನ ಮೇರೆಗೆ ಕೆ. ಆರ್.ನಗರ ಠಾಣೆಯಲ್ಲಿ ಎಚ್ .ಡಿ. ರೇವಣ್ಣ ವಿರುದ್ಧ ಪ್ರಕರಣ ದಾಖಲಾಗಿದೆ. ಇದರಲ್ಲಿ ಸತೀಶ್ ಬಾಬಣ್ಣ ಎರಡನೇ ಆರೋಪಿಯಾಗಿದ್ದಾರೆ.

ಕೆ.ಆರ್.ನಗರದ ಸಂತ್ರಸ್ತೆಯ ಅಪಹರಣ ಪ್ರಕರಣಕ್ಕೆ ಸಂಬಂಧಿಸಿ ರೇವಣ್ಣ ಅವರನ್ನು ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳಿಸಲಾಗಿತ್ತು. ಆರು ದಿನಗಳ ನಿರಂತರ ಕಾನೂನು ಸಮರದ ಬಳಿಕ ಅವರಿಗೆ ಮೇ 13ರಂದು ಜಾಮೀನು ದೊರೆತಿತ್ತು. ನಂತರ ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿದ್ದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲೂ ಮಾಜಿ ಸಚಿವ ಎಚ್.ಡಿ. ರೇವಣ್ಣ ಅವರಿಗೆ ಮೇ 20ರಂದು ಜಾಮೀನು ಮಂಜೂರಾಗಿತ್ತು. ನಂತರ ಎರಡು ಎಫ್‌ಐಆರ್ ರದ್ದು ಮಾಡುವಂತೆ ರೇವಣ್ಣ ನ್ಯಾಯಾಲಯದ ಮೊರೆ ಹೋಗಿದ್ದರು.

ಯಾರ ಕಣ್ಣಿಗೂ ಬೀಳದೆ ಮಾಜಿ ಕಾರ್ಪೊರೇಟರ್ ಕಣ್ಮರೆ | ಪೊಲೀಸರಿಂದ ತೀವ್ರ ಶೋಧನೆ, ಹಣ ಜಪ್ತಿ

ದರ್ಶನ್‌ಗೆ 40 ಲಕ್ಷ ನೀಡಿದ ವ್ಯಕ್ತಿ ಈಗ ನಾಪತ್ತೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣವನ್ನು ಮುಚ್ಚಿಹಾಕಲು ನಟ ದರ್ಶನ್ ತನ್ನ ಸಹಚರರಿಗೆ ನೀಡಿದ್ದ 30 ಲಕ್ಷ ರು. ಹಣವನ್ನು ಒಬ್ಬ ಮಾಜಿ ಕಾರ್ಪೊರೇಟರ್‌ನಿಂದ ಪಡೆದಿದ್ದು ತಿಳಿದುಬಂದಿದೆ. ಈ ಕುರಿತು ಈ ವ್ಯಕ್ತಿಯನ್ನು ಪೊಲೀಸರು ಪ್ರಶ್ನಿಸಲು ಮುಂದಾಗಿದ್ದಾರೆ.

ಆದರೆ ಈ ಆಸಾಮಿ ಯಾರ ಕಣ್ಣಿಗೂ ಬೀಳದೇ ನಾಪತ್ತೆಯಾಗಿದ್ದಾರೆ.

ರೇಣುಕಾಸ್ವಾಮಿ ಪ್ರಕರಣದಲ್ಲಿ ಮತ್ತೊಬ್ಬ ವ್ಯಕ್ತಿಯ ಕೈವಾಡ ಇರುವುದು ಪತ್ತೆಹಚ್ಚಲಾಗಿದೆ. ಕೊಲೆ ನಡೆದ ಬೆನ್ನಲ್ಲೇ ದರ್ಶನ್ ಆ ವ್ಯಕ್ತಿಯಿಂದ ಹಣ ಪಡೆದಿದ್ದಾನೆ. ಸಾಕ್ಷಿ ನಾಶ ಮಾಡುವುದಕ್ಕೆಂದೇ 40 ಲಕ್ಷ ರು. ಹಣವನ್ನು ಇವರಿಂದ ದರ್ಶನ್ ಪಡೆದಿದ್ದ. ಆ 40 ಲಕ್ಷ ಹಣವನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಇದೀಗ ಹಣದ ಬಗ್ಗೆ ಆ ವ್ಯಕ್ತಿಯನ್ನು ಪ್ರಶ್ನಿಸಬೇಕಿದೆ.

ಮಾಜಿ ಕಾರ್ಪೊರೇಟರ್ ಆಗಿರುವ ಮೋಹನ್ ರಾಜ್ ಎಂಬಾತನೇ ಈ ವ್ಯಕ್ತಿಯಾಗಿದ್ದು, ಈತನಿಂದ ದರ್ಶನ್‌ಗೆ ಹಣ ಸಂದಾಯವಾಗಿದೆ. ದರ್ಶನ್‌ಗೆ ಆಪ್ತ ಸ್ನೇಹಿತ ಆಗಿರುವ ಮೋಹನ್ ರಾಜ್, ಆತನಿಗೆ 40 ಲಕ್ಷ ರು. ಹಣ ನೀಡಿದ್ದಾನೆ. ಈ ಹಣವನ್ನು ತನ್ನ ಸಹಚರರಿಗೆ ನೀಡಿರುವ ದರ್ಶನ್, ತನ್ನ ಹೆಸರು ಎಲ್ಲಿಯೂ ಕಾಣಿಸಿಕೊಳ್ಳದಂತೆ ತಿಳಿಸಿದ್ದಾನೆ. ಇದೀಗ ಇರುವ ಪ್ರಶ್ನೆಯೆಂದರೆ, ಈ ಹಣ ಪಡೆಯುವಾಗ ಮೋಹನ್ ರಾಜ್‌ಗೆ ಈ ಕೊಲೆಯ ಬಗ್ಗೆ ತಿಳಿದಿತ್ತೇ ಇಲ್ಲವೇ ಎಂಬುದು. ತಿಳಿದಿತ್ತು ಎಂದಾದರೆ, ಕೊಲೆ ಪ್ರಕರಣ ಮೋಹನ್ ರಾಜ್ ಕೊರಳಿಗೂ ಸುತ್ತಿಕೊಳ್ಳಲಿದೆ.

ಮೋಹನ್ ರಾಜ್‌ಗಾಗಿ ಹುಡುಕಾಟ

ಹಣದ ಬಗ್ಗೆ ರಿಮ್ಯಾಂಡ್ ಅಪ್ಲಿಕೇಶನ್‌ನಲ್ಲಿ ಪೊಲೀಸರು ಉಲ್ಲೇಖ ಮಾಡಿದ್ದಾರೆ. ಮೋಹನ್ ರಾಜ್‌ಗಾಗಿ ಹುಡುಕಾಟ ನಡೆಸುತ್ತಿದ್ದು, ಬಂಧನ ಸಾಧ್ಯತೆಯೂ ಇದೆ. ಈ ಮೋಹನ್ ರಾಜು 2019ರಲ್ಲಿ ಬೆಂಗಳೂರಿನ ಉಪಮೇಯರ್ ಆಗಿದ್ದ. ಬೊಮ್ಮನಹಳ್ಳಿ ವಾರ್ಡ್ ಕಾರ್ಪೊರೇಟರ್ ಆಗಿದ್ದ. ರಾಜಕೀಯ ವಲಯದಲ್ಲಿ ಸಾಕಷ್ಟು ಪ್ರಭಾವಿಯೂ ಆಗಿದ್ದಾನೆ. ಪ್ರಕರಣದಲ್ಲಿ ತನ್ನ ಹೆಸರು ಹೊರಗಡೆ ಬರುತ್ತಿದ್ದಂತೆ ಮೋಹನ್ ರಾಜು ಫೋನ್ ಸ್ವಿಚಾಫ್ ಮಾಡಿಕೊಂಡಿದ್ದಾನೆ. ಫೋನ್ ಸ್ವಿಚ್ ಆಫ್ ಆಗಿರುವುದರಿಂದ ಮನೆಗೆ ಹೋಗಿ ನೋಟಿಸ್ ನೀಡಲು ಕಾಮಾಕ್ಷಿ ಪಾಳ್ಯ ಪೊಲೀಸರು ಮುಂದಾಗಿದ್ದಾರೆ. ಬಂಧಿತರು ನೀಡಿದ ಮಾಹಿತಿ ಹಿನ್ನೆಲೆಯಲ್ಲಿ ಈ ಕ್ರಮಕ್ಕೆ ಮುಂದಾಗಿದ್ದಾರೆ. 2018ರಲ್ಲಿ ಇದೇ ಮೋಹನ್ ರಾಜ್ ಸೀಮೆ ಎಣ್ಣೆ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ. ಜಮೀನು ವಿಚಾರವಾಗಿ ಕಿರುಕುಳ ಕೊಡುತ್ತಿದ್ದಾರೆಂದು ಆರೋಪಿಸಿ, ಬೊಮ್ಮನಹಳ್ಳಿ ಸಮೀಪದ ಫಾರ್ಮ್ ಹೌಸ್‌ನಲ್ಲಿ ಪೊಲೀಸ್ ಸಿಬ್ಬಂದಿ ಎದುರೇ ಆತ್ಮಹತ್ಯೆಗೆ ಪ್ರಯತ್ನ ಮಾಡಿದ್ದ. ಮೈಗೆ ಸೀಮೆ ಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ.

ಪವಿತ್ರಾಗೌಡ ಕೈದಿ ನಂ. 6042

ಬೆಂಗಳೂರು: ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಎ1 ಆರೋಪಿ ಆಗಿರುವ ಪವಿತ್ರಾ ಗೌಡ ಹಾಗೂ ಇನ್ನು ಕೆಲ ಆರೋಪಿಗಳು ಪರಪ್ಪನ ಅಗ್ರಹಾರ ಜೈಲಿಗೆ ಹಾಕಲಾಗಿದೆ. ಆರೋಪಿಗಳಿಗೆ ವಿಚಾರಣಾಧೀನ ಕೈದಿ ನಂಬರ್ ಅನ್ನು ಜೈಲು ಅಧಿಕಾರಿಗಳು ನೀಡಿದ್ದಾರೆ.

ಕೊಲೆ ಪ್ರಕರಣದಲ್ಲಿ ಪವಿತ್ರಾ ಗೌಡ ಎ1 ಆರೋಪಿಯಾಗಿದ್ದು ಸದ್ಯ ಬೆಂಗಳೂರಿನ ಪರಪ್ಪನ ಅಗ್ರಹಾರದ ಜೈಲಿಗೆ ಹಾಕಲಾಗಿದೆ. ಪವಿತ್ರಾ ಗೌಡ ವಿಚಾರಣಾಧೀನ ಕೈದಿ ನಂಬರ್ 6024 ಅನ್ನು ನೀಡಲಾಗಿದೆ. ವಿಲಾಸಿ ಜೀವನ ನಡೆಸುತ್ತಿದ್ದ ಪವಿತ್ರಾ ಗೌಡ ಕೊಲೆ ಪ್ರಕರಣದಲ್ಲಿ ಜೈಲು ಸೇರಿ ಮುದ್ದೆ ಮುರಿಯೋ ಸ್ಥಿತಿ ಉಂಟಾಗಿದೆ. ಸದ್ಯ ಅವರು ಮಹಿಳಾ ವಿಭಾಗದ ಡಿ- ಬ್ಯಾರಕ್‌ನಲ್ಲಿ ಸೆರೆವಾಸದಲ್ಲಿದ್ದಾರೆ. ಜೈಲಿನಲ್ಲಿ ಗುರುವಾರ ಸರಿಯಾಗಿ ಊಟ ಮಾಡದೇ, ರಾತ್ರಿ ನಿದ್ದೆ ಕೂಡ ಮಾಡದೆ ಪವಿತ್ರಾ ಚಡಪಡಿಸಿದ್ದರು. ಶುಕ್ರವಾರ ಬೆಳಗ್ಗೆ 5 ಗಂಟೆಗೆ ಎದ್ದಿರುವ ಅವರು ಸಿಬ್ಬಂದಿ ನೀಡಿದ ಕಾಫಿ ಕುಡಿದಿದ್ದಾರೆ. ಮಹಿಳಾ ವಿಭಾಗದ ಕೊಠಡಿಯಲ್ಲಿ ಪವಿತ್ರಾ ಮೌನಕ್ಕೆ ಶರಣಾಗಿದ್ದಾರೆ.

ಸನಾತನ ಧರ್ಮ: ಆಯೋಜಕರ ವಿರುದ್ಧದ ಕ್ರಮಕ್ಕೆ ತಡೆ

ಬೆಂಗಳೂರು: ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಮಗ ಉದಯನಿಧಿ ಸ್ಟಾಲಿನ್ ಅವರು ಸನಾತನ ಧರ್ಮ ಡೆಂಘೀ, ಮಲೇರಿಯಾ ಇದ್ದಂತೆ ಎಂಬುದಾಗಿ ಹೇಳಿಕೆ ನೀಡಿದ್ದ ಕಾರ್ಯಕ್ರಮದ ಆಯೋಜಕರ ವಿರುದ್ಧ ದಾಖಲಾಗಿದ್ದ ಖಾಸಗಿ ದೂರಿನ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿ ಆದೇಶಿಸಿದೆ.

ಅಲ್ಲದೆ, ಪ್ರಕರಣ ಸಂಬಂಧ ಆಕ್ಷೇಪಣೆ ಸಲ್ಲಿಸಲು ದೂರುದಾರ ಪರಮೇಶ್ವರ್‌ಗೆ ತುರ್ತು ನೋಟಿಸ್ ಜಾರಿಮಾಡಿತು. ತಮ್ಮ ವಿರುದ್ಧದ ಪ್ರಕರಣ ರದ್ದುಕೋರಿ ಕಾರ್ಯಕ್ರಮದ ಆಯೋಜಕ ಸು.ವೆಂಕಟೇಶನ್, ಕುರ ರಾಮಲಿಂಗಂ ಮತ್ತು ಆಧವನ್ ಧೀಚನ್ಯ ಎಂಬವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರಿದ್ದ ನ್ಯಾಯಪೀಠ ಈ ಆದೇಶವನ್ನು ನೀಡಿದೆ.

ವಿಚಾರಣೆಯಲ್ಲಿ, ಅರ್ಜಿದಾರರು ಕಾರ್ಯಕ್ರಮ ಆಯೋಜಿಸಿದ್ದರು. ಅವರು ಯಾವುದೇ ಹೇಳಿಕೆ ನೀಡಿಲ್ಲ. ಆದರೆ, ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಉದಯನಿಧಿ ಸ್ಟಾಲಿನ್ ಹೇಳಿಕೆ ನೀಡಿದ್ದಾರೆ. ಅಲ್ಲದೆ, ತಮಿಳುನಾಡಿನಲ್ಲಿ ನಡೆದ ಕಾರ್ಯಕ್ರಮ ನಡೆದ ಚರ್ಚೆ ಸಂಬಂಧ ಬೆಂಗಳೂರಿನಲ್ಲಿ ಖಾಸಗಿ ದೂರು ದಾಖಲಾಗಿದೆ. ಹೀಗಾಗಿ ಪ್ರಕರಣ ರದ್ದುಮಾಡಬೇಕು ಎಂದು ಕೋರಿದರು. ವಾದ ಆಲಿಸಿದ ಪೀಠ, ಮುಂದಿನ ವಿಚಾರಣೆವರೆಗೂ ಪ್ರಕರಣದ ವಿಚಾರಣೆಗೆ ತಡೆಯಾಜ್ಞೆ ನೀಡಿತು. ಅಲ್ಲದೆ, ಆಕ್ಷೇಪಣೆ ಸಲ್ಲಿಸಲು ದೂರುದಾರರಿಗೆ ನೋಟಿಸ್ ಜಾರಿಮಾಡಿ ವಿಚಾರಣೆ ಮುಂದೂಡಿತು.

ಸಾಕ್ಷಿಯಾಗಿ 139ಕ್ಕೂ ಹೆಚ್ಚು ವಸ್ತುಗಳು ಪೊಲೀಸರಿಂದ ಜಪ್ತಿ

ರೇಣುಕಾಸ್ವಾಮಿ ಹತ್ಯೆ: 28 ಸ್ಥಳಗಳಲ್ಲಿ ಮಹಜರು

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕ್ರೂರ ಕೊಲೆ ಪ್ರಕರಣದ ಸಂಬಂಧ ನಟ ದರ್ಶನ್ ಮತ್ತವನ ಗ್ಯಾಂಗ್ ಸೇರಿದ 28 ಸ್ಥಳಗಳಲ್ಲಿ ಮಹಜರು ನಡೆಸಿ ಸಾಕ್ಷಿಯಾಗಿ 139ಕ್ಕೂ ಹೆಚ್ಚು ವಸ್ತುಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಆರೋಪಿಗಳು ಧರಿಸಿದ್ದ ಬಟ್ಟೆ, ಶೆಡ್‌ನಲ್ಲಿ ಹಲ್ಲೆಗೆ ಬಳಸಿದ್ದ ಲಾಠಿ, ಮರದ ರಿಪೀಸ್ ವಸ್ತುಗಳು, ತುಳಿದ ಶೂಗಳು, ಆರೋಪಿಗಳು ತಂಗಿದ್ದ ಹೋಟೆಲ್ ಲೆಡ್ಜರ್ ಬುಕ್, ಸಿಸಿಟಿವಿ ರೆಕಾರ್ಡ್, ಕೃತ್ಯದ ವೇಳೆ ಹಾಗೂ ಶವ ಬಿಸಾಡಲು ಬಳಸಿದ್ದ ಕಾರುಗಳು, ಆರೋಪಿಗಳು ಪಡೆದುಕೊಂಡಿದ್ದ ಹಣ, ಆರೋಪಿಗಳ ಮೊಬೈಲ್ ಫೋನ್, ಕಾರ್ ಶೆಡ್ ಕಡೆ ಹೋಗುವ ಸಿಸಿಟಿವಿ ರೆಕಾರ್ಡ್, ಮೃತದೇಹದ ಮೇಲಿಂದ ಕಳುವಾಗಿದ್ದ ಚಿನ್ನಾಭರಣ ಸೇರಿ139 ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಪ್ರಕರಣದಲ್ಲಿ ಇದುವರೆಗೂ 28 ಕಡೆ ಮಹಜರು ಮಾಡಲಾಗಿದೆ.

ದರ್ಶನ್ ಸೇರಿ ಎಲ್ಲ 17 ಆರೋಪಿಗಳ ನಿವಾಸ ಹಾಗೂ ಬೇರೆ 11 ಸ್ಥಳಗಳಲ್ಲೂ ಮಹಜರು ನಡೆಸಲಾಗಿದೆ. ರೇಣುಕಾಸ್ವಾಮಿ ಕರೆತಂದು ಹಲ್ಲೆ ಕೃತ್ಯ ನಡೆಸಿದ ಪಟ್ಟಣಗೆರೆ ಶೆಡ್, ರೇಣುಕಾಸ್ವಾಮಿಯ ಶವ ಬಿಸಾಡಿದ ರಾಜಕಾಲುವೆ, ಶವ ಬಿಸಾಡಿದ್ದ ಆರೋಪಿಗಳು ತಂಗಿದ್ದ ಆರ್.ಆರ್.ನಗರದ ಹೋಟೆಲ್, ಪಾರ್ಟಿ ಮಾಡಿದ್ದ ಸ್ಟೋನಿಬ್ರೂಕ್ ರೆಸ್ಟೋರೆಂಟ್, ಅಪಹರಣ ಮಾಡಿದ್ದ ಚಿತ್ರದುರ್ಗದ ಸ್ಥಳ, ಮೈಸೂರಿನ ಖಾಸಗಿ ಹೋಟೆಲ್‌ಗಳಲ್ಲಿ ಸ್ಥಳ ಮಹಜರು ನಡೆಸಲಾಗಿದೆ. ಜಪ್ತಿ ಮಾಡಿರುವ 139 ವಸ್ತುಗಳನ್ನು ಸೇರಿ ಮಹತ್ವದ ಟೆಕ್ನಿಕಲ್ ಸಾಕ್ಷಿಗಳನ್ನು ಅಧಿಕಾರಿಗಳು ಕಲೆಹಾಕಿದ್ದಾರೆ. ಹಲ್ಲೆ ಕೃತ್ಯ ನಡೆಯಲು ಪ್ರಮುಖ ಪ್ರಚೋದನಾ ವ್ಯಕ್ತಿ ಹಾಗೂ ಕೇಂದ್ರ ಬಿಂದು ಆಗಿರುವಳು ಪವಿತ್ರಾ ಗೌಡ ಎಂಬುದು ಬಯಲಾಗಿದ್ದು, ರೇಣುಕಾ ಸ್ವಾಮಿ ಜತೆಗೆ ನಡೆಸಿದ ಚಾಟಿಂಗ್ ಸಾಕ್ಷಿಯನ್ನು ಕಲೆಹಾಕಲಾಗಿದೆ.

ಮೊಬೈಲ್ ಸಾಕ್ಷ್ಯ

ಪ್ರಕರಣ ಸಂಬಂಧ ನಟ ದರ್ಶನ್ ಆಪ್ತ ಪಟ್ಟಣಗೆರೆ ವಿನಯ್ ಮೊಬೈಲ್‌ನಲ್ಲಿ ಬಹುಮುಖ್ಯ ಸಾಕ್ಷ್ಯವನ್ನು ಪೊಲೀಸರು ಜಪ್ತಿ ಮಾಡಿದ್ದು, ಇದು ಕೂಡ ದರ್ಶನ್ ಗ್ಯಾಂಗ್‌ಗೆ ಕಂಟಕವಾಗಿದೆ ಎನ್ನಲಾಗಿದೆ. ಪಟ್ಟಣಗೆರೆ ವಿನಯ್ ಮೊಬೈಲ್ ಪತ್ತೆಯಾದ ಪುರಾವೆ ಕುರಿತು ಎಂದು ಕೋರ್ಟ್‌ಗೆ ಪೊಲೀಸರು ಮಾಹಿತಿ ನೀಡಿದ್ದಾರೆ. ಆದರೆ ಈ ಪುರಾವೆ ಕುರಿತು ವಿನಯ್ ವಿಚಾರಣೆ ನಡೆಸಬೇಕಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪಟ್ಟಣಗೆರೆ ವಿನಯ್ ಮೊಬೈಲ್‌ನಲ್ಲಿ ಅತಿ ಮುಖ್ಯವಾದ ಸಾಕ್ಷ್ಯಾಧಾರ ದೊರೆತಿದ್ದು, ಅದನ್ನು ಕಳುಹಿಸಿದ ವ್ಯಕ್ತಿ ಯಾರೆಂಬ ಬಗ್ಗೆ ವಿನಯ್ ಉಪಸ್ಥಿತಿಯಲ್ಲಿ ವಿಚಾರಣೆ ಮಾಡಬೇಕಿದೆ. ಹೀಗಾಗಿ ವಿನಯ್‌ನನ್ನು ಪೊಲೀಸ್ ಕಸ್ಟಡಿಗೆ ನೀಡುವಂತೆ ಮನವಿ ಮನವಿ ಮಾಡಿದ್ದರು. ಈ ಮನವಿ ಪುರಸ್ಕರಿಸಿದ ನ್ಯಾಯಾಲಯವು, ಆತನನ್ನು ಪೊಲೀಸ್ ಕಸ್ಟಡಿಗೆ ನೀಡಿದೆ.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಈಡೆಲ್‌ವಾಯಿಸ್ ಅಸೆಟ್ ರಿಕನ್‌ಸ್ಟ್ರಕ್ಷನ್ ಕಂಪೆನಿ ಲಿಮಿಟೆಡ್ (''ಇಎಆರ್‌ಸಿ'') (CIN:U67100MH2007PLC174759) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **22.12.2022** ರಂದು ಕರೆದು ಸಾಲಗಾರ **ಜೈ ಕಿಶನ್ ರಾವ್ ಉರ್ಫ್ ಜೈ ಕಿಶನ್ (ಪಿಒಎ ಹೋಲ್ಡರ್ ಲೋಹಿತ್ ಎಸ್‌ಪಿ ಉರ್ಫ್ ಲೋಹಿತ್ ಸಾಂಗಲಿ ಪನ್ನಗೇಶ್ ಮೂಲಕ) ಮತ್ತು ಲೋಹಿತ್ ಎಸ್‌ಪಿ ಉರ್ಫ್ ಲೋಹಿತ್ ಸಾಂಗಲಿ ಪನ್ನಗೇಶ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ಸದರಿ ಸೌಲಭ್ಯಕ್ಕೆ ದಿನಾಂಕ **25.11.2022** ರ ವರೆಗೆ **ರೂ. 47,58,823.32 (ನಲವತ್ತೇಳು ಲಕ್ಷ ಐವತ್ತೆಂಟು ಸಾವಿರದ ಎಂಟುನೂರಾ ಇಪ್ಪತ್ಮೂರು ರೂಪಾಯಿ ಮತ್ತು ಮೂವತ್ತೆರಡು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAN00256597** ಸದರಿ ನೋಟಿಸ್ ದೊರೆತ 60 ದಿನಗಳೊಳಗೆ, ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **26.11.2022** ರಿಂದ ಮುಂದಿನ ಬಡ್ಡಿ ಹಾಗೂ ದಂಡದ ಬಡ್ಡಿ ವಿಧಿಸಲಾಗುತ್ತದೆ.

ಅನಂತರ, **ಐಎಚ್‌ಎಫ್ಎಲ್** ಸಾಲಗಾರ (ರಿಗೆ) / ಗ್ಯಾರಂಟರ್‌ಗೆ(ಗಳಿಗೆ) / ಮಾರ್ಟ್‌ಗೆಜರ್(ಗಳಿಗೆ) ನೀಡಿದ ಸೌಲಭ್ಯಗಳ ಕಾರಣವಾಗಿ ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೆಜರ್(ಗಳು) ಹಿಂದಿರುಗಿಸಬೇಕಾದ ಬಾಕಿ ಸಾಲಗಳಿಗೆ ಸಂಬಂಧಿಸಿದಂತೆ, **ಇಎಆರ್‌ಸಿ ಟ್ರಸ್ಟ್‌ನ ಟ್ರಸ್ಟಿ ಆಗಿ ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ ಸಂಸ್ಥೆಯು ಎಸ್‌ಸಿ 439ರ** ಟ್ರಸ್ಟಿ ಆಗಿ ದಿನಾಂಕ **02.11.2023** ರ ಅಸ್ಸೈನ್‌ಮೆಂಟ್ ಅಗ್ರಿಮೆಂಟ್ ಪ್ರಕಾರ, ತನ್ನ ಎಲ್ಲಾ ಹಕ್ಕುಗಳು, ಹಕ್ಕುಪತ್ರ, ಬಡ್ಡಿ ಮತ್ತು ಪ್ರಯೋಜನಗಳನ್ನು ಹಾಗೂ ಎಲ್ಲಾ ಸೆಕ್ಯುರಿಟಿಗಳನ್ನು , ಸೆಕ್ಯುರಿಟಿ ರಸೀದಿಗಳ ಹೋಲ್ಡರ್‌ಗಳ ಪ್ರಯೋಜನಕ್ಕಾಗಿ **ಆರ್ಸಿಲ್-ಸಿಪಿಎಸ್-IV, ಟ್ರಸ್ಟ್‌ನ ('ಆರ್ಸಿಲ್')** ಟ್ರಸ್ಟಿಯಾಗಿ ಕೆಲಸ ಮಾಡುತ್ತಿರುವ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್‌ಗೆ ವಹಿಸಿಕೊಟ್ಟಿದೆ. ಆದ್ದರಿಂದ, ಈ ಅಸೈನ್‌ಮೆಂಟ್‌ನ ಕಾರಣವಾಗಿ, ಈಗ **ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್‌ನ** ಜಾಗದಲ್ಲಿ ಆರ್ಸಿಲ್ ಇದೆ ಮತ್ತು ಆರ್ಥಿಕ ದಾಖಲೆಗಳ ಅಡಿಯಲ್ಲಿ ಸನರಿ ಸೌಲಭ್ಯಗಳಿಗಾಗಿ ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೆಜರ್(ಗಳು) ಸಿದ್ಧಪಡಿಸಿ ಕಾರ್ಯಗತಗೊಳಿಸಿದ ಸೆಕ್ಯುರಿಟಿ ಇಂಟ್‌ರೆಸ್ಟ್ ಒಳಗೊಂಡಂತೆ ತನ್ನ ಹಕ್ಕುಗಳು ಮತ್ತು ಪ್ರಯೋಜನಗಳ ಅಧಿಕಾರವನ್ನು ಚಲಾಯಿಸಲು ಸಾಲಗಾರ(ರ) / ಗ್ಯಾರಂಟರ್(ಗಳ) / ಮಾರ್ಟ್‌ಗೆಜರ್(ಗಳ) ವಿರುದ್ಧ ಎಲ್ಲಾ ಮತ್ತು ಯಾವುದೇ ಕ್ರಮಗಳನ್ನು ಆರಂಭಿಸಲು / ಮುಂದುವರಿಸಲು ಹಕ್ಕನ್ನು ಹೊಂದಿರುತ್ತಾರೆ.

ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೆಜರ್(ಗಳು) ಆರ್ಸಿಲ್‌ಗೆ ಮೇಲೆ ಹೇಳಿರುವ ಮೊತ್ತವನ್ನು ಈ ತನಕ ಮರುಪಾವತಿ ಮಾಡದೆ ಇರುವ ಕಾರಣ, ಕೆಳಗೆ ಸಹಿ ಮಾಡಿರುವ **ಸಾಂಕೇತಿಕ ಸ್ವಾಧೀನ** ಅಧಿಕೃತ ಅಧಿಕಾರಿಯವರು, ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (4)ರ ಜೊತೆಗೆ ಹೇಳಲಾಗಿರುವ ರೂಲ್‌ಗಳಲ್ಲಿನ ರೂಲ್ 8ರ ಅಡಿಯಲ್ಲಿ ಅವರಿಗೆ ಲಭ್ಯವಿರುವ ಪವರ್‌ಗಳನ್ನು ಚಲಾಯಿಸಿ, **18.06.2024** ರಂದು ಕೆಳಗೆ ವಿವರಿಸಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೆಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ನೋಟಿಸ್ ಕೊಡಲಾಗುತ್ತಿದೆ.

ಕೆಳಗೆ ಹೇಳಿರುವ ಸೆಕ್ಯುರಿಟಿಯ ಅಸೆಟ್‌ಗಳ ಬಗ್ಗೆ ಯಾವುದೇ ವ್ಯವಹಾರವನ್ನೂ ಮಾಡಕೂಡದು, ಮತ್ತು ಈ ಸೆಕ್ಯುರಿಟಿಯ ಅಸೆಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡಿದರೂ, ಅದು ಮೇಲೆ ಹೇಳಿರುವ ಸಾಲ ಸೌಲಭ್ಯದ ಕಾರಣವಾಗಿ ದಿನಾಂಕ **25.11.2022** ರ ವರೆಗೆ **ರೂ. 50,72,762.85 (ಐವತ್ತು ಲಕ್ಷ ಎಪ್ಪತ್ತೆರಡು ಸಾವಿರದ ಏಳುನೂರಾ ಅರವತ್ತೆರಡು ರೂಪಾಯಿ ಮತ್ತು ಎಂಬತ್ತೈದು ಪೈಸೆ ಮಾತ್ರ)** ಮೊತ್ತಕ್ಕೆ , ಮತ್ತು ನಂತರ ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **26.11.2022** ರಿಂದ ಕರಾರಿನ ದರದ ಪ್ರಕಾರ ಮುಂದಿನ ಬಡ್ಡಿ, ದಂಡ ಹಾಗೂ ಇತರ ಎಲ್ಲಾ ಖರ್ಚುವೆಚ್ಚಗಳು, ಶುಲ್ಕಗಳ ವಸೂಲಿ ಆರ್ಸಿಲ್‌ನ ಹಕ್ಕಿಗೆ ಒಳಪಟ್ಟಿರುತ್ತವೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೆಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ಕೊಡಲಾಗುತ್ತಿದೆ

ಕೆಳಗೆ ಹೇಳಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ರಿಡೀಮ್ ಮಾಡಿಕೊಳ್ಳಲು ಲಭ್ಯವಿರುವ ಸಮಯದ ಬಗ್ಗೆ ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (8)ರ ಪ್ರಾವಧಾನಗಳ ಕಡೆಗೆ ಸಾಲಗಾರರ / ಗ್ಯಾರಂಟರ್‌ಗಳ / ಮಾರ್ಟ್‌ಗೆಜರ್‌ಗಳ ಗಮನವನ್ನು ಸೆಳೆಯಲಾಗುತ್ತಿದೆ.

ಸ್ಥಿರಾಸ್ತಿಯ ವರ್ಣನೆ

ಪ್ರಾಪರ್ಟಿಯೇ ಮಾಲೀಕರು: **ಜೈ ಕಿಶನ್**

ಮಂತ್ರಿ ವೆಬ್‌ಸಿಟಿಯ 'ಎಫ್' ಟವರ್‌ನ 21ನೇ ಮಹಡಿಯಲ್ಲಿರುವ ಫ್ಲ್ಯಾಟ್ ನಂ. ಎಫ್-2103; ಇದರ ಸೂಪರ್ ಬಿಲ್ಟ್-ಅಪ್ ಏರಿಯ 1010 ಚ.ಅಡಿ. ಇರುವ ಸ್ಥಳ: ಸರ್ವೇ ನಂ. 15/4, 19/1, 19/4, 19/5, 19/6, 19/7, 19/8, 19/9, 19/10, 19/11, 19/12, 19/13, 19/14, 19/16, 20/2 ಸೈಟ್ ನಂ. 1, ಖಾತೆ ನಂ. 102 (563), ಸೈಟ್ ನಂ. 2 ಖಾತೆ ನಂ. 26 (563), ,ಸೈಟ್ ನಂ. 3, 4 ಖಾತೆ ನಂ. 1026 (563), ಸೈಟ್ ನಂ. 5,6 ಖಾತೆ ನಂ. 1027 (564), ಸೈಟ್ ನಂ. 6 ಖಾತೆ ನಂ. 666, 668, 667, 18/1. ನಾಗೇಶ್ವರ ನಾಗೇನಹಳ್ಳಿ ಗ್ರಾಮ ಮತ್ತು ಸರ್ವೇ ನಂ. ಸೈಟ್ ನಂ. 169, ಖಾತೆ ನಂ. 267/170, 268/171, 58/48/1, 265/168/58/48/1, 264/167/58/48/1, 43/1, 45/1, 45/1, 45/2, 48/4ಬಿ, 58/54, 55/58, ಕೊತ್ತನೂರು ಗ್ರಾಮ, ಕೆ. ಆರ್. ಪುರಂ ಹೋಬಳಿ, ಬೆಂಗಳೂರು - 560 077, ಕರ್ನಾಟಕ

ದಿನಾಂಕ : 18.06.2024
ಸ್ಥಳ : ಬೆಂಗಳೂರು
ಅಧಿಕಾರವಿರುವ ಅಧಿಕಾರಿ
ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್
(ಆರ್ಸಿಲ್-ಸಿಪಿಎಸ್- IV, ಟ್ರಸ್ಟ್‌ನ ಟ್ರಸ್ಟಿ)

PUBLIC NOTICE

The public are hereby informed that I Sachetha Shetty residing at #3-64/3 Omkara, Manjalike, Alape Padil, Mangalore 575007, intend to purchase the immovable property described in the schedule here under from its owner Doreswamy S. Any persons having any claim/rights/interest in the below said or any objections for the said sale of the property may file their objections in writing along with supporting documents, addressed to the undersigned with 7 days from the date of publication of this notice, failing which it shall be construed that there are no claims of any sort over the below said property and I shall proceed with the purchase.

SCHEDULE PROPERTY

All that piece and parcel of Immovable Property bearing Site No .1214, formed by the Bangalore Development Authority in Anjanapura 5th `G' Block, Bangalore.

Sd/-
Sachetha Shetty
#3-64/3 Omkara, Manjalike,
Alape Padil, Mangalore 575007

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (CIN:L65922DL2005PLC136029) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **30.01.2024** ರಂದು ಕರೆದು ಸಾಲಗಾರ **ಲಾವಣ್ಯ ವೇಲು ಮತ್ತು ವೇಲು ಪಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 7,34,365.23 (ಏಳು ಲಕ್ಷ ಮೂವತ್ನಾಲ್ಕು ಸಾವಿರದ ಮುನ್ನೂರಾ ಅರವತ್ತೈದು ರೂಪಾಯಿ ಮತ್ತು ಇಪ್ಪತ್ಮೂರು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAG00338021** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **23.01.2024** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ- ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **18.06.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ** ಬಾಕಿ ಇರುವ ಮೊತ್ತ **ರೂ. 7,34,365.23 (ಏಳು ಲಕ್ಷ ಮೂವತ್ನಾಲ್ಕು ಸಾವಿರದ ಮುನ್ನೂರಾ ಅರವತ್ತೈದು ರೂಪಾಯಿ ಮತ್ತು ಇಪ್ಪತ್ಮೂರು ಪೈಸೆ ಮಾತ್ರ) 23.01.2024** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

''ಶುಭ ಓಂಕಾರ''ಎಂಬ ಹಲವು ಮಹಡಿಗಳ ಕಟ್ಟಡದಲ್ಲಿ ಫ್ಲ್ಯಾಟ್ ನಂ. ಜಿ-02, ನೆಲ ಅಂತಸ್ತು, ಇದರ ಸೂಪರ್ ಬಿಲ್ಟ್-ಅಪ್ ಏರಿಯ 953 ಚ.ಅಡಿ, ಜೊತೆಗೆ ಅವಿಭಾಜಿತ 278 ಚ.ಅಡಿಯ ಜಾಗದಲ್ಲಿ ಶೇರ್, ಹಕ್ಕು , ಹಕ್ಕುಪತ್ರ ಮತ್ತು ಹಿತಾಸಕ್ತಿ . ಜೊತೆಗೆ ಕಾಮನ್ ಏರಿಯಗಳಲ್ಲಿ ಪ್ರಮಾಣಾನುಸಾರ ಶೇರ್. ಜೊತೆಗೆ ಒಂದು ಕವರ್ಡ್ ಕಾರ್ ಪಾರ್ಕಿಂಗ್ ಜಾಗ ಕೂಡ. ಇದರ ವಿಳಾಸ: ಗೊಲ್ಲಹಳ್ಳಿ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು – 560100, ಕರ್ನಾಟಕ. ಈ ಫ್ಲ್ಯಾಟ್‌ನ ಗಡಿಗಳು ಹೀಗಿವೆ:

ಪೂರ್ವದಲ್ಲಿ : ಕಾರಿಡರ್ ಮತ್ತು ಫ್ಲ್ಯಾಟ್ ನಂ. ಜಿ-09
ಪಶ್ಚಿಮದಲ್ಲಿ : ಆಕಾಶಕ್ಕೆ ತೆರೆದಿದೆ
ಉತ್ತರದಲ್ಲಿ : ಫ್ಲ್ಯಾಟ್ ನಂ. ಜಿ-01
ದಕ್ಷಿಣದಲ್ಲಿ : ಫ್ಲ್ಯಾಟ್ ನಂ. ಜಿ-03

ದಿನಾಂಕ: 18.06.2024
ಸ್ಥಳ : ಬೆಂಗಳೂರು
ಅಧಿಕಾರವಿರುವ ಅಧಿಕಾರಿ
ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಪ್ರಿಯತಮನಿಂದ ಪತಿಯ ಕೊಲೆ ಆರೋಪ: ಪತ್ನಿಗೆ ಜಾಮೀನು

ಬೆಂಗಳೂರು: ಪ್ರಿಯತಮನೊಂದಿಗೆ ಅನೈತಿಕ ಸಂಬಂಧ ಮುಂದುವರಿಸಲು ಅಡಚಣೆಯಾಗಿದ್ದ ಕಾರಣಕ್ಕೆ ಸುಪಾರಿ ನೀಡಿ ಪತಿಯನ್ನು ಕೊಲೆ ಮಾಡಿಸಿದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಮಹಿಳೆಯೊಬ್ಬರಿಗೆ ಅಪರಾಧ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಸೆಕ್ಷನ್ 437(1) ಪರಿಗಣಿಸಿ ಹೈಕೋರ್ಟ್ ಜಾಮೀನು ನೀಡಿದೆ.

ಗಲ್ಲು ಹಾಗೂ ಜೀವಾವಧಿ ಶಿಕ್ಷೆ ವಿಧಿಸಬಹುದಾದ ಅಪರಾಧ ಕೃತ್ಯ ಎಸಗಿದ ಆರೋಪ ಎದುರಿಸುತ್ತಿರುವ ಆರೋಪಿ ಮಹಿಳೆಯಾಗಿದ್ದರೆ, ಆಕೆಯನ್ನು ಜಾಮೀನು ಮೇಲೆ ಬಿಡುಗಡೆ ಮಾಡಲು ಸಿಆರ್‌ಪಿಸಿ ಸೆಕ್ಷನ್ 437(1)ಅಲ್ಲಿ ಅವಕಾಶವಿದೆ. ಈ ನಿಯಮವನ್ನು ಪರಿಗಣಿಸಿರುವ ನ್ಯಾ. ಎಸ್ ವಿಶ್ವಜಿತ್ ಶೆಟ್ಟಿ ಅವರ ಏಕಸದಸ್ಯ ಪೀಠವು ಪತಿಯ ಕೊಲೆ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ಕುಣಿಗಲ್ ನಿವಾಸಿ ಹರ್ಷಿತಾಗೆ ಜಾಮೀನು ಮಂಜೂರು ಮಾಡಿದೆ. ಅರ್ಜಿದಾರೆ ಒಂದು ಲಕ್ಷ ರು. ಮೊತ್ತದ ವೈಯಕ್ತಿಕ ಬಾಂಡ್, ಅಷ್ಟೇ ಮೊತ್ತಕ್ಕೆ ಒಬ್ಬರ ಭದ್ರತಾ ಖಾತರಿ ನೀಡಬೇಕು. ವಿಚಾರಣಾ ನ್ಯಾಯಾಲಯದ ವಿಚಾರಣೆಗೆ ನಿಯಮಿತವಾಗಿ ಹಾಜರಾಗಬೇಕು. ಪ್ರಕರಣದ ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು. ಸಾಕ್ಷ್ಯಧಾರಗಳನ್ನು ತಿರುಚಲು ಯತ್ನಿಸಬಾರದು. ಇದೇ ಮಾದರಿಯ ಅಪರಾಧಗಳಲ್ಲಿ ಭಾಗಿಯಾಗಬಾರದು ಎಂದು ಪೀಠವು ಷರತ್ತು ವಿಧಿಸಿದೆ.

ಪ್ರಕರಣದ ಹಿನ್ನೆಲೆ: ಅರ್ಜಿದಾರೆ ಮಂಜುನಾಥ್ ಎಂಬಾತನನ್ನು ಮದುವೆಯಾಗಿದ್ದರು. ಆಕೆಗೆ ಮದುವೆಗೆ ಮೊದಲೇ ಮತ್ತೊಬ್ಬರೊಂದಿಗೆ ಸಂಬಂಧ ಹೊಂದಿದ್ದು, ಅದು ಮದುವೆ ನಂತರವೂ ಮುಂದುವರಿದಿತ್ತು. ಆದರೆ, ತಮ್ಮ ಅನೈತಿಕ ಸಂಬಂಧಕ್ಕೆ ಅಡ್ಡಿಯಾಗಿರುವ ಕಾರಣಕ್ಕೆ ಪತಿ ಮಂಜುನಾಥ್ ಕೊಲೆಗೆ ಪ್ರಿಯತಮನಾದ ಮೊದಲ ಆರೋಪಿಯೊಂದಿಗೆ ಅರ್ಜಿದಾರೆ ಪಿತೂರಿ ನಡೆಸಿದ್ದರು ಎಂದು ಆರೋಪಿಸಲಾಗಿದೆ.

PUBLIC NOTICE

Public are hereby informed that our client **Mr. Vedhachalam S/o Shanmugam,** is interested in purchasing the Schedule Property from its owner Mrs. J. Shanthi W/o Sri. N. Ashok, who acquired the same vide Sale Deed dated 16.09.2011, registered as document bearing No. HBB-1-02013-2011-12, in Book-I, stored in C. D. No. HBBD47, in the Office of Sub Registrar, Hebbala, Bangalore.

Any person /s entitles having any claim, right, title or interest over the schedule property or any part thereof in any manner objecting the purchase of the schedule property by our client may lodge their claim with documentary proof with the undersigned within **7 days** from the date of this public notice, after which our client shall proceed to complete the sale transaction with the owner and any claim or objection received thereafter will not be binding over the schedule property.

SCHEDULE PROPERTY

All that piece and parcel of the Residential Immovable property bearing **Site No. 81,** Khata No. 1081, in portion of Property No.6, situated at **Byataguttepalya @ Ramaswamypalya Village, Kasaba Hobli, Bangalore North Taluk,** now coming under the Jurisdiction of Bangalore Mahanagar Palike, old ward No. 87, New Ward No. 28, Kammanahalli, Municipal No. 6, Venkateshappa Layout, R. S. Palya, Bangalore, measuring East to West 30 Feet, North to South 30 Feet, totally measuring **900 Square Feet** and bounded on the :
East By : Property belonging to Mr. V. Seethappa
West By : Road, North By : Road, South By : Remaining Portion of the Property in No. 6,
Consists of 600 Square feet of RCC roofed on ground floor, and 600 square Feet of RCC roofed on the first floor constructed with blocks and cement, main door jagal wood and windows aluminium with vitrified tile flooring with all types of basic amenities.

Vinod. R.,
ADVOCATE,
STERLING LAW PARTNERS,
#No. 1656, Balaji Nilayam, 1st Cross,
Mariyappanpalya, Rajajinagar,
Bangalore 560021 Call :7411531524
Place: Bengaluru Date: 21/06/2024

ನೀಟ್‌ನಲ್ಲಿ ಅಕ್ರಮ ಸಾಬೀತಾಗಿದ್ದರೂ, ಮೌನಕ್ಕೆ ಜಾರಿರುವ ಬಿಜೆಪಿ ನೇತೃತ್ವದ ಕೇಂದ್ರ, ಮೋದಿ ಸರಕಾರ ವಿರುದ್ಧ ರಾಜ್ಯ ಯುವ ಕಾಂಗ್ರೆಸ್ ವತಿಯಿಂದ ಕಾಂಗ್ರೆಸ್ ಭವನದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ ಚಂದ್ರಶೇಖರ್, ಎಐಸಿಸಿ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ ಶ್ರೀನಿವಾಸ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಯುವ ಕಾಂಗ್ರೆಸ್ ಅಧ್ಯಕ್ಷ ಮಹ್ಮದ್ ನಲಪಾಡ್, ರಾಜ್ಯ ಯುವ ಕಾಂಗ್ರೆಸ್ ಕಾರ್ಯಾಧ್ಯಕ್ಷ ಮಂಜುನಾಥ ಗೌಡ ಸೇರಿದಂತೆ ಯುವ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು.

ರೋಹಿಣಿ ಸಿಂಧೂರಿ ವಿರುದ್ಧ ದೂರು

ಬೆಂಗಳೂರು: ಭೂ ಕಬಳಿಕೆ ಮಾಡಿದ್ದಾರೆ ಎಂದು ಆರೋಪಿಸಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಸೇರಿ 6 ಮಂದಿ ವಿರುದ್ಧ ಬಾಲಿವುಡ್‌ನ ಖ್ಯಾತ ಗಾಯಕ ಲಕ್ಕಿ ಅಲಿ ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ.

ಯಲಹಂಕ ನ್ಯೂ ಟೌನ್ ಬಳಿ, ಟ್ರಸ್ಟ್‌ಗೆ ಸೇರಿರುವ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಲಕ್ಕಿ ಅಲಿ ಆರೋಪಿಸಿದ್ದು, ಈ ಬಗ್ಗೆ ದೂರಿನ ಪ್ರತಿಯನ್ನು ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ, ಸಹಾಯಕ ಪೊಲೀಸ್ ಕಮಿಷನರ್ ಮಂಜುನಾಥ್, ಯಲಹಂಕ ನ್ಯೂ ಟೌನ್ ಪಿಎಸ್‌ಐ, ತಾಲೂಕು ಸರ್ವೇಯರ್ ಮನೋಹರ್, ಸುಧೀರ್ ರೆಡ್ಡಿ ಹಾಗೂ ಮಧಸೂಧನ್ ರೆಡ್ಡಿ ಸೇರಿ ಮಂದಿ ವಿರುದ್ಧ ದೂರು ದಾಖಲಾಗಿದೆ.

ಕಾನೂನು ಕ್ರಮಕ್ಕೆ ಮನವಿ: ಈ ವಿಚಾರಕ್ಕೆ ಸಂಬಂಧಿಸಿದಂತೆ 2022ರಲ್ಲಿಯೂ ಲಕ್ಕಿ ಅಲಿ ದೂರು ಸಲ್ಲಿಸಿದ್ದರು. ತಮ್ಮ ಟ್ರಸ್ಟ್ ಜಮೀನನ್ನು ಸುಧೀರ್ ರೆಡ್ಡಿ ಹಾಗೂ ಮಧುಸೂಧನ್ ರೆಡ್ಡಿ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದಾರೆ. ಇದಕ್ಕೆ ರೋಹಿಣಿ ಸಿಂಧೂರಿ ಸಹಕಾರ ಕೊಟ್ಟಿದ್ದಾರೆ ಎಂದು ಆರೋಪಿಸಿದ್ದಾರೆ. ಯಲಹಂಕ ನ್ಯೂ ಟೌನ್ ಬಳಿ ಲಕ್ಕಿ ಅಲಿ ಟ್ರಸ್ಟ್ ಇದ್ದು, ಭೂ ಕಬಳಿಕೆಯಲ್ಲಿ ಯಲಹಂಕ ನ್ಯೂ ಟೌನ್ ಠಾಣೆಯ ಎಸಿಪಿ ಮಂಜುನಾಥ್, ತಾಲೂಕು ಸರ್ವೇ ಅಧಿಕಾರಿ ಮನೋಹನ್ ಶಾಮೀಲಾಗಿದ್ದಾರೆ ಎಂದು ದೂರು ನೀಡಿದ್ದಾರೆ. ರೋಹಿಣಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದು, ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಲೋಕಾಯುಕ್ತಕ್ಕೆ ಗಾಯಕ ಮನವಿ ಮಾಡಿದ್ದಾರೆ.

ಮಗು ಮೇಲೆ ತಂದೆಯಿಂದ ದೌರ್ಜನ್ಯ

ಬೆಂಗಳೂರು: ಮೂರು ವರ್ಷದ ಹೆಣ್ಣು ಮಗುವಿನ ಮೇಲೆ ಮಲತಂದೆ ದೌರ್ಜನ್ಯ ನಡೆಸಿರುವ ಘಟನೆ ಬೆಳಕಿಗೆ ಬಂದಿದೆ.

ಮಹಿಳೆಯ ಮೂರನೇ ಗಂಡನ ವಿಕೃತಿ ಮೆರೆದಿದ್ದು, ಮಗುವಿನ ಗುಪ್ತಾಂಗ ಕಚ್ಚಿ, ಸಿಗರೇಟ್‌ನಿಂದ ಸುಟ್ಟು ಮೃಗೀಯ ರೀತಿ ವರ್ತಿಸಿದ್ದಾನೆ. ಗೌರಿಬಿದನೂರಿನಲ್ಲಿ ಮಲತಂದೆಯೊಬ್ಬ ಅಟ್ಟಹಾಸ ತೋರಿದ್ದಾನೆ. ಜರೀನಾ ತಾಜ್ ಎಂಬಾಕೆ ಒಟ್ಟು ಮೂರು ಮದುವೆ ಆಗಿದ್ದು, ಅದರಲ್ಲಿ ಎರಡನೇ ಗಂಡನ ಮಗುವಿಗೆ ಮೂರನೇ ಗಂಡ ಚಿತ್ರಹಿಂಸೆ ನೀಡಿದ್ದಾನೆ. ಅಜ್ಮಂತ್ ಎಂಬಾತ ಮಗುವಿಗಷ್ಟೇ ಅಲ್ಲದೇ ಪತ್ನಿ ಮೇಲೂ ಹಲ್ಲೆ ನಡೆಸಿದ್ದಾನೆ.

ಮೂರು ವರ್ಷದ ಮಗುವಿನ ಮುಖ, ಕತ್ತು ಹಾಗೂ ತಲೆ ಭಾಗಕ್ಕೆ ಸಿಗರೇಟ್‌ನಿಂದ ಸುಟ್ಟು, ಮಗುವಿನ ಗುಪ್ತಾಂಗ ಕಚ್ಚಿ, ಮನಬಂದಂತೆ ಥಳಿಸಿದ್ದಾನೆ. 15 ವರ್ಷದ ಮತ್ತೊಬ್ಬ ಮಗಳ ಕೈ ಮುರಿದು ವಿಕೃತಿ ಮೆರೆದಿದ್ದಾನೆ. ಜರೀನಾ ತಾಜ್‌ಗೆ ಮೂರು ಮದುವೆಯಾಗಿದ್ದು, ಮೊದಲ ಪತಿಯಿಂದ 2 ಹೆಣ್ಣು ಮಕ್ಕಳಾಗಿದ್ದವು. 2ನೇ ಪತಿಯಿಂದ ಮತ್ತೊಂದು ಹೆಣ್ಣು ಮಗು ಜನಿಸಿತ್ತು. ಇಬ್ಬರು ಗಂಡಂದಿರನ್ನು ತೊರೆದಿದ್ದ ಜರೀನಾ ಅಜ್ಮಂತ್ ಜತೆಗೆ ಮೂರನೇ ಮದುವೆಯಾಗಿದ್ದಳು. ಎರಡನೇ ಪತಿಯಿಂದ ಜನಿಸಿದ್ದ ಹೆಣ್ಣು ಮಗುವಿನ ಮೇಲೆ ಅಜ್ಮಂತ್ ಕಿರುಕುಳ ನೀಡಿದ್ದಾನೆ. ತೀವ್ರ ಗಾಯಗೊಂಡಿರುವ ಮೂರು ವರ್ಷದ ಮಗುವನ್ನು ಬೆಂಗಳೂರಿನ ಬೌರಿಂಗ್ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಸದ್ಯ ತಂದೆಯ ವಿಕೃತಿಯಿಂದ ಪುತ್ರಿ ಶಾಕ್‌ಗೆ ಒಳಗಾಗಿದ್ದಾಳೆ. ಗೌರಿಬಿದನೂರು ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದ್ದು, ತನಿಖೆಯನ್ನು ನಡೆದಿದೆ.

ಸಮಾಚಾರ ಸಣ್ಣದಲ್ಲ

ನಾಳೆ ಎಚ್‌ಎಸ್‌ವಿ ಕಾವ್ಯ ಸಂಭ್ರಮ

ಬೆಂಗಳೂರು: ಪ್ರಸಿದ್ಧ ಕವಿ ಡಾ.ಎಚ್.ಎಸ್. ವೆಂಕಟೇಶಮೂರ್ತಿ ಅವರ 80ನೇ ಜನ್ಮದಿನೋತ್ಸವದ ಅಂಗವಾಗಿ ಉಪಾಸನ ಟ್ರಸ್ಟ್ ಮತ್ತು ಎಚ್ಚೆಸ್ವಿ ವಿದ್ಯಾರ್ಥಿ ಬಳಗದ ಸಹಯೋಗದಲ್ಲಿ 'ಎಚ್ಚ ಕಾವ್ಯ ಸಂಭ್ರಮ' ಕಾರ್ಯಕ್ರಮವನ್ನು ಭಾನುವಾರ ಸಂಜೆ 5.00 ಪತ್ತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಎಚ್ಚೆಸ್ವಿ ಅವರ ಕುರಿತು ಸಾಕ್ಷ್ಯಚಿತ್ರ, ಪುಸ್ತಕಗಳು, ಭಾವಗುಚ್ಛ ಲೋಕಾರ್ಪಣೆ ಮತ್ತು ಗೌರವಾಭಿನಂದನೆ, ಗೀತಗಾಯನ, ಭಾವ ನೃತ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಮಾರಂಭದಲ್ಲಿ ಪ್ರಾಧ್ಯಾಪಕ ಡಾ.ವೆಂಕಟಾಚಲ ಹೆಗಡೆ, ಕವಿ ಡಾ.ಬಿ.ಆರ್.ಲಕ್ಷ್ಮಣರಾವ್, ವಿಮರ್ಶಕ ಡಾ.ಎಚ್.ಎಸ್.ಸತ್ಯನಾರಾಯಣ, ಕವಿ ಡಾ.ಕಾ.ವೆಂ.ಶ್ರೀನಿವಾಸಮೂರ್ತಿ, ಹಿರಿಯ ನಟ ಶ್ರೀನಿವಾಸಪ್ರಭು ಹಾಗೂ ಎಚ್.ಎಸ್. ವೆಂಕಟೇಶಮೂರ್ತಿ ಪಾಲ್ಗೊಳ್ಳಲಿದ್ದಾರೆ.

ಜೂ.24,25ರಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ನಿರ್ವಹಣಾ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ಜೂ.24 ಮತ್ತು 25ರಂದ ಬೆಳಗ್ಗೆ 10.00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ. 66/11ಕೆವಿ ಡಿ.ಎಲ್.ಎಫ್ ಡಿ.ಎಲ್.ಎಫ್ ಅಪಾರ್ಟ್‌ಮೆಂಟ್‌ಎಲೇನಹಳ್ಳಿ, ಬೇಗೂರು ಹೋಬಳಿ. 66/11ಕೆವಿ ಅಂಜನಾಪುರ ಕೆ.ಎಸ್.ಐ.ಟಿಕಾಲೇಜ್, ಅಂಜನಾಪುರ 8ನೇ ಬ್ಲಾಕ್, ವೀವರ್ಸ್ ಕಾಲೋನಿ, ಪೂರ್ವಾಂಕರ ಅಪಾರ್ಟ್‌ಮೆಂಟ್, ಅಮೃತ ನಗರ, ಎಸ್.ಪಿ ತೋಟ, ವಡ್ಡರಪಾಳ್ಯ , ಕೆಂಬತ್ತಹಳ್ಳಿ, ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಅಚಿಂತ್ಯ ನೃತ್ಯಪ್ರದರ್ಶನ

ಬೆಂಗಳೂರು: ವಿದುಷಿ ದೀಕ್ಷಾ ಕುಮಾರ್ ಅವರ ಮನುಕುಲದ ಸತ್ಯಶೋಧನೆಯ 'ಅಚಿಂತ್ಯ' ನೃತ್ಯ ಪ್ರದರ್ಶನಗೊಂಡಿತು. ದೊಮ್ಮಲೂರಿನ ಇಂಟರ್ ನ್ಯಾಷನಲ್ ಸೆಂಟರ್‌ನಲಿ ನಡೆದ ನೃತ್ಯರೂಪಕ ವಿಭಿನ್ನ ಅಭಿವ್ಯಕ್ತಿಯನ್ನು ನೃತ್ಯಕ್ಕೆ ಸಂಯೋಜಿಸಿ ರಂಗಕ್ಕೆ ತರಲಾಗಿತ್ತು.



ಇದೊಂದು ಏಕವ್ಯಕ್ತಿ ನೃತ್ಯ ಪ್ರದರ್ಶನವಾಗಿದ್ದು, ಸತ್ಯದ ಪರಿಕಲ್ಪನೆಯ ಹುಡುಕಾಟವನ್ನು ವೀಕ್ಷಕರ ಮುಂದೆ ನೃತ್ಯರೂಪದಲ್ಲಿ ತೆರೆದಿಡುವ ವಿದುಷಿ ದೀಕ್ಷಾರವರ ಪ್ರಯತ್ನ ವೀಕ್ಷಕರ ಮನ ಸೂರೆಗೊಂಡಿತು. ಕರ್ನಾಟಕದಲ್ಲಿನ ಮಹತ್ವದ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಅಂಶಗಳನ್ನು ಒಳಗೊಂಡ ಶರಣ ಸಾಹಿತ್ಯವನ್ನು ಭರತನಾಟ್ಯಕ್ಕೆ ಸಂಯೋಜಿಸಲಾಗಿತ್ತು.

ಸಂಸದ, ಸಚಿವರಿಗೆ ಬಿಜೆಪಿಯಿಂದ ಸನ್ಮಾನ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಎನ್‌ಡಿಎ ಅಭ್ಯರ್ಥಿಗಳಿಗೆ ಬಿಜೆಪಿ ವತಿಯಿಂದ ಶನಿವಾರ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಸಂಪುಟಕ್ಕೆ ಆಯ್ಕೆಯಾಗಿರುವ ಐವರು ಸಂಸದರು ಸೇರಿದಂತೆ 19 ಬಿಜೆಪಿ ಸಂಸದರು ಹಾಗೂ ಇಬ್ಬರು ಜೆಡಿಎಸ್ ಸಂಸದರನ್ನು ಸನಡಸಲು ತೀರ್ಮಾನಿಸಲಾಗಿದೆ. ಈ ಬಗ್ಗೆ ಮಾತನಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಜ್ಯದಿಂದ ದೆಹಲಿಗೆ ಆಯ್ಕೆಯಾಗಿ ಸೇವೆ ಮಾಡುತ್ತಿರುವ ಮತ್ತು ಅಭಿವೃದ್ಧಿಗೆ ಶ್ರಮಿಸುತ್ತಿರುವ ಕೇಂದ್ರದ ಸಚಿವರನ್ನು ಶನಿವಾರ ಬೆಳಗ್ಗೆ 11 ಗಂಟೆಗೆ ಅರಮನೆ ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಅಭಿನಂದಿಸಲಾಗುವುದು ಎಂದು ತಿಳಿಸಿದ್ದಾರೆ.

ಕೆಎಂಎಫ್ ದಾಖಲೆಯ ಹಾಲು ಸಂಗ್ರಹ, ಮಾರಾಟ

ಬೆಂಗಳೂರು: ರಾಜ್ಯದಲ್ಲಿ ಕೆಎಂಎಫ್ ಹಾಲು ಸಂಗ್ರಹದಲ್ಲಿ ಸಾರ್ವಕಾಲಿಕ ದಾಖಲೆ ಮಾಡಿದ್ದು, ಉತ್ತಮ ಮಳೆಯಿಂದಾಗಿ ಹೈನೋದ್ಯಮದಲ್ಲಿ ಅಭಿವೃದ್ಧಿಯಾಗಿದೆ. ರಾಜ್ಯದಲ್ಲಿ ದಿನದ ಸರಾಸರಿ ಹಾಲು ಉತ್ಪಾದನೆಯ ಪ್ರಮಾಣವು ಕೋಟಿ ಲೀಟರ್‌ನ ಸನಿಹಕ್ಕೆ ಬಂದಿದೆ. ಕೆಎಂಎಫ್‌ನ ಐದು ದಶಕಗಳ ಇತಿಹಾಸದಲ್ಲಿ ಜೂ.18ರ ಮಂಗಳವಾರ ಒಂದೇ ದಿನ 98.87 ಲಕ್ಷ ಲೀಟರ್ ಹಾಲು ಸಂಗ್ರಹವಾಗಿದೆ. 2022ರ ಜೂನ್ 94.18 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗಿದ್ದು, ಇದು ಈವರೆಗಿನ ಗರಿಷ್ಠ ದಾಖಲೆಯಾಗಿದೆ. ಕೆಎಂಎಫ್ ಐದು ದಶಕಗಳ ಇತಿಹಾಸದಲ್ಲಿಯೇ ಏ.11ರಂದು 51.60ಲಕ್ಷ ಲೀಟರ್ ನಂದಿನಿ ಪಾಕೆಟ್ ಹಾಲು ಮತ್ತು ಏಪ್ರಿಲ್ 6 ರಂದು 13.56 ಲಕ್ಷ ಲೀಟರ್ ಮೊಸರು ಮಾರಾಟವಾಗಿದೆ.

ಮಹದೇವಪುರ: 22 ಕೋಟಿ ತೆರಿಗೆ ಸಂಗ್ರಹ

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಮೆ.ಸ್ಯಾಪ್ ಲ್ಯಾಬ್ ಇಂಡಿಯಾ ಪ್ರೈವೇಟ್ ಲಿ. ಸಂಸ್ಥೆಯಿಂದ ವಲಯ ಜಂಟಿ ಆಯುಕ್ತೆ ಡಾ. ದಾಕ್ಷಾಯಿಣಿ ನೇತೃತ್ವದಲ್ಲಿ ಒಂದು ಬಾರಿ ಪರಿಹಾರ ಯೋಜನೆಯಡಿ 22 ಕೋಟಿ ರು. ತೆರಿಗೆ ಸಂಗ್ರಹ ಮಾಡಲಾಗಿದೆ. ಮಹದೇವಪುರ ವಲಯದ ಗರುಡಾಚಾರ್ ಪಾಳ್ಯ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಸ್ವತ್ತಿನಿಂದ ಮೆ. ಸ್ಯಾಪ್ ಲ್ಯಾಬ್ 2008-09 ರಿಂದ 2023-24ರವರೆಗೆ ತಪ್ಪಾಗಿ ವರ್ಗ ಮತ್ತು ಕಡಿಮೆ ದರದಡಿಯಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸಿದ್ದರು. ಈ ಸಂಬಂಧ ಸರಿಯಾದ ವರ್ಗದ ಪ್ರಕಾರ ಆಸ್ತಿ ತೆರಿಗೆಯನ್ನು ಒಂದು ಬಾರಿ ಪರಿಹಾರ ಯೋಜನೆಯಡಿ ಪಾಲಿಕೆಗೆ ಪಾವತಿಸಲು ಸಂಸ್ಥೆಗೆ ತಿಳುವಳಿಕೆ ಪತ್ರ ನೀಡಲಾಗಿತ್ತು.

ನೂತನ ಅಕಾಡೆಮಿಗಳ ಅಧ್ಯಕ್ಷರ ಜೊತೆ ತಂಗಡಗಿ ಸಭೆ, ಸಚಿವರ ಕ್ರಮಕ್ಕೆ ಪ್ರಶಂಸೆ

ಅಕಾಡೆಮಿ, ಪ್ರಾಧಿಕಾರಕ್ಕೆ ಅನುದಾನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನೂತನ ಅಕಾಡೆಮಿಗಳ ಅಧ್ಯಕ್ಷರಿಗೆ ಕ್ರಿಯಾಯೋಜನೆ ಸಿದ್ಧಪಡಿಸಲು ಸೂಚಿಸಲಾಗಿದ್ದು, ಅಕಾಡೆಮಿಗಳಿಗೆ ಅಗತ್ಯವಿರುವ ಅನುದಾನ ನೀಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ತಿಳಿಸಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನೂತನವಾಗಿ ನೇಮಕಗೊಂಡ ಅಧ್ಯಕ್ಷರು ಹಾಗೂ ಸದಸ್ಯರ ಜತೆ ಮೊದಲ ಬಾರಿಗೆ ಸಭೆ ನಡೆಸಿ ಮಾತನಾಡಿದ ಅವರು, ಪ್ರತಿ ತಿಂಗಳು ಎರಡು ಅಕಾಡೆಮಿಗಳ ಕಾರ್ಯಪ್ರಗತಿ ಪರಿಶೀಲನಾ ಸಭೆ ನಡೆಸಲಾಗುತ್ತದೆ ಎಂದರು. ಅಲ್ಲದೆ, ಅಕಾಡೆಮಿ ಹಾಗೂ ಪ್ರಾಧಿಕಾರಗಳು ಕಲ್ಯಾಣ ಕರ್ನಾಟಕ ಭಾಗಗಳಲ್ಲಿ ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾಮಾಜಿಕ ನ್ಯಾಯ ಪಾಲನೆಯನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಮುಕ್ತವಾಗಿ ಕಾರ್ಯನಿರ್ವಹಿಸುವಂತೆ ಸಚಿವರು ಸೂಚಿಸಿದರು.

ಕನ್ನಡ ಭಾಷೆ ಮತ್ತು ಸಂಸ್ಕೃತಿ ಬೆಳವಣಿಗೆಯಲ್ಲಿ ಪ್ರಾಧಿಕಾರ ಮತ್ತು ಅಕಾಡೆಮಿಗಳು ರಾಜೀಯಾಗದೆ ಕೆಲಸ ಮಾಡಬೇಕು. ಒಟ್ಟಾರೆ ಎಲ್ಲಾ ಅಕಾಡೆಮಿಗಳು ಚುರುಕಾಗಿ ಕೆಲಸ ಮಾಡಬೇಕು. ಸಭೆಯಲ್ಲಿ ಹಲವು ಹಿರಿಯರು ಸಲಹೆಗಳನ್ನು ನೀಡಿದ್ದು, ಎಲ್ಲರನ್ನು ಒಟ್ಟಾಗಿ ಕರೆದೊಯ್ಯಲಾಗುವುದು. ಎಲ್ಲರೂ ಇಲಾಖೆ ಮತ್ತು ಸರ್ಕಾರದ ಘನತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸ ಮಾಡಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು.

ಶೀಘ್ರ ಸಮನ್ವಯ ಸಮಿತಿ ರಚನೆ: ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಅವರ ತತ್ವ ಸಿದ್ಧಾಂತವನ್ನು ಪ್ರಚಾರಪಡಿ ಸಲು ಹಾಗೂ ಕರ್ನಾಟಕ ಎಂದು ಹೆಸರಿಟ್ಟು 50 ವರ್ಷದ ತುಂಬಿದ ಹಿನ್ನೆಲೆಯಲ್ಲಿ ಅನುಷ್ಠಾನಗೊಳಿಸಬೇಕಾದ ಕಾರ್ಯಕ್ರಮಗಳನ್ನು ರೂಪಿಸಲು ಅಕಾಡೆಮಿಗಳ ಅಧ್ಯಕ್ಷರು ಹಾಗೂ ಸದಸ್ಯರನ್ನೊಳಗೊಂಡ ಸಮನ್ವಯ ಸಮಿತಿ ರಚನೆ ಮಾಡಲಾಗುವುದು ಎಂದು ಇದೇ ವೇಳೆ ಸಚಿವ ತಂಗಡಗಿ ತಿಳಿಸಿದ್ದಾರೆ.

ಸಾಹಿತಿಗಳ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಿಲ್ಲ. ಅನಗತ್ಯವಾಗಿ ಅದರ ಬಗ್ಗೆ ಚರ್ಚೆಮಾಡುವುದು ಬೇಡ. ಈ ಬಗ್ಗೆ ನಾನು ರಾಜಕಾರಣ ಮಾತನಾಡಲು ಹೋಗುವುದಿಲ್ಲ. ಈ ಹಿಂದಿನ ಸರ್ಕಾರದಲ್ಲಿ ಯಾರೆಲ್ಲಾ ಎಲ್ಲಿ ಅಕಾಡೆಮಿಗಳ ಅಧ್ಯಕ್ಷರ ಸಭೆ ನಡೆಸಿದ್ದರು ಎಂಬುದನ್ನು ಹೇಳುತ್ತಾ ಹೋದರೆ ಅದು ರಾಜಕೀ ಯವಾಗುತ್ತದೆ. ಹೀಗಾಗಿ ಈ ವಿಚಾರದಲ್ಲಿ ರಾಜಕಾರಣಗೊಳಿಸುವುದು ಬೇಡ ಎಂದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನೂತನವಾಗಿ ನೇಮಕಗೊಂಡ ಅಧ್ಯಕ್ಷರು ಹಾಗೂ ಸದಸ್ಯರ ಜತೆ ಸಚಿವ ಶಿವರಾಜ್ ತಂಗಡಗಿ ಸಭೆ ನಡೆಸಿದರು. ಸಭೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ್ ಬಿಳಿಮಲೆ, ಗಡಿ ಅಭಿವೃದ್ಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನ ಮರದ ಸೇರಿದಂತೆ ಅನೇಕರಿದ್ದರು.

> ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಡ್ಡಾಯವಾಗಿ ಕನ್ನಡ ಭಾಷಾ ಮಾಧ್ಯಮದಲ್ಲಿ ಪಾಠ ಮಾಡುವ ಶಿಕ್ಷಕರನ್ನೇ ಕನ್ನಡ ಮಾಧ್ಯಮ ಶಾಲೆಗಳಿಗೆ ಮಹಾರಾಷ್ಟ್ರ ಸರಕಾರ ನೇಮಿಸಬೇಕು. ಹೀಗಾಗಲೇ ಈ ವಿಚಾರದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೂ ಚರ್ಚೆ ನಡೆಸಿದ್ದೇನೆ. ಗಡಿಭಾಗದಲ್ಲಿ ಕನ್ನಡ ಭಾಷೆ ಹಾಗೂ ಕನ್ನಡ ಶಾಲೆ ಉಳಿವಿಗೆ ನಮ್ಮ ಸರಕಾರ ವಿಶೇಷ ಕಾಳಜಿ ಹೊಂದಿದೆ.
>
> - ಶಿವರಾಜ್ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಸಚಿವ

> ಯಾವುದೇ ಸರಕಾರ ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದವರೂ ಅಕಾಡೆಮಿ ಅಧ್ಯಕ್ಷರು ನೇಮಕವಾದ ಬಳಿಕ ಈ ರೀತಿ ಸಭೆ ಕರೆದಿಲ್ಲ. ಈ ರೀತಿ ನಮ್ಮನ್ನು ಕರೆದು ಸಭೆ ನಡೆಸುವ ಮೂಲಕ ಹೊಸಕಳೆ ತಂದುಕೊಡುವ ಕೆಲಸ ಮಾಡಿದ್ದೀರಿ. ಸಾಂಸ್ಕೃತಿಕ ನೀತಿ ನಿಮ್ಮ ಅವಧಿಯಲ್ಲಿ ಜಾರಿಯಾಗಲಿ.
>
> - ಕೆ.ವಿ. ನಾಗರಾಜಮೂರ್ತಿ, ನಾಟಕ ಅಕಾಡೆಮಿ ಅಧ್ಯಕ್ಷ

ಅಂಡಮಾನ್‌ನಲ್ಲಿ ಕನ್ನಡದ ಕಂಪು

ಪೋರ್ಟ್‌ಬ್ಲೇರ್‌ನಲ್ಲಿ ಕನ್ನಡ ಸಮ್ಮೇಳನ

ಬೆಂಗಳೂರು: ದೂರದ ಅಂಡಮಾನ್ ನಲ್ಲೂ ಕನ್ನಡದ ಕಂಪು ಪಸರಿಸಿದೆ. ಪೋರ್ಟ್‌ಬ್ಲೇರ್‌ನಲ್ಲಿ ನಡೆದ ಕನ್ನಡ ಸಮ್ಮೇಳನ ದಿಂದಾಗಿ ಇಡೀ ದ್ವೀಪನಗರವೇ ಕನ್ನಡದಲ್ಲಿ ಮಿಂದೆದ್ದಂತೆ ಕಂಡುಬಂತು.

ಜೂನ್ 15ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಮಂಜುನಾಥ್ ಎಜುಕೇಶನ್ ಟ್ರಸ್ಟ್ ಮತ್ತು ಕನ್ನಡ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ನಾಲ್ಕು ದಿನಗಳ ಕನ್ನಡ ಸಂಸ್ಕೃತಿ ಸಮ್ಮೇಳನದಿಂದ ಕನ್ನಡಿಗರ ಸಂಭ್ರಮ ಮುಗಿಲುಮುಟ್ಟಿತ್ತು. ಸಮ್ಮೇಳನಾಧ್ಯಕ್ಷ ರಾದ ಡಾ. ಅರ್ಚನಾ ಅಥಣಿ ಮಾತನಾಡಿ, ಕರ್ನಾಟಕಕ್ಕೂ ಮತ್ತು ಅಂಡಮಾನಿಗೂ ಭಾವನಾತ್ಮಕ ಸಂಬಂಧವಿದ್ದು, ಸ್ವಾತಂತ್ರ್ಯದ ಕಿಡಿಹಚ್ಚಿದ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಉಳ್ಳಾಲದ ರಾಣಿ ಅಬ್ಬಕ್ಕ ಅವರನ್ನು ಇಲ್ಲಿ ನೆನೆಸುವುದು ನಮ್ಮ ದೇಶಪ್ರೇಮದ ಕಿಚ್ಚನ್ನು ಹೆಚ್ಚಿಸುವುದು' ಎಂದು ತಿಳಿಸಿದ್ದಾರೆ. ಶಿವಗಂಗೆ ಮೇಲಣ ಗವಿಮಠದ ಡಾ.ಮಲಯಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಪ್ರತಿಯೊಬ್ಬ ಭಾರತೀಯನು ಅಂಡಮಾನ್ ಜೈಲಿಗೆ ಭೇಟಿಕೊಡಬೇಕು, ಆಗ ವೀರ ಸಾರ್ವಕರ್ ಅವರಂತಹ ಸ್ವಾತಂತ್ರ್ಯ ಸೇನಾನಿಗಳು ಅನುಭವಿಸಿದ ಯಾತನೆ ಎಂತಹದ್ದೆಂದು ತಿಳಿದುಕೊಳ್ಳಬಹುದು. ಬ್ರಿಟಿಷರ ದೌರ್ಜನ್ಯದಿಂದ ಎಷ್ಟೋ ಭಾರತೀಯ ಸ್ವಾತಂತ್ರ್ಯ ಸೇನಾನಿಗಳು ಈ ನೆಲದಲ್ಲಿ ನರಕ ಅನುಭವಿಸಿ ಜೀವ ತೆತ್ತಿದ್ದಾರೆ. ಸದಾ ಅವರನ್ನು ಸ್ಮರಿಸುವುದರಿಂದ ನಮ್ಮಲ್ಲಿ ದೇಶಾಭಿಮಾನ ಉಕ್ಕಿ ಹರಿಯುತ್ತದೆ ಎಂದರು. ಅಂಡಮಾನ್‌ನ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕನ್ನಡಿಗ ಡಾ. ಟಿ. ಎಸ್. ಅಶೋಕ್‌ಕುಮಾರ್ ಮಾತನಾಡಿ, ಅಂಡಮಾನಿನ ಮಣ್ಣಿನ ಕಣಕಣದಲ್ಲೂ ಸ್ವಾತಂತ್ರ್ಯದ ಹೋರಾಟದ ಕೆಚ್ಚಿದೆ. ಇಲ್ಲಿನ ಮೂಲವಾಸಿಗಳಾದ ಬುಡಕಟ್ಟು ಜನರು ಕೂಡ ಸ್ವಾತಂತ್ರ್ಯ ಹೋರಾಟಕ್ಕೆ ಜೀವತೆತ್ತಿದ್ದಾರೆ. ಅವರ ನಾಯಕ ವರ್ದಿನ್‌ಗಾಗಿ ಅಂಡಮಾನ್ ನಲ್ಲಿ ಸ್ಮಾರಕ ನಿರ್ಮಿಸಲಾಗಿದೆ. ಈ ನೆಲಕ್ಕೆ ಕಾಲಿಟ್ಟ ಪ್ರತಿಯೊಬ್ಬ ಭಾರತೀಯ ಕೂಡ ಹಿಂದಿರುಗುವಾಗ ಅಪ್ಪಟ ದೇಶಪ್ರೇಮಿಯಾಗಿಬಿಟ್ಟಿರುತ್ತಾನೆ. ಈ ಮಣ್ಣಿಗೆ ಅಂತಹ ಶಕ್ತಿ ಇದೆ' ಎಂದರು.

ಜೂನ್ 15ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಮಂಜುನಾಥ್ ಎಜುಕೇಶನ್ ಟ್ರಸ್ಟ್ ಮತ್ತು ಕನ್ನಡ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ನಾಲ್ಕು ದಿನಗಳ ಕನ್ನಡ ಸಂಸ್ಕೃತಿ ಸಮ್ಮೇಳನ ನಡೆಯಿತು.

ಮುಂಗಾರು, ಕೃಷಿ ವಿಡಿಯೋ ಸಂವಾದ: ಚೆಲುವರಾಯಸ್ವಾಮಿ ಭಾಗಿ

ರಾಜ್ಯದ ಯೋಜನೆಗಳಿಗೆ ಸಹಕರಿಸಿ

ಬೆಂಗಳೂರು: ಕೇಂದ್ರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್‌ರಿಂದ ವಿವಿಧ ರಾಜ್ಯಗಳ ಕೃಷಿ ಸಚಿವರೊಂದಿಗೆ ಮುಂಗಾರು ಹಾಗೂ ಕೃಷಿ ಸಂಬಂಧಿತ ನಡೆಸಿದ ವಿಡಿಯೊ ಸಂವಾದದಲ್ಲಿ ಸಚಿವ ಎನ್.ಚೆಲುವರಾಯಸ್ವಾಮಿ ಪಾಲ್ಗೊಂಡು, ರಾಜ್ಯದ ಯೋಜನೆಗಳಿಗೆ ಸಂಪೂರ್ಣ ಸಹಕಾರ ಕೋರಿದರಲ್ಲದೇ ರಾಜ್ಯದ ಮಳೆ ಬೆಳೆ ಹಾಗೂ ರೈತರ ಸಮಸ್ಯೆಗಳ ಬಗ್ಗೆ ಮಾಹಿತಿ ಹಂಚಿಕೊಂಡರು.

ರಾಜ್ಯದ 31.6 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 19.83 ಲಕ್ಷ ಟನ್ ದ್ವಿದಳ ಧಾನ್ಯ ಬೆಳೆಯಲಾಗುತ್ತಿದ್ದು, ದೇಶದ ದ್ವಿದಳ ಧಾನ್ಯದಲ್ಲಿ ಶೇ.11 ರಷ್ಟು ಭೂ ಪ್ರದೇಶ ಮತ್ತು ಶೇ.8 ರಷ್ಟು ಉತ್ಪಾದನೆ ಹೊಂದಿದೆ. ತೊಗರಿ ಬೇಳೆ ಉತ್ಪಾದನೆಯಲ್ಲಿ ಕರ್ನಾಟಕ ದೇಶದಲ್ಲಿಯೇ 2ನೇ ಸ್ಥಾನದಲ್ಲಿದ್ದು ಶೇ.31 ರಷ್ಟು ಕೊಡುಗೆ ನೀಡುತ್ತಿದೆ ಎಂದು ವಿವರಿಸಿದರು. ರಾಜ್ಯದಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆ ಎರಡನ್ನೂ ಹೆಚ್ಚಿಸಲು ಕಾರ್ಯತಂತ್ರ ರೂಪಿಸಿ ಅನುಷ್ಠಾನಗೊಳಿಸುತ್ತಿದ್ದು ಇದರಿಂದ ಬೇಳೆ ಕಾಳುಗಳ ಆಮದು ಅವಲಂಬನೆ ತಪ್ಪಿಸಲು ಸಹಾಯಕವಾಗುತ್ತದೆ. ಪ್ರಸಕ್ತ ವರ್ಷ 2024-25 ತೊಗರಿ ಬೇಳೆ ಉತ್ಪಾದನೆ ಪ್ರದೇಶವನ್ನು 2 ಲಕ್ಷ ಹೆಕ್ಟೇರ್‌ನಷ್ಟು ಹೆಚ್ಚಿಸಲು ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ರಾಜ್ಯದ 64.2 ಕೋಟಿ ರು. ಮೊತ್ತದ ಬೇಳೆಕಾಳು ಅಭಿವೃದ್ಧಿಯ ಹೆಚ್ಚುವರಿ ಯೋಜನೆಗೆ ಅನುಮೋದನೆ ನೀಡಿರುವ ಕೇಂದ್ರ ಕೃಷಿ ಸಚಿವರಿಗೆ ವಿಶೇಷ ಧನ್ಯವಾದ ತಿಳಿಸಿದ ಅವರು, ಶೀಘ್ರದಲ್ಲೇ ವೈಯಕ್ತಿಕವಾಗಿ ಭೇಟಿಮಾಡುವುದಾಗಿ ತಿಳಿಸಿದರು.

ಜೀವನಶೈಲಿಯಲ್ಲಿ ಯೋಗ ಅಳವಡಿಸಿಕೊಳ್ಳಿ

ಬೆಂಗಳೂರು: ಚಿಕ್ಕಬಳ್ಳಾಪುರದ ಆದಿಯೋಗಿ ಯ ಸಮ್ಮುಖದಲ್ಲಿ 10ನೇ ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಬೃಹತ್ ಯೋಗ ಕಾರ್ಯಕ್ರಮ ನಡೆಯಿತು.

ಏರ್‌ಕಮಾಂಡರ್ ಅರುಣ್‌ಕುಮಾರ್ ಮಾತನಾಡಿ, ದೇಶದ ಎಲ್ಲಜನರೂ, ಮುಖ್ಯ ವಾಗಿ ಯುವಪೀಳಿಗೆ ಯೋಗವನ್ನುತಮ್ಮ ಜೀವನಶೈಲಿಯನ್ನಾಗಿ ಅಳವಡಿಸಿಕೊಳ್ಳಬೇಕು. ಯೋಗ ಕೇವಲ ಶಾರೀರಿಕ ವ್ಯಾಯಾಮವಲ್ಲ, ಬದಲಿಗೆ ದೇಹ ಮತ್ತು ಮನಸ್ಸನ್ನುಪುನಶ್ಚೇತನ ಗೊಳಿಸುವ ಒಂದು ಪರಿಪೂರ್ಣ ಅಭ್ಯಾಸ. ಜಗತ್ತಿನೆಲ್ಲೆಡೆ ನಾವೆಲ್ಲರೂ ಒಬ್ಬರಿಗೊಬ್ಬರು ಬೆಸೆದುಕೊಂಡಿದ್ದೇವೆ. ಯೋಗದ ಮೂಲಕ ನಾವು ನಮ್ಮಲ್ಲಿನ ತಡೆಗೋಡೆಗಳನ್ನು ಮುರಿದು, ವಿಶ್ವವನ್ನೇ ಒಂದು ಕುಟುಂಬವನ್ನಾಗಿ ಮಾಡಬಹುದು.ಯೋಗ, ಶಿಸ್ತು ಮತ್ತು ಏಕಾಗ್ರತೆಯನ್ನು ತರುತ್ತದೆ ಎಂದು ಹೇಳಿದರು.

ಚಿಕ್ಕಬಳ್ಳಾಪುರದ ಆದಿಯೋಗಿಯ ಸಮ್ಮುಖದಲ್ಲಿ ಯೋಗ ಶಿಬಿರ ಆಯೋಜಿಸಲಾಗಿತ್ತು.

ಎಂಜಿನಿಯರುಗಳಿಗೆ ಸಚಿವ ಖರ್ಗೆ ಸಲಹೆ

ಹಗರಣಮುಕ್ತ ಕೆಲಸ ಮಾಡಿ

ಅಂಬೇಡ್ಕರ್ ಭವನದಲ್ಲಿ ನಡೆದ ಸಮಾರಂಭದಲ್ಲಿ ನೇಮಕಾತಿ ಪತ್ರಗಳನ್ನು ವಿತರಿಸಿದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ. ಈ ವೇಳೆ ಇಲಾಖೆಯ ಆಯುಕ್ತ ಕೆ.ನಾಗೇಂದ್ರ ಪ್ರಸಾದ್ ಇದ್ದರು.

ಬೆಂಗಳೂರು: ಸರಕಾರಿ ಉದ್ಯೋಗಕ್ಕೆ ಸೇರುವ ಅಧಿಕಾರಿಗಳು ತಮ್ಮ ಕುಟುಂಬಕ್ಕೆ ಒಳ್ಳೆಯ ಹೆಸರನ್ನು ಸಂಪಾದಿಸಿ ಯಾವುದೇ ಹಗರಣಗಳಿಗೆ ಸಿಲುಕದೆ ಸರ್ಕಾರಕ್ಕೆ ಹಾಗೂ ಸಮಾಜಕ್ಕೆ ಉತ್ತಮ ಸೇವೆಯನ್ನು ಸಲ್ಲಿಸುವಂತಾಗಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಕರೆನೀಡಿದ್ದಾರೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಒಂದೇ ಬಾರಿಗೆ ಲೋಕಸೇವಾ ಆಯೋಗದ ಮೂಲಕ ನೇಮಕಗೊಂಡ 347 ಎಂಜನಿಯರುಗಳಿಗೆ ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ನಡೆದ ಸಮಾರಂಭದಲ್ಲಿ ನೇಮಕಾತಿ ಪತ್ರಗಳನ್ನು ವಿತರಿಸಿ ಮಾತನಾಡಿದ ಅವರು, ಸೇವಾ ಮನೋಭಾವದಿಂದ ಉದ್ಯೋಗ ಮಾಡುವವರು ರಾಜಕೀಯದಿಂದ ದೂರ ಇರಬೇಕಾದುದು ಅತಿ ಮುಖ್ಯ, ಇಷ್ಟೂ ಅಭ್ಯರ್ಥಿಗಳನ್ನು ಕೌನ್ಸೆಲಿಂಗ್ ಮೂಲಕ ಅನುಕೂಲವಾಗುವ ಸ್ಥಳಗಳಿಗೆ ನೇಮಕ ಮಾಡಲಾಗಿದೆ ಎಂದರು.

ಗ್ರಾಮೀಣಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯ ದರ್ಶಿ ಅಂಜುಂ ಪರವೇಜ್ ಮಾತನಾಡಿ, ಬೇರೆ ಇಲಾಖೆಗಳಲ್ಲಿ ಹುದ್ದೆಗಳನ್ನು ತುಂಬು ವ ಪ್ರಕ್ರಿಯೆ ಬಹಳ ದೀರ್ಘ ಕಾಲ ತೆಗೆದುಕೊಳ್ಳುತ್ತದೆ. ಆದರೆ ಸಚಿವರ ಬದ್ಧತೆಯಿಂದ ನಾಲ್ಕೇ ತಿಂಗಳಲ್ಲಿ ಎಂಜನಿ ಯರುಗಳ ನೇಮಕವಾದದ್ದು ವಿಶೇಷ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ನೂರಾರು ಎಂಜನಿಯರ್ ಹುದ್ದೆಗಳು ಖಾಲಿ ಇದ್ದ ಪರಿಣಾಮವಾಗಿ ಗ್ರಾಮೀಣ ಜನರಿಗೆ ಶುದ್ಧ ನೀರನ್ನು ಸಮರ್ಪಕವಾಗಿ ವಿತರಿಸಲು ತೊಂದರೆಯಾಗಿದ್ದನ್ನು ಮನಗಂಡ ಸಚಿವರು, ತಕ್ಷಣವೇ ಹುದ್ದೆಗಳನ್ನು ತುಂಬಲು ಆದೇಶಿಸಿದರರು ಎಂದರು.

ಯೋಗೇಶ್ವರ್ ಹೇಳಿಕೆಗೆ ಡಿಸಿಎಂ ಟಾಂಗ್

ಜನರೇ ನನ್ನ ಹಿಂದಿರುವ ರಾಜಕೀಯ ಶಕ್ತಿ: ಡಿಕೆಶಿ

ಬೆಂಗಳೂರು: ರಾಜಕೀಯ ಅಂತ್ಯ ತೀರ್ಮಾನ ಮಾಡೋರು ಜನರು. ಬೇರೆ ಯಾರೂ ಅಲ್ಲ. ಜನರೇ ನನ್ನ ಹಿಂದಿರುವ ಶಕ್ತಿ ಎಂದು ಹೇಳುವ ಮೂಲಕ ವಿಧಾನಪರಿಷತ್ ಸದಸ್ಯ ಯೋಗೇಶ್ವರ್ ಹೇಳಿಕೆಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಟಾಂಗ್ ನೀಡಿದ್ದಾರೆ. ವಿಧಾನಸೌಧದ ಆವರಣದಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗದಿನ ಕಾರ್ಯಕ್ರಮದ ಬಳಿಕ ಮಾತನಾಡಿದ ಅವರು, ಯೋಗೇಶ್ವರ್ ದೊಡ್ಡವರು. ನಾನೂ ರಾಮನಗರ ಜಿಲ್ಲೆಯವನು. ಋಣ ತೀರಿಸಲು ಬದ್ಧನಿದ್ದೇನೆ, ಶಕ್ತಿ ಕೊಡಿ ಎಂದು ಆ ಕ್ಷೇತ್ರದ ಜನರ ಬಳಿ ಕೇಳಿಕೊಂಡಿದ್ದೇನೆ. ವಿಶ್ವಾಸವಿದ್ದರೆ ಬೆಂಬಲ ನೀಡುತ್ತಾರೆ ಎಂದು ತಿಳಿಸಿದ್ದಾರೆ. ಚನ್ನಪಟ್ಟಣ ದಲ್ಲಿ ಉಪಚುನಾವಣೆ ನಡೆದರೆ ಕನಕಪುರದಲ್ಲಿ ಏಕೆ ಉಪಚುನಾವಣೆ ನಡೆಯುತ್ತದೆ. ನಾನು ಕನಕಪುರದ ಶಾಸಕ. ಪಕ್ಷದ ಅಧ್ಯಕ್ಷನಾಗಿ ನನ್ನ ಮೇಲೆ ಜವಾಬ್ದಾರಿಯಿದೆ. ಇದೂ ನನ್ನದೇ ಕ್ಷೇತ್ರ, ನನ್ನದೇ ನಾಯಕತ್ವ. ಸಿದ್ದರಾಮಯ್ಯ ಹಾಗೂ ನಾನು ಸೇರಿ ಚುನಾವಣೆ ನಡೆಸುತ್ತೇವೆ ಎಂದು ಸುರೇಶ್ ಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ್ದಾರೆ.

ಯೋಗ ನಮ್ಮ ದೇಶದ ಆಸ್ತಿ

ಯೋಗಕ್ಕೆ ಐದು ಸಾವಿರ ವರ್ಷಗಳ ಇತಿಹಾಸವಿದ್ದು, ದೇಶ ಮಾತ್ರವಲ್ಲದೇ ಇಡೀ ವಿಶ್ವ ನಮ್ಮ ಧರ್ಮ, ಸಂಸ್ಕೃತಿ, ಪದ್ಧತಿಯಾಗಿರುವ ಯೋಗವನ್ನು ಒಪ್ಪಿದೆ. ಅನೇಕ ಹಿರಿಯರು, ಋಷಿಗಳು ಇದಕ್ಕೆ ಕೊಡುಗೆ ನೀಡಿದ್ದು, ಯೋಗಕ್ಕೆ ಯಾವುದೇ ಜಾತಿ, ಕುಲ, ಧರ್ಮದ ಎಲ್ಲೆ ಇಲ್ಲ. ನನಗೆ ಯೋಗಾಭ್ಯಾಸವಿಲ್ಲ. ಶಾಲಾ ದಿನಗಳಲ್ಲಿ ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸುತ್ತಿದ್ದೆ. ನನ್ನ ಮನೆಯಲ್ಲಿ ಯೋಗಾಭ್ಯಾಸ ಮಾಡುತ್ತಾರೆ. ಯೋಗ ಈ ದೇಶದ ಆಸ್ತಿ. ಯೋಗಕ್ಕೆ ಪ್ರೋತ್ಸಾಹ ಹಾಗೂ ಪ್ರಚಾರ ನೀಡಬೇಕಾಗಿರುವುದು ನಮ್ಮ ಕರ್ತವ್ಯ. ಹತ್ತು ದಿನಗಳ ಕಾರ್ಯಕ್ರಮವನ್ನು ಆರೋಗ್ಯವಂತರಾಗಿರಬೇಕು, ಮಾನಸಿಕವಾಗಿ ಶಕ್ತಿಶಾಲಿಯಾ ಗಬೇಕು ಎಂಬ ಉದ್ದೇಶದಿಂದ ಸರಕಾರ ಆಯೋಜಿಸಿದೆ. ಹಿರಿಯರು, ಕಿರಿಯರು ಸೇರಿದಂತೆ ಎಲ್ಲಾ ವರ್ಗದ ಜನರು ಯೋಗಾಭ್ಯಾಸ ಮಾಡಿ ಆರೋಗ್ಯವಂತರಾಗಿರಲಿ ಎಂದು ಮನವಿ ಮಾಡಿದರು.

ನಗರದ ಹಲವೆಡೆ ಬಿರುಸಿನ ಮಳೆ

ನಾಳೆಯಿಂದ 26ರವರೆಗೆ ಮಳೆ

ಬೆಂಗಳೂರು: ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಮುಂಗಾರು ಚುರುಕಾಗಿದ್ದು, ನಗರದಲ್ಲಿ ಕೆಲ ದಿನಗಳಿಂದ ಮಧ್ಯಾಹ್ನದ ವೇಳೆಗೆ ಜೋರು ಮಳೆಯಾಗುತ್ತಿದೆ.

ಶುಕ್ರವಾರವೂ ನಗರದ ಹಲವೆಡೆಗಳಲ್ಲಿ ಭಾರೀ ಮಳೆಯಾಗಿದ್ದು, ಕಾರ್ಪೊರೇಷನ್, ಮೆಜೆಸ್ಟಿಕ್, ಕೆ.ಆರ್ ಸರ್ಕಲ್, ಶಾಂತಿನಗರ, ಮಡಿವಾಳ, ಪೀಣ್ಯ, ದಾಸರಹಳ್ಳಿ, ಬಾಗಲಗುಂಟೆ, ಶೆಟ್ಟಿಹಳ್ಳಿ, ಯಶವಂತಪುರ, ಮಲ್ಲಸಂದ್ರ ಸೇರಿ ಹಲವೆಡೆ ಭಾರೀ ಮಳೆ ಆಗಿದೆ. ಮಳೆಯಿಂದಾಗಿ ಹಲವೆಡೆ ಟ್ರಾಫಿಕ್ ಉಂಟಾಗಿದ್ದು ಸವಾರರು ಪರದಾಡಿದ್ದಾರೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ, ಕರಾವಳಿ ಕರ್ನಾಟಕಕ್ಕೆ ರೆಡ್ ಅಲರ್ಟ್ ಘೋಷಿಸಿದ್ದು, ಜೂನ್ 22 ರಂದು ಭಾರಿ ಮಳೆಯಾಗುವ ಸಾಧ್ಯತೆಯಿದೆ. ರಾಜ್ಯದಾದ್ಯಂತ ಬಹುತೇಕ ಸ್ಥಳಗಳಲ್ಲಿ ಗುಡುಗು ಸಹಿತ ಮಳೆಯಾಗಲಿದೆ ಮತ್ತು ಬಿರುಗಾಳಿ(30-40 ಕಿಮೀ) ಬೀಸುವ ಸಾಧ್ಯತೆಯಿದೆ. ಜೂನ್ 23 ರಿಂದ ಜೂನ್ 26 ರವರೆಗೆ ಕೃಷ್ಣಾ ಜಲಾನಯನ ಪ್ರದೇಶದ ಕೆಲವು ಪ್ರದೇಶಗಳಲ್ಲಿ ಭಾರೀ ಮಳೆ ನಿರೀಕ್ಷಿಸಲಾಗಿದೆ ಎಂದು ಎಚ್ಚರಿಕೆ ನೀಡಿದೆ.

ಕರ್ನಾಟಕದ ಒಳನಾಡಿನ ಕರಾವಳಿ ಮತ್ತು ಪಕ್ಕದ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ. ನೈರುತ್ಯ ಮಾನ್ಸೂನ್ ಮಹಾರಾಷ್ಟ್ರದ ಇನ್ನೂ ಕೆಲವು ಭಾಗಗಳಿಗೆ ಮುಂದುವರೆದಿದ್ದರೂ, ವಿದರ್ಭದ ಉಳಿದ ಭಾಗಗಳು, ಮಧ್ಯಪ್ರದೇಶದ ಕೆಲವು ಭಾಗಗಳು, ಛತ್ತೀಸ್‌ಗಢ ಮತ್ತು ಒಡಿಶಾದ ಕೆಲವು ಭಾಗಗಳು, ಪಶ್ಚಿಮ ಬಂಗಾಳದ ಕೆಲವು ಭಾಗಗಳಲ್ಲಿ ಜೂನ್ 21 ರಿಂದ ಜೂನ್ 25 ರ ನಡುವೆ ಸಾಧಾರಣ ಮಳೆಯೊಂದಿಗೆ ಭಾರೀ ಮಳೆಯಾಗುವ ಸಾಧ್ಯತೆಯಿದೆ . ಜೂನ್ 23 ರಿಂದ ರಾಜ್ಯಾದ್ಯಂತ ಭಾರೀ ಮಳೆ ಮತ್ತು ವ್ಯಾಪಕ ಮಳೆಯ ನಿರೀಕ್ಷೆಯಲ್ಲಿದ್ದೇವೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೋಕಾಕೋಲಾ ಕಂಪನಿಯಿಂದ ಮಮದಾಪುರ ಕೆರೆ ಪುನಶ್ಚೇತನ

ಬೆಂಗಳೂರು: ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ ಐತಿಹಾಸಿಕ ಮಮದಾಪುರ ಕೆರೆಯನ್ನು ಒಂದು ಕೋಟಿ ರೂಪಾಯಿ ಮೊತ್ತದಲ್ಲಿ ಪುನಶ್ಚೇತನಗೊಳಿಸಲು ಕೋಕಾಕೋಲಾ ಕಂಪನಿ ಮುಂದಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ ಬಿ ಪಾಟೀಲ ತಿಳಿಸಿದ್ದಾರೆ.

ಕಂಪನಿಯ ಉನ್ನತಾಧಿ ಕಾರಿ ಹಿಮಾಂಶು ಪ್ರಿಯ ದರ್ಶಿ ಮತ್ತು ಮುಕುಂದ್ ತ್ರಿವೇದಿ ಜೊತೆ ಚರ್ಚಿಸಿದ ಅವರು, ಮಮದಾಪುರ ಕೆರೆಯು ರಾಜ್ಯದ ಅತಿದೊಡ್ಡ ಕೆರೆಗಳ ಪೈಕಿ ಒಂದಾಗಿದೆ. 16ನೇ ಶತಮಾನದಲ್ಲಿ ಆದಿಲ್‌ಶಾಹಿ ಸುಲ್ತಾನರ ಕಾಲದಲ್ಲಿ ನಿರ್ಮಾಣಗೊಂಡ ಈ ಕೆರೆ, 674 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸುತ್ತದೆ ಎಂದು ತಿಳಿಸಿದ್ದಾರೆ. ಕೋಕಾಕೋಲಾ ಕಂಪನಿಯು ಕೆರೆಯ ಮುಖ್ಯ ನಾಲೆಯ ಹೂಳೆತ್ತಿ, ಬಾಂದಾರ ನಿರ್ಮಿಸಲಿದ್ದು, ಜೊತೆಗೆ ಕೆರೆಯ ಏರಿ ಬಲಪಡಿಸುವಿಕೆ, ಬೇಲಿ, ಪಾದಚಾರಿ ಮಾರ್ಗ ಮತ್ತು ಮಕ್ಕಳು ಆಟವಾಡುವ ಜಾಗವನ್ನು ಮಾಡಿಕೊಡಲಿದೆ ಎಂದು ಮಾಹಿತಿ ನೀಡಿದ್ದಾರೆ.

ಫ್ರೀಡಂ ಪಾರ್ಕ್ ಸಮೀಪ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣ ಉದ್ಘಾಟನೆ

ಗಾಂಧಿನಗರ ವ್ಯಾಪ್ತಿಯಲ್ಲಿ ವಾಹನ ನಿಲುಗಡೆ ನಿಷೇಧ

ಬೆಂಗಳೂರು: ಸುಗಮ ಸಂಚಾರ ಹಾಗೂ ಸಂಚಾರಿ ದಟ್ಟಣೆ ನಿಯಂತ್ರಣಕ್ಕೆ ಗಾಂಧಿನಗರದ 1 ಕಿ.ಮೀ ಪ್ರಮುಖ ರಸ್ತೆಗಳಲ್ಲಿ ವಾಹನ ನಿಲುಗಡೆಯನ್ನು ನಿಷೇಧಿಸಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಡಿಯಲ್ಲಿ ಫ್ರೀಡಂ ಪಾರ್ಕ್ ಸಮೀಪ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿ, ಈ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣದ ಮೂಲಕ ಬೆಂಗಳೂರು ಹೊಸ ಇತಿಹಾಸದ ಪುಟವನ್ನು ಸೇರಿದೆ. ರಾಜ್ಯಕ್ಕೆ ಈ ಮೂಲಕ ಸಂದೇಶ ರವಾನೆಯಾಗಿದೆ. ಪ್ರತಿ ಗಂಟೆಗೆ ವಾಹನ ನಿಲುಗಡೆಗೆ 20-30 ರು. ನಿಗದಿ ಮಾಡಲಾಗಿದ್ದು, ಎರಡು ಮೂರು ಕಾರು ಹೊಂದಿರುವವರು ಕೂಡಾ ಇಲ್ಲಿ ವಾಹನ ನಿಲುಗಡೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಬೆಂಗಳೂರು ಡಿಸಿ ಹಾಗೂ ಪೊಲೀಸ್ ಆಯುಕ್ತರು ಸೇರಿ ಗಾಂಧಿನಗರದ ಪ್ರಮುಖ ರಸ್ತೆಗಳಲ್ಲಿ ಸುಮಾರು 1 ಕಿ.ಮೀ ವ್ಯಾಪ್ತಿಯಲ್ಲಿ ವಾಹನ ನಿಲುಗಡೆ ನಿರ್ಬಂಧ ಮಾಡಿದ್ದಾರೆ. ಇಲ್ಲಿನ ರಸ್ತೆ ವಿಶಾಲವಾಗಿರಬೇಕು. ಎಲ್ಲಾ ವ್ಯಾಪಾರಿಗಳಿಗೆ ಲಾಭವಾಗಬೇಕು ಎಂದು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಡಿಯಲ್ಲಿ ಫ್ರೀಡಂ ಪಾರ್ಕ್ ಸಮೀಪ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಶುಕ್ರವಾರ ಡಿಸಿಎಂ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು.

7 ಬಾರಿ ಕರೆದಿದ್ದ ಟೆಂಡರ್

ಇಂತಹ ಗುತ್ತಿಗೆದಾರರು ಶಕ್ತಿಶಾಲಿಯಾದರೆ ಮಾತ್ರ ಸರಕಾರ ಶಕ್ತಿಶಾಲಿಯಾಗುತ್ತದೆ. ಅವರು ದುರ್ಬಲರಾದರೆ ಸರಕಾರವೂ ದುರ್ಬಲವಾಗುತ್ತದೆ. ಈ ವಿಚಾರ ವಾಗಿ ಏಳು ಬಾರಿ ಟೆಂಡರ್ ಕರೆದು ವಿಫಲವಾಗಿದ್ದೆವು. ಇವರು ದೊಡ್ಡ ಧೈರ್ಯ ಮಾಡಿ ಮುಂದೆ ಬಂದಿದ್ದಾರೆ. ಅವರ ಧೈರ್ಯವನ್ನು ನಾನು ಮೆಚ್ಚುತ್ತೇನೆ. ನಮ್ಮ ಮಾಲ್ ಗಳಲ್ಲೂ ಇಂತಹ ವ್ಯವಸ್ಥೆ ಇದೆ. ಅಲ್ಲಿನ ಗ್ರಾಹಕ ವರ್ಗವೇ ಬೇರೆ. ಇಲ್ಲಿ ಅಂತಹ ಗ್ರಾಹಕ ವರ್ಗ ಹೆಚ್ಚಾಗಿ ಬರುವುದಿಲ್ಲ. ನನಗೂ ಗಾಂಧಿನಗರಕ್ಕೂ ಸುಮಾರು 25 ವರ್ಷಗಳ ಸಂಬಂಧ. ಇಲ್ಲೇ ಕಾಲೇಜಿನಲ್ಲಿ ಓದಿದೆ, ಜನರಲ್ ಹಾಸ್ಟೆಲ್ ನಲ್ಲಿ ಇದ್ದೆ. ಇಲ್ಲಿ ನನ್ನ ಕಚೇರಿ ಹೊಂದಿ ವ್ಯವಹಾರಗಳನ್ನು ಮಾಡಿದ್ದೇನೆ. ಹೀಗಾಗಿ ಗಾಂಧಿನಗರದ ವ್ಯವಹಾರಗಳ ಬಗ್ಗೆ ನನಗೆ ಅರಿವಿದೆ. ಗಾಂಧಿನಗರದ ಸುತ್ತಮುತ್ತ ಪಾರ್ಕಿಂಗ್ ಬ್ಯಾನ್ ಮಾಡಿದ್ದೇವೆ ಎಂದರು.

ವಿರಾಮ
ಪ್ರತಿ ಭಾನುವಾರ

ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ತರಾಟೆ | ಗೊಬ್ಬರಕ್ಕೆ ಕೊರತೆಯಾಗದಂತೆ ನೋಡಿಕೊಳ್ಳಿ

ಫಲಿತಾಂಶ ಕುಸಿತ: ಡಿಡಿಪಿಐ, ಬಿಇಒಗಳಿಗೆ ಶಿಕ್ಷೆ

ಹೊಸಪೇಟೆ: ರೈತರಿಗೆ ಬೀಜ ಗೊಬ್ಬರ ಸಿಕ್ಕಿಲ್ಲ ಎಂದು ರೈತರು ಬೀದಿಗಿಳಿಯದ ಹಾಗೆ ಮುನ್ನೆಚ್ಚರಿಕೆ ಕ್ರಮವಾಗಿ ಬಿತ್ತನೆಗೆ ಸಮರ್ಪಕ ಬೀಜ ಮತ್ತು ರಸಗೊಬ್ಬರ ವ್ಯವಸ್ಥೆ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ವಿಜಯನಗರ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಜಾನುವಾರುಗಳಿಗೆ ಮೇವು, ಜನರಿಗೆ ಕುಡಿಯುವ ನೀರು, ಕೆಲಸ ಕೇಳಿ ಬರುವವರಿಗೆ ಉದ್ಯೋಗ ಕೊಡುವುದರಲ್ಲಿ ಯಾವುದೇ ರೀತಿಯ ವ್ಯತ್ಯಾಸವಾಗದ ಹಾಗೆ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ನೀವು ನಿಯಮಿತವಾಗಿ ಪ್ರವಾಸ ಮಾಡುತ್ತೀರಾ, ಹಳ್ಳಿಗಳಿಗೆ ಹೋಗುತ್ತೀರಾ, ಪ್ರತಿದಿನ ಡೈರಿ ನಿರ್ವಹಣೆ ಮಾಡುತ್ತೀರಾ, ಎಂದು ಜಂಟಿ ಕೃಷಿ ನಿರ್ದೇಶಕರ ಡೈರಿ ಕೇಳಿದ ಮುಖ್ಯಮಂತ್ರಿಗಳು, ಕೃಷಿ ಅಧಿಕಾರಿಗಳಿಗೆ ರೈತರ ಬಗ್ಗೆ ಕಾಳಜಿ ಇರಬೇಕು. ಎಲ್ಲರೂ ಪಟ್ಟಣ, ನಗರಕ್ಕಷ್ಟೇ ಸೀಮಿತವಾಗಬಾರದು. ಅಧಿಕಾರಿಗಳು ಹಳ್ಳಿಗಳಲ್ಲಿ ಸಹ ಇರಬೇಕು. ಹೋಬಳಿಯಲ್ಲಿ ಹಾಗೂ ತಾಲೂಕಿನಲ್ಲಿ ಇರುವವರು ಅಲ್ಲಿಯೇ ವಾಸ್ತವ್ಯ ಮಾಡಬೇಕು ಎಂದು ಸೂಚನೆ ನೀಡಿದರು.

ಮೇವು ಸರಬರಾಜು ಮತ್ತು ಕುಡಿಯುವ ನೀರು ಪೂರೈಕೆಗೆ ಯಾವುದೇ ಹಣಕಾಸಿನ ಕೊರತೆ ಇರುವುದಿಲ್ಲ. ಕುಡಿಯುವ ನೀರಿನ ಕೊರತೆ ಎದುರಾದ ಗ್ರಾಮಗಳಲ್ಲಿ ಜನತೆಗೆ

ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂನಲ್ಲಿ ನಡೆದ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

> ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಮತ್ತು ನರೇಗಾ ಉದ್ಯೋಗಕ್ಕೆ ಯಾವ ಕಾರಣಕ್ಕೂ ಹಣದ ಕೊರತೆ ಆಗಬಾರದು, ಪಿ.ಡಿ ಖಾತೆಯ ಹಣವನ್ನು ಅದಕ್ಕಾಗಿ ಬಳಸಲೇಬೇಕು. ಕೆರೆ ಒತ್ತುವರಿಯನ್ನು ಮುಲಾಜಿಲ್ಲದೆ ತೆರವುಗೊಳಸಬೇಕು. ಒತ್ತುವರಿಯಿಂದ ಅಚ್ಚುಕಟ್ಟು ಪ್ರದೇಶಕ್ಕೆ ನೀರಿನ ಕೊರತೆಯಾಗುತ್ತದೆ. ನರೇಗಾದಲ್ಲಿ ಕೆರೆ ಹೂಳು ತೆಗೆದು ಕೆರೆಗಳಿಗೆ ಮರು ಜೀವ ಒದಗಿಸಬೇಕು.
>
> ಸಿದ್ದರಾಮಯ್ಯ, ಮುಖ್ಯಮಂತ್ರಿ

ಡಿಡಿಪಿಐ, ಸಿಇಒ ತರಾಟೆ

ಎಸ್ಸೆಸ್ಸೆಲ್ಸಿಯಲ್ಲಿ 10ನೇ ಸ್ಥಾನದಲ್ಲಿದ್ದ ಜಿಲ್ಲೆಯು 27ನೇ ಸ್ಥಾನಕ್ಕೆ ಕುಸಿದಿದ್ದೇಕೆ, ಇದಕ್ಕೆ ಯಾರು ಜವಾಬ್ದಾರರು, ಇದಕ್ಕೆ ಹೊಣೆ ಯಾರು, ಡಿಡಿಪಿಐ ಮತ್ತು ಬಿಇಒ ಅವರ ಮೇಲೆ ಯಾಕೆ ಕ್ರಮ ಜರುಗಿಸಬಾರದು ಎಂದು ಮುಖ್ಯಮಂತ್ರಿಗಳು ಡಿಡಿಪಿಐ ಅವರಿಗೆ ತರಾಟೆ ತೆಗೆದುಕೊಂಡರು. 10ರಿಂದ 27ನೇ ಸ್ಥಾನಕ್ಕೆ ಜಿಲ್ಲೆಯ ಶೈಕ್ಷಣಿಕ ಗುಣಮಟ್ಟ ಜಾರಿರುವಾಗ ನಿಮಗೆ ನಾಚಿಕೆ ಆಗಬೇಕಲ್ವಾ ಎಂದು ಜಿಪಂ ಸಿಇಒ ಅವರನ್ನು ಪ್ರಶ್ನಿಸಿದರು. ಡಿಡಿಪಿಐ ಅವರನ್ನು ತಕ್ಷಣದಿಂದ ಅಮಾನತ್ತಿನಲ್ಲಿ ಇಡಬೇಕು. ಸಿಇಒ ಅವರಿಗೆ ನೋಟಿಸ್ ನೀಡಬೇಕು. ಜಿಲ್ಲೆಯ ಶೈಕ್ಷಣಿಕ ಪ್ರಗತಿ ಬಗ್ಗೆ ಗಂಭೀರವಾಗಿ ಯೋಜನೆಗಳನ್ನು ರೂಪಿಸುವಂತೆ ಸಿಎಂ ಸೂಚಿಸಿದರು.

400 ಹಾಸಿಗೆಗೆ ಹೆಚ್ಚಳ ಮುಖ್ಯಮಂತ್ರಿ ಸಮ್ಮತಿ

ನಗರದಲ್ಲಿ ಸದ್ಯ 200 ಬೆಡ್ ಆಸ್ಪತ್ರೆ ಕಾರ್ಯ ನಡೆಯುತ್ತಿದೆ. ಆದರೆ ಬೇಡಿಕೆ ಹಿನ್ನೆಲೆಯಲ್ಲಿ ಇದನ್ನು 400 ಬೆಡ್ ಆಸ್ಪತ್ರೆಯನ್ನಾಗಿ ಉನ್ನತೀಕರಿಸಲು ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ನರೇಗಾದಲ್ಲಿ ಸಮಯಕ್ಕೆ ಸರಿಯಾಗಿ ಮಾನವ ದಿನಗಳ ಕೂಲಿ ಹಣ ಪಾವತಿಯಾಗಬೇಕು. ಅನಗತ್ಯ ವಿಳಂಬ ಆಗಬಾರದು ಎನ್ನುವ ಸೂಚನೆ ನೀಡಿದ್ದೇನೆ. ನರೇಗಾದಲ್ಲಿ ಅಂಗನವಾಡಿ ಕಟ್ಟಡಗಳು, ಶಾಲೆ ಕೊಠಡಿಗಳು, ಕಾಂಪೌಂಡ್ ಬೇಡಿಕೆಗಳನ್ನು ಈಡೇರುಸಬೇಕು. ಇದರ ಜತೆಗೆ ಊಟದ ಗುಣಮಟ್ಟ, ಅಡುಗೆ ಕೋಣೆಗಳು ಮತ್ತು ಶೌಚಾಲಯಗಳ ನಿರ್ಮಾಣಕ್ಕೆ ಸೂಚನೆ ನೀಡಲಾಗಿದೆ. ವಿದ್ಯಾರ್ಥಿಗಳ ಪ್ರಮಾಣಕ್ಕೆ ತಕ್ಕಂತೆ ಸವಲತ್ತುಗಳನ್ನು ಒದಗಿಸುವಂತೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಸಂಬಂಧ 26 ಪ್ರಕರಣಗಳನ್ನು ದಾಖಲಿಸಿ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಲಾಗುತ್ತದೆ ಎಂದು ಜಿಲ್ಲಾ ಎಸ್ಪಿ ಶ್ರೀಹರಿಬಾಬು ತಿಳಿಸಿದರು.

ಸಭೆಯಲ್ಲಿ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ಶಾಸಕರಾದ ಗವಿಯಪ್ಪ ಇತರರಿದ್ದರು.

ಡಿಕೆ ತಂತ್ರಕ್ಕೆ ಮೈತ್ರಿಯಲ್ಲಿ ಒಗ್ಗಟ್ಟಿನ ಮಂತ್ರ

← ಮೊದಲಪುಟದಿಂದ

ಜೆಡಿಎಸ್‌ಯಿಂದ ನಿಖಿಲ್ ಕುಮಾರಸ್ವಾಮಿ ಅವರ ಹೆಸರು ಪ್ರಬಲವಾಗಿ ಕೇಳಿಬರುತ್ತಿದ್ದರೂ, ಕುಮಾರಸ್ವಾಮಿ ಕುಟುಂಬ ಈವರೆಗೆ ಈ ಬಗ್ಗೆ ಯಾವುದೇ ಸ್ಪಷ್ಟನೆ ನೀಡಿಲ್ಲ. ಇತ್ತ ಚನ್ನಪಟ್ಟಣದ ಟಿಕೆಟ್ ಜೆಡಿಎಸ್‌ಗೆ ಬಿಟ್ಟುಕೊಡುವುದು ಖಚಿತವಾಗಿದ್ದರೂ, ಕೊನೆ ಕ್ಷಣದವರೆಗೆ ಪ್ರಯತ್ನಿಸಲು ಸಿ.ಪಿ.ಯೋಗೇಶ್ವರ್ ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ಟಿಕೆಟ್ ಹಂಚಿಕೆ ವಿಷಯದಲ್ಲಿ ಗೊಂದಲವಾಗದಂತೆ, ಎಲ್ಲರನ್ನೂ ವಿಶ್ವಾಸಕ್ಕೆ ಪಡೆಯುವ ನಿಟ್ಟಿನಲ್ಲಿ ಬಿಜೆಪಿ- ಜೆಡಿಎಸ್ ನಾಯಕರು ಪ್ರಯತ್ನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸೂರಜ್ ರೇವಣ್ಣ ವಿರುದ್ಧ ಆರೋಪ

← ಮೊದಲಪುಟದಿಂದ

''ಅಸಹಜ ಲೈಂಗಿಕ ಕ್ರಿಯೆಗೆ ಒಪ್ಪದಿದ್ದಾಗ, ಆರಂಭದಲ್ಲಿ ಹೀಗಾಗುತ್ತದೆ. ಬಳಿಕ ಅಡ್ಜೆಸ್ಟ್ ಆಗುತ್ತದೆ ಎನ್ನುವ ಮಾತುಗಳನ್ನು ಶಾಸಕರು ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ನಾನು ಹೇಳಿದಂತೆ ಕೇಳಿದರೆ ಉತ್ತಮ ಭವಿಷ್ಯ ಕೊಡುವ ಮಾತನ್ನಾಡಿ ದ್ದಾರೆ'' ಎಂದು ಯುವಕ ದೂರಿದ್ದು, ಈ ಸಂಬಂಧ ಆಡಿಯೊ ದಾಖಲೆ ಸಲ್ಲಿಸಿದ್ದಾರೆ. ಖಾಸಗಿ ಟಿವಿ ಚಾನೆಲ್‌ಗಳಲ್ಲಿ ಸೂರಜ್ ರೇವಣ್ಣ ಅವರು ಚಾಟಿಂಗ್ ಮಾಡಿದ್ದಾರೆ ಎನ್ನವಲಾದ ಸ್ಕ್ರೀನ್ ಶಾಟ್ ಹಾಗೂ ಆಡಿಯೊ ಸಂಭಾಷಣೆ ಪ್ರಕಟವಾಗಿದ್ದು, ರೇವಣ್ಣ ಕುಟುಂಬಕ್ಕೆ ಮತ್ತೊಂದು ಸಂಕಷ್ಟ ಎದುರಾಗಿದೆ.

ಸ್ಫೋಟ ಪ್ರಕರಣ: ಭಟ್ಕಳದ ಯುವಕನ ಮನೆಗೆ ನೋಟಿಸ್

ಭಟ್ಕಳ: ಮಹಾರಾಷ್ಟ್ರದ ಪುಣೆಯಲ್ಲಿ ನಡೆಸಿದ ಉಗ್ರ ಚಟುವಟಿಕೆಗೆ ಸಂಬಂಧಿಸಿ ಆರೋಪಿ ಭಟ್ಕಳ

ನವಾಯತ ಕಾಲೋನಿಯ ಯುವಕನಿಗೆ ವಿಚಾರಣೆಗೆ ಹಾಜರಾಗುವಂತೆ ಮುಂಬೈ ಎಟಿಎಸ್ ತಂಡ ಮನೆಗೆ ನೋಟೀಸು ಅಂಟಿಸಿರುವ ಕುರಿತು ತಿಳಿದು ಬಂದಿದೆ.

ಮೂಲತಃ ಭಟ್ಕಳ ನವಾಯತ್ ಕಾಲೋನಿ ಹಾಜಿ ಮಂಜಿಲ್ ನಿವಾಸಿಯಾಗಿರುವ ಅಬ್ದುಲ್ ಕಾರ್ದಿ ಸುಲ್ತಾನ ಅಲಿಯಾಸ್ ಮೌಲಾನಾ ಸುಲ್ತಾನ ಎನ್ನುವ ಶಂಕಿನ ಕಾನೂನು ಬಾಹಿರ ಕೃತ್ಯ 10 ಮತ್ತು 13 ರನ್ವಯ ದಾಖಲಾಗಿದ್ದು ಪುಣೆಯ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಜೂ.21 ಕ್ಕೆ ವಿಚಾರಣೆಗೆ ಇಡಲಾಗಿದ್ದು ಹಾಜರಾಗುವಂತೆ ನೋಟಿಸ್ ನಲ್ಲಿ ತಿಳಿಸಲಾಗಿದೆ. ಭಟ್ಕದಲ್ಲಿ ಶೋಧ ನಡೆಸಿದ ತಂಡ ಅಂತಿಮವಾಗಿ ಆತನ ಮನೆಗೆ ನೋಟಿಸ್ ಅಂಟಿಸಿ ಹೋಗಿದ್ದಾಗಿ ತಿಳಿದು ಬಂದಿದ್ದು ಜೂನ್ 6 ನೇ ತಾರೀಕನ್ನು ನಮೂದಿಸಿರುವ ನೋಟಿಸ್ ಅಂಟಿಸಿದ್ದಾರೆ. ಭಟ್ಕಳಕ್ಕೆ ಮಹಾರಾಷ್ಟ್ರ ಎಟಿಎಸ್ ತಂಡ ಆತನ ಮನೆಯನ್ನು ಹುಡುಕಿಕೊಂಡು ಹೋಗಿದ್ದು ಆತ ಮನೆಯಲ್ಲಿ ಇಲ್ಲದ ಕಾರಣ ನೋಟಿಸ್ ಅಂಟಿಸಿ ತೆರಳಿದ್ದಾರೆ ಎನ್ನಲಾಗಿದೆ.

2008 ರಲ್ಲಿ ಪುಣೆಯಲ್ಲಿ ನಡೆದ ಬಾಂಬ್ ಸ್ಫೋಟ ಪ್ರಕರಣದಲ್ಲಿ ಆರೋಪಿಯಾಗಿರುವ ಅಬ್ದುಲ್ ಕಾದಿರ್ ಸುಲ್ತಾನ ಅಲಿಯಾಸ್ ಮೌಲಾನಾ ಸುಲ್ತಾನ ಕಳೆದ ಹಲವು ವರ್ಷಗಳಿಂದ ತಲೆಮರೆಸಿಕೊಂಡಿದ್ದಾನೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ಸಾಮಾಜಿಕ ಅರಣ್ಯ ವಿಭಾಗ, ರಾಯಚೂರು
ವಿಳಾಸ: ಯರಗೇರಾ ರಸ್ತೆ. ರಾಯಚೂರು-584101,
ದೂರವಾಣಿ ಸಂಖ್ಯೆ-08532-223358, ಮೇಲ್:dcfsfrcr@gmail.com.

ಸಂಖ್ಯೆ:ಎ3-ಬಜೆಟ್-ಟೆಂಡರ-ಸಿಅರ್- /2024-25 ದಿನಾಂಕ: 20-06-2024

: ಸಂಕ್ಷಿಪ್ತ ಅಲ್ಪಾವಧಿ ಟೆಂಡರ ಪ್ರಕಟಣೆ (ಎರಡನೇಯ ಸಲ)
(ಇ-ಪ್ರೊಕ್ಯೂರಮೆಂಟ್ ಮೂಲಕ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2024-25 ನೇ ಸಾಲಿನಲ್ಲಿ ರಾಯಚೂರು ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಗೆ ಒಳಪಡುವ ರಾಯಚೂರು, ಮಾನವಿ, ದೇವದುರ್ಗ, ಲಿಂಗಸುಗೂರು ಮತ್ತು ಸಿಂಧನೂರು ವಲಯಗಳಲ್ಲಿ RKVY Agroforestry ಅಡಿಯಲ್ಲಿ 2024-25 ನೇ ಸಾಲಿನಲ್ಲಿ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಅರಣ್ಯೀಕರಣ ಕಾಮಗಾರಿಗಳಿಗೆ ದಿನಾಂಕ:20-06-2024 ರಿಂದ 28-06-2024 ರ ಸಾಯಂಕಾಲ 4.00 ಗಂಟೆಯವರೆಗೆ ಇ-ಪ್ರೊಕ್ಯೂರಮೆಂಟ್ ಮೂಲಕ ದ್ವಿಲಕೋಟೆ ಪದ್ದತಿಯಲ್ಲಿ ಟೆಂಡರ ಕರೆಯಲಾಗಿದೆ. ದಿನಾಂಕ:29-06-2024 ರಂದು ತಾಂತ್ರಿಕ ಬಿಡ್‌ಗಳನ್ನು ಹಾಗೂ ದಿನಾಂಕ:01-07-2024 ರಂದು ಆರ್ಥಿಕ ಬಿಡ್‌ಗಳನ್ನು ಮೇಲೆ ನಿಗಧಿಪಡಿಸಿದ ಸಮಯದಂತೆ ತೆಗೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕಛೇರಿಯ ನಾಮಫಲಕಕ್ಕೆ ಲಗತ್ತಿಸಿರುವ ಟೆಂಡರ ಪ್ರಕಟಣೆಯನ್ನು ಕಛೇರಿ ಸಮಯದಲ್ಲಿ ನೋಡಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು,
ಸಾಮಾಜಿಕ ಅರಣ್ಯ ವಿಭಾಗ, ರಾಯಚೂರು.
DIP/RCR/45/KSMCA/44/2024-25

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ

ನಂ: ಇಇ/ಎಂಐಡಿ/ಬೀದರ/ತಾ.ಶಾ-1,2&3/ಟೆಂಡರ್/2024-25/682 ದಿನಾಂಕ: 20.06.2024

ಕೆಪಿಪಿ-ಪ್ರೋಕ್ಯೂರಮೆಂಟ ಟೆಂಡರ್ ಪ್ರಕಟಣೆ 2ನೇ ಕರೆ

1) ಕಾಮಗಾರಿಗಳ ವಿವರ. : KPP -Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ. : KPP -Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. : KPP -Portalನಲ್ಲಿ ನಮೂದಿಸಿದಂತೆ 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. : KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ.: KPP -Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲ್ಯೂ -3 & ಕೆ.ಡಬ್ಲ್ಯೂ -4 ಮಾತ್ರ : 27-06-2024 ರಂದು 17.00 ಗಂಟೆವರೆಗೆ, 7) ಪ್ರೀ ಬಿಡ್ಡ್ ಮಿಟಿಂಗ ಸ್ಥಳ ದಿನಾಂಕ ಮತ್ತು ಸಮಯ. ಕೆ.ಡಬ್ಲ್ಯೂ -4 ಮಾತ ಕಾರ್ಯನಿರ್ವಾಹಕ ಇಂಜಿನೀಯರರು,, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ, ಪ್ರತಾಪನಗರ ನೌಬಾದ, ಬೀದರ. 29.06.2024 ರಂದು 11.00 ಗಂಟೆಗೆ. 8) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲ್ಯೂ -3 & ಕೆ.ಡಬ್ಲ್ಯೂ -4 ಮಾತ್ರ : 02-07-2024 ರಂದು 16.00 ಗಂಟೆ ವರೆಗೆ, 9) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ -3 & ಕೆ.ಡಬ್ಲ್ಯೂ -4 ಮಾತ್ರ : 04-07-2024 ರಂದು 11.00 ಗಂಟೆಗೆ ಸಾದ್ಯವಾದಲ್ಲಿ, 10) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ -3 & ಕೆ.ಡಬ್ಲ್ಯೂ -4 ಮಾತ್ರ: 06-07-2024 ರಂದು 11.00 ಗಂಟೆಗೆ ಸಾದ್ಯವಾದಲ್ಲಿ, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ. : ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ. ವಿಭಾಗ, ಬೀದರ. ದೂರವಾಣಿ ಸಂ: 08482 232080 12) ಅಂತರ್ಜಾಲ ತಾಣದ ವಿಳಾಸ. : KPP portal https://kppp.karnataka.gov.in

ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.
ವಾ.ಸಾ.ಸಂ.ಇ/ಬೀದರ/21/ಕೆ.ಎಸ್.ಎಂ.ಸಿ.&ಎ/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.
ಸಂಖ್ಯೆ:01:ಕಾಇಂ:ಲೋಇ:ಹಾವಿ:ಕಿಇಂ-4:2024-25 ದಿನಾಂಕ: 19.06.2024.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-3 ಹಾಗೂ ಕೆ.ಡಬ್ಲ್ಯೂ-4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಗೂ ಕರ್ನಾಟಕ ರಾಜ್ಯದಲ್ಲಿ ಹತ್ತು ವರ್ಷಕ್ಕಿಂತ ಕಡಿಮೆ ಇಲ್ಲದಂತೆ ವಾಸವಿರುವ ಪರಿಶಿಷ್ಟ ಜಾತಿಗೆ ಸೇರಿದ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಸನ ವಿಭಾಗದಡಿ ಒಟ್ಟು06 ಸಂಖ್ಯೆ ಕಾಮಗಾರಿಗಳಿಗಾಗಿ ಟೆಂಡರ್ ಕರೆಯಲಾಗಿದೆ. ಅವುಗಳಲ್ಲಿ 01 ಸಂಖ್ಯೆ ಕಾಮಗಾರಿ ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮೀಸಲಿರಿಸಲಾಗಿದೆ. ಸದರಿ ಟೆಂಡರ್‌ನಲ್ಲಿನ ಗರಿಷ್ಠ ಕಾಮಗಾರಿ ಮೊತ್ತ ರೂ.400.00 ಲಕ್ಷ ಹಾಗೂ ಕನಿಷ್ಠ ಕಾಮಗಾರಿ ಮೊತ್ತ ರೂ.75.00 ಲಕ್ಷ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ. 04.07.2024. 16.00 ಗಂಟೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172-268437ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಲೋಇ ಹಾಸನ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/83/ಕೆಎಸ್ಎಂಸಿಎ/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಗುಆ/ಗುನಿ) ವಿಭಾಗ,
ಯಲಹಂಕ ವಲಯ, ಕೊಠಡಿ ಸಂಖ್ಯೆ. 101, ಅನೆಕ್ಸ್-3 ಕಟ್ಟಡ,
ಬೃಬೆಂಮಪಾ ನ ರಾ ಚೌಕ, ಬೆಂಗಳೂರು-02.

ಸಂಖ್ಯೆ: ಕಾಅ(ಗುಆ/ಗುನಿ)/ಯಲಹಂಕ/ಟೆಂಡರ್/18/24-25 ದಿನಾಂಕ: 21.06.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃಬೆಂಮಪಾ) ಗುಣಮಟ್ಟ ಆಶ್ವಾಸನೆ/ಗುಣಮಟ್ಟ ನಿಯಂತ್ರಣ ವಿಭಾಗದ ಕಾಯಪಾಲಕ ಅಭಿಯಂತರರು ಗುಆ/ಗುನಿ, ಯಲಹಂಕ ವಲಯ, ಬೃಬೆಂಮಪಾ ಇವರು ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನಾ ನಿರ್ವಹಣೆಗಾಗಿ ಯೋಜನಾ ಸಮಾಲೋಚಕರ ಸೇವೆಗಳಿಗೆ (ಪಿಎಂಸಿ) ಇದೇ ಮಾದರಿಯ ಕೆಲಸವನ್ನು ನಿರ್ವಹಿಸಿರುವ ಆಸಕ್ತಿಯುಳ್ಳ ವ್ಯಕ್ತಿಗಳಿಂದ/ಸಂಸ್ಥೆಗಳಿಂದ ಕೆಳಕಂಡ ಕೆಲಸಗಳಿಗೆ ಮನವಿ ಪ್ರಸ್ತಾವನೆಯನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕೆಲಸದ ಹೆಸರು
1	"ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಥಣಿಸಂದ್ರ ಮುಖ್ಯ ರಸ್ತೆಯಿಂದ ಯಲಹಂಕ ವಲಯ ಗಡಿವರೆಗಿನ ನಾರಾಯಣಪುರ ಮುಖ್ಯ ರಸ್ತೆಯಲ್ಲಿರುವ ಚರಂಡಿ ಹಾಗೂ ಪಾದಚಾರಿ ಮಾರ್ಗದ ಸುಧಾರಣೆಗಾಗಿ" ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. **ಇಎಂಡಿ ಮೊತ್ತ :** ರೂ.2,500/-
2	"ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಥಣಿಸಂದ್ರ ವೃತ್ತದಿಂದ ಶ್ರೀರಾಂಪುರ ಗ್ರಾಮದವರೆಗಿನ ರಾಚೇನಹಳ್ಳಿ-ಶ್ರೀರಾಂಪುರ ಮುಖ್ಯ ರಸ್ತೆಯಲ್ಲಿರುವ ಚರಂಡಿ ಸುಧಾರಣೆ ಹಾಗೂ ಡಾಂಬರಿಕರಣಕ್ಕಾಗಿ" ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. **ಇಎಂಡಿ ಮೊತ್ತ :** ರೂ.5,000/-
3	"ಚನ್ನಸಂದ್ರ ಹಾಗೂ ಯಲಹಂಕ ನಿಲ್ದಾಣಗಳ ನಡುವೆ ಜಕ್ಕೂರಿನ ಕಿಮೀ-13/300-400 ರಲ್ಲಿರುವ ಎಲ್‌ಸಿ ಸಂಖ್ಯೆ 11ಎ ರ ಬದಲಾಗಿ ಮೇಲ್ಸೇತುವೆಯ ಬಾಕಿ ಉಳಿದಿರುವ ಭಾಗದ ನಿರ್ಮಾಣಕ್ಕಾಗಿ" ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರ ಒಳಗೊಂಡಂತೆ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. **ಇಎಂಡಿ ಮೊತ್ತ :** ರೂ.37,000/-
4	"ಯಲಹಂಕ ವಲಯದಲ್ಲಿ ಮಾನ್ಯತಾ ರೆಸಿಡೆನ್ಸಿ ಬಡಾವಣೆಯ ಆಯ್ದ ಮುಖ್ಯ ಹಾಗೂ ಅಡ್ಡ ರಸ್ತೆಗಳ ಸುಧಾರಣೆ ಹಾಗೂ ಡಾಂಬರಿಕರಣಕ್ಕಾಗಿ" ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. **ಇಎಂಡಿ ಮೊತ್ತ :** ರೂ.20,000/-
5	"ಸಹಕಾರನಗರ, ಆಮ್ಕೋ ಬಡಾವಣೆ ಮುಖ್ಯ ರಸ್ತೆ, ಭದ್ರಪ್ಪ ಬಡಾವಣೆ ಸಿಗ್ನಲ್ ಇಂದ ಬಿಇಎಲ್ ವೃತ್ತದವರೆಗಿರುವ (ಯಲಹಂಕ ವಲಯ) 13ನೇ ಮುಖ್ಯ ರಸ್ತೆ, 20ನೇ ಅಡ್ಡ ರಸ್ತೆಯ ಹಾಳಾಗಿರುವ ಭಾಗಗಳ ದುರಸ್ತಿಗಾಗಿ" ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. **ಇಎಂಡಿ ಮೊತ್ತ :** ರೂ.2,000/-

ನಿಗಧಿತ ಅವಧಿ / ವೇಳಾ ಪಟ್ಟಿ: 1) ಬಿಡ್ ದಾಖಲಾತಿಗಳನ್ನು ಇ-ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು: 26-06-2024 ರಿಂದ 2) ಬಿಡ್ ಪೂರ್ವ ಸಭೆ: 29.06.2024 ರಂದು ಸಂಜೆ 4.00 ಗಂಟೆಗೆ, ಸ್ಥಳ: ಕಾರ್ಯಪಾಲಕ ಅಭಿಯಂತರರ ಕಛೇರಿ (ಗುಆ/ಗುನಿ), ಕೊಠಡಿ ಸಂಖ್ಯೆ. 101, ಅನೆಕ್ಸ್-3 ಕಟ್ಟಡ, ಬೃಬೆಂಮಪಾ ನ ರಾ ಚೌಕ, ಬೆಂಗಳೂರು-560002. 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ ಸಮಯ: 06.07.2024 ರಂದು ಸಂಜೆ 4.30 ಗಂಟೆಗೆ. 4) ತಾಂತ್ರಿಕ ಬಿಡ್ ತೆರೆಯುವುದು : 09.07.2024 ರಂದು ಬೆಳಿಗ್ಗೆ 11:30 ಗಂಟೆಗೆ. 5) ಟೆಂಡರ್ ಮಾನ್ಯತೆ: 90 ದಿನಗಳು ಟೆಂಡರ್ ಸ್ವೀಕರಿಸಿದ ದಿನಾಂಕದಿಂದ.

ಸಹಿ/- ಕಾರ್ಯಪಾಲಕ ಅಭಿಯಂತರರು, ಗುಆ/ಗುನಿ ವಿಭಾಗ, ಯಲಹಂಕ ವಲಯ

ಪೊಲೀಸ್ ಅಧೀಕ್ಷಕರು, ವೈರಲೆಸ್‌ರವರ ಕಛೇರಿ
ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು, 560001
ದೂರವಾಣಿ : +91-80-22942324, ಇ-ಮೇಲ್: spwireless@ksp.gov.in

ಟೆಂಡರ್ ಸಂಖ್ಯೆ : KSP/2024-25/IND0088 ದಿನಾಂಕ: 20/06/2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ ಬೆಂಗಳೂರುರವರಿಂದ, ಇಆರ್‌ಎಸ್‌ಎಸ್-112 ಯೋಜನೆಯನ್ನು ಬಲವರ್ಧಿಸುವ ಉದ್ದೇಶದ ಮೇರೆಗೆ ರಾಜ್ಯದ ಎಲ್ಲಾ ಹೆದ್ದಾರಿ ಗಸ್ತು ವಾಹನ, ಗರುಡ ವಾಹನ ಹಾಗೂ ಪಿಸಿಆರ್ ಗಸ್ತು ವಾಹನಗಳಿಗೆ 267 MDT(Mobile Data Terminal) Tablets ಜೊತೆಗೆ 267 ಸಂಖ್ಯೆಯ SIM CARD ಒಳಗೊಂಡತೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಖರೀದಿಸುವ ಸಂಬಂಧ ಆನ್‌ಲೈನ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೌಲ್ಯ **ರೂ.68.68 ಲಕ್ಷಗಳು,** ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: **27/06/2024 ಸಮಯ ಬೆಳಿಗ್ಗೆ 11.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **05/07/2024, ಸಂಜೆ 5 ಗಂಟೆಗಳು.** ಇತರೆ ಮಾಹಿತಿಯನ್ನು https://eproc.karnataka.gov.in ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/-
ಪೊಲೀಸ್ ಅಧೀಕ್ಷಕರು, ವೈರ್‌ಲೆಸ್,
ಬೆಂಗಳೂರು
ವಾಸಾಸಂಇ/ವಾ.ಪ್ರ./518/2024-25

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಂಗಳೂರು ನಗರ, ಸಾಮಾಜಿಕ ಅರಣ್ಯ ವಿಭಾಗ,
ಜಾರಕ್ ಬಂಡೆ ಅರಣ್ಯ ವಸತಿ ಸಂಕೀರ್ಣ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು-560 015.
E-mail: dcf.buzp@yahoo.in Phone No: 080-29900992.

ಸಂ: ಎ1/ಬಿಯುಡಿ/ಟೆಂಡರ್/ಸಿಆರ್-1/2024-25 ದಿನಾಂಕ: 19.06.2024

ಟೆಂಡರ್ ಪ್ರಕಟಣೆ

2024-25ನೇ ಸಾಲಿನಲ್ಲಿ ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗ ಮತ್ತು ವಿವಿಧ ವಲಯಗಳಲ್ಲಿ ಡಾಟಾ ಎಂಟ್ರಿ ಅಪರೇಟರ್, ಡಿ-ಗ್ರೂಪ್ (ಹಗಲು ಮತ್ತು ರಾತ್ರಿ ಕಾವಲುಗಾರರು) ಮತ್ತು ವಾಹನ ಚಾಲಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಮಾನವ ಸಂಪನ್ಮೂಲ ಸರಬರಾಜು ಮಾಡುವ ಸಂಸ್ಥೆಯವರು / ಮಾನವ ಸಂಪನ್ಮೂಲ ಸರಬರಾಜು ಮಾಡುವ ಅಧಿಕೃತ ಪ್ರಾಧಿಕಾರಿಗಳಿಂದ ನೋಂದಣಿ ಮಾಡಿಸಿರುವ ಗುತ್ತಿಗೆದಾರರುಗಳಿಂದ ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ https:/kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 04.07.2024 ಸಂಜೆ 5.00 ಗಂಟೆ ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 05.07.2024 ಸಂಜೆ 5.00 ಗಂಟೆ. ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ದಿನಾಂಕ 08.07.2024 ಅಪರಾಹ್ನ 5.00 ಗಂಟೆಗೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಮೊದಲನೇ ಬಾರಿ ಇ-ಪೋರ್ಟಲ್‌ನಲ್ಲಿ ಯಾರೂ ಭಾಗವಹಿಸದೇ ಇದ್ದಲ್ಲಿ ದಿನಾಂಕ 15.07.2024 ಸಂಜೆ 5.00 ಗಂಟೆಗೆ ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 16.07.2024 ಸಂಜೆ 5.00 ಗಂಟೆಗೆ ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ದಿನಾಂಕ 17.07.2024 ಅಪರಾಹ್ನ 5.00 ಗಂಟೆಗೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಪ್ರತ್ಯೇಕ ಕೆಲಸಗಳ ವಿವರಗಳನ್ನು/ಮಾಹಿತಿಗಳನ್ನು ಕರ್ನಾಟಕ ಸರ್ಕಾರದ ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https:/kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ (ಸಂಶೋಧನೆ), ಬೆಂಗಳೂರು
ವಾಸಾಸಂಇ/ವಾಪ್ರ/511/ಆಕಾರ್/2024-25

ಅಪರ ನಿರ್ದೇಶಕರ ಕಚೇರಿ,
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ (ವಲಯ ಕಚೇರಿ)
ಇ-ಮೇಲ್: addl.dtcp@ka.gov.in ಮಿನಿ ವಿಧಾನ ಸೌಧ, ಧಾರವಾಡ- 580 001.
ದೂರವಾಣಿ : 0836-2447901

ಟೆಂಡರ್ ಪ್ರಕಟಣೆ

ಟೆಂಡರ್ ಸಂಖ್ಯೆ:- DTCP/Tender No.2024-25/SE0041

ಅಪರ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ವಲಯ ಕಛೇರಿ, ಧಾರವಾಡ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಬೆರಳಚ್ಚುಗಾರ (Computer Operatar)-01, ಗ್ರೂಪ್-'ಡಿ'-1 ಮತ್ತು ವಾಹನ ಚಾಲಕ-01, ಹುದ್ದೆಗಳನ್ನು ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಅನುಭವ ಹೊಂದಿರುವ, ಅರ್ಹ ವ್ಯಕ್ತಿ / ಸ್ವಯಂ ಸೇವಾ ಸಂಸ್ಥೆಗಳು / ಏಜೆನ್ಸಿಗಳಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಸಂಗ್ರಹಣಾ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಸಲ್ಲಿಸಲು ಪ್ರಾರಂಭಿಸುವ ದಿನಾಂಕ:	21-06-2024
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:	03-07-2024 ಸಂಜೆ 5.30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ:	05-07-2024 ಪೂರ್ವಾಹ್ನ 11.30 ಗಂಟೆಗೆ

ಟೆಂಡರ್ ಆಹ್ವಾನಿಸುವ ಸೂಚನಾ ಪತ್ರ, ನಿಯಮ ಮತ್ತು ಷರತ್ತುಗಳು, ಇತ್ಯಾದಿ ಇವುಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ಕೋಶದ ವೆಬ್ ಪೋರ್ಟಲ್ https://kppp.karnataka.gov.in ಇಲ್ಲಿ ಪಡೆದುಕೊಂಡು ಟೆಂಡರ್ ಸಲ್ಲಿಸಬಹುದಾಗಿದೆ.

ಸಹಿ/-
ಅಪರ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ
ವಾ.ಸಾ.ಇ/ಧಾರವಾಡ/75/ದೇಶಪಾಂಡೆಪಬ್ಲಿಸಿಟಿ/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ.
ಟೆಂಡರ್ ಸಂಖ್ಯೆ:- ಟೆಂಡರ್ ಸಂಖ್ಯೆ: ಕಾಇಂ/ಪಂರಾಇಂ/ವಿಶಿ/ಕಿ.ಇಂ./ಟೆಂಡರ್/2024-25/252 Date: 19.06.2024

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಶಿವಮೊಗ್ಗ ವ್ಯಾಪ್ತಿಯ ತೀರ್ಥಹಳ್ಳಿ ತಾಲ್ಲೂಕಿನ 2022-23ನೇ ಸಾಲಿನ ರಾಷ್ಟ್ರೀಯ ಆಯುಷ್ಯ ಅಭಿಯಾನ ಯೋಜನೆಯಡಿ ಅನುಮೋದಿತ ಕಾಮಗಾಲಗೆ ಒಟ್ಟು ಟೆಂಡರ್ ಮೊತ್ತ ರೂ. 512.37 ಲಕ್ಷಗಳು, ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in/ ಈ ವೆಬ್‌ಸೈಟ್‌ನಲ್ಲಿ ದಿ: 14.06.2024 ರಿಂದ ಪಡೆಯಬಹುದಾಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 19.07.2024 ಸಂಜೆ 4:30 ರವರೆಗೆ ನಿಗದಿ ಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್ಎಂಸಿಎ/101/06/24-25/122

ಜಿಲ್ಲಾ ಪಂಚಾಯತ ಕಾರ್ಯಾಲಯ,
ಪಿ.ಎಂ. ಪೋಷಣ್, ಉತ್ತರ ಕನ್ನಡ, ಕಾರವಾರ
ನಂ.ಅದಾ/ಸಿಬ್ಬಂದಿ/ಹೊ.ಗುಸಿ/ಇ-ಟೆಂಡರ್/2024-25 ದಿನಾಂಕ: 15/06/2024

ಟೆಂಡರ್ ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಮತ್ತು ತಾಲ್ಲೂಕಾ ಪಂಚಾಯತ ಕಾರ್ಯಾಲಯದಲ್ಲಿ ಪಿ.ಎಂ.ಪೋಷಣ್(ಮ.ಉ.ಯೋ) ವಿಭಾಗದಲ್ಲಿ ಮಂಜೂರಾಗಿರುವ 13 ಡಾಟಾ ಎಂಟ್ರಿ ಆಪರೇಟರ ಸಿಬ್ಬಂಧಿಗಳ ಸೇವೆಯನ್ನು, ದಿನಾಂಕ: 01-08-2024 ರಿಂದ 31-03-2025 ರವರೆಗೆ 8 ತಿಂಗಳ ಅವಧಿಗೆ ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯಲು ಇ-ಟೆಂಡರ ಕರೆಯಲಾಗಿದ್ದು, ಆಸಕ್ತ ಟೆಂಡರದಾರರು ಕೊನೆಯ ದಿನಾಂಕ: 23-07-2024 ರ ಸಂಜೆ 5.30 ಗಂಟೆಯೊಳಗೆ ವಿಳಾಸ: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ.
(1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 24-06-2024 ರಿಂದ 23-07-2024 ಸಾಯಂಕಾಲ 5:30 ಗಂಟೆಯವರೆಗೆ (2) ತಾಂತ್ರಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ಸಮಯ: 25-07-2024 ಪೂರ್ವಾಹ್ನ 11:00 ಗಂಟೆಗೆ (3) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ಸಮಯ: 29-07-2024 ಪೂರ್ವಾಹ್ನ 11:00 ಗಂಟೆಗೆ.

ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ ಉತ್ತರ ಕನ್ನಡ, ಕಾರವಾರ.
DIPR/ADK/KSMCA/72/24-25 Dt.21.06.2024

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಬಾಗಲಕೋಟೆ ವಿಭಾಗ
ಸಂ/ವಾಕರಸಾ/ಬಾವಿ/ಸಂ/ವಾಣಿಜ್ಯ/952/24 ದಿನಾಂಕ: 20-06-2024.

ಇ-ಟೆಂಡರ್ ಪ್ರಕಟಣೆ ಸಂ: 02/2024
(Karnataka Public Procurement Portal ಮೂಲಕ ಮಾತ್ರ)

ವಾ.ಕ.ರ.ಸಾ.ಸಂಸ್ಥೆ, ಬಾಗಲಕೋಟೆ ವಿಭಾಗದ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ, ಖಾಲಿಯಾಗಲಿರುವ ಮತ್ತು ಹೊಸದಾಗಿ ನಿರ್ಮಾಣವಾದ ವಾಣಿಜ್ಯ ಮಳಿಗೆಗಳಿಗೆ, ತೆರೆದ ಸ್ಥಳದ ಮಳಿಗೆಗಳಿಗೆ ಪರವಾನಗಿದಾರರನ್ನು ಹಾಗೂ ಹಣ ತೆತ್ತು ಉಪಯೋಗಿಸುವ ಪದ್ಧತಿಯಡಿಯಲ್ಲಿ ಬಸ್ ನಿಲ್ದಾಣ/ಸಿಬ್ಬಂದಿ ವಿಶ್ರಾಂತಿ ಗೃಹ/ಶೌಚಾಲಯ/ಮೂತ್ರಾಲಯಗಳ ಸ್ವಚ್ಛತಾ ಕೆಲಸಕ್ಕೆ ಗುತ್ತಿಗೆದಾರರನ್ನು ಲೈಸನ್ಸ್ ಆಧಾರದ ಮೇಲೆ ಆಯ್ಕೆಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (Karnataka Public Procurement Portal) ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇ-ಟೆಂಡರ್ ದಸ್ತಾವೇಜುಗಳನ್ನು https://www.kppp.karnataka.gov.in ಮೂಲಕ ನಿಗದಿತ ಅವಧಿಯಲ್ಲಿ ಡೌನಲೋಡ್ ಮಾಡಿಕೊಳ್ಳಬಹುದು ಹಾಗೂ ಸದರಿ ಪೋರ್ಟಲ್‌ನಲ್ಲಿ ಸೂಚಿಸಿದ ನಿಗದಿತ ಸಮಯಕ್ಕನುಗುಣವಾಗಿ ಆನ್-ಲೈನ್ ಅರ್ಜಿ ಸಲ್ಲಿಸಬಹುದಾಗಿದೆ. ಇ-ಪ್ರಕ್ಯೂರಮೆಂಟ್ ಸೆಲ್‌ನಿಂದ DSC (Digital Signature Certificate) ಪಡೆದಿರುವ ಅಧಿಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ವಾ.ಕ.ರ.ಸಾ.ಸಂಸ್ಥೆ, ಬಾಗಲಕೋಟೆ ವಿಭಾಗವನ್ನು ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: 7760991752 ಹಾಗೂ 7760991762.

ಇ-ಟೆಂಡರ್‌ನಲ್ಲಿ ಭಾಗವಹಿಸುವವರು ಇ-ಟೆಂಡರ್ ಪ್ರಕಟಣೆ ಸಂಖ್ಯೆ:02/2024 ರ ಮತ್ತು ಇ-ಟೆಂಡರ್ Document ನಲ್ಲಿ ನಮೂದಿಸಿದ ಷರತ್ತು ಮತ್ತು ನಿಬಂಧನೆಗಳಿಗೆ ಭದ್ದರಾಗಿರತಕ್ಕದ್ದು. ಕಾರಣ ನೀಡದೇ ಇ-ಟೆಂಡರ್‌ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಆಯ್ಕೆ ಮಾಡುವ ಅಥವಾ ತಿರಸ್ಕರಿಸುವ ಹಾಗೂ ಇ-ಟೆಂಡರ್ ಪ್ರಕಟಣೆಯನ್ನು ಮುಂದೂಡುವ, ಮಾರ್ಪಾಡು ಮಾಡುವ ಅಥವಾ ಪ್ರಕಟಣೆಯನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

Last Date & Time for receipt of tenders : 10-07-2024 at 05:30 PM
Date & Time for Opening of Financial Bid : 12-07-2024 at 11:00 AM

ಸಹಿ/-ವಿಭಾಗೀಯ ನಿಯಂತ್ರಣಾಧಿಕಾರಿ,
ವಾ.ಕ.ರ.ಸಾ.ಸಂಸ್ಥೆ, ಬಾಗಲಕೋಟೆ ವಿಭಾಗ
DIPR/BGK/RO-NO-42/KSMCA/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:ಡಿಬಿ:KW-4:ಟೆಂ:2024-25:629 ದಿನಾಂಕ: 20-06-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

2023-24ನೇ ಸಾಲಿನ ಲೆಕ್ಕ ಶೀರ್ಷಿಕೆ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಸಿಎಂಡಿಕ್ಯೂ - ಎಸ್‌ಸಿಪಿ, ಟಿಎಸ್‌ಪಿ, ಸಾಮಾನ್ಯ ಮತ್ತು ಉಳಿತಾಯ ನಿಧಿ-ಸಾಮಾನ್ಯ ಅಡಿಯಲ್ಲಿ ಮ್ಯಾಕ್ರೋ ಸಾಮಾನ್ಯ ಸಾಮಾಜಿಕೇತರ ಮತ್ತು ಮೈಕ್ರೋ ಎಸ್.ಸಿ.ಪಿ. ಸಾಮಾಜಿಕ, ಲೆಕ್ಕ ಶೀರ್ಷಿಕೆ: 5054 (ಯೋಜನೆ) ರಾಜ್ಯ ಹೆದ್ದಾರಿ ಸೇತುವೆ ಸುಧಾರಣೆ ಮತ್ತು 5054 (ಯೋಜನೆ) ಜಿಲ್ಲಾ ಮುಖ್ಯ ರಸ್ತೆ ಸೇತುವೆ ಸುಧಾರಣೆ ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ KW-4ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಒಟ್ಟು 7 ಕಾಮಗಾರಿಗಳಿಗೆ **(ವರ್ಕ ಇಂಡೆಂಟ್ ಸಂಖ್ಯೆ: 10961, 10775, 10921, 11000, 10968, 9928 & 9929)** ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ: 05-07-2024** ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 06-07-2024** ಸಮಯ 16.30 ಗಂಟೆ, ಆರ್ಥಿಕ ಬಿಡ್ ತೆರೆಯುವ **ದಿನಾಂಕ: 09-07-2024** ಸಮಯ 16.00 ಗಂಟೆ, ಕನಿಷ್ಠ ಅಂದಾಜು ಮೊತ್ತ **ರೂ. 125.00** ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ **ರೂ. 500.00** ಲಕ್ಷಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. **ವಿಶೇಷ ಸೂಚನೆ:** ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು ಯಾವುದೇ ರೀತಿಯ ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/69/ಕೆಎಸ್ಎಂಸಿಎ/2024-25

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ.
ದೂರವಾಣಿ: 08354- 235042 ಇ-ಮೇಲ್: bgkeezpe@yahoo.com ಫ್ಯಾಕ್ಸ್: 08354-235043

ಸಂ:ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ-2/ಅ.ವಿ/2023-24/ 496 ದಿನಾಂಕ:20.06.2024

ಅಲ್ಪಾವಧಿ ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಅವಧಿ ವಿಸ್ತರಣೆ ಅಧಿಸೂಚನೆ (ದ್ವಿ-ಲಕೋಟೆ)
ಕೆ.ಡಬ್ಲ್ಯೂ.-4 ಬಿಡ್ ಡಾಕ್ಯೂಮೆಂಟ್

ವಿಷಯ: 2022-23ನೇ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಆರ್.ಐ.ಡಿ.ಎಫ್.-28 ಯೋಜನೆಯಡಿ ಜಿಲ್ಲೆಯ 3 ಉನ್ನತೀಕರಿಸಿದ ಶಾಲೆಗಳ ರೂ.471.39 ಲಕ್ಷ ಅನುದಾನದಡಿಯಲ್ಲಿ ಮಂಜೂರಾದ ಬಾಗಲಕೋಟೆ ಜಿಲ್ಲೆಯ ಮುಧೋಳ ಉಪವಿಭಾಗ ಇಂಡೆಂಟ್ ನಂ: 4611,4612 ಟೆಂಡರ ಬಗ್ಗೆ.
ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ) ಸಂಖ್ಯೆ:ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ-2/ಕೆ.ಡಬ್ಲ್ಯೂ-4/ಟೆಂಡರ್/2023-24/3835 ದಿನಾಂಕ:15.03.2024

ಉಲ್ಲೇಖಿತ ಟೆಂಡರ ಪ್ರಕಟಣೆಯಲ್ಲಿ ಆವ್ಹಾನಿಸಲಾದ ಲೆಕ್ಕಶೀರ್ಷಿಕೆ: 2022-23ನೇ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಆರ್.ಐ.ಡಿ.ಎಫ್.-28 ಯೋಜನೆಯಡಿ ಜಿಲ್ಲೆಯ 3 ಉನ್ನತೀಕರಿಸಿದ ಶಾಲೆಗಳ ರೂ.471.39 ಲಕ್ಷ ಅನುದಾನದಡಿಯಲ್ಲಿ ಆಯ್ಕೆಯಾದ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ, ಮುಧೋಳ, ವಿಧಾನಸಭಾ ಮತಕ್ಷೇತ್ರದ ಕಾಮಗಾರಿಗಳಿಗೆ ಉಲ್ಲೇಖಿತ(1)ರಡಿ ಟೆಂಡರ ಪ್ರಕಟಣೆಯಲ್ಲಿ ಮುಧೋಳ ಉಪವಿಭಾಗ ಇಂಡೆಂಟ್ ನಂ: 4611, 4612. ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.

ಖಾಲಿ ಟೆಂಡರ್ ಫಾರ್ವ್‌ಗಳಿಗೆ ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್-ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ.	ದಿ:16.04.2024 **ಬದಲಾಗಿ** ದಿ:09.07.2024ರ ಸಾಯಂಕಾಲ 5.30 ಗಂಟೆಯ ವರೆಗೆ
ಪ್ರೀ-ಬಿಡ್ ದಿನಾಂಕ:	ದಿ:12.04.2024 **ಬದಲಾಗಿ** ದಿ:04.07.2024ರ ಸಾಯಂಕಾಲ 5.30 ಗಂಟೆಯ ವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ:	ದಿ:18.04.2024 **ಬದಲಾಗಿ** ದಿ:11.07.2024 ರಂದು ಮುಂಜಾನೆ 11.00 ಗಂಟೆಯ ನಂತರ
ಆರ್ಥಿಕ ಬಿಡ್ ತೆರೆಯುವ ದಿನಾಂಕ	ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.

ಷರತ್ತುಗಳು:-ಮೇಲಿನ ಬದಲಾವಣೆ ಹೊರತುಪಡಿಸಿ, ಬೇರೆ ಯಾವುದೇ ಬದಲಾವಣೆಗಳಿರುವುದಿಲ್ಲ.
ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ https://kppp.karnataka.gov.in ಯಲ್ಲಿ ಲಾಗ್‌ಆನ್ ಮಾಡಿ ನೋಡಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜನೀಯರ,
ಪಂಚಾಯತ ರಾಜ್ (ಇಂ)ವಿಭಾಗ, ಬಾಗಲಕೋಟೆ
ವಾ.ಸಾ.ಇ/ಬಾಗಲಕೋಟ/44/ದೇಶಪಾಂಡೆಪಬ್ಲಿಸಿಟಿ/2024-25

ಸಮಾಚಾರ ಸಣ್ಣದಲ್ಲ

ದರ್ಶನ್ ಕೇಸ್‌ನಲ್ಲಿ ಯಾರನ್ನೂ ಬಿಡುವುದಿಲ್ಲ

ಕಲಬುರಗಿ: ನಮ್ಮ ನೆಲದ ಕಾನೂನು ಯಾರಿಗೂ ಸಹಾಯ ಮಾಡುವುದಿಲ್ಲ. ಪೊಲೀಸ್ ಇಲಾಖೆ ಸಾಕಷ್ಟು ವಿಚಾರದಲ್ಲಿ ಗಟ್ಟಿ ನಿರ್ಧಾರ ಕೈಗೊಂಡಿದೆ. ಹೀಗಾಗಿ ದರ್ಶನ್ ಕೇಸ್‌ನಲ್ಲಿ ಯಾರನ್ನೂ ಬಿಡುವ ಪ್ರಶ್ನೆಯೇ ಇಲ್ಲ ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೊಲೀಸರ ದಕ್ಷತೆ ಬಗ್ಗೆ ನಮಗೆ ಹೆಮ್ಮೆ ಇದೆ. ಯಾರನ್ನೂ ರಕ್ಷಣೆ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಚನ್ನಪಟ್ಟಣದತ್ತ ಡಿಸಿಎಂ ಡಿಕೆಶಿ ಮುಖ ಮಾಡಿದ ವಿಚಾರವಾಗಿ ಪ್ರತಿಕ್ರಿಯಿಸಿದ ಸಚಿವ ತಿಮ್ಮಾಪುರ, ಚನ್ನಪಟ್ಟಣದಿಂದ ಡಿಕೆಶಿ ಸ್ಪರ್ಧೆ ಬಗ್ಗೆ ಹೈಕಮಾಂಡ್ ನಿರ್ಧರಿಸುತ್ತದೆ. ಬಿಜೆಪಿ ಅವಧಿಯಲ್ಲಿ ತೈಲಬೆಲೆ ಏರಿಕೆಯಾಗಿಲ್ಲವೇ. ಈ ಬಗ್ಗೆ ಮಾತನಾಡಲು ಪ್ರತಿಪಕ್ಷ ನಾಯಕ ಆರ್.ಅಶೋಕ್‌ಗೆ ಯಾವ ನೈತಿಕತೆ ಇದೆ ಎಂದು ಕಿಡಿ ಕಾರಿದರು.

ಕಾಂಗ್ರೆಸ್ ತೆಕ್ಕೆಗೆ ಬಳ್ಳಾರಿ ಮಹಾನಗರ ಪಾಲಿಕೆ

ಬಳ್ಳಾರಿ: ಬಳ್ಳಾರಿ ಮಹಾನಗರ ಪಾಲಿಕೆಯ 23ನೇ ಮೇಯರ್ ಆಗಿ ಕಾಂಗ್ರೆಸ್‌ನ ಮುಲ್ಲಂಗಿ ನಂದೀಶ್ ಆಯ್ಕೆಯಾಗಿದ್ದಾರೆ. ಅವರು ಪಾಲಿಕೆಯ 18ನೇ ವಾರ್ಡ್ ಸದಸ್ಯ ಹಾಗೂ ಮಾಜಿ ಸಚಿವ ಬಿ.ನಾಗೇಂದ್ರ ಅವರ ಆಪ್ತ. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ಮೋತ್ಕರ್ ವಿರುದ್ಧ ಮುಲ್ಲಂಗಿ ನಂದೀಶ್ ಗೆಲುವು ಸಾಧಿಸಿದ್ದು, ಈ ಮೂಲಕ ಮೇಯರ್ ಚುನಾವಣೆಯಲ್ಲಿ ಬಿ.ನಾಗೇಂದ್ರ ಮೇಲುಗೈ ಸಾಧಿಸಿದ್ದಾರೆ. ಉಪ ಮೇಯರ್ ಸ್ಥಾನಕ್ಕೆ ಕಾಂಗ್ರೆಸ್‌ನ ಡಿ.ಸುಕುಂ ಆಯ್ಕೆಯಾದರು.

ಬಿಜೆಪಿಯಿಂದ ಉಪ ಮೇಯರ್ ಸ್ಥಾನಕ್ಕೆ ನಾಮಪತ್ರ ಸಲ್ಲಿಸದ ಹಿನ್ನೆಲೆ ಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಿ. ಸುಕುಂ ಅವಿರೋಧ ವಾಗಿ ಆಯ್ಕೆಯಾದರು. ಮೇಯರ್ ಸ್ಥಾನವನ್ನು ತಮ್ಮ ಬೆಂಬಲಿಗರಿಗೆ ಕೊಡಿಸಲು ಬಿ.ನಾಗೇಂದ್ರ ಹಾಗೂ ಶಾಸಕ ಭರತ್‌ರೆಡ್ಡಿ ನಡುವೆ ಪೈಪೋಟಿ ಇತ್ತು. ಹೈಕಮಾಂಡ್ ಮಧ್ಯಸ್ಥಿಕೆಯಿಂದ ನಂದೀಶ್‌ಗೆ ಮೇಯರ್ ಸ್ಥಾನ ಒಲಿದಿದೆ.

ಪ್ರಜ್ವಲ್ ಕರೆತಂದು ಎಸ್‌ಐಟಿ ಸ್ಥಳ ಮಹಜರು

ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಶುಕ್ರವಾರ ನಗರದ ಸಂಸದರ ನಿವಾಸಕ್ಕೆ ಬೆಂಗಳೂರಿನಿಂದ ಕರೆ ತಂದಿದ್ದ ಎಸ್‌ಐಟಿ ತಂಡ, ಸುಮಾರು 4 ಗಂಟೆಗೂ ಹೆಚ್ಚು ಕಾಲ ಸ್ಥಳ ಮಹಜರು ನಡೆಸಿತು.

ಪ್ರಜ್ವಲ್ ವಿರುದ್ಧ ದಾಖಲಾಗಿರುವ ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ಪ್ರಕರಣ ಹಿನ್ನೆಲೆ, ಎಂಪಿ ಆಗಿದ್ದಾಗ ಇದೇ ಸರಕಾರಿ ನಿವಾಸದಲ್ಲಿ ಪ್ರಜ್ವಲ್ ಅತ್ಯಾಚಾರ ನಡೆಸಿದ್ದ ಎಂದು ಸಂತ್ರಸ್ತ ಮಹಿಳೆಯೊಬ್ಬರು ದೂರು ನೀಡಿದ್ದರು. ಅವರ ಸಮಕ್ಷಮದಲ್ಲಿ ಸಿಐಡಿ ಎಸ್‌ಪಿ ನೇತೃತ್ವದಲ್ಲಿ ಮತ್ತೊಮ್ಮೆ ಸ್ಥಳ ಮಹಜರು ನಡೆಸಲಾಯಿತು. ಇದೇ ಪ್ರಕರಣದಲ್ಲಿ ಅರೆಸ್ಟ್ ಆಗಿ ಹಾಲಿ ನ್ಯಾಯಾಂಗ ಬಂಧನದಲ್ಲಿರುವ ಪ್ರಜ್ವಲ್‌ಗೆ ಬಾಡಿ ವಾರೆಂಟ್ ಪಡೆದು ಇಲ್ಲಿಗೆ ಕರೆತಲಾಗಿತ್ತು. ತನಿಖಾ ತಂಡದ ಜತೆ ಎಫ್‌ಎಸ್‌ಎಲ್ ತಂಡವೂ ನಿವಾಸದ ವಿವಿಧೆಡೆ ಅವಲೋಕನ ನಡೆಸಿತು. ಈ ವೇಳೆ ಪ್ರಜ್ವಲ್‌ರಿಂದ ಹೇಳಿಕೆ ಪಡೆಯಿತು. ಅಲ್ಲದೆ ಪಂಚರ ಸಮ್ಮುಖದಲ್ಲಿ ಮಾಹಿತಿ ರೆಕಾರ್ಡ್ ಮಾಡಿಕೊಳ್ಳಲಾಯಿತು. ಮಧ್ಯಾಹ್ನ 12 ಗಂಟೆಯಿಂದ ಸಂಜೆ 4 ಗಂಟೆವರೆಗೂ ಸತತ 4 ಗಂಟೆ ಕಾಲ ಸ್ಥಳ ಮಹಜರು ಮುಗಿಸಿದ ಎಸ್‌ಐಟಿ ತಂಡ ಬೆಂಗಳೂರು ಕಡೆಗೆ ಹೊರಟಿತು.

ಸಿಲಿಂಡರ್ ಸ್ಫೋಟ: ಒಬ್ಬ ಸಾವು

ಕಲಬುರಗಿ: ನಗರದ ಶರಣಬಸವೇಶ್ವರ ಕೆರೆಯ ಪಕ್ಕದಲ್ಲಿರುವ ಸಪ್ತಗಿರಿ ಆರೆಂಜ್ ಹೋಟೆಲ್‌ನಲ್ಲಿ ಸಂಭವಿಸಿದ ಸಿಲಿಂಡರ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ವ್ಯಕ್ತಿ ಸಾವನ್ನಪ್ಪಿದ್ದಾನೆ. ರೋಜಾ ಬಿ ಬಡಾವಣೆಯ ನಿವಾಸಿ ಮಲ್ಲಿಕಾರ್ಜುನ (40) ಮಹಾರಾಷ್ಟ್ರದ ಮಿರಜ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ.

ಶುಕ್ರವಾರ ಬೆಳಗ್ಗೆ ಸಿಲಿಂಡರ್ ಸ್ಫೋಟವಾಗಿ 10ಕ್ಕೂ ಅಧಿಕ ಜನ ಗಾಯಗೊಂಡಿದ್ದರು, ಘಟನೆಯಲ್ಲಿ ನಾಲ್ವರ ಸ್ಥಿತಿ ಚಿಂತಾಜನಕವಾಗಿತ್ತು. ಘಟನೆಯಲ್ಲಿ ಗಂಭೀರ ಗಾಯಗೊಂಡಿದ್ದ ಐವರನ್ನು ಮಿರಜ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಇಬ್ಬರು ಗಾಯಾಳುಗಳನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿದ್ದು, ಮಿರಜ್ ಆಸ್ಪತ್ರೆಗೆ ದಾಖಲಾಗಿದ್ದ ಮಲ್ಲಿಕಾರ್ಜುನ ಎಂಬಾತ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ.

ಡೆಂಘೀ ಬಾಧಿತೆಗೆ ಹೃದಯಾಘಾತ

ಸಾಗರ: ಡೆಂಘೀ ಜ್ವರದಿಂದ ಬಳಲುತ್ತಿದ್ದ ಸೊರಬ ತಾಲೂಕಿನ ಮಹಿಳೆಯೊರ್ವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗಲೇ ಹೃದಯಾಘಾತ ದಿಂದ ಮೃತಪಟ್ಟ ಘಟನೆ ಇಲ್ಲಿನ ಆಸ್ಪತ್ರೆ ಯಲ್ಲಿ ಶುಕ್ರವಾರ ನಡೆದಿದೆ. ಶಿಗ್ಗಾ ಗ್ರಾ.ಪಂ. ಮಾಜಿ ಅಧ್ಯಕ್ಷೆ ವಸಂತ (40) ಮೃತಪಟ್ಟವರು.

ವಾಂತಿ, ಜ್ವರದ ಹಿನ್ನೆಲೆಯಲ್ಲಿ ಅವರನ್ನು ಗುರುವಾರ ರಾತ್ರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪರೀಕ್ಷೆಗೊಳಪಡಿಸಿದಾಗ ಡೆಂಘೀ ಪಾಸಿಟಿವ್ ಬಂದಿತ್ತು.

ಯೋಗ ಸಮಚಿತ್ತದ ಮನೋಭಾವ, ಏಕಾಗ್ರತೆಗೆ ಸಹಕಾರಿ: ದಿನೇಶ್‌ಗುಂಡೂರಾವ್

ರಾಜ್ಯಾದ್ಯಂತ ಯೋಗ ದಿನಾಚರಣೆ

ಬೆಂಗಳೂರು: ಅಂತಾರಾಷ್ಟ್ರೀಯ ಯೋಗ ದಿನದ ಹಿನ್ನಲೆಯಲ್ಲಿ ರಾಜ್ಯಾದ್ಯಂತ ಯೋಗ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಬಳ್ಳಾರಿಯ ಜಿಂದಾಲ್ ಕ್ಯಾಂಪಸ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೆ, ಬೆಂಗಳೂರಿನ ವಿಧಾನಸೌಧದ ಮುಂಭಾಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹಲೋಟ್ ಯೋಗಾಭ್ಯಾಸದಲ್ಲಿ ಭಾಗವಹಿಸಿದ್ದರು.

ಯೋಗದಿನಾಚರಣೆಯ ಪೂರ್ವಭಾವಿಯಾಗಿ ಜೂನ್ 10 ರಿಂದ 20ರವರೆಗೆ ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದ್ದ ಯೋಗೋತ್ಸವ ಎಂಬ ಹತ್ತು ದಿನಗಳ ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ 664 ವಸತಿ ನಿಲಯದ 90,300 ವಿದ್ಯಾರ್ಥಿಗಳು, ವಸತಿ ಶಿಕ್ಷಣ ಸಂಘದ ವಸತಿ 831ಶಾಲೆಗಳ 87000 ವಿದ್ಯಾರ್ಥಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸ್ವ- ಸಹಾಯ ಸಂಘದ 5000 ಸದಸ್ಯರಿಗೆ ಯೋಗ ಭ್ಯಾಸದ ಜೊತೆಗೆ ಯೋಗದ ಮಹತ್ವ ತಿಳಿಸಿಕೊಡುವ ಕಾರ್ಯಕ್ರಮಗಳನ್ನು ನಡೆಸಲಾಗಿತ್ತು.

ವಿಶ್ವ ಯೋಗ ದಿನಾಚರಣೆ ಹಿನ್ನಲೆಯಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಡಿಸಿಎಂ ಡಿ.ಕೆ ಶಿವಕುಮಾರ್, ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಯೋಗಾಭ್ಯಾಸ ನಡೆಸಿದರು.

ಯೋಗ ನಿರಂತರವಾಗಲಿ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಯೋಗದಿಂದ ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ಮನುಷ್ಯನಲ್ಲಿ ಜೀವನ ಉತ್ಸಾಹವನ್ನು ಬೆಳೆಸಿ ಸಮಚಿತ್ತದ ಮನೋಭಾವ ಏಕಾಗ್ರತೆಗೆ ಸಹಕಾರಿ ಎಂದರು. ಯೋಗ ದಿನಾಚರಣೆ ಕೇವಲ ಒಂದು ದಿನದ ಆಚರಣೆ ಆಗಬಾರದು. ಹೀಗಾಗಿ ಆಯುಷ್ ಇಲಾಖೆಯಿಂದ ಈ ಬಾರಿ 10 ದಿನಗಳ ಯೋಗೋತ್ಸವವನ್ನು ಆಚರಿಸಲಾಗಿದ್ದು, ಕಳೆದ 10 ದಿನಗಳಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳು, ಹಲವು ಸಂಘ ಸಂಸ್ಥೆಗಳು ಯೋಗೋತ್ಸವದಲ್ಲಿ ಪಾಲ್ಗೊಂಡು ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಿವೆ ಎಂದರು.

ನಟಿ ಶ್ರೀಲೀಲಾ ಭಾಗಿ | ಕವಯತ್ರಿ ಅಕ್ಕಮಹಾದೇವಿ ಕಲಾಕೃತಿ ಅನಾವರಣ

ತೋರಣಗಲ್‌ನಲ್ಲಿ ಸಿಎಂ ಯೋಗಾಭ್ಯಾಸ

ಬಳ್ಳಾರಿಯ ಸಂಡೂರು ತಾಲೂಕು ತೋರಣಗಲ್ಲಿನ ಜೆಎಸ್‌ಡಬ್ಲ್ಯೂ ಟೌನ್‌ಶಿಪ್ ವಿದ್ಯಾನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯೋಗಾಭ್ಯಾಸ ಮಾಡುವ ಮೂಲಕ, ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳ್ಳಾರಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯೋಗಾಭ್ಯಾಸ ಮಾಡುವ ಮೂಲಕ, ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಆಯುಷ್ ಇಲಾಖೆ ಸಹಯೋಗದಲ್ಲಿ ಶುಕ್ರವಾರ ಸಂಡೂರು ತಾಲೂಕು ತೋರಣಗಲ್ಲಿನ ಜೆಎಸ್ ಡಬ್ಲ್ಯೂ ಟೌನ್‌ಶಿಪ್ ವಿದ್ಯಾನಗರದಲ್ಲಿ ಏರ್ಪಡಿಸಲಾದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಪಾಲ್ಗೊಂಡು, ಲವಲವಿಕೆಯಿಂದ ಕೆಲವು ಯೋಗಾಸನಗಳ ಅಭ್ಯಾಸ ಮಾಡಿದರು.

ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ವೇದಿಕೆಯಲ್ಲಿದ್ದ ಮುಖ್ಯಮಂತ್ರಿ, ಗಣ್ಯಾತಿಗಣ್ಯರು, ಮಕ್ಕಳು, ಸಾರ್ವಜನಿಕರು ಯೋಗದ ವಿವಿಧ ಆಸನಗಳನ್ನು ಪ್ರದರ್ಶಿಸಿದರು.

ಯೋಗ ದಿನಾಚರಣೆಯಲ್ಲಿ ಭಾಗವಹಿಸಿದ್ದ ಚಲನಚಿತ್ರ ನಟಿ ಶ್ರೀಲೀಲಾ ಎಲ್ಲರ ಆಕರ್ಷಣೆಯ ಕೇಂದ್ರಬಿಂದುವಾಗಿದ್ದರು. ಶ್ರೀಲೀಲಾ ಕೂಡ ಖುಷಿಯಿಂದಲೇ ಯೋಗ ಪ್ರದರ್ಶನದಲ್ಲಿ ಮಿಂಚಿದರು. 12 ನೇ ಶತಮಾನದ ಕವಿಯತ್ರಿ ಅಕ್ಕಮಹಾದೇವಿ ಅವರ ಬೃಹತ್ ಚಿತ್ರ ಕಲಾಕೃತಿಯನ್ನು ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನಾವರಣಗೊಳಿಸಿದರು. ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಮಕ್ಕಳು, ಸಾರ್ವಜನಿಕರು ಯೋಗ ದಿನಾಚರಣೆ ಯಲ್ಲಿ ಯೋಗಾಭ್ಯಾಸ ನಡೆಸಿ ಸಂಭ್ರಮಿಸಿದರು.

ರೇಣುಕಾಸ್ವಾಮಿ ಪ್ರಕರಣ: ತಪ್ಪಿತಸ್ಥರಿಗೆ ಶಿಕ್ಷೆ

ದರ್ಶನ್ ಪರ ಚರ್ಚೆ ಇಲ್ಲ

ಮೈಸೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಸಚಿವ ಸಂಪುಟದಲ್ಲಿ ಯಾವುದೇ ಚರ್ಚೆಯಾಗಿಲ್ಲ. ಪೊಲೀಸರು ತನಿಖೆ ಮಾಡುತ್ತಿದ್ದಾರೆ. ತಪ್ಪಿತಸ್ಥರಿಗೆ ಕಾನೂನು ರೀತಿ ಶಿಕ್ಷೆಯಾಗುತ್ತದೆ ಎಂದು ಸಚಿವ ಡಾ. ಎಚ್.ಸಿ.ಮಹಾದೇವಪ್ಪ ಹೇಳಿದ್ದಾರೆ.

ರೇಣುಕಾಸ್ವಾಮಿ ಹತ್ಯೆ ವಿಚಾರದಲ್ಲಿ ನಟ ದರ್ಶನ್‌ರನ್ನು ರಕ್ಷಿಸಲು ಕೆಲವರು ಒತ್ತಡ ಹಾಕುತ್ತಿದ್ದಾರೆ ಎಂಬ ಬಗ್ಗೆ ಮಾತನಾಡಿದ ಅವರು, ಈ ಬಗ್ಗೆಯೂ ಸಂಪುಟ ಸಭೆಯಲ್ಲಿ ಚರ್ಚೆಯಾಗಿಲ್ಲ. ತಪ್ಪಿತಸ್ಥರಿಗೆ ಕಾನೂನು ರೀತಿ ಶಿಕ್ಷೆಯಾಗುತ್ತದೆ. ಪೊಲೀಸರು ತನಿಖೆ ಮಾಡುತ್ತಿದ್ದಾರೆ. ತನಿಖೆಗೆ ಯಾವುದೇ ಒತ್ತಡ ಇಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು. ಗ್ಯಾರಂಟಿ ಯೋಜನೆಗಳನ್ನು ರಾಜಕೀಯ ಉದ್ದೇಶಕ್ಕಾಗಿ ತಂದಿಲ್ಲ. ಯಾವುದೇ ಕಾರಣಕ್ಕೂ ಇವು ನಿಲ್ಲುವುದಿಲ್ಲ. ಬಡವರ ಆರ್ಥಿಕ ಸುಧಾರಣೆಗಾಗಿ ಗ್ಯಾರಂಟಿ ಯೋಜನೆ ತಂದಿದ್ದೇವೆ. ಕೆಲವರು ಯೋಜನೆಗಳನ್ನು ನಿಲ್ಲಿಸುತ್ತಾರೆ ಎಂದು ಸುಳ್ಳು ವದಂತಿ ಹರಡುತ್ತಾರೆ. ಜನರು ಆತಂಕ ಪಡುವ ಅಗತ್ಯ ಇಲ್ಲ ಎಂದು ಮಹಾದೇವಪ್ಪ ಜನತೆಗೆ ಭರವಸೆ ನೀಡಿದರು.

ಪೆಟ್ರೋಲ್ ಮತ್ತು ಡೀಸೆಲ್ ಏರಿಕೆಯನ್ನು ವಿರೋಧ ಪಕ್ಷಗಳು ಟೀಕೆ ಮಾಡುತ್ತಿವೆ. ಆದರೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲಬೆಲೆ ಕಡಿಮೆ ಇದ್ದರೂ ಕೇಂದ್ರ ಸರಕಾರ ದರ ಕಡಿಮೆ ಮಾಡಲಿಲ್ಲ. ಅಕ್ಕಪಕ್ಕದ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರ ಕಡಿಮೆ ಇದೆ.

-ಡಾ.ಎಚ್.ಸಿ.ಮಹಾದೇವಪ್ಪ, ಸಚಿವ

ಗ್ಯಾರಂಟಿ ಯೋಜನೆ ಜನರ ಮುಂದಿಟ್ಟು ಮತ ಕೇಳುತ್ತೇವೆ

ಉಪಚುನಾವಣೆಗೆ ಕಾಂಗ್ರೆಸ್ ಸಜ್ಜು

ರಾಮನಗರ: ಚನ್ನಪಟ್ಟಣ ಉಪಚುನಾವಣೆಯಲ್ಲಿ ರಾಜ್ಯ ಸರಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಹಾಗೂ ಅಭಿವೃದ್ಧಿ ಕೆಲಸಗಳನ್ನು ಜನರ ಮುಂದಿಟ್ಟು ಮತ ಕೇಳುತ್ತೇವೆ. ಚುನಾವಣೆಯನ್ನು ಜನರ ತೀರ್ಮಾನಕ್ಕೆ ಬಿಡುತ್ತೇವೆ ಎಂದು ಕೃಷಿ ಸಚಿವ ಚೆಲುವರಾಯ ಸ್ವಾಮಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆಗೆ ಇನ್ನೂ ಸಾಕಷ್ಟು ಸಮಯವಿದೆ. ಲೋಕಸಭಾ ಚುನಾವಣೆಯಲ್ಲಿ ಹಳೇ ಮೈಸೂರು ಭಾಗದಲ್ಲಿ ಕಾಂಗ್ರೆಸ್ ದೊಡ್ಡಮಟ್ಟದಲ್ಲಿ ಸೋತಿದೆ. ಎರಡು-ಮೂರು ಲಕ್ಷ ಮತಗಳ ಅಂತರದಲ್ಲಿ ಸೋತಿರುವ ನಮಗೆ ದೊಡ್ಡ ಶಕ್ತಿ ಇದೆ ಎಂದು ಹೇಳಿಕೊಳ್ಳುವಂತಿಲ್ಲ ಎಂದರು.

ಬೆಂಗಳೂರು ಗ್ರಾಮಾಂತರದ ಚನ್ನಪಟ್ಟಣ ಕ್ಷೇತ್ರದಲ್ಲಿ ಅತಿಹೆಚ್ಚು ಮತಗಳು ಕಾಂಗ್ರೆಸ್ ಕೈ ಹಿಡಿದಿರುವುದು ಆಶಾದಾಯಕ ಬೆಳವಣಿಗೆ. ವಿಧಾನಸಭಾ ಚುನಾವಣೆಯಲ್ಲಿ 15 ಸಾವಿರವಿದ್ದ ಮತ ಗಳಿಕೆ 85 ಸಾವಿರಕ್ಕೆ ಏರಿಕೆಯಾಗಿದೆ. ಹಾಗಾಗಿ, ಜನರ ಮೇಲೆ ವಿಶ್ವಾಸವಿಟ್ಟು ಚುನಾವಣೆಗೆ ಹೋಗುತ್ತೇವೆ. ಅಭ್ಯರ್ಥಿಯನ್ನು ಹೈಕಮಾಂಡ್ ತೀರ್ಮಾನಿಸಲಿದೆ ಎಂದು ಸಚಿವ ಚಲುವರಾಯಸ್ವಾಮಿ ವಿವರಿಸಿದರು.

ರಾಜಕೀಯ ವಿಮರ್ಶೆಗಿಂತ ಜನಸೇವೆ ಮುಖ್ಯ

ಮಾಜಿ ಸಂಸದ ಡಿ.ಕೆ. ಸುರೇಶ್ ಸ್ಪರ್ಧೆಗೆ ಡಿಕೆಶಿ ತಂತ್ರ ಎಂಬ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಹೇಳಿಕೆಗೆ ಪ್ರತಿಕ್ರಿಯಿಸಿದ ಚಲುವರಾಯಸ್ವಾಮಿ, ಕಾಂಗ್ರೆಸ್‌ನಲ್ಲಿ ಯಾರನ್ನು ಅಭ್ಯರ್ಥಿ ಮಾಡಬೇಕು ಎಂಬುದು ನಮಗೆ ಬಿಟ್ಟದ್ದು. ಶಿವಕುಮಾರ್, ಸುರೇಶ್ ಅಥವಾ ಅಚ್ಚರಿ ಅಭ್ಯರ್ಥಿ ಘೋಷಿಸುತ್ತೇವೋ ಅದು ನಮಗೆ ಸಂಬಂಧಿಸಿದ್ದು. ಅನುಭವಿ ದೇವೇಗೌಡರು ಮುಂದೆ ತಮಗೆ ಯಾವುದಾದರೂ ಸ್ಥಾನ ಸಿಗಲಿದೆ ಎಂಬ ನಿರೀಕ್ಷೆಯಿಂದ ಈ ರೀತಿ ಹೇಳಿದ್ದಾರೆ. ಅವರು ಸಚಿವರಾಗಿದ್ದಾಗ ಅನುಭವಿಸಿದ ಗೋಳು ನೋಡಿದ್ದೇವೆ. ರಾಜಕೀಯ ವಿಮರ್ಶೆಗಿಂತ ಜನ ಸೇವೆ ಮಾಡಬೇಕು ಎಂದು ತಿರುಗೇಟು ನೀಡಿದರು.

ಚನ್ನಪಟ್ಟಣದಲ್ಲಿ ಜಿದ್ದಾಜಿದ್ದಿ ಪೈಪೋಟಿ

ಡಿ.ಕೆ.ಶಿವಕುಮಾರ್ ಸ್ಪರ್ಧಿಸಲ್ಲ

ಮೈಸೂರು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚನ್ನಪಟ್ಟಣ ಉಪಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಜೆಡಿಎಸ್ ಪ್ರಮುಖರ ಸಮಿತಿ ಅಧ್ಯಕ್ಷ ಜಿ.ಟಿ. ದೇವೇಗೌಡ ಸ್ಪಷ್ಟವಾಗಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವಕುಮಾರ್ ರಾಜಕೀಯ ತಂತ್ರಗಾರಿಕೆಯಿಂದ ಹೇಳಿಕೆ ನೀಡುತ್ತಿದ್ದಾರಷ್ಟೇ. ಸಹೋದರ ಡಿ.ಕೆ. ಸುರೇಶ್‌ರನ್ನು ಕಣಕ್ಕಿಳಿಸುವ ದೃಷ್ಟಿಯಿಂದ, ನಾನು ಬಂದರೆ ಮತ ಹಾಕುತ್ತೀರಾ ಎಂದು ಜನರನ್ನು ಕೇಳುತ್ತಿದ್ದಾರಷ್ಟೇ.

ಚನ್ನಪಟ್ಟಣ ಉಪಚುನಾವಣೆ ಅಖಾಡ ಇತರ ಕ್ಷೇತ್ರಗಳಿಗಿಂತ ಜೋರಾಗಿರಲಿದ್ದು, ಜಿದ್ದಾಜಿದ್ದಿನ ಸ್ಪರ್ಧೆ ನಡೆಯುತ್ತದೆ ಎಂದು ಸೂಚ್ಯವಾಗಿ ಹೇಳಿದರು. ಉಪಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ನಿಖಿಲ್ ಕುಮಾರಸ್ವಾಮಿ ಹೇಳಿಲ್ಲ. ಬಿಜೆಪಿ ನಾಯಕ ಸಿ.ಪಿ. ಯೋಗೇಶ್ವರ್ ಅವರು ಜನರ ಅಭಿಪ್ರಾಯ ನನ್ನ ಪರ ವಾಗಿದೆ ಎಂದಷ್ಟೇ ಹೇಳಿದ್ದಾರೆ ಎಂದರು.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಬಂಧನ ಮೊದಲಾದ ವಿಷಯಗಳಲ್ಲಿ ಪೊಲೀಸರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಮೇಲೆ ನಂಬಿಕೆ ಇದೆ. ಗೌರವ ಹೆಚ್ಚಾಗಿದೆ. ಈ ವಿಚಾರವಾಗಿ ಸಿ.ಎಂ. ಸಿದ್ದರಾಮಯ್ಯ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿದ್ದಾರೆ. ದರ್ಶನ್ ಪರವಾಗಿ ಯಾರೂ ಮಾತನಾಡದಂತೆ ಸೂಚನೆಯನ್ನೂ ಸಚಿವರಿಗೆ ನೀಡಿದ್ದಾರೆ.

-ಜಿ.ಟಿ. ದೇವೇಗೌಡ , ಜೆಡಿಎಸ್ ನಾಯಕ

ಹಗರಣದಲ್ಲಿ ಪ್ರಭಾವಿಗಳು ಶಾಮೀಲು: ಡಾ.ಶರಣಪ್ರಕಾಶ್ ಪಾಟೀಲ್ ಆರೋಪ

ನೀಟ್ ಅಕ್ರಮ: ಕೇಂದ್ರದ ಬಹುದೊಡ್ಡ ಹಗರಣ

ರಾಯಚೂರು: ನೀಟ್ ಪರೀಕ್ಷಾ ಅಕ್ರಮ ಪ್ರಕರಣ ಕೇಂದ್ರ ಸರಕಾರದ ಅತ್ಯಂತ ದೊಡ್ಡ ಅಕ್ರಮ ವಾಗಿದೆ. ಈ ಹಗರಣದಲ್ಲಿ ದೊಡ್ಡ ಪ್ರಭಾವಿಗಳು ಶಾಮೀಲಾಗಿದ್ದಾರೆ ಎಂದು ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಗಂಭೀರ ಆರೋಪ ಮಾಡಿದ್ದಾರೆ.



ಸುದ್ದಿಗಾರ ರೊಂದಿಗೆ ಮಾತನಾಡಿ, ನೀಟ್ ಅಕ್ರಮ ಪ್ರಕರಣ ಕೇಂದ್ರದಲ್ಲಿರುವ ಮೋದಿ ಸರಕಾ ರದ ದೊಡ್ಡ ಅಕ್ರಮ . ಕೇಂದ್ರ ತೆಗೆದುಕೊಂಡ ನಿರ್ಧಾರಗಳ ಬಗ್ಗೆ ಬಹಳ ಅನುಮಾನ ಹುಟ್ಟಿಸಿದೆ. ಬಹುದೊಡ್ಡ ಹಗರಣ ಆಗಿದ್ದರೂ ಸರಕಾರ ಸರಿಯಾಗಿ ತನಿಖೆ ಮಾಡಿಲ್ಲ ಎಂದು ದೂರಿದರು. ನೀಟ್ ಪರೀಕ್ಷೆ ರದ್ದಾಗಿದ್ದು, ಇದನ್ನು ಸಿಬಿಐ ತನಿಖೆಗೆ ನೀಡಬೇಕು ಎನ್ನು ವುದು ಎಲ್ಲ ರಾಜ್ಯಗಳ ಒತ್ತಾಯವಿದೆ. ಆದರೆ, ಇದರ ಬಗ್ಗೆ ಕೇಂದ್ರ ಸರಕಾರ ಸುಮ್ಮನೆ ಕುಳಿತಿದೆ. ಯಾರನ್ನು ರಕ್ಷಿಸಲು ಸರಕಾರ ನಿಂತಿದೆ ಎಂದು ತಿಳಿಯುತ್ತಿಲ್ಲ. ದೇಶ ದಲ್ಲಿ 24 ಲಕ್ಷ ಮಕ್ಕಳು ಪರೀಕ್ಷೆ ಬರೆದಿದ್ದು, ಅವರ ಭವಿಷ್ಯದ ಜೊತೆ ಕೇಂದ್ರ ಸರಕಾರ ಚೆಲ್ಲಾಟವಾಡುತ್ತಿದೆ. ನೀಟ್ ತಿರಸ್ಕಾರ ಮಾಡಲು ಬರುವುದಿಲ್ಲ. ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಅದನ್ನು ರದ್ದು ಮಾಡೋಕೆ ಸುಪ್ರೀಂ ಕೋರ್ಟ್ ತೀರ್ಪು ನೀಡಬೇಕು ಸಚಿವ ಪಾಟೀಲ್ ತಿಳಿಸಿದರು.

ಚುನಾವಣಾ ಕಾನೂನು ತಿದ್ದುಪಡಿ ಆಗಲಿ: ಯತ್ನಾಳ

ವಿಜಯಪುರ: ಈಗಾಗಲೇ ಶಾಸಕ-ಸಂಸದ ಆಗಿದ್ದವರು ಮತ್ತೊಂದು ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಚುನಾವಣಾ ಕಾಯ್ದೆಗೆ ತಿದ್ದುಪಡಿ ತರುವ ಅಗತ್ಯವಿದೆ ಎಂದು ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಭಿಪ್ರಾಯ ಪಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸಚಿವ ಕುಮಾರಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿರುವ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ನಡೆಯಲಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಸ್ಪರ್ಧಿಸಬಹುದು. ಆದರೆ ಚುನಾವಣಾ ಕಾನೂನಿಗೆ ಕೆಲ ಬದಲಾವಣೆ ತರುವ ಅಗತ್ಯವಿದೆ. ಒಂದು ಕ್ಷೇತ್ರದಲ್ಲಿ ಅದಾಗಲೇ ಶಾಸಕ, ಸಂಸದ ಆಗಿದ್ದವರು ಮತ್ತೊಂದು ವಿಧಾನಸಭೆ- ಲೋಕಸಭೆ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸದಂತೆ ನಿರ್ಬಂಧದ ಕಾನೂನು ಬರಬೇಕಿದೆ ಎಂದರು.

ಬಿಎಸ್‌ವೈ ಜತೆ ಸಂಧಾನ ಯತ್ನ ಸತ್ಯ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಜತೆ ನಾನು ಹೊಂದಾಣಿಕೆ ಮಾಡಿಕೊಳ್ಳುವಂತೆ ಸಂಧಾನ ಪ್ರಯತ್ನ ನಡೆದಿರುವುದು ಸತ್ಯ. ಬಿಜೆಪಿಯಲ್ಲಿ ನಾನು ಪ್ರಬಲ ಪೈಪೋಟಿ ನೀಡುತ್ತೇನೆಂಬ ಕಾರಣಕ್ಕೆ ಈ ಹೊಂದಾಣಿಕೆ ಪ್ರಯತ್ನಗಳು ನಡೆದಿವೆ. ನಾನು ರಾಜ್ಯಾಧ್ಯಕ್ಷ ಸ್ಥಾನ ಕೇಳಿದ್ದೇನೆ ಎಂದರು.

ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ 64 ಯೋಜನೆಗಳಿಗೆ ಅಸ್ತು

ರಾಜ್ಯದಲ್ಲಿ ₹3,587 ಕೋಟಿ ಬಂಡವಾಳ ಹೂಡಿಕೆ

ಬೆಂಗಳೂರು: ಬಂಡವಾಳ ಹೂಡಿಕೆಗೆ ನಡೆದ 146 ನೇ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಒಟ್ಟಾರೆ 64 ಯೋಜನೆಗಳ 3,587 ರು.ಕೋಟಿ ಮೊತ್ತದ ಬಂಡವಾಳ ಹೂಡಿಕೆಗೆ ಅನುಮೋದನೆಯಿಂದ ಸುಮಾರು 13,896 ಜನರಿಗೆ ಉದ್ಯೋಗ ಅವಕಾಶಗಳು ಸೃಷ್ಟಿಯಾಗಲಿವೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಸಭೆಯಲ್ಲಿ ಇಂಟರ್‌ನ್ಯಾಷನಲ್ ಬ್ಯಾಟರಿ ಕಂಪನಿ ಇಂಡಿಯಾ, ರಿವರ್ ಮೊಬಿಲಿಟಿ, ವೆಗಾ ಆಟೊ ಆ್ಯಕ್ಸೆಸರೀಸ್, ಮಿರಾರ್ ಆ್ಯಂಡ್ ಮಿರಾರ್ ಇಂಡಸ್ಟ್ರೀಸ್‌ಗೆ ಅನುಮೋದನೆ ನೀಡಲಾಗಿದ್ದು, ಇದರಿಂದ ವಿದ್ಯುತ್‌ಚಾಲಿತ

- ದೇವನಹಳ್ಳಿ ಬಳಿ ಪ್ರೈಮರಿ ಸೇಲ್ಸ್ ಆ್ಯಂಡ್ ಬ್ಯಾಟರೀಸ್ ಘಟಕದಲ್ಲಿ 300 ಮಂದಿಗೆ ಉದ್ಯೋಗ
- ಮೊಬಿಲಿಟಿಯಲ್ಲಿ 690 ಜನರಿಗೆ ಉದ್ಯೋಗ

ದ್ವಿಚಕ್ರ ವಾಹನ ತಯಾರಿಕಾ ಘಟಕ, ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರ, ವಿದ್ಯುತ್ ಉತ್ಪಾದನಾ ಕೇಂದ್ರ ಹಾಗೂ ಹಾಲು ಉತ್ಪಾದನಾ ಘಟಕಗಳು ಸೇರಿವೆ ಎಂದು ತಿಳಿಸಿದ್ದಾರೆ. ಇಂಟರ್‌ನ್ಯಾಷನಲ್ ಬ್ಯಾಟರಿ ಕಂಪನಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ದೇವನಹಳ್ಳಿ ಬಳಿ ರೂಪಾಯಿ 390 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಿರುವ ಪ್ರೈಮರಿ ಸೇಲ್ಸ್ ಆ್ಯಂಡ್ ಬ್ಯಾಟರೀಸ್ ಘಟಕವು 300 ಮಂದಿಗೆ ಉದ್ಯೋಗ ಸಿಗಲಿದೆ.

ಬಂಡವಾಳ ಹೂಡಿಕೆಗೆ ನಡೆದ 146 ನೇ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಮಾತನಾಡಿದರು.

ನಾನಾ ಜಿಲ್ಲೆಗಳಲ್ಲಿ ಹೊಸ ಉದ್ಯೋಗ ಸೃಷ್ಟಿ

ಬೆಂಗಳೂರು ನಗರ ಹಾಗೂ ಗ್ರಾಮಾಂತರ, ಬೆಳಗಾವಿ, ತುಮಕೂರು, ಯಾದಗಿರಿ, ಹಾವೇರಿ, ಗದಗ, ಮೈಸೂರು ಜಿಲ್ಲೆಗಳಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಇನ್ನಷ್ಟು ಉತ್ತೇಜನ ದೊರೆಯಲಿರುವುದರ ಜೊತೆಗೆ ಹೊಸ ಉದ್ಯೋಗ ಅವಕಾಶಗಳೂ ಸೃಷ್ಟಿಯಾಗಲಿವೆ.

ಬೆಂಗಳೂರು ಮೂಲದ ರಿವರ್ ಮೊಬಿಲಿಟಿ ಪ್ರೈವೇಟ್ ಲಿಮಿಟೆಡ್ ನವೋದ್ಯಮವು ಹೊಸಕೋಟೆ ಬಳಿ ರೂಪಾಯಿ 306.9 ಕೋಟಿ ವೆಚ್ಚದಲ್ಲಿ ವಿದ್ಯುತ್‌ಚಾಲಿತ ದ್ವಿಚಕ್ರ ವಾಹನ ತಯಾರಿಕಾ ಘಟಕ ಸ್ಥಾಪಿಸಲಿದ್ದು, ಇದರಿಂದ 690 ಮಂದಿಗೆ ಉದ್ಯೋಗ ಸಿಗಲಿದೆ.

ವೆಗಾ ಆಟೋ ಆ್ಯಕ್ಸೆಸರೀಸ್ ಪ್ರೈವೇಟ್ ಲಿಮಿಟೆಡ್ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನಲ್ಲಿ ಇಪಿಎಸ್ ಲೀನರ್ ತಯಾರಿಕಾ ಘಟಕ ಸ್ಥಾಪಿಸಲು ರೂಪಾಯಿ 205 ಕೋಟಿ ವೆಚ್ಚ ಮಾಡಲಿದೆ. ಮಿರಾರ್ ಆ್ಯಂಡ್ ಮಿರಾರ್ ಇಂಡ ಸ್ಟ್ರೀಸ್ ತುಮಕೂರು ಜಿಲ್ಲೆಯ ವಸಂತ ನರಸಾಪುರದಲ್ಲಿ ಉಕ್ಕಿನ ತಂತಿ ಸಂಸ್ಕರಣಾ ಘಟಕ ಸ್ಥಾಪಿಸಲು ರೂಪಾಯಿ 200 ಕೋಟಿ ವೆಚ್ಚ ಹೂಡಿಕೆ ಮಾಡಲಿರುವುದು ಪ್ರಮುಖ ಯೋಜನೆಗಳಾಗಿವೆ ಎಂದು ಸಚಿವ ಎಂ. ಬಿ. ಪಾಟೀಲ ಮಾಹಿತಿ ನೀಡಿದರು.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗಾವಿ. ಫ್ಯಾಕ್ಸ್/ದೂರವಾಣಿ ಸಂಖ್ಯೆ: 0831-2470342, 2470257 ಇ-ಮೇಲ್: belagavibuda@gmail.com

No: BUDA/PWD/E-TENDER/2024-25/730 Date: 21-06-2024

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಾವಳಿಗಳಲ್ಲಿನ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಅನ್ವಯ ಇ-ಪ್ರೊಕ್ಯೂರ್‌ಮೆಂಟ್-2 ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಆಸಕ್ತ ಮತ್ತು ಅರ್ಹ ಗುತ್ತಿಗೆದಾರರು ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. (ದೂರವಾಣಿ ಸಂಖ್ಯೆ: 0831-2470342) ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್: https://kppp.karnataka.gov.in ರಲ್ಲಿ ಪಡೆಯಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಇಂಡೆಂಟ್ ನಂ.	ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ (ರೂ. ಗಳಲ್ಲಿ)	ಕಾಮಗಾರಿಯನ್ನು ನಿರ್ವಹಿಸುವ ಅವಧಿ
1	ಬೆಳಗಾವಿ ಗ್ರಾಮೀಣ ಮತಕ್ಷೇತ್ರದಡಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಸರಸ್ವತಿ ನಗರದಲ್ಲಿನ ಶಿವ ಮಂದಿರದ ಹತ್ತಿರದಲ್ಲಿರುವ ಉದ್ಯಾನವನ ಅಭಿವೃದ್ಧಿಪಡಿಸುವುದು.	INDENT 27	55.00	1,10,000/-	6 ತಿಂಗಳು
2	ಬೆಳಗಾವಿ ಗ್ರಾಮೀಣ ಮತಕ್ಷೇತ್ರದಲ್ಲಿನ ಸ್ಕೀಮ್ ನಂ.41 ಫ್ರೀಡಂ ಫೈಟರ್ಸ್ ಕಾಲನಿ ಉದ್ಯಾನವನ ಅಭಿವೃದ್ಧಿ ಮಾಡುವುದು.	INDENT 28	62.35	1,25,000/-	6 ತಿಂಗಳು
3	ಬೆಳಗಾವಿ ಗ್ರಾಮೀಣ ಮತಕ್ಷೇತ್ರದಲ್ಲಿನ ಸರಸ್ವತಿ ನಗರದ ವಿನಾಯಕ ದೇವಸ್ಥಾನದ ಹತ್ತಿರ ಇರುವ ಉದ್ಯಾನವನ ಅಭಿವೃದ್ಧಿ ಮಾಡುವುದು.	INDENT 29	55.75	1,12,000/-	6 ತಿಂಗಳು

ಟೆಂಡರ್ ಫಾರ್ಮ ಬೆಲೆ ಇ-ಪ್ರೊಕ್ಯೂರ್‌ಮೆಂಟ್‌ದಲ್ಲಿದ್ದಂತೆ:

1) ಟೆಂಡರ್ ಕ್ವಾರಿಸ್ ಸಲ್ಲಿಸಲು ಕೊನೆಯ ದಿನಾಂಕ: **18-07-2024 ರಂದು ಸಾಯಂಕಾಲ 4.30 ಘಂಟೆಯವರೆಗೆ.** 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **25-07-2024 ರಂದು ಸಾಯಂಕಾಲ 4.30 ಘಂಟೆಯವರೆಗೆ.** 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **26-07-2024 ರಂದು ಸಾಯಂಕಾಲ 5.00 ಘಂಟೆಗೆ.** 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಇ-ಪೋರ್ಟಲ್ ಮುಖಾಂತರ ಮಾಹಿತಿಯನ್ನು ಪಡೆಯಬಹುದು. 5) ಯಾವ ಕಾರಣವನ್ನು ಸಹ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. 6) ಟೆಂಡರ್ ಮೊತ್ತಕ್ಕೆ ಜಿ.ಎಸ್.ಟಿ. ಮೊತ್ತವನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ಸಹಿ/-
ಆಯುಕ್ತರು
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ವಾಸಾಸಂಇ/ಬೆಳಗಾವಿ/158/ಅಡ್ವರ್ಟೋರ್/2024-25

ವಿಶ್ವವಾಣಿ

ಸಂಪಾದಕೀಯ

ವೇತನ ಪರಿಷ್ಕರಣೆಯ ಸಂದಿಗ್ಧ

ರಾಜ್ಯ ಸರಕಾರಿ ನೌಕರರ ವೇತನ ಪರಿಷ್ಕರಣೆ ಕುರಿತ ಏಳನೇ ವೇತನ ಆಯೋಗದ ವರದಿಯನ್ನು ಜಾರಿಗೊಳಿಸುವ ವಿಚಾರದಲ್ಲಿ ಸಿದ್ದರಾಮಯ್ಯ ಸರಕಾರ ಸಂದಿಗ್ಧದಲ್ಲಿ ಸಿಲುಕಿದೆ. ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಆಯೋಗದ ವರದಿ ಬಗ್ಗೆ ಚರ್ಚಿಸಿ, ಅಂತಿಮವಾಗಿ ಇದರ ಜಾರಿ ನಿರ್ಧಾರವನ್ನು ಮುಖ್ಯಮಂತ್ರಿಯವರ ವಿವೇಚನೆಗೆ ಬಿಡಲಾಗಿದೆ. ಇಂದಲ್ಲ, ನಾಳೆ ಸರಕಾರ ವೇತನ ಪರಿಷ್ಕರಣೆ ಮಾಡಲೇಬೇಕಾಗಿದೆ. ಆದರೆ ಸದ್ಯ ಇದು ಜಾರಿಯಾದರೆ ಬೊಕ್ಕಸಕ್ಕೆ ವಾರ್ಷಿಕ 12 ಸಾವಿರ ಕೋಟಿ ರೂ.ಗಳಿಂದ 17 ಸಾವಿರ ರೂ. ಕೋಟಿ ರೂ. ತನಕ ಹೆಚ್ಚುವರಿ ಹೊರೆ ಬೀಳಲಿದೆ. ಐದು ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ ಸುಮಾರು 60,000 ಕೋಟಿ ರೂ. ಹೊಂದಿಸುವ ಅನಿವಾರ್ಯತೆಯಲ್ಲಿರುವ ಸರಕಾರ ಈಗಾಗಲೇ ಬೆಲೆ ಏರಿಕೆಯ ಮೊರೆ ಹೋಗಿದೆ. ಇದೀಗ ವೇತನ ಜಾರಿ ಪ್ರಸ್ತಾಪವನ್ನು ಒಪ್ಪಿಕೊಂಡರೆ, ನೌಕರರ ಸಂಬಳದ ಹಣ ಹೊಂದಿಸುವುದಕ್ಕಾಗಿಯೇ, ಸರಕಾರ ಬದಲಿ ಆದಾಯ ಮೂಲಗಳನ್ನು ಹುಡುಕಬೇಕಾಗಿದೆ. ಜೂನ್ ತಿಂಗಳೊಳಗೆ ವೇತನ ಪರಿಷ್ಕರಣೆಯಾಗದಿದ್ದಲ್ಲಿ ಮುಷ್ಕರ ಹೂಡುವುದು ಅನಿವಾರ್ಯ ಎಂದು ರಾಜ್ಯ ಸರಕಾರಿ ನೌಕರರ ಸಂಘಟನೆ ಈಗಾಗಲೇ ಎಚ್ಚರಿಸಿದೆ. ಈ ಕಾರಣದಿಂದ ಸರಕಾರ ಏರಿಕೆ ವಿಚಾರದಲ್ಲಿ ತೀರಾ ವಿಳಂಬ ಮಾಡಲು ಸಾಧ್ಯವಿಲ್ಲ. ಮಾಜಿ ಮುಖ್ಯ ಕಾರ್ಯದರ್ಶಿ ಕೆ. ಸುಧಾಕರ್ ರಾವ್ ನೇತೃತ್ವದ ಆಯೋಗ ಕಳೆದ ಮಾರ್ಚ್ 16 ರಂದು ಸಲ್ಲಿಸಿದ ವರದಿಯಲ್ಲಿ ಶೇ.27.5ರಷ್ಟು ವೇತನ ಹೆಚ್ಚಳಕ್ಕೆ ಶಿಫಾರಸು ಮಾಡಿದೆ. ಇದರ ಪ್ರಕಾರ ನೌಕರರ ಮೂಲ ವೇತನ ಶೇ.58.5 ಹೆಚ್ಚಳವಾಗಲಿದೆ. ಪ್ರಸ್ತುತ ಆರಂಭಿಕ ವೃಂದದ ನೌಕರರ ಕನಿಷ್ಠ ವೇತನ ತಿಂಗಳಿಗೆ 17 ಸಾವಿರ ರು. ಇದೆ. ಇದನ್ನು ಗರಿಷ್ಠ 27 ಸಾವಿರಕ್ಕೆ ಏರಿಸಲು ಶಿಫಾರಸು ಮಾಡಲಾಗಿದೆ. ಹಿರಿಯ ಶ್ರೇಣಿ ನೌಕರರ ಆರಂಭಿಕ ಕನಿಷ್ಠ ವೇತನ ಈಗ 1,04,600 ರೂ.ಗಳಿದ್ದು ಇದನ್ನು 1,67,200 ರು.ಗಳಿಗೆ ಏರಿಸಲು ಶಿಫಾರಸು ಮಾಡಲಾಗಿದೆ. ಪ್ರಸ್ತುತ ಕನಿಷ್ಠ ಮತ್ತು ಗರಿಷ್ಠ ವೇತನಗಳ ಅನುಪಾತ 1:8.86 ಇದ್ದು ಇದನ್ನು 1:8.93ಕ್ಕೆ ಹೆಚ್ಚಿಸಲು ಆಯೋಗ ಶಿಫಾರಸು ಮಾಡಿದೆ. ಎಲ್ಲ ಶಿಫಾರಸುಗಳು ಯಥಾವತ್ತಾಗಿ ಜಾರಿಯಾದರೆ 17,440.15 ರು. ಕೋಟಿ ಹೆಚ್ಚುವರಿ ಆರ್ಥಿಕ ಹೊರೆ ಭರಿಸಬೇಕಾಗುತ್ತದೆ. ಸರಕಾರ ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣದ ಜತೆ ಮಿತವ್ಯಯಕ್ಕೂ ಒತ್ತು ನೀಡಬೇಕಾಗಿದೆ. ವಿವಿಧ ಇಲಾಖೆಗಳ ದುಂದು ವೆಚ್ಚಕ್ಕೆ ಕಡಿವಾಣ ಹಾಕಬೇಕಾಗಿದೆ. ವೇತನ ಹೆಚ್ಚಳದ ಜತೆ ನೌಕರರ ಕೆಲಸದ ಮೌಲ್ಯವೂ ಹೆಚ್ಚುವಂತೆ ಸರಕಾರ ನೋಡಿಕೊಳ್ಳಬೇಕಾಗಿದೆ.

ಸೊಂಪಾದಕೀಯ

ಕಿತ್ಕೊಂಡ್ರಲ್ಲ, ಈವಾಗ?

ನಟ ದರ್ಶನ್ ಅವರ ಮಾತಿನ ಅವತಾರಗಳನ್ನು, ದುರಹಂಕಾರವನ್ನು ಅವರ ಅಭಿಮಾನಿ ಮತ್ತು ಗ್ಯಾಂಗ್‌ನ ಬಳಗವನ್ನು ಬಿಟ್ಟರೆ ಚೆನ್ನಾಗಿ ನೋಡಿದವರು ಎಂದರೆ ಅದು ಸಿನಿಮಾ ಪತ್ರಕರ್ತರು ಎನ್ನಬಹುದು.

ಅದೆಷ್ಟೋ ಪತ್ರಿಕಾಗೋಷ್ಠಿಗಳಲ್ಲಿ ದರ್ಶನ್ ಮಾತನಾಡುತ್ತಾ ತಮ್ಮ ತಲೆಯ ಮೇಲಿನ ಕೂದಲನ್ನು ತೋರಿಸಿ, ಕೂದಲನ್ನು ಕಿತ್ತುಹಾಕಿ ಯಾರು ನಂದ್ ಒಂದು ಇದೂ ಕಿತ್ತುಕೊಳ್ಳಕ್ಕಾಗಲ್ಲ ಅಂತ ಸಾವಿರಾರು ಬಾರಿ ಟಾಮ್ ಟಾಮ್ ಹೊಡೆದುಕೊಂಡಿದ್ದರು. ಅವರ ಅದೃಷ್ಟ ಕೂಡ ಬಹಳ ಸಲ ಚೆನ್ನಾಗಿಯೇ ಇತ್ತು. ಏನೇ ಕಿರಿಕ್ ಕೆಲಸ ಮಾಡಿದರೂ ಅದರಿಂದ ದರ್ಶನ್ ಸುಲಭವಾಗಿ ಪಾರಾಗುತ್ತಿದ್ದರು. ಆದರೆ ಈ ಬಾರಿ ಗ್ರಹಚಾರ ಉಲ್ಟಾ ಹೊಡೆದಿದೆ. ಕ್ರಾಂತಿ ಸಿನಿಮಾದಲ್ಲಿ ಕರ್ಮ ಬಿಟ್ರು ಕ್ರಾಂತಿ ಬಿಡಲ್ಲ ಅನ್ನೋ ಡೈಲಾಗ್ ಹೊಡ್ದಿದ್ರು ದರ್ಶನ್. ಆದರೆ ಈಗ ಕ್ರಾಂತಿ ಬಿಟ್ರು, ಕರ್ಮ ಕ್ರಾಂತಿನ ಬಿಡ್ಲಿಲ್ಲ ಅನ್ನೋ ಥರ ಆಗಿದೆ. ಯಾಕಂದ್ರೆ ಇಷ್ಟು ದಿನ ತಮ್ಮ ಕೂದಲು ತೋರಿಸಿ ಯಾರು ನಂದು ಇದನ್ನೂ ಕಿತ್ತುಕೊಳ್ಳಕಾಗಲ್ಲ ಅಂತ ಹೇಳುತ್ತಿದ್ದ ದರ್ಶನ್ ಅವರಿಗೆ ಪೊಲೀಸ್ ಸ್ಟೇಷನ್ ಅಲ್ಲಿ ಸರಿಯಾದ ಉತ್ತರ ಸಿಕ್ಕಿದೆ. ಪೊಲೀಸರು ಅವರ ವಿಗ್ ತೆಗೆಸಿ ಅದರೊಳಗಿರುವ ತಲೆಯ ಮೇಲಿನ ಕೂದಲುಗಳನ್ನು ಮೆಡಿಕಲ್ ಟೆಸ್ಟ್‌ಗೆ ಅನ್ನೋ ಕಾರಣಕೊಟ್ಟು ಕಿತ್ತುಕೊಂಡಿದ್ದಾರೆ. ಅಲ್ಲಿಗೆ ನಂದ್ಯಾರೂ ಒಂದ್ ಇದೂ ಕಿತ್ಕೋಳಕಾಗಲ್ಲ ಎನ್ನುತ್ತಿದ್ದ ದರ್ಶನ್ ದುರಹಂಕಾರಕ್ಕೆ ನೋಡಪ್ಪ ಕಿತ್ಕೊಂಡಿದ್ದೀವಿ ಅಂತ ಪೊಲೀಸರು ಫುಲ್ ಸ್ಟಾಪ್ ಇಟ್ಟಿದ್ದಾರೆ. ಇದರಿಂದಲಾದರೂ ದರ್ಶನ್ ಅವರ ತಲೆಯ ಮೇಲೆ ಇದ್ದ ದರ್ಪ ಕೂದಲುಗಳ ಬಗ್ಗೆ ಇದ್ದ ದುರಹಂಕಾರ ಕಡಿಮೆ ಆಗಬಹುದೇನೋ. ಇನ್ನು ದರ್ಶನ್ ಜೊತೆ ಪೊಲೀಸ್ ಕಸ್ಟಡಿಯಲ್ಲಿದ್ದ ಪವಿತ್ರ ಗೌಡ ಈಗ ಜೈಲು ಪಾಲಾಗಿದ್ದಾರೆ. ದರ್ಶನ್ ಕೂಡ ಇಂದು ಅದೇ ದಾರಿ ಹಿಡಿಯಬಹುದು. ದರ್ಶನ್ ಪರಪ್ಪನ ಅಗ್ರಹಾರಕ್ಕೆ ಹೋಗೋದು ಎರಡು ದಿನ ತಡವಾಗಿದೆ. ಆದರೆ ಪವಿತ್ರಾ, ಈಗಾಗಲೇ ಜೈಲಿನಲ್ಲಿ ಇದ್ದಾರೆ. ಹಾಗಾಗಿ ಸದ್ಯಕ್ಕೆ ಅವಳಲ್ಲಿ ಇವನಿಲ್ಲಿ ಎನ್ನುವ ಶ್ ಚಿತ್ರದ ಹಾಡಿನ ಪರಿಸ್ಥಿತಿ ಇವರಿಬ್ಬರದು. ನ್ಯಾಯಾಂಗ ಬಂಧನಕ್ಕೆ ಒಳಗಾದ ಮೇಲೆ ದರ್ಶನ್‌ಗೆ ಜಾಮೀನು ಸಿಗುತ್ತೋ ಇಲ್ವೋ ಅದು ಬೇರೆ ವಿಷಯ. ಆದರೆ ನಂದೇ ದುನಿಯಾ ಅನ್ನೋ ಥರ ಮೆರೆಯುತ್ತಿದ್ದ ದರ್ಶನ್‌ಗೆ ಸದ್ಯಕ್ಕೆ ಪೊಲೀಸರಿಂದ ಜಾಮೂನಂತೂ ಸಿಕ್ಕಿದೆ.

ಸಂಪಾದಕರ ಸದ್ಯಶೋಧನೆ

ಆತ್ಮಕತೆಯ ಶೀರ್ಷಿಕೆ

'ನೀವು ನಲವತ್ತೆರಡು ವರ್ಷಗಳ ಕಾಲ ದೈನಂದಿನ ಅಂಕಣ ಬರೆದಿರಿ. ಆದರೆ ನಿಮ್ಮ ಆತ್ಮಕತೆಯನ್ನು ಬರೆಯಲಿಲ್ಲ ಏಕೆ?' ಎಂದು ಸಹೋದ್ಯೋಗಿಯೊಬ್ಬ ಖ್ಯಾತ ಪತ್ರಕರ್ತ ಪೊತೆನ್ ಜೋಸೆಫ್ ಅವರನ್ನು ಕೇಳಿದ. 'ನಲವತ್ತೆರಡು ವರ್ಷ ಬರೆದಿದ್ದೇ ಆತ್ಮಕತೆಯಲ್ಲವಾ? ಅವೆಲ್ಲವೂ ನನ್ನ ಗ್ರಹಿಕೆ, ಅನಿಸಿಕೆಗಳೇ ಅಲ್ಲವಾ? ಇನ್ನೇನು ಬರೆಯಬೇಕಿತ್ತು?' ಎಂದು ಜೋಸೆಫ್ ಉತ್ತರಿಸಿದರು. 'ಆದರೂ ನೀವು ನಿಮ್ಮ ಖಾಸಗಿ ವೈಯಕ್ತಿಕ ವಿಚಾರಗಳನ್ನು ಬರೆಯಬೇಕಿತ್ತು' ಎಂದು ಸಹೋದ್ಯೋಗಿ ಹೇಳಿದಾಗ, 'ನನ್ನ ಆತ್ಮಕತೆ ಒಪ್ಪುವ ಶೀರ್ಷಿಕೆ ಹೊಳೆದ ದಿನ ಬರೆಯಲಾರಂಭಿಸುವೆ' ಎಂದಿದ್ದರು. ಕೊನೆಗೂ ಪೊತೆನ್ ಜೋಸೆಫ್ ಆತ್ಮಕತೆಯಂತೂ ಬರೆಯಲಿಲ್ಲ. ಅಂದರೆ ಅವರಿಗೆ ತಮ್ಮ ಆತ್ಮಕತೆಗೆ ಒಪ್ಪುವ ಶೀರ್ಷಿಕೆ ಹೊಳೆಯಲಿಲ್ಲವಾ? ಗೊತ್ತಿಲ್ಲ. ಕೆಲವರು ತಮ್ಮ ಬದುಕಿನ ಕತೆಯನ್ನು ದಾಖಲಿಸುತ್ತಾರೆ. ಆದರೆ ಅದಕ್ಕೆ ಯಾವ ಶೀರ್ಷಿಕೆ ನೀಡಬೇಕೆಂದು ಬಹಳ ಯೋಚಿಸುತ್ತಾರೆ, ಚಡಪಡಿಸುತ್ತಾರೆ, ಪ್ರಸಿದ್ಧ ಕುಂಗ್‌ಫು, ಸಿನಿಮಾ ನಟ ಜಾಕಿಚಾನ್ ಆತ್ಮಕತೆಯನ್ನು ಬರೆದ ಬಳಿಕ ಹದಿನೇಳು ಮಂದಿಗೆ ಅದನ್ನು ಓದಿ, ಸೂಕ್ತ ಟೈಟಲ್ ಸೂಚಿಸುವಂತೆ ಕೇಳಿಕೊಂಡಿದ್ದ. ಅವರು ಐವತ್ತಕ್ಕೂ ಹೆಚ್ಚು ಟೈಟಲ್‌ಗಳನ್ನು ಸೂಚಿಸಿದ್ದರು. ಅವ್ಯಾವವೂ ಜಾಕಿ ಚಾನ್‌ಗೆ ಇಷ್ಟವಾಗಲಿಲ್ಲ. ಕೊನೆಗೆ 'I Am Jackie Chan: My Life in Action' ಎಂದು ಹೆಸರಿಟ್ಟ. ಇಂಥದೇ ಅನುಭವ ಬೆಂಜಮಿನ್ ಫ್ರಾಂಕ್ಲಿನ್‌ಗೂ ಆಯಿತು. ಕೊನೆಗೆ ಆತ, The Autobiography of Benjamin Franklin ಎಂದು ಹೆಸರಿಟ್ಟ. ನನಗೆ ಇಷ್ಟವಾದ ಎರಡು ಶೀರ್ಷಿಕೆಗಳೆಂದರೆ, ಮಹಾತ್ಮ ಗಾಂಧಿ (The story of My experiments with Truth) ಹಾಗೂ ನೆಲ್ಸನ್ ಮಂಡೇಲಾ (Long walk to Freedom) ಅವರ ಆತ್ಮಕತೆಗಳದ್ದು. ಇತ್ತೀಚೆಗೆ ಅಮೆರಿಕದ ಸ್ಟ್ಯಾಂಡಪ್ ಕಮಿಡಿಯನ್, ನಟಿ, ಬರಹಗಾರ್ತಿ ಸಾರಾ ಸಿಲ್ವರ್‌ಮನ್ ಆತ್ಮಕತೆಯನ್ನು ಓದುಗರೊಬ್ಬರು ಕಳಿಸಿಕೊಟ್ಟಿದ್ದರು. ಟೈಟಲ್ ನೋಡಿ ನಗು ಬಂತು, "The Bedwetter: Stories of Courage, Redemption and Pee' ಎಂದಿತ್ತು. ಒಬ್ಬ ಕಾಮಿಡಿಯನ್ ಆಗಿ ಶೀರ್ಷಿಕೆಯಲ್ಲಿ ನಗು ಮೂಡಿಸುವ ಆಕೆಯ ಆಶಯ ಈಡೇರಿತ್ತು. ಪತ್ರಕರ್ತ ಎಜೆ ಜೇಕಬ್ಸ್ ತಮ್ಮ ಆತ್ಮಕತೆಗೆ "Born Bald, Grew Hair, Bald Again' ಎಂದು ಹೆಸರಿಟ್ಟಿದ್ದು ತಮಾಷೆಯಾಗಿತ್ತು. ಆತ್ಮಕತೆ ಚೆನ್ನಾಗಿಲ್ಲದಿದ್ದರೂ, ಟೈಟಲ್ ಮಾತ್ರ ಚೆನ್ನಾಗಿದ್ದುದು ಮಾಜಿ ರಾಷ್ಟ್ರಪತಿ ದಿವಂಗತ ಬಿ.ಡಿ.ಜತ್ತಿ ಅವರ ಆತ್ಮಕತೆ 'ನನಗೆ ನಾನೇ ಮಾದರಿ' ಎ ವರ್ಲ್ಡ್ ಮೇಡ್ ಆಫ್ ಬ್ಲಡ್, ಫೈರ್, ಎ ಡೆಡ್ ಇನ್ ಬೆಲ್ಮಾಂಟ್, ದಿ ಪರಫೆಕ್ಟ್ ಸ್ಟಾರ್ಮ್ ಮುಂತಾದ ಪುಸ್ತಕಗಳನ್ನು ಬರೆದ ಅಮೆರಿಕದ ಪತ್ರಕರ್ತ ಸೆಬಾಸ್ಟಿಯನ್ ಜಂಗರ್ ತನ್ನ ಆತ್ಮಕತೆಗೆ ನೀಡಿದ ಶೀರ್ಷಿಕೆ, 'I asked. They Answered. I Wrote' ಪತ್ರಕರ್ತ ವಿನೋದ ಮೆಹತಾ ಎರಡು ಸಂಪುಟಗಳಲ್ಲಿ ತಮ್ಮ ಆತ್ಮಕತೆ ಬರೆದುಕೊಂಡಿದ್ದು ಗೊತ್ತಿತ್ತು. ಆದರೆ ಹತ್ತು ಸಂಪುಟಗಳಲ್ಲಿ ಆತ್ಮಕತೆ ಬರೆದವರ ಬಗ್ಗೆ ಗೊತ್ತಿರಲ್ಲಿಲ್ಲ. ಇತ್ತೀಚೆಗೆ ಲಂಡನ್‌ನ 'ದಿ ಗಾರ್ಡಿಯನ್' ಪತ್ರಿಕೆ ಆ ಬಗ್ಗೆ ಲೇಖನದಲ್ಲಿ ಒಂದೆಡೆ ಪ್ರಸ್ತಾಪಿಸಿತ್ತು. ಆ ಮಹಾಶಯನ ಹೆಸರು ಕಾಂಪ್ಟನ್ ಮೆಕೆಂಜಿ.

ಸಂವಿಧಾನವನ್ನು ಪಾತಾಳಕ್ಕೆ ತಳ್ಳಿದ್ದ ಇಂದಿರಾ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಲೋಕಸಭೆ ಚುನಾವಣಾ ಸಂದರ್ಭದಲ್ಲಿ ಸಂವಿಧಾನ ಬದಲಾವಣೆಯ ಬಗ್ಗೆ ಪುಂಖಾನು ಪುಂಖವಾಗಿ ಸುಳ್ಳುಗಳನ್ನು ಹೇಳಿ ಮೋದಿಯವರ ವಿರುದ್ಧ ಅಪಪ್ರಚಾರ ಮಾಡಿದ ಕಾಂಗ್ರೆಸ್ಸಿಗರು ಇಂದಿರಾ ಗಾಂಧಿಯ ತುರ್ತು ಪರಿಸ್ಥಿತಿಯ ಕರಾಳದಿನವನ್ನು ನೆನಪಿಸಿಕೊಂಡು ಆತ್ಮಾವಲೋಕನ ಮಾಡಿಕೊಳ್ಳಬೇಕು. ಸರ್ವಾಧಿಕಾರಿ ಇಂದಿರಾಗಾಂಧಿ 1971ರ ಚುನಾವಣೆಯಲ್ಲಿ ರಾಯ್ ಬರೇಲಿ ಕ್ಷೇತ್ರದಿಂದ ಸ್ಪರ್ಧಿಸಿ, ತಮ್ಮ ಎದುರಾಳಿ ರಾಜ್ ನಾರಾಯಣ್ ವಿರುದ್ಧ ಜಯಗಳಿಸಿದ್ದರು. ಈ ಚುನಾವಣೆಯಲ್ಲಿ ತಮ್ಮ ಕ್ಷೇತ್ರದಲ್ಲಿ ಇಂದಿರಾಗಾಂಧಿಯವರ ಮೇಲೆ ಹಣದ ಹೊಳೆಹರಿಸಿ ಹಾಗೂ ಸರಕಾರಿ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು ಚುನಾವಣೆ ಗೆದ್ದಿರುವ ಆರೋಪವಿತ್ತು. ರಾಜ್ ನಾರಾಯಣ್ ಅಲಹಾಬಾದ್ ನ್ಯಾಯಾಲಯದಲ್ಲಿ ಇಂದಿರಾಗಾಂಧಿ ವಿರುದ್ಧ ಮೊಕದ್ದಮೆ ದಾಖಲಿಸಿದ್ದರು, ಸುಮಾರು ನಾಲ್ಕು ವರ್ಷಗಳ ವಿಚಾರಣೆಯ ನಂತರ ಇಂದಿರಾಗಾಂಧಿ ಚುನಾವಣೆಯಲ್ಲಿ ಅಕ್ರಮವೆಸಗಿರುವುದು ಸಾಬೀತಾಗಿ, ನ್ಯಾಯಮೂರ್ತಿಗಳು ಇಂದಿರಾಗಾಂಧಿ ವಿರುದ್ಧ ತೀರ್ಪು ನೀಡಿದ್ದರು. ತೀರ್ಪಿನಲ್ಲಿ 20 ದಿನಗಳಲ್ಲಿ ಇಂದಿರಾಗಾಂಧಿ ಪ್ರಧಾನಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕೆಂದು ಹೇಳಲಾಗಲಿತ್ತು. ಆದರೆ ಸ್ವಾರ್ಥ ರಾಜಕಾರಣ ಮಾಡಿ ಅಧಿಕಾರ ಅನುಭವಿಸಿರುವ ನೆಹರು ಕುಟುಂಬದ ಕುಡಿಗೆ ಅಧಿಕಾರವಿಲ್ಲದೆ ಇರಲು ಸಾಧ್ಯವಿರಲಿಲ್ಲ, ಸರ್ವಾಧಿಕಾರಿಯಾಗಿದ್ದ ಇಂದಿರಾಗಾಂಧಿ, ತನ್ನ ಸ್ಥಾನವನ್ನು ಉಳಿಸಿಕೊಳ್ಳಬೇಕೆಂಬ ಹಠಕ್ಕೆ ಬಿದ್ದಿದ್ದರು. ಇಡೀ ದೇಶವನ್ನೇ ತನ್ನ ಕುಟುಂಬದವರು ಕಟ್ಟಿದರೆಂಬ ಭ್ರಮೆಯಲ್ಲಿದ್ದ ಇಂದಿರಾಗಾಂಧಿ ಭಾರತದ ಸಂವಿಧಾನವನ್ನೇ ಅಲುಗಾಡಿಸುವ ನಿರ್ಧಾರಕ್ಕೆ ಬಂದರು. ನ್ಯಾಯಾಲಯ ನೀಡಿದ್ದಂತಹ 20 ದಿನಗಳ ಗಡುವನ್ನೇ ಸದಾವಕಾಶ ಮಾಡಿಕೊಂಡಂತಹ ಇಂದಿರಾಗಾಂಧಿ ತನ್ನ ಸ್ವಾರ್ಥಕ್ಕಾಗಿ ಸಂವಿಧಾನವನ್ನೇ ತಿದ್ದುಪಡಿ ಮಾಡಿಬಿಟ್ಟರು. ತಿದ್ದುಪಡಿಯ ಮೂಲಕ ನ್ಯಾಯಾಂಗ ವ್ಯವಸ್ಥೆಯು ಪ್ರಧಾನಮಂತ್ರಿಗಳ ಪದವಿಯ ಸತ್ಯಾಸತ್ಯತೆಯನ್ನು ಪರಿಷ್ಕರಿಸುವ ಹಕ್ಕನ್ನೇ ಕಿತ್ತುಕೊಂಡರು. ಬಾಬಾಸಾಹೇಬರ ಸಂವಿಧಾನದ ಭಾರತದ ನ್ಯಾಯಾಂಗ ವ್ಯವಸ್ಥೆಗೆ ಇಂದಿರಾಗಾಂಧಿ ದೊಡ್ಡ ಅವಮಾನ ಮಾಡಿದ್ದರು. ಇಂದಿರಾಗಾಂಧಿ ಮಾಡಿದ ಸಂವಿಧಾನದ ತಿದ್ದುಪಡಿಯನ್ನು ಪರಿಶೀಲಿಸಿದ ಸರ್ವೋಚ್ಚ ನ್ಯಾಯಾಲಯ, ಈ ತಿದ್ದುಪಡಿಯ ಮೂಲಕ ಇಂದಿರಾಗಾಂಧಿ ಭಾರತದ ಸಂವಿಧಾನದ ಬುಡವನ್ನೇ ಅಲುಗಾಡಿಸಿದ್ದಾರೆಂದು ಹೇಳಲಾಗಿತ್ತು.

ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟಕ್ಕಿಳಿದ ವಿದ್ಯಾರ್ಥಿಗಳು, ಪತ್ರಕರ್ತರು, ವಿರೋಧ ಪಕ್ಷದ ನಾಯಕರು, ಕೈಗಾರಿಕೋದ್ಯಮಿಗಳನ್ನು ನಿರ್ದಾಕ್ಷಿಣ್ಯವಾಗಿ ಜೈಲಿಗಟ್ಟಿದ ಅಪಕೀರ್ತಿ ಇಂದಿರಾಗಾಂಧಿಯವರಿಗೆ ಸಲ್ಲಬೇಕು. ಬಾಬಾಸಾಹೇಬರು ರಚಿಸಿದ ಸಂವಿಧಾನದ ಪ್ರಮುಖ ಆಶಯವಾದ ಮೂಲಭೂತ ಹಕ್ಕುಗಳಿಗೆ ತಿದ್ದುಪಡಿ ಮಾಡಿ ವಾಕ್ ಸ್ವಾತಂತ್ರ್ಯವನ್ನು ಕಸಿಯಲಾಯಿತು. ಇಂದಿರಾಗಾಂಧಿಯ ಮಗ ಸಂಜಯ್ ಗಾಂಧಿ ರಾಜ್ಯದ ಮುಖ್ಯಮಂತ್ರಿಗಳಿಗೆ ನೋಟೀಸ್ ನೀಡಿ ಇಂದಿರಾಗಾಂಧಿಯವರ ಸರ್ವಾಧಿಕಾರದ ವಿರುದ್ಧ ಹೋರಾಟ ಮಾಡುವವರನ್ನು ಬಂಧಿಸುವ ಪಟ್ಟಿಯನ್ನು ತಯಾರು ಮಾಡಿದ್ದರು. ಜೂನ್ 25 ರ ಮಧ್ಯರಾತ್ರಿ ಇಂದಿರಾಗಾಂಧಿ ರಾಷ್ಟ್ರಪತಿಯನ್ನು ಭೇಟಿ ಮಾಡಿ ದೇಶದಲ್ಲಿ ತುರ್ತುಪರಿಸ್ಥಿತಿ ಹೇರಿದರು. ಪ್ರಜಾಪ್ರಭುತ್ವದ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುವ ರಾಹುಲ್ ಗಾಂಧಿ, ತನ್ನ ಅಜ್ಜಿ ಅಂದು ಪ್ರಜಾಪ್ರಭುತ್ವವನ್ನೇ ಕೊಲೆ ಮಾಡಿರುವುದನ್ನು ನೆನಪಿಸಿಕೊಳ್ಳಬೇಕು. ತುರ್ತು ಪರಿಸ್ಥಿಯ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಜಯಪ್ರಕಾಶ್ ನಾರಾಯಣ್, ಅಟಲ್ ಬಿಹಾರಿ ವಾಜಪೇಯಿ, ಮೊರಾರ್ಜಿ ದೇಸಾಯಿ, ಎಲ್.ಕೆ.ಅಡ್ವಾಣಿ, ಎಸ್ ಎನ್ ಮಿಶ್ರಾ ಅವರನ್ನು ಬಂಧಿಸಿ ಜೈಲಿನಲ್ಲಿರಿಸಲಾಗಿತ್ತು. ಜೂನ್ ತಿಂಗಳಲ್ಲಿ ದೆಹಲಿಯ ತಾಪಮಾನ ಸುಮಾರು 42 ಡಿಗ್ರಿಗೆ ತಲುಪುತ್ತದೆ, ಅಂತಹ ಬಿಸಿಲಿನಲ್ಲಿ ಇಂದಿರಾಗಾಂಧಿಯ ವಿರುದ್ಧ ಹೋರಾಟ ಮಾಡಿದವರನ್ನು ಜೈಲಿನಲ್ಲಿ ಕುರಿಗಳಂತೆ ತುಂಬಲಾಗಿತ್ತು. ಇಂದಿರಾಗಾಂಧಿಯವರ ಸರ್ವಾಧಿಕಾರದ ಅಟ್ಟಹಾಸ ಎಷ್ಟಿತ್ತೆಂದರೆ. 1273 ಜನರನ್ನು ಇರಿಸಬಹುದಾದ ಜೈಲುಗಳಲ್ಲಿ 3500 ರಿಂದ 4200 ಜನರನ್ನು ಇರಿಸಲಾಗಿತ್ತು. ತುರ್ತು ಪರಿಸ್ಥಿಯ ಸಂದರ್ಭದಲ್ಲಿ ದೇಶದಾದ್ಯಂತ ಸುಮಾರು 1,10,000 ಜನರನ್ನು ಮಿಸಾ ಕಾಯ್ದೆಯಡಿಯಲ್ಲಿ ಬಂಧಿಸಲಾಗಿತ್ತು.

ಮೋದಿಯವರ ಆಡಳಿತದಲ್ಲಿ ಪತ್ರಿಕಾ ಸ್ವಾತಂತ್ರ್ಯವೇ ಇಲ್ಲವೆಂದು ಬೊಗಳೆ ಬಿಡುವ ರಾಹುಲ್ ಗಾಂಧಿ, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿರುವ ವಿಷಯ ಮರುದಿನ ಪತ್ರಿಕೆಯಲ್ಲಿ ಪ್ರಕಟವಾಗಬಾರದೆಂಬ ಕಾರಣಕ್ಕೆ ಪ್ರತಿಷ್ಠಿತ ಪತ್ರಿಕೆಗಳ ಕಚೇರಿಗಳಿದ್ದ ದೆಹಲಿಯ 'ಬಹಾದ್ದೂರ್ ಶಾ ಜಫರ್ ಮಾರ್ಗ'ದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿತ್ತು.ಪತ್ರಿಕೆಗಳಿಗೆ ಸೆನ್ಸಾರ್ ನಿಯಮಗಳನ್ನು ಹಾಕಲಾಯಿತು, ಪತ್ರಿಕೆಗಳು ಪ್ರಕಟಿಸಬೇಕಿರುವ ಸುದ್ದಿಗಳನ್ನು ಸರಕಾರಿ ಅಧಿಕಾರಿಗಳು ನೋಡಿ ಒಪ್ಪಿಗೆ ಸೂಚಿಸಬೇಕಿತ್ತು. ಒಪ್ಪಿಗೆ ಸಿಕ್ಕ ನಂತರವಷ್ಟೇ ಸುದ್ದಿಯನ್ನು ಪ್ರಕಟಿಸಬೇಕಿತ್ತು, ಸಂಪಾದಕರು ಪತ್ರಿಕೆಗಳ ವಿಷಯಗಳನ್ನು ಅಂತಿಮಗೊಳಿಸಿದ ನಂತರ ಮಧ್ಯರಾತ್ರಿ ಅಧಿಕಾರಿಗಳನ್ನು ಭೇಟಿ ಮಾಡುತ್ತಿದ್ದರು. ಅಧಿಕಾರಿಗಳು ಒಪ್ಪಿಗೆ ಸೂಚಿಸಿದ ನಂತರ ತಮ್ಮ ಕಚೇರಿಗೆ ವಾಪಾಸ್ ಬಂದು ಪುಟಗಳನ್ನು ಅಂತಿಮಗೊಳಿಸಿ ಮುದ್ರಣಕ್ಕೆ ಕಳುಹಿಸಲಾಗುತ್ತಿತ್ತು. ಕೇಂದ್ರ ಗೃಹ ಇಲಾಖೆಯು ಸುತ್ತೋಲೆಯೊಂದನ್ನು ಹೊರಡಿಸಿತ್ತು, ಅದರನ್ವಯ ಪತ್ರಿಕೆಗಳು ಇಂದಿರಾಗಾಂಧಿ ಹೇರಿದ್ದ ಸಂವಿಧಾನ ವಿರೋಧಿ ತುರ್ತುಪರಿಸ್ಥಿಯ ವಿರುದ್ಧ ಹೋರಾಟ ಮಾಡಿ ಬಂಧನಕ್ಕೊಳಗಾಗಿರುವವರ ಹೆಸರುಗಳನ್ನು ಪ್ರಕಟಿಸುವಂತಿರಲಿಲ್ಲ. ಸಂವಿಧಾನದ ಪ್ರತಿಯನ್ನು ಕೈಲಿ ಹಿಡಿದು ಪತ್ರಿಕಾಗೋಷ್ಠಿ ಮಾಡುವ ರಾಹುಲ್ ಗಾಂಧಿ, ಅದೇ ಸಂವಿಧಾನವನ್ನು ಬದಲಾಯಿಸಿ ಪ್ರಜಾಪ್ರಭುತ್ವವನ್ನು ಕೊಲೆ ಮಾಡಿದ ಇಂದಿರಾಗಾಂಧಿಯ ಪಟವನ್ನು ಮತ್ತೊಂದು ಕೈಲಿ ಹಿಡಿಯಬೇಕು.

ಪತ್ರಿಕೆಗಳು ಸಂಸತ್ತಿನೊಳಗೆ ನಡೆಯುವ ಕಾರ್ಯಕಲಾಪಗಳ ಬಗ್ಗೆ ವರದಿ ಮಾಡುವಂತಿರಲಿಲ್ಲ, ಸಂಸತ್ತಿನೊಳಗೆ ಪತ್ರಕರ್ತರಿಗೆ ನಿಷೇಧ ಹೇರಲಾಗಿತ್ತು. ನ್ಯಾಯಾಲಯದಲ್ಲಿ ಇಂದಿರಾಗಾಂಧಿಯವರ ವಿಚಾರಣೆ ನಡೆಯುವುದನ್ನೂ ಪತ್ರಿಕೆಗಳು ವರದಿ ಮಾಡುವಂತಿರಲಿಲ್ಲ, ಪತ್ರಿಕಾ ಸ್ವಾತಂತ್ರ್ಯದ ನೆಪದಲ್ಲಿ ಇಂದಿರಾಗಾಂಧಿಯ ವಿರುದ್ಧ ಪತ್ರಿಕೆಗಳು ದಾಳಿ ನಡೆಸುತ್ತಿವೆಯೆಂದು ಆಕೆ ಹೇಳಿದ್ದರು. ಇಂದಿರಾಗಾಂಧಿಯ ಸರ್ವಾಧಿಕಾರದ ಪರಿಣಾಮ ದೇವ್ ಕಾಂತ್ ಬರೂಹ 'ಇಂದಿರಾ ಈಸ್ ಇಂಡಿಯಾ, ಇಂಡಿಯಾ ಈಸ್ ಇಂದಿರಾ' ಎಂದು ಹೇಳಿದ್ದರು. ಬಾಬಾಸಾಹೇಬರ ಸಂವಿಧಾನದ ಮೂಲಭೂತ ಹಕ್ಕುಗಳಿಗೆ ಧಕ್ಕೆ ತಂದಂತಹ ಇಂದಿರಾಗಾಂಧಿ ಮೂಲಭೂತ ಹಕ್ಕುಗಳ ವಿಚಾರದಲ್ಲಿ ದೇಶದ ನಾಗರೀಕರು ನ್ಯಾಯಾಲಯದ ಮೆಟ್ಟಿಲನ್ನು ಏರುವ ಹಾಗಿಲ್ಲವೆಂಬ ತಿದ್ದುಪಡಿಯನ್ನು ತಂದಿದ್ದರು. ಭಾರತದ ಇತಿಹಾಸದಲ್ಲಿ ಇಂದಿರಾಗಾಂಧಿ ಮಗ ಸಂಜಯ್ ಗಾಂಧಿ ಮಾಡಿರುವ ಮಾನವ ಹಕ್ಕುಗಳ ಉಲ್ಲಂಘನೆಯನ್ನು ಬಹುಷಃ ಯಾರೂ ಸಹ ಮಾಡಿರಲಿಕ್ಕಿಲ್ಲ, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸಂಜಯ್ ಗಾಂಧಿ ಜನಸಂಖ್ಯಾ ನಿಯಂತ್ರಣೆ ಹೆಸರಿನಲ್ಲಿ ಸಿಕ್ಕ ಸಿಕ್ಕವರನ್ನು ಕರೆತಂದು ಬಲವಂತವಾಗಿ ಶಸ್ತ್ರ ಚಿಕಿತ್ಸೆ ಮಾಡಿಸುತ್ತಿದ್ದರು. ರಾಜ್ಯಗಳ ಮುಖ್ಯಮಂತ್ರಿಗಳಿಗೆ ಕರೆ ಮಾಡಿ ತಮ್ಮ ತಮ್ಮ ರಾಜ್ಯಗಳಲ್ಲಿ ಜನಸಂಖ್ಯಾ ನಿಯಂತ್ರಣ ಶಸ್ತ್ರ ಚಿಕಿತ್ಸೆಯನ್ನು ಬಲವಂತವಾಗಿ ಮಾಡಿಸಬೇಕೆಂದು ಹೇಳಿದ್ದರು. ಒಂದು ಸಮುದಾಯವನ್ನು ಗುರಿಯಾಗಿಸಿಕೊಂಡು ಸಿಕ್ಕ ಸಿಕ್ಕ ಊರುಗಳಲ್ಲಿ ಬಲವಂತವಾಗಿ ಜನಸಂಖ್ಯಾ ನಿಯಂತ್ರಣ ಶಸ್ತ್ರಚಿಕಿತ್ಸೆಯನ್ನು ಮಾಡಿಸಲಾಗಿತ್ತು. ವಿಪರ್ಯಾಸವೆಂದರೆ ಇಂದು ಆ ಸಮುದಾಯ ಸಾಮೂಹಿಕವಾಗಿ ಕಾಂಗ್ರೆಸ್ ಪಕ್ಷಕ್ಕೆ ದೇಶದೆಲ್ಲೆಡೆ ಮತ ಹಾಕುತ್ತಿದೆ. ಸಂಜಯ್ ಗಾಂಧಿಯ ಅಟ್ಟಹಾಸ ಇಷ್ಟಕ್ಕೆ ನಿಲ್ಲಲಿಲ್ಲ, ದೆಹಲಿಯ 'ತುರ್ಕ್ ಮೆನ್ ಗೇಟ್' ಬಡವರು ಹೆಚ್ಚಿರುವ ಪ್ರದೇಶವಾಗಿತ್ತು, ಆ ಪ್ರದೇಶ ಕೊಳಗೇರಿಯ ರೀತಿಯಲ್ಲಿದ್ದು ದೆಹಲಿಯ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆಯೆಂದು ಹೇಳಿ 'ಬುಲ್‌ಡೋಜರ್' ಮೂಲಕ ಇಡೀ ಪ್ರದೇಶವನ್ನೇ ನೆಲಸಮಗೊಳಿಸಲು ಆದೇಶಿಸಿದ್ದರು. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಕ್ರಿಮಿನಲ್‌ಗಳ ಅಕ್ರಮ ಮನೆಗಳಿಗೆ ಬುಲ್‌ಡೋಜರ್ ನುಗ್ಗಿಸಿದರೆ ಮೂಲಭೂತ ಹಕ್ಕುಗಳ ಉಲ್ಲಂಘನೆಯೆಂದು ಸುಳ್ಳು ಹೇಳುವ ರಾಹುಲ್ ಗಾಂಧಿ ತನ್ನ ಚಿಕ್ಕಪ್ಪ ಬಡವರ ಮನೆಗಳಿಗೆ ಅಂದು ಬುಲ್‌ಡೋಜರ್ ನುಗ್ಗಿಸಿದ್ದ ವಿಷಯವನ್ನು ಮರೆಯಬಾರದು.

ತುರ್ತು ಪರಿಸ್ಥಿಯ ಮೂಲಕ ಇಂದಿರಾಗಾಂಧಿ ಬಾಬಾ ಸಾಹೇಬರ ಸಂವಿಧಾನವನ್ನು ಕೊಲೆ ಮಾಡಿದ್ದ ರೀತಿ ಭಾರತದ ಇತಿಹಾಸದಲ್ಲಿ ಕ್ಷಮಿಸಲಾಗದ ಅಪರಾಧ, ಪ್ರಧಾನ ಮಂತ್ರಿ, ರಾಷ್ಟ್ರಪತಿ, ಸ್ಪೀಕರ್ ಮತ್ತು ಉಪರಾಷ್ಟ್ರ ಪತಿ ಚುನಾವಣೆಯ ಆಯ್ಕೆಯನ್ನು ನ್ಯಾಯಾಲಯ ಪ್ರಶ್ನಿಸದಂತೆ ಸಂವಿಧಾನವನ್ನು ಬದಲಾಯಿಸಿದ್ದರು. ಕೇವಲ ಒಂದು ವಾರದಲ್ಲಿ ಸಂಸತ್ತಿನಲ್ಲಿ ಚರ್ಚಿಸದೆ, ಹೋರಾಟಗಾರರ ಧ್ವನಿ ಅಡಗಿಸಿ ಜೈಲಿನಲ್ಲಿಟ್ಟು ತಮ್ಮ ಚುನಾವಣಾ ಅಕ್ರಮವನ್ನು ಸಮರ್ಥಿಸಿಕೊಂಡು ಬಾಬಾ ಸಾಹೇಬರ ಸಂವಿಧಾನವನ್ನು ಇಂದಿರಾಗಾಂಧಿ ಬದಲಾಯಿಸಿದ್ದರು. 1975 ರ ಆಗಸ್ಟ್ 7 ರಂದು ಲೋಕಸಭೆ, ಆಗಸ್ಟ್ 8 ರಂದು ರಾಜ್ಯಸಭೆಯಲ್ಲಿ ಸಂವಿಧಾನದ ತಿದ್ದುಪಡಿಯನ್ನು ಮಂಡಿಸಿ ಒಂದು ದಿನದಲ್ಲಿ ಸಂಸತ್ತಿನಲ್ಲಿ ಅಂಗೀಕರಿಸಲಾಯಿತು. ಆಗಸ್ಟ್ 9 ರಂದು ರಾಜ್ಯಗಳ ವಿಧಾನಸಭೆಯಲ್ಲಿ ಅಂಗೀಕರಿಸಿ, ಆಗಸ್ಟ್ 10 ನೇ ತಾರೀಕಿನಂದು ರಾಷ್ಟ್ರಪತಿಗಳ ಅಂಕಿತವನ್ನು ಹಾಕಲಾಯಿತು. ಪ್ರಜಾಪ್ರಭುತ್ವ ಕಗ್ಗೊಲೆಗೈದಿದ್ದ ಇಂದಿರಾಗಾಂಧಿಯವರ ಸರ್ವಾಧಿಕಾರಿ ಧೋರಣೆಯನ್ನು ಅಂತ್ಯಗೊಳಿಸಿ, ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಪುನರ್ ನಿರ್ಮಾಣಗೊಳಿಸುವುದು ಬಹಳ ಕಷ್ಟದ ಕೆಲಸವಾಗಿತ್ತು.ದೇಶದ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗವನ್ನೇ ತನ್ನ ಹತೋಟಿಗೆ ತೆಗೆದುಕೊಂಡಿದ್ದ ಇಂದಿರಾಗಾಂಧಿಯನ್ನು ಕೆಳಗಿಳಿಸಲು ದೊಡ್ಡದೊಂದು ಚಳುವಳಿಯ ಅವಶ್ಯಕತೆ ಇತ್ತು. ಮಾಧ್ಯಮಗಳ ಸಂಪರ್ಕವಿಲ್ಲದೆ ಹಳ್ಳಿ ಹಳ್ಳಿಗಳಲ್ಲಿ ಜನರನ್ನು ಸಂಪರ್ಕಿಸಿ ಹೋರಾಟಕ್ಕೆ ಸಜ್ಜುಗೊಳಿಸುವುದು ಸುಲಭದ ಮಾತಾಗಿರಲಿಲ್ಲ, 'ರಾಷ್ಟ್ರೀಯ ಸ್ವಯಂ ಸೇವಕ ಸಂಘ'ದ ಕಾರ್ಯಕರ್ತರು ದೇಶದೆಲ್ಲೆಡೆ ಇದ್ದುದ್ದರಿಂದ ಇಂದಿರಾಗಾಂಧಿಯವರ ವಿರುದ್ಧದ ಚಳುವಳಿಗೆ ವೇಗ ಸಿಕ್ಕಿತ್ತು. ಸಂಘದ ಸರಸಂಘಚಾಲಕರನ್ನು ಜೈಲಿಗೆ ಹಾಕಿದರೆ ತನ್ನ ವಿರುದ್ಧದ ಹೋರಾಟವನ್ನು ಹತ್ತಿಕ್ಕಬಹುದೆಂದುಕೊಂಡಿದ್ದ ಸರ್ವಾಧಿಕಾರಿ ಇಂದಿರಾಗಾಂಧಿಯವರಿಗೆ, ಸಂಘದ ವಿಸ್ತಾರವಾದ ಬೇರುಗಳು ದೇಶದಾದ್ಯಂತ ಹಬ್ಬಿರುವುದರ ಅರಿವಿರಲಿಲ್ಲ.

ರಾಷ್ಟ್ರರಕ್ಷಣೆ ಎಂದೊಡನೆ ಮುನ್ನೆಲೆಗೆ ಬಂದು ಹೋರಾಟ ಮಾಡುವ ಪ್ರವೃತ್ತಿ ಸಂಘದ ಕಾರ್ಯಕರ್ತರಿಗೆ ಹೊಸತಾಗಿರಲಿಲ್ಲ, ಕಾಡ್ಗಿಚ್ಚಿನಂತೆ ದೇಶದಾದ್ಯಂತ ಯುವಕರು ಚಳವಳಿಯಲ್ಲಿ ಧುಮುಕಿದರು. ಜಯಪ್ರಕಾಶ್ ನಾರಾಯಣ್ ನೇತೃತ್ವದಲ್ಲಿ ನಡೆದ ಚಳುವಳಿ ದೇಶದಾದ್ಯಂತ ಸಂಚಲವನ್ನೇ ಮೂಡಿಸಿತ್ತು. ಜೈಲಿನಿಂದಲೇ ಗುರೂಜಿ ಕಾರ್ಯಕರ್ತರಿಗೆ ರಾಷ್ಟ್ರರಕ್ಷಣೆಯ ಚಳುವಳಿಯ ಬಗ್ಗೆ ಆಯಾ ಸಮಯಕ್ಕೆ ಬೇಕಾದಂತಹ ಮಾರ್ಗದರ್ಶನವನ್ನು ನೀಡುತ್ತಿದ್ದರು. ದೇಶದಲ್ಲಿ ಸರ್ವಾಧಿಕಾರಿ ಇಂದಿರಾಗಾಂಧಿ ವಿರುದ್ಧ ಮತ್ತೊಂದು ರಾಜಕೀಯ ಸಂಘಟನೆ ಜಯಪ್ರಕಾಶ್ ನಾರಾಯಣ್ ನೇತೃತ್ವದಲ್ಲಿ ಶುರುವಾಯಿತು. ತನ್ನ ಸರ್ವಾಧಿಕಾರಿ ಧೋರಣೆಯ ಮೂಲಕ ಇಂದಿರಾಗಾಂಧಿ ಸಂಘಧ ಕಾರ್ಯಕರ್ತರಿಗೆ ಹಿಂಸೆ ನೀಡಿದ್ದರು, ಆದರೂ ಸಂಘದ ಕಾರ್ಯಕರ್ತರು ಜಗ್ಗಿರಲಿಲ್ಲ, ಇಂದು ಸಂಘದ ವಿರುದ್ಧ ನಾಲಿಗೆ ಹರಿಬಿಡುವ ಸಿದ್ದರಾಮಯ್ಯನವರು ಅಂದು ಇಂದಿರಾಗಾಂಧಿಯವರ ವಿರುದ್ಧ ನಡೆದ ಜಯಪ್ರಕಾಶರ ಚಳವಳಿಯ ಬಗ್ಗೆ ಯಾಕೆ ಮಾತನಾಡುವುದಿಲ್ಲ? ಜಯಪ್ರಕಾಶರ ಚಳವಳಿಯಲ್ಲಿ ಸಂಘದ ಪಾತ್ರವೆಷ್ಟಿತ್ತೆಂ ಬುದು ಸಿದ್ದರಾಮಯ್ಯರಿಗೆ ಗೊತ್ತಿಲ್ಲವೇ? ಸಂವಿಧಾನ ವಿರೋಧಿ ಧೋರಣೆಯಿಂದ ಇಂದಿರಾಗಾಂಧಿ ಹೇರಿದ್ದ ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟದಲ್ಲಿ ಸಂಘದ 3254 ಮಂದಿಯನ್ನು ಬಂಧಿಸಲಾಗಿತ್ತು, ಜನಸಂಘದ 772 ಜನರನ್ನು ಬಂಧಿಸಲಾಗಿತ್ತು. 2024 ರ ಲೋಕಸಭಾ ಚುನಾವಣೆ ಪ್ರಚಾರದ ಸಂದರ್ಭದಲ್ಲಿ ಸಂವಿಧಾನದ ಬದಲಾವಣೆಯ ಕುರಿತು ಮೋದಿಯವರ ವಿರುದ್ಧ ಸುಳ್ಳು ಹೇಳಿದ ರಾಹುಲ್ ಗಾಂಧಿಯ ಕಾಂಗ್ರೆಸ್ ಪಕ್ಷ ಇದುವರೆಗೂ 75 ಬಾರಿ ಸಂವಿಧಾನದವನ್ನು ತಿದ್ದುಪಡಿ ಮಾಡಿದೆ. ನೆಹರು 16 ಬಾರಿ, ಇಂದಿರಾಗಾಂಧಿ 32 ಬಾರಿ ಮತ್ತು ರಾಜೀವ್ ಗಾಂಧಿ 10 ಬಾರಿ ಸಂವಿಧಾನದವನ್ನು ತಿದ್ದುಪಡಿ ಮಾಡಿದ್ದಾರೆ. 'ಸಂವಿಧಾನವೆಂಬ ಪ್ರಗತಿಯ ತೇರನ್ನು ಇಲ್ಲಿಯವರೆಗೂ ಎಳೆದು ತಂದಿದ್ದೇನೆ, ಸಾಧ್ಯವಾದರೆ ಮುಂದಕ್ಕೆ ತಳ್ಳಿ ಆದರೆ ಹಿಂದಕ್ಕೆ ತಳ್ಳುವ ಕೆಲಸ ದಯವಿಟ್ಟು ಯಾರೂ ಮಾಡಬೇಡಿ' ಎಂದು ಬಾಬಾಸಾಹೇಬರು ಹೇಳಿದ್ದರು. ಆದರೆ ಕಾಂಗ್ರೆಸ್ ಸರಕಾರ ಇಂದಿರಾಗಾಂಧಿಯ ಸ್ವಾರ್ಥಕ್ಕಾಗಿ ಅಧಿಕಾರ ಉಳಿಸಿ ಕೊಳ್ಳಲು ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಸಂವಿಧಾನ ವನ್ನು ಬದಲಾಯಿಸಿ ಬಾಬಾಸಾಹೇಬರ ಪ್ರಗತಿಯ ತೇರನ್ನು ಹಿಂದಕ್ಕೆ ತಳ್ಳಿತು ಮತ್ತು ಪಾತಾಳಕ್ಕೂ ತುಳಿದಿತ್ತು.

ಹೊಸಬೆಳಕಿನ ಆಕಾಂಕ್ಷೆಯಲ್ಲಿ ಗ್ರಂಥಾಲಯಗಳು

ಅಭಿಮತ

ಸಂದೀಪ್ ಶರ್ಮಾ ಮೂಟೇರಿ
vveditoped@gmail.com

ಜೂನ್ 19ರಂದು ರಾಷ್ಟ್ರೀಯ ಓದುವ ದಿನವೆಂದು ದೇಶಾದ್ಯಂತ ಆಚರಿಸಲಾಗುತ್ತದೆ. ಓದುವ ಹವ್ಯಾಸವನ್ನು ಹೆಚ್ಚಿಸುವ ಕಾರ್ಯ ಗ್ರಂಥಾಲಯದ್ದೇ ಪ್ರಮುಖ ಕೊಡುಗೆ ಎಂದರೆ ತಪ್ಪಾಗಲಾರದು, ಆದಾಗ್ಯೂ ಇಂದು ಗ್ರಂಥಾಲಯವು ನಿರ್ಲಕ್ಷಕ್ಕೆ ಒಳಗಾಗುತ್ತಿರುವುದು ಖೇದದ ಸಂಗತಿ. ಕಾರ್ಲ್ ಟಿ. ರೋವನ್ ಹೇಳುತ್ತಾನೆ, 'ಜನರ ವಿಮೋಚನೆಗೆ ಯುದ್ಧಗಳಿಗಿಂತಲೂ ಕಲಿಕೆಯೇ ಹೆಚ್ಚು ಪ್ರಾಮುಖ್ಯ, ಅದಕ್ಕೆ ಪೂರಕವಾಗಿರುವುದು ಗ್ರಂಥಾಲಯ, ಗ್ರಂಥಾಲಯಗಳು ಕಲಿಕೆಯ ಮಂದಿರಗಳು'. ಎಸ್.ಎಲ್.ಭೈರಪ್ಪ, ಕೆ.ಎಸ್.ನಾರಾಯಣಚಾರ್ಯರು ಸೇರಿದಂತೆ ವಿಶ್ವದ ಅನೇಕ ಮೇಧಾವಿಗಳು ರೂಪುಗೊಳ್ಳುವ ಹಿಂದೆ ಗ್ರಂಥಾಲಯಗಳ ಪಾತ್ರ ಮಹತ್ವದ್ದಾಗಿತ್ತು. ಮೇಧಾವಿಗಳನ್ನು ರೂಪಿಸುವ ಪ್ರಯೋಗಶಾಲೆಗಳಾಗಿದ್ದವು. ಈಗ ಅಂಥದೊಂದು ಕಲ್ಪನೆಯೂ ಸಾಧ್ಯವಿಲ್ಲ. ಕಾರ್ಲ್ ದೃಷ್ಟಿಕೋನದಲ್ಲಿ ಇಂದಿನ ನಮ್ಮ ಗ್ರಂಥಾಲಯಗಳನ್ನು ನೋಡಿದರೆ- ಅವು ಮಂದಿರಗಳಾಗಿಯೂ ಕಾಣಿಸುತ್ತಿಲ್ಲ, ವಿಮೋಚನೆಯ ಕೇಂದ್ರಗಳಾಗಿಯೂ ಉಳಿದಿಲ್ಲ. ಅವು ನಮ್ಮ ಈಗಿನ ಬಹುತೇಕ ಗ್ರಂಥಾಲಯಗಳಿಗೂ ರದ್ದಿ ಅಂಗಡಿಗಳಿಗೂ ಹೆಚ್ಚೇನೂ ವ್ಯತ್ಯಾಸ ಕಾಣುವುದಿಲ್ಲ ಎನ್ನುವುದು ಬೀಸುಹೇಳಿಕೆಯಾದರೂ ಉತ್ಪ್ರೇಕ್ಷೆಯಲ್ಲ ಎನ್ನುವುದನ್ನು ಗ್ರಂಥಾಲಯಗಳ ಜೊತೆ ಒಡನಾಟ ಇಟ್ಟುಕೊಂಡಿರುವ ವಾಚಕರು ಮತ್ತು ಅನೇಕ ಓದುಗರು ಬಲ್ಲರು.

ನಮ್ಮ ನಡುವಿನ ಗ್ರಂಥಾಲಯಗಳು ಇರುವುದಾದರೂ ಹೇಗೆ? ಕನ್ನಡದ ಯಾವ ಹೆಸರಾಂತ ಲೇಖಕರನ್ನಾದರೂ ಅಲ್ಲಿ ನೋಡಲು ಸಾಧ್ಯವೇ? ಕನ್ನಡದ ಎಲ್ಲ ಪ್ರಮುಖ ಸಾಹಿತಿಗಳ ಪುಸ್ತಕಗಳು ದೊರೆಯುವ ಗ್ರಂಥಾಲಯ ನಮ್ಮಲ್ಲಿ ಎಲ್ಲಿದೆ? ಯಾವುದಾದರೂ ಗ್ರಂಥಾಲಯ ಲೇಖಕರ ಬಗ್ಗೆ ಕಾರ್ಯಕ್ರಮಗಳನ್ನು ನಡೆಸಿರುವ ಉದಾಹರಣೆ ಇದೆಯೇ? ಮೈಸೂರಿನ ಕೇಂದ್ರ ಗ್ರಂಥಾಲಯಕ್ಕೆ ಕುವೆಂಪು, ಕೆ.ಎಸ್. ನರಸಿಂಹಸ್ವಾಮಿ, ಪುತಿನ, ಬಿಎಂಶ್ರೀ ಮುಂತಾದ ಹಿರಿಯ ಸಾಹಿತಿಗಳು ಭೇಟಿ ಕೊಡುತ್ತಿದ್ದುದ್ದು ಹಾಗೂ ಜೆ.ಆರ್. ರಾಮಮೂರ್ತಿ ಅವರ ಕಾಲದಲ್ಲಿನ ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯ ಸಾಂಸ್ಕೃತಿಕ ಕೇಂದ್ರದಂತೆ ರೂಪುಗೊಂಡಿದ್ದುದ್ದು- ಇಂಥ ಸಂಗತಿಗಳೆಲ್ಲ ಕೇವಲ ಈಗ ಓದಿ ಸಂಭ್ರಮಿಸುವ ಅವಕಾಶವಾಗಿಯಷ್ಟೆ ನಮಗೆ ಉಳಿದಿರುವುದು.

ಒಂದು ಮಾದರಿ ಗ್ರಂಥಾಲಯ ಹೇಗಿರಬೇಕು? ಗ್ರಂಥಾಲಯಗಳು ಓದುಗರು ಹಾಗೂ ಲೇಖಕರ ನಡುವಣ ಭೇಟಿಯ ತಾಣಗಳಾಗಬೇಕು. ಲೇಖಕರ ಕೃತಿಗಳ ಬಗ್ಗೆ ಅಲ್ಲಿ ಆರೋಗ್ಯಕರ ಚರ್ಚೆಗಳು ನಡೆಯಬೇಕು. ವಿಶೇಷ ದಿನಗಳಲ್ಲಿ, ಸಾಹಿತ್ಯ ಹಬ್ಬಗಳಂದು ಅನುಗುಣವಾಗಿ ಪುಸ್ತಕಗಳ ಪ್ರದರ್ಶನ ನಡೆಯಬೇಕು. ಓದುಗನೊಬ್ಬ ತನ್ನ ಸಂದೇಹಗಳನ್ನು ಹಂಚಿಕೊಂಡಾಗ ಅದಕ್ಕೆ ಸಂಬಂಧಿಸಿದ ಕೃತಿಗಳನ್ನು ಒದಗಿಸುವ ಮಟ್ಟಿಗೆ ಗ್ರಂಥಪಾಲಕ ಪರಿಣತನಾಗಿರಬೇಕು.

ಒಂದು ಊರಿನ ಜೀವಂತಿಕೆಯನ್ನು, ಸಾಂಸ್ಕೃತಿಕ ಹಿರಿಮೆಯನ್ನು ಬಿಂಬಿಸುವ ನಿಟ್ಟಿನಲ್ಲಿ ಅಲ್ಲಿನ ಪ್ರಾಥಮಿಕ ಶಾಲೆ ಹಾಗೂ ಸಾರ್ವಜನಿಕ ಗ್ರಂಥಾಲಯ ಮುಖ್ಯವಾದುದು. 'ಗ್ರಂಥಾಲಯಗಳು ವಿಶ್ವವಿದ್ಯಾಲಯಗಳ ಮಿದುಳು' ಎಂಬುದು ಆಗಿನ ಮೇಧಾವಿಗಳ ನಂಬಿಕೆಯಾಗಿತ್ತು. ಈಗಿನ ನಮ್ಮ ವಿಶ್ವವಿದ್ಯಾಲಯಗಳ ಬೌದ್ಧಿಕ ಜಡತೆಯ ಹಿನ್ನೆಲೆಯಲ್ಲಿ, ಅವುಗಳ ಮಿದುಳು ಪಾರ್ಶ್ವವಾಯು ಪೀಡಿತವಾಗಿರುವುದೂ ಒಂದು ಕಾರಣವಿರಬಹುದು. ಆದರೆ, ಎರಡನ್ನೂ ನಾವು ಬರಡು ಮಾಡಿದ್ದೇವೆ. ಖಾಸಗಿ ಶಾಲೆಗಳ ಎದುರು ಸರಕಾರಿ ಶಾಲೆಗಳು ಬರಡು ಹಸುಗಳಾಗಿ ಕಾಣಿಸುತ್ತಿದ್ದರೆ, ಗ್ರಂಥಾಲಯಗಳು ಪಳೆಯುಳಿಕೆಗಳ ರೂಪದಲ್ಲಿ ಗತಾಲಯಗಳಾಗಿ ಉಸಿರು ಹಿಡಿದುಕೊಂಡಿವೆ.

ಕಾಲದ ಜೊತೆಗೆ ಗ್ರಂಥಾಲಯಗಳು ಬದಲಾಗುವುದು ಹೇಗೆ? ಅದು, ಪುಸ್ತಕಗಳು ಸುಲಭ ಲಭ್ಯವಾಗಿ ದೊರೆಯುವ ಒಂದು ವ್ಯವಸ್ಥೆ ಆಗಿರಬಹುದು. ವಿದ್ಯಾರ್ಥಿವೃಂದವೇ ಆಗಿರಲಿ, ರೈತನೊಬ್ಬನಾಗಲಿ ಗ್ರಂಥಾಲಯಕ್ಕೆ ಬಂದು ತನಗೆ ಅಗತ್ಯವಾದ ಮಾಹಿತಿಯನ್ನು ಪಡೆಯುವಂತಿರಬೇಕು. ಜನಸಾಮಾನ್ಯರಿಗೆ ಲಭ್ಯವಿರುವ ಸರಕಾರದ ಸವಲತ್ತುಗಳ ಮಾಹಿತಿ ದೊರೆಯುವಂತಿರಬೇಕು. ಮಕ್ಕಳ ಮನೋವಿಕಾಸ-ಕಲಿಕೆಯ ರಂಜನೆಗೆ ಅಲ್ಲಿ ಅವಕಾಶವಿರಬೇಕು. ನಿಜವಾದ ಬದಲಾವಣೆ ಎಂದರೆ, ಗ್ರಂಥಾಲಯಗಳು ಪುಸ್ತಕಗಳಿಗೆ ಮಾತ್ರ ಸೀಮಿತ ಎನ್ನುವ ಪರಿಕಲ್ಪನೆಯನ್ನು ಮೀರುವುದು.

ರಾಜ್ಯದಲ್ಲಿ ಅಂದಾಜು ಒಟ್ಟು ಆರು ಸಾವಿರ ಗ್ರಾಮ ಪಂಚಾಯಿತಿಗಳಿರಬಹುದು. ಪ್ರತಿಯೊಂದು ಪಂಚಾಯಿತಿಯೂ ಒಂದೊಂದು ಗ್ರಂಥಾಲಯ ಹೊಂದಿರುತ್ತದೆ. ಆದರೆ, ಅವುಗಳ ಸ್ಥಿತಿ ಅಧೋಗತಿ. ಓದುಗರಿಗೆ ಮೇಜು- ಕುರ್ಚಿಯನ್ನು ಒದಗಿಸಿದ ಮಾತ್ರಕ್ಕೆ ತಮ್ಮ ಕರ್ತವ್ಯ ಮುಗಿಯಿತು ಎಂದು ವ್ಯವಸ್ಥಾಪಕರ ವ್ಯವಸ್ಥೆ ಭಾವಿಸುತ್ತದೆ. ಓದುವ ಸಂದರ್ಭದಲ್ಲಿ ದೇಹಬಾಧೆ ಉಂಟಾದರೆ ಅದನ್ನು ತೀರಿಸಿಕೊಳ್ಳಲಿಕ್ಕೆ ಶೌಚಾಲಯಗಳ ವ್ಯವಸ್ಥೆ ನಮ್ಮ ಪ್ರಮುಖ ಗ್ರಂಥಾಲಯಗಳಲ್ಲಿಯೂ ಇಲ್ಲ, ಇದ್ದರೂ ಶುಚಿತ್ವವೇ ಇಲ್ಲ. ಕಾಫಿಯನ್ನೋ ತಂಪು ಪಾನೀಯವನ್ನೋ ಸೇವಿಸುತ್ತ ಪುಸ್ತಕ ಓದ ಬಯಸುವುದು ಭಾರತದ ಗ್ರಂಥಾಲಯಗಳಲ್ಲಿ ಸದ್ಯಕ್ಕಂತೂ ನಿರೀಕ್ಷಿಸುವಂತಿಲ್ಲ. ನಗರ ಪ್ರದೇಶಗಳಲ್ಲಿ ಕೆಲವೇ ಕೆಲವು ಗ್ರಂಥಾಲಯಗಳನ್ನು ಹೊರತುಪಡಿಸಿದರೆ ಉಳಿದೆಡೆಗಳಲ್ಲಿ ವಾಚಕ ಕಂಪ್ಯೂಟರ್ ಬಳಸಲಿಕ್ಕೆ ಅನುಕೂಲಗಳಿಲ್ಲ. ಗ್ರಂಥಾಲಯಗಳಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸಲಿಕ್ಕೆ ಸರಕಾರ ಹಣಕಾಸಿನ ನೆಪ ಹೇಳುವಂತಿಲ್ಲ. ಗ್ರಂಥಾಲಯಗಳ ಹೆಸರಿನಲ್ಲಿ ಸರಕಾರ ತೆರಿಗೆ ಸಂಗ್ರಹಿಸುತ್ತದೆ. ಆದರೆ, ಆ ಹಣ ನೇರವಾಗಿ ಗ್ರಂಥಾಲಯ ಇಲಾಖೆಗೆ ಹೋಗುವುದಿಲ್ಲ. ಸ್ಥಳೀಯ ಸಂಸ್ಥೆಗಳಿಗೆ ಹೋಗುತ್ತದೆ. ಗ್ರಂಥಾಲಯ ಹೆಸರಿನಲ್ಲಿ ಸಂಗ್ರಹಿಸಿರುವ ನೂರಾರು ಕೋಟಿ ರೂಪಾಯಿ ಈಗಲೂ ಸ್ಥಳೀಯ ಸಂಸ್ಥೆಗಳ ಬಳಿಯೇ ಇದೆ ಹಾಗೂ ಆ ಮೊತ್ತ ಬೇರೆ ಉದ್ದೇಶಗಳಿಗಾಗಿ ಬಳಕೆಯಾಗುತ್ತಿದೆ. ಈಗಲೂ ಓದುಗರನ್ನು ಗಮನದಲ್ಲಿಟ್ಟುಕೊಂಡ ಪ್ರಕಾಶಕರು ಗ್ರಂಥಾಲಯಗಳಿಂದ ದೂರ ಉಳಿದಿದ್ದಾರೆ ಅಥವಾ ಅಲ್ಲಿನ ಲಂಚಗುಳಿತನಕ್ಕೆ ಹೇಸಿ ಅಂತರ ಕಾಪಾಡಿಕೊಂಡಿದ್ದಾರೆ. ಪರಿಸ್ಥಿತಿ ಹೀಗಿರುವಾಗ, ಗ್ರಂಥಾಲಯಗಳು ಓದುಗರನ್ನು ಕಳೆದುಕೊಳ್ಳುತ್ತಿವೆ ಎಂದು ಹಪಹಪಿಸುವುದಕ್ಕೆ ಅರ್ಥವಿಲ್ಲ. ಏಕೆಂದರೆ ಇಂದಿನ ವ್ಯವಸ್ಥೆಗೆ ಪ್ರಿಯವಾಗಿರುವುದು ಉದ್ಯಮವೇ ಹೊರತು, ಸಹೃದಯಿ ಓದುಗನಲ್ಲ, ಓದುಗನೂ ಇಲ್ಲ.

ವಿಶ್ವದ ಮಾದರಿ ಗ್ರಂಥಾಲಯಗಳು ಈಗ ಪುಸ್ತಕಾಲಯಗಳಾಗಿ ಮಾತ್ರ ಉಳಿದಿಲ್ಲ. ಮಾಹಿತಿ-ಜ್ಞಾನದ ಎಲ್ಲ ರೂಪಗಳನ್ನೂ ಅವು ಅಳವಡಿಸಿಕೊಂಡಿವೆ. ಸಿನಿಮಾಸಕ್ತನೊಬ್ಬ ಅತ್ಯುತ್ತಮ ಚಿತ್ರಗಳನ್ನು ನೋಡಲಿಕ್ಕೆ ಇ-ಲೈಬ್ರರಿಗಳು ಅವಕಾಶ ಕಲ್ಪಿಸುತ್ತವೆ. ಸಹೃದಯ ಬಯಸುವ ಎಲ್ಲ ರೂಪದ ಮಾಹಿತಿಯೂ (ಧ್ವನಿಮುದ್ರಿಕೆಗಳು, ಇ-ಪುಸ್ತಕಗಳು, ಭೂಪಟಗಳು, ವಿಡಿಯೊಗಳು) ಅಲ್ಲಿ ಲಭ್ಯವಿರುತ್ತದೆ.

ಎಂದಿನಂತೆ ಪ್ರತಿವರ್ಷ ನವೆಂಬರ್ 14ರಿಂದ 21ರ ಅವಧಿಯನ್ನು 'ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ' ಎಂದು ಆಚರಿಸಲಾಗುತ್ತದೆ. ಈ ಸಮಯದಲ್ಲಿ ಮಕ್ಕಳಿಗಾಗಿ ಪ್ರಬಂಧ ಸ್ಪರ್ಧೆ, ಭಾಷಣವನ್ನು ನಡೆಸುವ ಮೂಲಕ ಗ್ರಂಥಾಲಯಗಳು ತಮ್ಮ ಅಸ್ತಿತ್ವ ಪ್ರಕಟಪಡಿಸುವ ಕೆಲಸ ಮಾಡುತ್ತವೆ. ಉಳಿದಂತೆ ವರ್ಷವಿಡೀ ಜಾಣ ಕುರುಡುವಿನಂತೆ ನಿದ್ದೆ ಮಾಡುತ್ತವೆ. ಸರಕಾರಕ್ಕೆ ಉಳಿದಿರುವುದು ಎರಡು ಮಾರ್ಗಗಳು. ಒಂದು, ಇರುವ ಗ್ರಂಥಾಲಯಗಳನ್ನು ಈ ಕಾಲಕ್ಕೆ ತಕ್ಕಂತೆ ರೂಪಾಂತರಿಸುವುದು ಹಾಗು ಮತ್ತಷ್ಟು ಓದುಗರನ್ನು ಉತ್ತೇಜಿಸುವುದು. ಆ ಮೂಲಕ ಗ್ರಂಥಾಲಯಗಳನ್ನು ಜನಸ್ನೇಹಿಯಾಗಿಸುವುದು. ಎರಡನೆಯ ಮಾರ್ಗ- ಗ್ರಂಥಾಲಯ ಇಲಾಖೆಯನ್ನು, ಗ್ರಂಥಾಲಯಗಳನ್ನು ಮುಚ್ಚುವುದು. ಇದರಿಂದಾಗಿ ನಾಗರಿಕರ ಮೇಲಿನ ತೆರಿಗೆ ಹೊರೆ ಕೊಂಚ ಹಗುರ ಮಾಡಿಕೊಳ್ಳುವುದು. ಈಗಿರುವ ಗ್ರಂಥಾಲಯಗಳಿಂದ ಪುಸ್ತಕ ಸಂಸ್ಕೃತಿಯ ಬೆಳವಣಿಗೆಯಾಗಲೀ ಜನಸಾಮಾನ್ಯರಿಗೆ ಅನುಕೂಲವಾಗಲೀ ಇಲ್ಲದಿರುವುದರಿಂದ ಅವುಗಳನ್ನು ಮುಚ್ಚುವುದರಿಂದ ಯಾರಿಗೇನೂ ನಷ್ಟವಿಲ್ಲ.

(ಲೇಖಕರು: ಸಿವಿಲ್ ಎಂಜಿನಿಯರ್ ಹಾಗೂ ಹವ್ಯಾಸಿ ಬರಹಗಾರ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಧ್ಯಕ್ಷರ ಸಭೆ: ಒಂದು ಜಿಜ್ಞಾಸೆ

ಇತ್ತೀಚೆಗೆ ರಾಜ್ಯದ ವಿವಿಧ ಸಾಹಿತ್ಯಕ, ಸಾಂಸ್ಕೃತಿಕ ಅಕಾಡೆಮಿಗಳ ಸಭೆಯನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಛೇರಿಯಲ್ಲಿ ಅಧ್ಯಕ್ಷರಾದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಕರೆಯುವ ಮುಖೇನ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದ್ದಾರೆ. ಆ ಕಾರಣಕ್ಕಾಗಿಯೇ, ರಾಜ್ಯದ ಸಾಹಿತ್ಯಿಕ, ಸಾಂಸ್ಕೃತಿಕ ಲೋಕದಲ್ಲಿ ಹೊಸ ಚರ್ಚೆಗೆ ಗ್ರಾಸವಾಗಿದ್ದಾರೆ. ಸಾಮಾನ್ಯವಾಗಿ ರಾಜ್ಯದಲ್ಲಿ ನೂತನ ಸರಕಾರ ಅಧಿಕಾರಕ್ಕೆ ಬಂದ ನಂತರ, ಆ ಪಕ್ಷದ ಕಡೆ ಒಲವಿರುವ, ಇಲ್ಲವೇ ಆಯಾ ರಾಜಕಾರಣಿಗಳ ಹಿಂಬಾಲಕರು ವಿವಿಧ ಅಕಾಡೆಮಿಗಳ ಅಧ್ಯಕ್ಷರು, ಸದಸ್ಯರಾಗಿ ಆಯ್ಕೆಯಾಗುತ್ತಿದ್ದುದು ಸರ್ವೆ ಸಾಮಾನ್ಯವಾಗಿತ್ತು.

ಆರಂಭದ ದಿನಗಳಲ್ಲಿ ಸರಕಾರದ ಪ್ರತಿನಿಧಿಗಳೇ, ತಮ್ಮ ಪ್ರೀತಿ-ವಿಶ್ವಾಸಗಳಿಸಿದ ವ್ಯಕ್ತಿಗಳನ್ನು ನೇಮಕ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿತ್ತು.ಇದು ಆಡಳಿತ ಸರಕಾರ ಇರುವವರೆಗೆ ಅಕಾಡೆಮಿ ಅಧ್ಯಕ್ಷರು ಇರುತ್ತಿದ್ದರು.ಆ ಮೇಲೆ ಒಂದೊಮ್ಮೆ ಸರಕಾರವೇನಾದರೂ ಬದಲಾದರೇ, ಒಂದು ತತ್ವ-ಸಿದ್ಧಾಂತವನ್ನು ತಮ್ಮ ಸಾಮಾಜಿಕ ಬದುಕಿನಲ್ಲಿ ಅಳವಡಿಸಿಕೊಂಡವರಾದರೇ, ತಕ್ಷಣ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಬಿಡುತ್ತಿದ್ದರು. ಈ ವಿಚಾರದಲ್ಲಿ ಸದಸ್ಯರು ತಮ್ಮ ಸ್ಥಾನ ತ್ಯಜಿಸುವ ಹಂತ ತಲುಪಿದ್ದು ತುಂಬಾ ಕಡಿಮೆ ಪ್ರಮಾಣದ ಉದಾಹರಣೆಗಳು.

ಹೀಗೀರುವಾಗ, ಬರಬರುತ್ತಾ ಇದು ಎಂತಹಾ ವಿದ್ಯಮಾನಗಳಿಗೆ ಸಾಕ್ಷಿಯಾಯಿತು ಎಂದರೆ ರಾಜ್ಯದಲ್ಲಿ ಎಡಪಂಥೀಯ ಅಥವಾ ಬಲಪಂಥೀಯ ಮನಸ್ಥಿತಿಯ ಸರಕಾರ ಅಧಿಕಾರಕ್ಕೆ ಬಂದಿತೆಂದರೇ, ಅದೇ ತಾತ್ವಿಕ ನೆಲೆಗಟ್ಟಿನ ಚಿಂತಕರು, ಬುದ್ಧಿಜೀವಿಗಳನ್ನು ಆಯಾ ಸರಕಾರ ಅಕಾಡೆಮಿ ಅಧ್ಯಕ್ಷರನ್ನಾಗಿ ಮಾಡುವ ಪ್ರಕ್ರಿಯೆ ಜಾರಿಗೆ ಬಂತು. ಇತ್ತೀಚೆಗೆ ಅದು ಯಾವ ಮಟ್ಟಕ್ಕೆ ಬಂದಿತೆಂದರೆ ನಾಡಿನ ಸಾಹಿತ್ಯಿಕ, ಸಾಂಸ್ಕೃತಿಕ ಲೋಕದ ಬುದ್ಧಿಜೀವಿಗಳು ಅಥವಾ ಚಿಂತಕರು ತಾವೇ ಅರ್ಜಿ ಹಿಡಿದು ರಾಜಕೀಯ ನಾಯಕರ ಮನೆ ಬಾಗಿಲು ತಟ್ಟುವ ಆ ಮುಖೇನ ಶಿಪಾರಸ್ಸು ಪಡೆದು ಅಕಾಡೆಮಿ ಅಧ್ಯಕ್ಷರ ಹುದ್ದೆ ಪಡೆಯುವ ಲಾಬಿ ನಡೆಯುತ್ತಾ ಬಂದಿದೆ. ಹಾಗೆಯೇ, ಸರಕಾರ, ಜನಪ್ರತಿನಿಧಿಗಳು ಕೂಡ ಅಕಾಡೆಮಿ ಅಧ್ಯಕ್ಷರು, ಸದಸ್ಯರನ್ನು ತಮ್ಮ ಪರ ಇಲ್ಲವೇ, ತಮ್ಮ ಪಕ್ಷದ ಪರ ಒಲವು-ನಿಲುವುಳ್ಳ ವ್ಯಕ್ತಿಗಳನ್ನೇ ಅಕಾಡೆಮಿಕ್ ಹುದ್ದೆಗಳಿಗೆ ನೇಮಕ ಮಾಡುವ ವಿಚಾರ ಅನುಚಾನಾಗಿ ನಡೆದುಕೊಂಡು ಬರಲು ಆರಂಭಿಸಿತು. ಹೀಗಿರುವಾಗ ಜನಸಾಮಾನ್ಯರಿಗೆ ಅಕಾಡೆಮಿ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಕುರಿತು ಜನಪ್ರತಿನಿಧಿಗಳು ಹಾಗೂ ಸಾಹಿತಿ, ಬುದ್ಧಿಜೀವಿಗಳು ಅಥವಾ ಅಕಾಡೆಮಿ ಅಧ್ಯಕ್ಷ ಹುದ್ದೆ ಆಕಾಂಕ್ಷಿಗಳ ಬಗ್ಗೆ ಒಂದು ಬೇಸರ, ಜಿಜ್ಞಾಸೆ ಇರುವುದು ಕಟು ಸತ್ಯ.

ಸಾಹಿತಿಗಳು, ಬುದ್ಧಿಜೀವಿಗಳೂ ಮನುಷ್ಯರೇ, ಅವರಿಗೂ ಎಲ್ಲರಂತೆ ಒಂದು ಪಂಥ, ವರ್ಗದ ಕಡೆ ಗುರುತಿಸಿಕೊಳ್ಳುವುದು ಆಸೆ, ಮನಸ್ಥಿತಿ, ಆಯ್ಕೆ, ಹಕ್ಕು, ಸ್ವಾತಂತ್ರ್ಯ ಇದ್ದೇ ಇದೆ. ಆದರೆ ಇಲಾಖೆಗೆ ಸಂಬಂಧಿಸಿದ ಸಚಿವರು ಇದ್ದಾಗ್ಯೂ ಒಂದು ಪಕ್ಷದ ಕಚೇರಿಯಲ್ಲಿ ನಡೆದ ಸಭೆಗೆ ಸಾಹಿತ್ಯಿಕ, ಸಾಂಸ್ಕೃತಿಕ ಅಕಾಡೆಮಿಗಳ ಅಧ್ಯಕ್ಷರುಗಳು, ಸ್ವಾಭಿಮಾನ, ಆತ್ಮಗೌರವವನ್ನು ತ್ಯಜಿಸಿ ಹೋಗಿದ್ದು ನಾಡಿನ ಪ್ರಜ್ಞಾವಂತ ಸಮಾಜದಲ್ಲಿ ಆರೋಗ್ಯಕರ ಚರ್ಚೆ-ವಾದವನ್ನು ಹುಟ್ಟು ಹಾಕಿದೆ. ಈ ಕುರಿತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರೂ ಕೂಡ ತಮ್ಮ ಅರಿವಿಗೆ ಬರದೇ ನಡೆದ ಸಭೆಯ ಕುರಿತು ಬೇಸರ ಹೊರ ಹಾಕಿದ್ದಾರೆ. ಇನ್ನೊಂದೆಡೆ ಕೆಪಿಸಿಸಿ ಅಧ್ಯಕ್ಷರು ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ತಮ್ಮ ನಡೆಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ.

ಹೀಗಿರುವಾಗ ಬುದ್ಧಿಜೀವಿಗಳು, ವಿಚಾರವಾದಿಗಳು ಎಂದೆನಿಸಿಕೊಂಡ ವಿವಿಧ ಅಕಾಡೆಮಿಗಳ ಅಧ್ಯಕ್ಷರು ಸಭೆಯಲ್ಲಿ ಭಾಗವಹಿಸಿ ತಮ್ಮ ನೇಮ-ನಿಷ್ಠೆ ಮೆರೆದಿದ್ದಾರೆ.ಆ ಮೂಲಕ ಬದಲಾದ ಕಾಲಘಟ್ಟದಲ್ಲಿ ಚಿಂತಕರು ಎಂದೆನಿಸಿ ಕೊಂಡವರೂ ಕೂಡ ಅಧಿಕಾರಕ್ಕಾಗಿ ತಮ್ಮ ತಾತ್ವಿಕತೆ, ಸಿದ್ಧಾಂತಗಳನ್ನು ಗಾಳಿಗೆ ತೂರಲು ಸಿದ್ಧ ಎಂಬುದನ್ನು ಸಾಬೀತು ಮಾಡಿ ತೋರಿಸಿದ್ದಾರೆ. ಇನ್ನೊಂದೆಡೆ ಡಿಸಿಎಂ ಸಾಹೇಬರಿಗೆ ಸಭೆ ಕರೆಯುವ ಅಧಿಕಾರವಿದ್ದಲ್ಲಿ ಅದನ್ನು ತಮ್ಮ ಸರಕಾರಿ ಕಚೇರಿ ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿಯಲ್ಲಿ ಕರೆಯಬಹುದಿತ್ತು. ಅದು ಬಿಟ್ಟು, ಒಂದು ಪಕ್ಷದ ಅಂದರೆ ತಮ್ಮ ಪಕ್ಷದ ಕಛೇರಿಯಲ್ಲಿ ಕರೆದಿದ್ದು ಸರಿಯಲ್ಲ. ಅದರಂತೆಯೇ, ಅಕಾಡೆಮಿ ಅಧ್ಯಕ್ಷರುಗಳು ಡಿಸಿಎಂ ಸಾಹೇಬರು ಕರೆದರು ಅಂತ ಯಾವುದೇ ಮೀನ-ಮೇಷ ಎಣಿಸದೇ ಹೋಗಿದ್ದು, ಯಾಕೋ ಸರಿ ಕಾಣಲಿಲ್ಲ? ಈ ನಿಟ್ಟಿನಲ್ಲಿ ಡಿಸಿಎಂ ಶಿವಕುಮಾರ್ ಹಾಗೂ ಅಕಾಡೆಮಿ ಅಧ್ಯಕ್ಷರು ಒಂದು ಘಳಿಗೆ ಆಲೋಚಿಸಬೇಕಿತ್ತು.

ಈ ಕಾರಣಕ್ಕೆ ಸಾಹಿತ್ಯಿಕ, ಸಾಂಸ್ಕೃತಿಕ ಲೋಕದಲ್ಲಷ್ಟೇ ಅಲ್ಲ, ನಾಡಿನ ಸಾಹಿತ್ಯಪ್ರಿಯ ಜನಸಾಮಾನ್ಯರಲ್ಲೂ ಇದು ತೀವ್ರ ಚಿಂತನೆ, ಜಿಜ್ಞಾಸೆಗೆ ಕಾರಣವಾಗಿದೆ.

-ಶ್ರೀಧರ್ ಡಿ.ರಾಮಚಂದ್ರಪ್ಪ ತುರುವನೂರು

ಭವಿಷ್ಯದ ಜತೆ ಚೆಲ್ಲಾಟ ಸರಿಯೇ?

ಬುಧವಾರ ನಡೆದ ವೈದ್ಯಕೀಯ ನಿಟ್ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ರಾಷ್ಟ್ರೀಯ ಪರೀಕ್ಷೆ ಸಂಸ್ಥೆ ಪರೀಕ್ಷೆಯನ್ನು ರದ್ದು ಮಾಡಿದೆ. ಆದರೆ ಈ ಅಕ್ರಮದಿಂದ ಪರೀಕ್ಷೆ ಬರೆದ 9 ಲಕ್ಷ ಜನರ ಭವಿಷ್ಯ ಹಾಳಾಗಿದೆ. ಇದಕ್ಕೆ ಯಾರು ಹೊಣೆ ? ಅವರ ಭವಿಷ್ಯದ ಜೊತೆಗೆ ಈ ಸರಕಾರ ಮತ್ತು ಸಂಸ್ಥೆಗಳು ಚೆಲ್ಲಾಟವಾಡುತ್ತಿದೆ. ಮೊದಲು ನೆಟ್ ಪರೀಕ್ಷೆಯಲ್ಲಿ ಅಕ್ರಮ ಉಂಟಾಯಿತೆಂದು ಅದನ್ನು ರದ್ದು ಮಾಡಿದರು. ಇಂದು ವೈದ್ಯಕೀಯ ಪ್ರವೇಶ ಪರೀಕ್ಷೆ ನೀಟ್‌ನಲ್ಲಿ ಅಕ್ರಮವಾಯಿತೆಂದು ಇದನ್ನು ರದ್ದು ಮಾಡಿದರು. ಹೀಗೆ ಎನ್‌ಟಿಎ ನಡೆಸುವ ಪ್ರತಿ ಪರೀಕ್ಷೆಯಲ್ಲಿ ಅಕ್ರಮ ಆರೋಪಗಳು ಕೇಳಿಬರುತ್ತಿರುವುದು ಜನರಲ್ಲಿ ಅನುಮಾನ ಉಂಟುಮಾಡುತ್ತಿದೆ. ಇವರು ನಿಜವಾಗಿಯೂ ಪರೀಕ್ಷೆ ನಡೆಸುತ್ತಿದ್ದಾರೋ ಅಥವಾ ಜನರ ಭವಿಷ್ಯದ ಜೊತೆ ಆಟವಾಡುತ್ತಿದ್ದಾರೋ ಅಂತ. ಇಂತಹ ಪ್ರಕರಣದಿಂದ ಜನರು ವಿದ್ಯಾರ್ಥಿಗಳು ಕಂಗಾಲಾಗಿದ್ದಾರೆ. ದೇಶದೆಲ್ಲೆಡೆ ಪ್ರತಿಭಟನೆ ಸದ್ದು ಮಾಡುತ್ತಿವೆ. ಈ ಕೇಸ್ ಅನ್ನು ಕೂಲಂಕಷವಾಗಿ ತನಿಖೆ ನಡೆಸಲು ಸರಕಾರ ಸಿಬಿಐ ಗೆ ವರ್ಗಾವಣೆ ಮಾಡಬೇಕು. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕು.

-ಶ್ರುತಿ ಬೆಳ್ಳುಂಡಗಿ ವಿಜಯಪುರ

ಜಾಗೃತಿ ಹೆಚ್ಚಿಸಿ

ಇತ್ತೀಚೆಗೆ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ನಗರಗಳಲ್ಲಿ ಪಾದಚಾರಿಗಳಿಗೆ-ದ್ವಿಚಕ್ರ ವಾಹನ, ಆಟೋ ಮತ್ತು ಕಾರುಗಳಿಂದ ಅಪಘಾತಗಳು ಹೆಚ್ಚುತ್ತಿವೆ. ಇದಕ್ಕೆ ಕಾರಣ ಅತೀ ವೇಗವೆಂದು ಕಂಡರೂ ಮೂಲ ಕಾರಣ ಪಾದಚಾರಿ ಮಾರ್ಗಗಳು ವ್ಯವಸ್ಥಿತವಾಗಿಲ್ಲದಿರುವುದು. ರಸ್ತೆ ಇಕ್ಕೆಲಗಳಲ್ಲಿ ಮತ್ತು ಪಾದಚಾರಿ ಮಾರ್ಗಗಳಲ್ಲಿ ಅನಧಿಕೃತವಾಗಿ ವಾಹನಗಳ ನಿಲುಗಡೆ, ವ್ಯಾಪಾರ ವಹಿವಾಟು. ಅಪಘಾತಗಳಿಗೆ ಕಾರಣವಾಗುತ್ತಿದೆ.

ದಿನಃ ಪೂರ್ತಿ ಕಷ್ಟ ಪಟ್ಟು ದುಡಿದ ಕಾರ್ಮಿಕರು ಮನೆಗಳಿಗೆ ಮರಳುವಾಗ ಅಪಘಾತಗಳಿಂದ ಆಸ್ಪತ್ರೆ ಅಥವ ಸ್ಮಶಾನ ಸೇರಿದರೆ, ಅಂತವರ ಕುಟುಂಬಗಳು ಜೀವನ ಪೂರ್ತಿ ಅನುಭವಿಸುವ ಕಷ್ಟ ಹೇಳತೀರದು. ಹಾಗಾಗಿ ಸರಕಾರ ಎಚ್ಚೆತ್ತು, ರಾಜ್ಯದ ಎಲ್ಲಾ ನಗರ ಪ್ರದೇಶಗಳಲ್ಲಿನ ಪಾದಚಾರಿ ಮಾರ್ಗಗಳನ್ನು ದುರಸ್ತಿಗೊಳಿಸುವ ಮತ್ತು ರಸ್ತೆ ಸುರಕ್ಷತಾ ಸಂಚಾರದ ಬಗ್ಗೆ ಜನರಲ್ಲಿ ಜಾಗೃತಿ ಹೆಚ್ಚಿಸುವ ಕಾರ್ಯ ಮಾಡಬೇಕಿದೆ.

-ಎಸ್ ನಾಗರಾಜ ನಾಗೂರ ಬಾಗಲಕೋಟೆ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ವಿನೋದ ಪ್ರಭು, ಸುರತ್ಕಲ್**
  ಭಟ್ರೇ, ಡಿಬಾಸ್ ವಿರುದ್ಧ ನೂರಾರು ಸಾಕ್ಷ್ಯ ಸಿಕ್ಕಿದೆಯಂತೆ?
  – ಅವೆಲ್ಲ ಯಾವ ಲೆಕ್ಕ ಎಂದು ಅಭಿಮಾನಿಗಳಿಗೆ ಹೇಳಬಹುದು !

- **ವಾದಿರಾಜ ಕೆ., (ಇಮೇಲ್ ಮೂಲಕ)**
  ಭಟ್ರೇ, ಎಣ್ಣೆ ರೇಟು ಕಮ್ಮಿ ಆಗಲಿದೆಯಂತೆ ?
  – ಆ ಖುಷಿಯಲ್ಲಿ ನಿತ್ಯವೂ ಪಾರ್ಟಿ ಮಾಡಿದರೆ ಅಬಕಾರಿ ತೆರಿಗೆ ರೂಪದಲ್ಲಿ ಸರಕಾರಕ್ಕೆ ಹೆಚ್ಚು ಲಾಭ!

- **ರಮೇಶ ಗೌಡ, ಮಳವಳ್ಳಿ**
  ಸಾರ್, ಇದೇನು ಸೂರಜ್ ರೇವಣ್ಣನದು ವಿಚಿತ್ರ ಬಾನಗಡಿ?
  – ತಾನೊಬ್ಬ ಮಾತ್ರ ಯಾಕೆ ಸುಮ್ಮನಿರಬೇಕು ಅಂತ ಬಾನಗಡಿ ಮಾಡಿಕೊಂಡಿರಬೇಕು!

- **ನಿರಂಜನ್ ಶೆಟ್ಟಿ, (ಇಮೇಲ್ ಮೂಲಕ)**
  ಭಟ್ರೇ, ದರ್ಶನ್ ಗೆ ಸಚಿವಸ್ಥಾನ ಯೋಗವಿದೆ ಅಂತ ಜ್ಯೋತಿಷಿಯೊಬ್ಬ ಹೇಳಿದ್ದಾನಲ್ಲ ?
  –ಅದಕ್ಕೆ ಬೇಕಾದ ಎಲ್ಲ ಅರ್ಹತೆ ಗಳಿಸಿಕೊಳ್ಳುತ್ತಿರುವುದನ್ನು ನೋಡಿಯೂ ಈ ಪ್ರಶ್ನೆಯಾ?!

- **ಎಂ.ಕೆ.ನಾಯಕ, ಕುಮಟಾ**
  ಭಟ್ರೇ, ದಿಲ್ಲಿಯಲ್ಲಿ ಕುಡಿಯುವ ನೀರಿಗೆ ಅಭಾವವಂತೆ?
  – ಸಿಎಂ ಕೇಜ್ರಿವಾಲ ಜೈಲಿಗೆ ಹೋಗಿದ್ದೇ ಕಾರಣ ಅಂತ ಆಪ್ ಹೇಳದಿದ್ದರೆ ಸಾಕು!

- **ಪಾಲಾಕ್ಷ, ಹುಣಸೂರು**
  ಭಟ್ರೇ, ಕರ್ನಾಟಕ ರಾಜಕಾರಣ ಇದ್ದಕ್ಕಿದ್ದಂತೆ ಡಲ್ ಆಗಿದೆಯಲ್ಲ?
  – ಟಿವಿ ಚಾನೆಲ್‌ನಲ್ಲಿ ಬರೀ ದರ್ಶನದ ಪರಿಣಾಮ!

- **ಪಿ.ನಾಗಣ್ಣ , (ಇಮೇಲ್ ಮೂಲಕ)**
  ಭಟ್ರೇ, ಹೆಂಡತಿಯ ಪ್ರೀತಿಯೇ ಶಾಶ್ವತ ಅಂತಾರಲ್ಲ?
  – ಯಾರ ಹೆಂಡತಿಯ ಪ್ರೀತಿ ಎಂಬುದನ್ನು ಸ್ಪಷ್ಟಪಡಿಸಬೇಕಿತ್ತು !

- **ರಾಜೀವ ರೈ, ಉಪ್ಪಿನಂಗಡಿ**
  ಭಟ್ರೇ, ರಾಜಕೀಯ ಸನ್ಯಾಸ ತೆಗೆದುಕೊಳ್ಳಿ ಅಂತ ಮೊಯಿಲಿಗೆ ಹೇಳ್ಬೇಕಿತ್ತು ?
  – ಆಗ ಅವರು ಫುಲ್ ಟೈಮ್ ಮಹಾಕಾವ್ಯ ಬರೀತಾರೆ. ಅದು ಬೇಕಾ?!

- **ಪ್ರಭು , ಹಾವೇರಿ**
  ಸರ್, ದರ್ಶನ್ ಮಾಡಿದ್ದೆ ಸರಿ ಅಂತ ಇಲ್ಲೊಬ್ಬ ಹೇಳ್ತಾನಲ್ಲ ?
  – ವಾದಿಸಿದರೆ ಪರವಾಗಿಲ್ಲ, ದರ್ಶನ್ ಮಾಡಿದ ಹಾಗೇ ಮಾಡಿಲ್ಲವಲ್ಲ ?!

- **ರೂಪೇಶ್ , ಕೋದಂಡಪುರ**
  ಭಟ್ರೇ, ಕರ್ನಾಟಕ ಬಿಜೆಪಿ ಮೌನಕ್ಕೆ ಶರಣಾಗಿದೆಯಲ್ಲ?
  – ಅದು ಈಶ್ವರಪ್ಪ ಪುನರಾಗಮನದ ಸೂಚನೆಯಾ!

ಪ್ರತಿದಿನದ ಅಭ್ಯಂಗದಿಂದ ರೋಗನಿರೋಧಕ ಶಕ್ತಿ ಹೆಚ್ಚಳ!

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಸ್ನೇಹಿತರೆ, 'ಸ್ನೇಹ' ಅನ್ನುವುದು ನಮ್ಮ ಬದುಕಿನಲ್ಲಿ ಎಷ್ಟು ಮುಖ್ಯ ಅಲ್ಲವೇ? ಸ್ನೇಹವಿಲ್ಲದ ಬದುಕು ಸಾರಹೀನ ಅಂತ ಹೇಳಿದ್ರೆ, ಖಂಡಿತ ಅದು ತಪ್ಪಾಗಲಕ್ಕಿಲ್ಲ! ಸ್ನೇಹದಿಂದಲೇ ನಾವು ನಮ್ಮ ಬದುಕಿನಲ್ಲಿ ಲವಲವಿಕೆ, ಚೈತನ್ಯ ,ಉತ್ಸಾಹ ಮತ್ತು ಆನಂದವನ್ನು ಅನುಭವಿಸುವುದಕ್ಕೆ ಸಾಧ್ಯ. ಆಯುರ್ವೇದವು ಸಹ ಇದೇ ಮಾತನ್ನು ಸಾವಿರಾರು ವರ್ಷಗಳ ಹಿಂದೆ ಶಾಸ್ತ್ರದಲ್ಲಿ ಉಲ್ಲೇಖಿಸಿಬಿಟ್ಟಿದೆ. ಆಯುರ್ವೇದ ಉದ್ಗರಿಸುತ್ತದೆ – ಸ್ನೇಹಸಾರೋಽಯಂ ಪುರುಷಃ ಅಂತ – ನಮ್ಮ ಶರೀರವು ಸ್ನೇಹಮಯ ಎಂದರ್ಥ. ಅಂದರೆ ನಮ್ಮ ಇಡೀ ಶರೀರವು ಸ್ನೇಹದಿಂದ ಕೂಡಿದ್ದು/ಮಾಡಿದ್ದು ಎಂದರ್ಥ.ಅರೇ, ನಮ್ಮ ಶರೀರವನ್ನೇ ಮಾಡುವಂತಹ ಈ ಸ್ನೇಹ ಯವುದಪ್ಪ ಅನ್ನೋ ಪ್ರಶ್ನೆ ಬಂತ? ಸಂಸ್ಕೃತದಲ್ಲಿ 'ಸ್ನೇಹ' ಶಬ್ದಕ್ಕೆ 'ಬಂಧನ' ಎಂದರ್ಥ. ಯಾವುದರ ಉಪಯೋಗದಿಂದ ಎರಡು ಅಥವಾ ಅನೇಕ ವಸ್ತುಗಳ ಬಂಧನವಾಗುತ್ತದೆಯೋ ಆ ಪದಾರ್ಥವೇ 'ಸ್ನೇಹ'. ಇಂದು ನಾವು ವ್ಯವಹಾರದಲ್ಲಿ ಬಳಸುವ ಜಿಡ್ಡಿನ ಪದಾರ್ಥಗಳು ದೇಹದಲ್ಲಿ ಬಂಧಿಸುವ ಕೆಲಸ ಮಾಡುವುದರಿಂದ ಆಯುರ್ವೇದದಲ್ಲಿ ಜಿಡ್ಡಿನ ಪದಾರ್ಥಗಳನ್ನು ಸ್ನೇಹ ಎಂದು ಕರೆದಿದ್ದಾರೆ. ಸ್ನೇಹ/ ಜಿಡ್ಡು/lipids/ fatsಗಳು– ಚಿಕ್ಕ ಚಿಕ್ಕ ಅಣುಗಳಿಂದ ಹಿಡಿದು ದೊಡ್ಡ ದೊಡ್ಡ ಅವಯವಗಳವರೆಗೂ ಎಲ್ಲವನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಒಗ್ಗೂಡಿಸುತ್ತದೆ/ಬಂಧಿಸುತ್ತದೆ. ನಮ್ಮ ದೇಹದ ಎಲ್ಲಾ ಧಾತುಗಳು ಮತ್ತು ಅವಯವಗಳು ಸರಾಗವಾಗಿ ಕಾರ್ಯ ಮಾಡಲು ಸಾಕಷ್ಟು ಪ್ರಮಾಣದಲ್ಲಿ 'ಸ್ನೇಹ' ಬೇಕೇ ಬೇಕು. Zero fat diet ಅನ್ನೋ ಮೂರ್ಖತನದ ಹೆಸರಿನಲ್ಲಿ ದೇಹವನ್ನು ದಂಡಿಸಿ ಆರೋಗ್ಯವನ್ನು ಹಾಳು ಮಾಡಿಕೊಂಡಿರುವ ಅನೇಕ ಉದಾಹರಣೆಗಳನ್ನ ನಾವು ನಮ್ಮ ಆಸ್ಪತ್ರೆಯಲ್ಲಿ ನಿತ್ಯ ನೋಡುತ್ತೇವೆ. ದೇಹದಲ್ಲಿ ಸ್ನೇಹ/ಜಿಡ್ಡು ಕಡಿಮೆಯಾದರೆ ದೇಹವು ಒಳಗೆ ತನ್ನ ಸುಸ್ಥಿತಿಯನ್ನು ಕಳೆದುಕೊಂಡು ದುರ್ಬಲವಾಗುತ್ತೆ. ಇದೇ ಎಲ್ಲ ರೋಗಗಳಿಗೆ ಆಹ್ವಾನ. ಹಾಗಾಗಿ, ನಮ್ಮ ಜೀವನದಲ್ಲಿ ಸ್ನೇಹ ಅಂದರೆ friendship ಎಷ್ಟು ಮುಖ್ಯವೋ, ಅಷ್ಟೇ ಮುಖ್ಯವಾಗುತ್ತೆ ಮತ್ತೊಂದು ಸ್ನೇಹ ಅಂದರೆ lipids!

ಸ್ನೇಹವನ್ನು ನಾವು ದಿನನಿತ್ಯ ಎರಡು ವಿಧದಲ್ಲಿ ದೇಹಕ್ಕೆ ನೀಡಬಹುದು – ಬಾಹ್ಯ ಮತ್ತು ಆಭ್ಯಂತರ. ಬಾಹ್ಯ ಅಂದರೆ ಹೊರಗಿನಿಂದ ಸ್ನೇಹಪೂರೈಕೆ – ಅಭ್ಯಂಗದ ಮೂಲಕ. ಅಭ್ಯಂಗಂ ಆಚರೇತ್ ನಿತ್ಯಮ್! ಅನ್ನುವುದು ಶಾಸ್ತ್ರ ವಾಕ್ಯ – ಅಂದರೆ 'ನಾವು ನಮ್ಮ ಆರೋಗ್ಯ ರಕ್ಷಣೆಗೆ ಪ್ರತಿನಿತ್ಯ ಅಭ್ಯಂಗ'ವನ್ನು ಮಾಡಲೇಬೇಕು. ಖಾಲಿ ಹೊಟ್ಟೆಯಲ್ಲಿ, ಬೆಳಿಗ್ಗೆ ಸೂಕ್ತವಾದ ಎಣ್ಣೆ/ ತುಪ್ಪ ಅಥವಾ ಬೆಣ್ಣೆಯನ್ನು ಬಳಸಿ ಅದನ್ನು ಸರಿಯಾದ ಕ್ರಮದಲ್ಲಿ ತಲೆಯಿಂದ ಹಿಡಿದು ಕಾಲುಗಳವರೆಗೆ ಹಚ್ಚಿ ನಂತರ ಉಗುರು ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡುವುದನ್ನು 'ಆಯುರ್ವೇದ ಅಭ್ಯಂಗ' ಎಂದು ಕರೆದಿದೆ. ಆಯುರ್ವೇದ ಆಚಾರ್ಯರು ಹೇಳುತ್ತಾರೆ ದಿನನಿತ್ಯ ಊಟ ಮಾಡುವುದು, ಮಲಗುವುದು ದೇಹಕ್ಕೆ ಎಷ್ಟು ಮುಖ್ಯವೋ ಅಭ್ಯಂಗವೂ ಅಷ್ಟೇ ಮುಖ್ಯ ಎಂದು. ಅಭ್ಯಂಗವು ಬಾಹ್ಯವಾಗಿ ಶರೀರಕ್ಕೆ ಸ್ನೇಹವನ್ನು ಪೂರೈಸುವ ಅತ್ಯಂತ ಸೂಕ್ತವಾದ ಕ್ರಮ. ಇನ್ನು ಶರೀರಕ್ಕೆ ಸ್ನೇಹವನ್ನು ನೀಡಬಹುದಾದ ಮತ್ತೊಂದು ರೀತಿ ಎಂದರೆ ಅದು ಆಭ್ಯಾಂತರ– ಅಂದರೆ ಆಹಾರದ ಮೂಲಕ ಶರೀರಕ್ಕೆ ಬೇಕಾದ ಸ್ನೇಹವನ್ನು ನೀಡುವುದು. ಪಾಶ್ಚಿಮಾತ್ಯ ವೈದ್ಯಶಾಸ್ತ್ರವೂ ಲಿಪಿಡ್‌ಗಳು ಎಲ್ಲ ಜೀವಕೋಶಗಳ ಜೀವಾಳ ಅಂತ ಹೇಳ್ತಾರೆ. Blood, lymph, hormones, enzymes– ಎಲ್ಲದರ ಉತ್ಪತ್ತಿಗೂ lipids ಬೇಕು! Endocrine, reproductive, digestive, nervous system greatly depend on lipids. ಒಟ್ಟಾರೆ ನಮ್ಮ ಆರೋಗ್ಯದ ಸ್ಥಿತಿಯನ್ನು ಕಾಪಾಡಿಕೊಳ್ಳಲು, ರೋಗ ಬಾರದಂತೆ ನೋಡಿಕೊಳ್ಳಲು, ಕೊನೆಗೆ ರೋಗವನ್ನು ಪರಿಹರಿಸಲು ಸಹ ಸ್ನೇಹ ನಿತ್ಯವೂ ಬೇಕೇ ಬೇಕು. ಆಭ್ಯಂತರ ಸ್ನೇಹದ ಪ್ರಯೋಜನಗಳ ಪಟ್ಟಿ ಮಾಡ್ತಾ ಹೋದ್ರೆ, ಇದೇ ರೀತಿಯ ಎರಡು–ಮೂರು articles publish ಮಾಡಬಹುದು. ಅಷ್ಟು proven facts ಇದೆ. ಮತ್ತೊಮ್ಮೆ ಈ ವಿಷಯದ ಬಗ್ಗೆ ಹಂಚಿಕೊಳ್ಳುತ್ತೇನೆ. ಈಗ ಬಾಹ್ಯ ಸ್ನೇಹವಾದ ಅಭ್ಯಂಗ ಯಾಕೆ ಮಾಡಬೇಕು ಅನ್ನೋ ಪ್ರಶ್ನೆಯನ್ನು ಹಲವಾರು ಜನ ಹಲವಾರು ಬಾರಿ ಕೇಳಿದ್ದಾರೆ. ಹಾಗಾಗಿ ಆ ಪ್ರಶ್ನೆಗೆ ಉತ್ತರವನ್ನು ನಿಮ್ಮ ಮುಂದೆ ಇಡುತ್ತೇನೆ.

ಅಭ್ಯಂಗದ ಮೊದಲ ಭಾಗ – ಅಂದರೆ ತಲೆಗೆ ಅಥವಾ ನೆತ್ತಿಗೆ ನಿತ್ಯವೂ ಚೆನ್ನಾಗಿ ಎಣ್ಣೆಯನ್ನು ಹಾಕುವುದು. ನೆನಪಿರಲಿ ಇದು ಕೇವಲ ಕೂದಲು ಚೆನ್ನಾಗಿ ಬೆಳೆಯುವುದಕ್ಕೆ ಮಾತ್ರವಲ್ಲ. ಶಿರಸ್ಸಿಗೆ ನಿತ್ಯವೂ ಎಣ್ಣೆಯ ಅಭ್ಯಂಗ ಮಾಡುವುದರಿಂದ ಇಂದ್ರಿಯಗಳ ಕಾರ್ಯಕ್ಷಮತೆ ಹೆಚ್ಚುತ್ತದೆ. ದೃಷ್ಟಿ ಶಕ್ತಿ, ಗಂಧಶಕ್ತಿ ಮತ್ತು ಶ್ರವಣ ಶಕ್ತಿ ಹೆಚ್ಚುತ್ತದೆ. ತಲೆಯ ನೋವು, ತಲೆಯ ರೋಗಗಳು ನಿವಾರಣೆಯಾಗುತ್ತದೆ. ಕೇಶ ವೃದ್ಧಿಸುತ್ತದೆ. ಒಳ್ಳೆಯ ನಿದ್ದೆಯನ್ನು ನೀಡಿ ಕಾರ್ಯಕ್ಷಮತೆ ಮತ್ತು ಪ್ರಸನ್ನತೆಯನ್ನು ನೀಡುತ್ತದೆ. ಕ್ರೋಧವನ್ನು ನೀಗಿಸಿ ತಾಳ್ಮೆಯನ್ನ ಹೆಚ್ಚಿಸುತ್ತದೆ. ಶಿರೋ ಅಭ್ಯಂಗದಿಂದ ಮನಸ್ಸಿನ ಶಾಂತಿಯ ಅನುಭವ ಖಂಡಿತ.

ಅಭ್ಯಂಗದ next step – ಕಿವಿಗೆ ಎಣ್ಣೆಯ ಹನಿಗಳನ್ನು ಹಾಕಿಕೊಳ್ಳುವುದು. ನಿತ್ಯವೂ ಕಿವಿಗಳಿಗೆ ತೈಲವನ್ನು ಹಾಕುವುದರಿಂದ ಕಿವಿಗೆ ಬರುವ ರೋಗಗಳು, ಕಿವಿಯ ಕೊಳೆ, ಕಶ್ತಿನ ಸಮಸ್ಯೆ, ಹಲ್ಲಿನ ಸಮಸ್ಯೆ, ಅತಿಶಬ್ದಶ್ರವಣ, ಕಿವುಡುತನ ಮುಂತಾದವುಗಳು ಬರುವುದಿಲ್ಲ. ಕಿವಿಗೆ ಎಣ್ಣೆ ಹಾಕುವುದರಿಂದ ಕಿವಿ ಸೋರುತ್ತದೆ ಹಾಗೂ ತೊಂದರೆ ಉಂಟಾಗುತ್ತದೆ ಅನ್ನುವುದು ಕೆಲವರ ಭಾವನೆ. ಇದು ಸಂಪೂರ್ಣ ತಪ್ಪಲ್ಲದಿದ್ದರೂ ಪೂರ್ತಿ ಸರಿಯಂತೂ ಅಲ್ಲ. ಕಿವಿಗೆ ಹಾಕುವ ತೈಲದ ಪ್ರಮಾಣ, ಕ್ರಮ , ತೈಲದಲ್ಲಿ ಸೇರಿರುವ ನೀರಿನ ಅಂಶದಿಂದಾಗಿ ತೊಂದರೆ ಸಹಜ. ಆದರೆ ಹಾಕುವ ತೈಲ ಬೆಚ್ಚಗಿದ್ದು, ಸ್ವಲ್ಪ ಮಾತ್ರ ಹಾಕಿದ್ದು, ಸ್ವಲ್ಪ ಹೊತ್ತು ಬಿಟ್ಟು ಕಿವಿಯಿಂದ ಸಂಪೂರ್ಣ ತೆಗೆದು, ಸ್ನಾನ ಮಾಡಿ, ಒಣಗಿಸಿಕೊಂಡರೆ ತೊಂದರೆ ಇಲ್ಲ, Tympanic Membrane-ಕಿವಿಯ ಒಳಗಿರುವ ಶಬ್ದ ಗ್ರಾಹಕ ಪದರವು ವಾಯುಭೂತಾಶ್ರಿತವಾದ ಚರ್ಮದ ರೂಪಾಂತರವಾದ್ದರಿಂದ ಅದರ ದೀರ್ಘಕಾಲೀನ ಬಾಳ್ವಿಕೆಗೆ ತೈಲ ಸಂಪರ್ಕ ಅತ್ಯಂತ ಅವಶ್ಯಕ.

ಹಾಗೆಯೇ, ಕಿವಿಯ ಒಳಗೆ ಪ್ರತಿದಿನ ಸ್ರವಿಸುವ ಮಲಾಂಶವನ್ನು ಬೆಚ್ಚಗಿನ ತೈಲವು ದ್ರವೀಕರಿಸಿ, ಹೊರ ಹಾಕಿ ಇಂದ್ರಿಯವನ್ನು ಶುದ್ಧೀಕರಿಸುತ್ತದೆ. ಹಾಗಾಗಿ ಕಿವಿಗೆ ನಿತ್ಯ ಎಣ್ಣೆ ಹಾಕಲೇಬೇಕು. ಕಿವಿಗೆ ಎಣ್ಣೆ ಹಾಕಿದ ಮೇಲೆ ಮಾಡುವ ಸಂಪೂರ್ಣ ಶರೀರ ಅಭ್ಯಂಗವು ಜ್ವರವನ್ನು ನಾಶ ಮಾಡುತ್ತದೆ.It has anti–ageing effect and slows down ageing. Ageing is mainly because of oxidation – free radicle release. ಅಭ್ಯಂಗವು oxidation processನ ಕಡಿಮೆ ಮಾಡುತ್ತದೆ. ಕಬ್ಬಿಣದ ತುಕ್ಕನ್ನು ತಡೆಯಲು ನಾವು ಎಣ್ಣೆ ಹಚ್ಚುತ್ತೇವೆ, ಅಲ್ಲವೇ? ಹಾಗೆಯೇ ಶರೀರಕ್ಕೂ ಎಣ್ಣೆ ಹಚ್ಚುವುದರಿಂದ ಮುಪ್ಪುತನವನ್ನು ನಿವಾರಿಸಬಹುದು/ ನಿಧಾನಿಸಬಹುದು.

ಅಭ್ಯಂಗವು ರೋಗ ನಿವಾರಕ ಶಕ್ತಿಯನ್ನು ಹೆಚ್ಚಿಸುತ್ತದೆ! ಹೌದು ಇದು ಮಾಡುತ್ತೆ! ಎಣ್ಣೆ ಹಚ್ಚಿ ಚರ್ಮವನ್ನು ಉಜ್ಜುವುದರಿಂದ ರಕ್ತ ಸಂಚಾರ ಹೆಚ್ಚಾಗಿ, ಒಳ್ಳೆ ರಕ್ತ ಜೀವಕಣಗಳ ಒಳಗೆ ಹೋಗಿ, ಪೋಷಣೆ ನೀಡಿ, ಹೊರಗೆ ಬರಬೇಕಾದರೆ ಮಲವನ್ನು/ toxinಗಳನ್ನು ತೆಗೆದುಕೊಂಡು ಬಂದು ಜೀರ್ಣಾಂಗದಲ್ಲಿ dumpಮಾಡುತ್ತೆ. ಅಲ್ಲಿಂದ ಮಲದ ಮೂಲಕ ದೇಹದಿಂದ ಆಚೆ ಕಳಿಸುತ್ತೆ. ಅಭ್ಯಂಗವು ದೇಹದಲ್ಲಿ ಟಾಕ್ಸಿನ್ ಶೇಖರಣೆ ಆಗುವುದಕ್ಕೆ ಬಿಡುವುದಿಲ್ಲ. This is Daily Detox. ಮನೆಯನ್ನು ಹೇಗೆ ನಿತ್ಯ ಸ್ವಚ್ಛ ಮಾಡ್ತಾ ಇದ್ದರೆ ಕೊಳೆ ಸೇರಿಕೊಳ್ಳುವುದಿಲ್ಲವೋ, ಯಾವಾಗಲೂ ಶುದ್ಧವಾಗಿರುತ್ತೋ, ಅದೇ ರೀತಿ ಅಭ್ಯಂಗದಿಂದಲೂ ದೇಹದ ಪ್ರತಿಯೊಂದು ಜೀವಕಣವೂ ಕೂಡ ಶುದ್ಧವಾಗಿರುತ್ತೆ, ಚುರುಕಾಗಿರುತ್ತೆ. ಇದರಿಂದ ರೋಗ ನಿವಾರಣೆ ದಿನ ನಿತ್ಯವೂ ಸಹಜವಾಗಿ ಆಗ್ತಾ ಇರುತ್ತೆ.

ಅಭ್ಯಂಗವು infectionಗಳನ್ನು ತಡೆಗಟ್ಟುತ್ತದೆ. ಸಿಂಪಲ್ ಆಗಿ ಹೇಳಬೇಕು ಅಂದರೆ ವೈರಸ್, ಬ್ಯಾಕ್ಟೀರಿಯಾ ಗಳು ಸ್ನೇಹ ಮಾಧ್ಯಮದಲ್ಲಿ– fat mediumನಲ್ಲಿ ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತದೆ. ಅದರಲ್ಲಿ ಅವುಗಳು ಜೀವಿಸಲು ಸಾಧ್ಯವಾಗುವುದಿಲ್ಲ. Micro–organisms cannot survive in fat media. ಸೂಕ್ಷ್ಮ ಜೀವಿಗಳು ನಮ್ಮ ದೇಹವನ್ನು ಪ್ರವೇಶ ಮಾಡುವುದು ಹೇಗೆ, ಹೇಳಿ? ಚರ್ಮದ ಮೂಲಕ ಮತ್ತು ನವ ರಂಧ್ರಗಳ ಮೂಲಕ. ಅಭ್ಯಂಗ ಮಾಡುವುದರಿಂದ ಚರ್ಮಕ್ಕೆ, ಕಿವಿಗೆ, ಮೂಗಿಗೆ, ಬಾಯಿಗೆ , ಗುದದ್ವಾರಕ್ಕೆ ಸ್ನೇಹವನ್ನು ಹಾಕುವುದರ ಮೂಲಕ ಈ ದ್ವಾರಗಳಲ್ಲಿ ಸ್ನೇಹದ ಪದರವು ಉತ್ಪತ್ತಿಯಾಗುತ್ತದೆ. This is a security system.ಯಾವುದೇ ಸೂಕ್ಷ್ಮಜೀವಿಗಳಾದರೂ ಈ ಸ್ನೇಹ ಮಾಧ್ಯಮದ ಸಂಪರ್ಕಕ್ಕೆ ಬಂದ ಕೂಡಲೇ ಅವು ಅಲ್ಲೇ ನಾಶವಾಗಿ ಹೋಗುತ್ತೆ . ಹೀಗಿದ್ದಾಗ, ದೇಹದ ಒಳಗೆ ಅವುಗಳು ಹೋಗಿ ರೋಗ ಉಂಟು ಮಾಡುವ ಸಂಭವವೆಲ್ಲಿ? ಸ್ನೇಹಿತರೆ, ಈ ಒಂದು ಸ್ನೇಹ ಅಭ್ಯಂಗದ ಅಭ್ಯಾಸದಿಂದಲೇ ಕೋವಿಡ್ ಸಮಯದಲ್ಲಿ ಎಷ್ಟೋ ಆಯುರ್ವೇದ ವೈದ್ಯರು ತಾವು ಕರೋನಾ ಪಾಸಿಟಿವ್ ಆಗದೆ ಹಲವಾರು ರೋಗಿಗಳನ್ನು positivelyಗುಣ ಮಾಡುವುದಕ್ಕೆ ಸಾಧ್ಯವಾಗಿದ್ದು.

ಇನ್ನು, ಅಭ್ಯಂಗದ ಸತತ ಅಭ್ಯಾಸವು ದಿನನಿತ್ಯದ ಒತ್ತಡವನ್ನು ಉಪಶಮನ ಮಾಡುತ್ತೆ.ಛಿಥಿಛಿಚ್ಚಿಜ ಪ್ರಕಾರ ಅಭ್ಯಂಗ ಮಾಡುವುದರಿಂದ ದೇಹದ happy chemicals – Dopamine, serotonin, oxytocin, endorphinಗಳ ಸ್ರವಣವಾಗಿ ಒತ್ತಡ ನಿವಾರಣೆ ಆಗುತ್ತದೆ. ಇದು ಮಾನಸಿಕ ಲವಲವಿಕೆ, ಉತ್ಸಾಹವನ್ನು ನೀಡಿ ಇಡೀ ದಿನ ಪ್ರಸನ್ನವಾಗಿರಲು ಸಹಾಯಕಾರಿ.

ಆಯುರ್ವೇದದ ತ್ರಿದೋಷಗಳಲ್ಲಿ ವಾತದೋಷವು ಬಹು ಮುಖ್ಯವಾದದ್ದು. ಇದಕ್ಕೆ ಕಾರಣ ಹಲವು. ಈ ದೋಷವು ಸುಸ್ಥಿತಿಯಲ್ಲಿ ಇದ್ದಾಗ ಹೇಗೆ ದೇಹವನ್ನು ಪಾಲಿಸುತ್ತದೆಯೋ ಅದೇ ರೀತಿ ನಮ್ಮ ತಪ್ಪು ಆಹಾರ–ವಿಹಾರ–ವಿಚಾರಗಳಿಂದ ವಿಕೃತವಾದಾಗ ದೇಹದ ಎಲ್ಲಾ ಕ್ರಿಯೆಗಳನ್ನು ತಲೆಕೆಳಗೆ ಮಾಡುವುದರಲ್ಲಿ ಸಂಶಯವಿಲ್ಲ. ಹಾಗಾಗಿ ಇದನ್ನು ಜೋಪಾನವಾಗಿ ನೋಡಿಕೊಳ್ಳುವುದು ಆರೋಗ್ಯ ಪಾಲನೆಯ ಬಹು ಮುಖ್ಯವಾದ ಭಾಗ. ಉತ್ತಮವಾದ ತೈಲದಿಂದ ದಿನನಿತ್ಯ ಅಭ್ಯಂಗ ಮಾಡುವ ಅಭ್ಯಾಸವು ಈ ವಾತದೋಷವನ್ನು ಸದಾ ಸುಸ್ಥಿತಿಯಲ್ಲಿ ಇಡಲು ರಾಮಬಾಣದಂತೆ ಸಹಾಯಕಾರಿ. ಆಯುರ್ವೇದ ಹೇಳುತ್ತೆ 'ನಿದ್ದೆ' ಆರೋಗ್ಯದ ಉಪಸ್ತಂಭ ಎಂದು. ನಿದ್ದೆ ಸರಿಯಾಗಿ ಇದ್ದರೆ ಮಾತ್ರ ಸ್ವಾಸ್ಥ್ಯ ಸಂಪಾದನೆ ಸಾಧ್ಯ. ದಿನನಿತ್ಯ ಮಾಡುವ ಅಭ್ಯಂಗವು ನಮಗೆ ಗಾಢವಾದ ಸಕಾಲಿಕ ನಿದ್ದೆಯನ್ನ ನೀಡುತ್ತದೆ. ನಿದ್ದೆಯ ಸಮಸ್ಯೆ ಇದ್ದರೆ ಇಂದಿನಿಂದಲೇ ಅಭ್ಯಂಗವನ್ನು ಶುರು ಮಾಡಿ ಸುಖವಾದ ನಿದ್ರೆಯನ್ನು ಅನುಭವಿಸಿ. ಅಭ್ಯಂಗವು ಅಗ್ನಿಯನ್ನು, ತನ್ಮೂಲಕ ಜೀರ್ಣಶಕ್ತಿಯನ್ನು ಚುರುಕು ಮಾಡಿ, ಆಹಾರದಲ್ಲಿರುವ ಪೋಷಕಾಂಶಗಳನ್ನು ದೇಹದ ಕಣಗಳು ಹೀರಿಕೊಳ್ಳುವಂತೆ ಮಾಡುವುದರಿಂದ deficiencyಗಳನ್ನು ನಿವಾರಿಸುತ್ತದೆ. ಕರುಳಿನ ಚಟುವಟಿಕೆಯನ್ನು ಉತ್ತೇಜಿಸಿ ಮಲ ಪ್ರವೃತ್ತಿ ಸರಾಗವಾಗಿ ಮಾಡುವುದರ ಜೊತೆಗೆ ಟಾಕ್ಸಿನ್‌ಗಳನ್ನು ದೇಹದಿಂದ ಹೊರಹಾಕುತ್ತದೆ.

ಸಂಧಿ–ಮೂಳೆಗಳಿಗೆ ಜಡ್ಡಿನಾಂಶ ತಲುಪಿಸಿ, ಪೋಷಿಸುವುದರ ಮೂಲಕ ಸಂಧಿ ನೋವು, ಮೂಳೆ ಸವೆತ ಹಾಗೂ ಮೈ–ಕೈ ನೋವುಗಳನ್ನು ಪರಿಹರಿಸುತ್ತದೆ. ಮಾಂಸಖಂಡಗಳಿಗೆ, ಪೇಶಿಗಳಿಗೆ ಸ್ಥಿರತೆ ನೀಡಿ ಒಳ್ಳೆಯ muscle toneನೀಡುತ್ತದೆ. ಆಭ್ಯಂಗವು ಚರ್ಮದ ಕಾಂತಿಯನ್ನು ಹಾಗೂ ಕೂದಲಿನ ಆರೋಗ್ಯವನ್ನು ಹೆಚ್ಚಿಸುವುದು proven fact! ಚರ್ಮದಲ್ಲಿ nerve–endings ಇರುವುದರಿಂದ ದಿನನಿತ್ಯ ಅಭ್ಯಂಗದ ಅಭ್ಯಾಸವು ನರತಂತಿಗಳನ್ನು ಪೋಷಿಸಿ, Nervous systemನ್ನು ಬಲಿಷ್ಠಗೊಳಿಸುತ್ತದೆ. ಬುದ್ಧಿ ಶಕ್ತಿ ಹಾಗೂ ನೆನಪಿನ ಶಕ್ತಿಯನ್ನು ವರ್ಧಿಸಿ ಮಾನಸಿಕ ಸ್ಥಿರತೆಗೆ ಕಾರಣ ಈ ಅಭ್ಯಂಗ. ಆಗಲೇ ಹೇಳಿದ ಹಾಗೆ ಇಂದ್ರಿಯಗಳನ್ನು ಬಲಿಷ್ಠ ಮಾಡಿ ನೂರು ವರ್ಷಗಳ ಕಾಲ ಕಣ್ಣು, ಕಿವಿ, ಮೂಗು, ಬಾಯಿ ಹಾಗೂ ಚರ್ಮಗಳನ್ನು ಚುರುಕಾಗಿರಿಸುತ್ತದೆ. ದಿನನಿತ್ಯದ ಶ್ರಮ ಹಾಗೂ ಸುಸ್ತನ್ನು ನಿವಾರಿಸಿ ಶಕ್ತಿ ಹಾಗೂ ಲವಲವಿಕೆಯನ್ನು ನೀಡುತ್ತದೆ.

ಒಟ್ಟಾರೆ ಅಭ್ಯಂಗವು ದೇಹ–ಇಂದ್ರಿಯ–ಮನಸ್ಸುಗಳನ್ನು ದಿನನಿತ್ಯ ಶೋಧಿಸಿ, ಪೋಷಿಸಿ, ರಕ್ಷಿಸಿ ನಮ್ಮನ್ನು ಶತಾಯುಷಿಗಳನ್ನಾಗಿ ಮಾಡುವುದರಲ್ಲಿ ಯಾವುದೇ ಸಂಶಯವಿಲ್ಲ. ಇದಕ್ಕಿಂತ ಉತ್ತಮವಾದ Healthcare practice ಇನ್ಯಾವುದಿದೆ ಹೇಳಿ?! It is indeed the complete healthcare package. ಅದಕ್ಕೆ ತಾನೇ ಆಚಾರ್ಯರು ಹೇಳಿದ್ದು ಅಭ್ಯಂಗಂ ನಿತ್ಯ ಆಚರೇತ್!

ಮೊಬೈಲ್ ಫೋನ್: ಬದುಕಿನ ವೈಖರಿಯನ್ನೇ ಬದಲಿಸಿದ ಅವಿಷ್ಕಾರ?

ವಿಶ್ಲೇಷಣೆ

ರಮಾನಂದ ಶರ್ಮಾ
vveditoped@gmail.com

ವರ್ಷಗಳ ಹಿಂದಿನ ಮಾತು. ಸಿಟಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದಾಗ ನಡೆದ ಘಟನೆ. ಮುಂದಿನ ಸೀಟ್‌ನಲ್ಲಿ ಇಬ್ಬರು ಮಹಿಳೆಯರು ಬಸ್ಸುಹತ್ತಿದ ಕ್ಷಣದಿಂದ ನಿರಂತರವಾಗಿ ಹರಟುತ್ತಿದ್ದರು. ಅವರ ಮನೆ ಸುದ್ದಿ, ಇವರ ಮನೆಸುದ್ದಿ, ಅತ್ತೆ– ಸೊಸೆ ಜಗಳ, ದಾಯಾದಿ ಕಲಹ, ಅ ಹುಡುಗಿ ಇವನೊಂದಿಗೆ ಕುಚು ಕುಚು, ಈ ಹುಡುಗ ಅವಳೊಂದಿಗೆ ಕುಚು ಕುಚು, ನಿನ್ನೆ ನೋಡಿದ ಧಾರಾವಾಹಿ, ಬಡಾವಣೆಗೆ ಬಂದ ಹೊಸ ಕುಟುಂಬ, ಅವನಿಗೆ ನೌಕರಿ ಸಿಕ್ಕಿದ್ದು, ಇವಳಿಗೆ ನೌಕರಿ ಹೋಗಿದ್ದು, ದುಬಾರಿ ಡಿಪಾರ್ಟಮೆಂಟಲ್ ಸ್ಟೋರ್ಸ್, ಪರ್ಸ್‌ಗೆ ನಿಲುಕದ ಮಾಲ್, ಪಕ್ಕದ ಮನೆ ಪಿಜಿಯಲ್ಲಿರುವ ಹುಡುಗ– ಹುಡುಗಿಯರ ಬದುಕು ಮುಂತಾದವುಗಳು ಅವರ ಪಿಸುಮಾತಿನ ಹರಟೆಯಲ್ಲಿ ಹಿಂದೆ–ಮುಂದೆ, ಅಚೆ– ಈಚೆ ಕುಳಿತವರಿಗೆ ಸರಿಯಾಗಿ ಕೇಳುವಂತೆ ಕಿವಿ ಮೇಲೆ ಬೀಳುತ್ತಿತ್ತು. ಅವರ ಹರಟೆಯಲ್ಲಿ ಅದೆಷ್ಟೋ ಸಂಸಾರಗಳು, ಅಕ್ಕಪಕ್ಕದವರು, ಸಂಬಂಧಿಗಳು, ಅಪರಿಚಿತರು ಮತ್ತು ಮಿತ್ರರು ಮಿಂಚಿ ಮಾಯವಾದರು. ಕೊನೆಗೊಮ್ಮೆ ತಮ್ಮ ನಿಲ್ದಾಣ ಬರಲು ಈ ಮಹಿಳೆಯರು, ಇನ್ನೊಬ್ಬರ ಮನೆ ಸುದ್ದಿ ನಮಗೇಕೆ?ನಮ್ಮದನ್ನು ನಾವು ಏಗಿ ಕೊಂಡರೆ ಸಾಕು ಎನ್ನುತ್ತಾ ಕೆಳಗಿಳಿದರು. ಇದನ್ನು ಘಂಟೆಯಿಂದ ಆಲಿಸುತ್ತಿದ್ದ ಸಹ ಪ್ರಯಾಣಿಕನೊಬ್ಬ ಈವರೆಗೆ ಮಾತನಾಡಿದ್ದು ಯಾರ ಮನೆ ಸುದ್ದಿಯಮ್ಮ ಎನ್ನಲು, ಕೆಲವರು ಘೊಳ್ಳನೆ ನಕ್ಕರು. ಅ ಮಹಿಳೆಯರು ಸ್ವಲ್ಪಮುಖ ಸೊಟ್ಟಗೆ ಮಾಡಿ ದುರುಗುಟ್ಟಿ ನೋಡಿ ಬಸ್ಸು ಇಳಿದು ಹೋದರು.

ಇಂದು ಈ ದೃಶಾವಳಿ ಬಹುತೇಕ ಮಾಯವಾಗಿದೆ. ಇಂದು ಬಸ್ಸಿನಲ್ಲಿ, ಅದು ನಗರ ಸಾರಿಗೆ ಇರಬಹುದು ಅಥವಾ ದೂರ ಸಾರಿಗೆ ಇರಬಹುದು, ರಾತ್ರಿ ಬಸ್ಸು ಇರಹುದು ಅಥವಾ ಹಗಲಿನ ಬಸ್ಸು ಇರಬಹುದು ಸಾದಾ ಡಕೋಟಾ ಬಸ್ಸು ಇರಬಹುದು ಅಥವಾ ಆದುನಿಕ ಅವಿಷ್ಕಾರಗಳನ್ನು ಮೈಗೂಡಿಸಿಕೊಂಡಿರುವ ಎಕ್ಸಪ್ರೆಸ್ ಬಸ್ಸುಗಳು ಇರಬಹುದು, ಪ್ರಯಾಣಿಕರು ಒಂದು ರೀತಿಯಲ್ಲಿ ಮೌನ ವ್ರತ ಆಚರಿಸುವಂತೆ ಕಾಣತ್ತದೆ. ಯಾರೂ ಅಕ್ಕಪಕ್ಕದವರೊಂದಿಗೆ ಹರಟುವುದು ಕಾಣುವುದಿಲ್ಲ. ಅವರು ಪರಿಚಿತರು ಮಿತ್ರರು, ಸಂಬಂಧಿಗಳು, ಅಪರಿಚಿತರು, ಅಣ್ಣ–ತಂಗಿ, ಅಕ್ಕ– ತಮ್ಮ, ತಾಯಿ–ತಂದೆ ಹೀಗೆ ಯಾರೇ ಇರಬಹುದು, ಎಲ್ಲರೂ ತಮ್ಮಷ್ಟಕ್ಕೆ ತಾವು ಮೊಬೈಲ್ ನೋಡುತ್ತಾ ತಮ್ಮದೇ ಲೋಕದಲ್ಲಿ ಕುಳಿತಿರುತ್ತಾರೆ. ಅವರು ಮೊಬೈಲ್‌ನಲ್ಲಿ ಇಷ್ಟು ಮಗ್ನರಾಗಿರುತ್ತಾರೆ ಎಂದರೆ, ಅದೆಷ್ಟೋ ಪ್ರಯಾಣಿಕರು ತಾವಿಳಿಯುವ ಸ್ಥಳವನ್ನು ಮರೆತು ಮುಂದಿನ ಯಾವುದೋ ಸ್ಟಾಪ್‌ನಲ್ಲಿ ದಿಢೀರ್ ಇಳಿಯಲು ಮುನ್ನುಗ್ಗುತ್ತಾರೆ. ತಮ್ಮ ತಪ್ಪಿಗೆ ತಮ್ಮ ಸ್ಟಾಪ್‌ನ್ನು ನಿರ್ವಾಹಕ ತಮಗೆ ನೆನಪಿಸಲಿಲ್ಲವೆಂದು ಜಗಳ ಕಾಯುತ್ತಾರೆ. ನಿಗದಿತ ಸ್ಟಾಪ್‌ನಲ್ಲಿ ಇಳಿಯದೆ ಹೆಚ್ಚುವರಿ ದೂರವನ್ನು ಅನಧಿಕೃತವಾಗಿ ಪ್ರಯಾಣಿಸಿದ್ದಕ್ಕೆ ಶುಲ್ಕನೀಡಲು ನಿರಾಕರಿಸಿ ಇನ್ನೊಂದು ರಾದ್ಧಾಂತ ಬೇರೆ. ಇದು ಪ್ರಯಾಣಿಕ ಅತ್ತಿತ್ತ ನೋಡದೆ ಮೊಬೈಲ್‌ನಲ್ಲಿ ಮುಳುಗಿರುವುದಿಂದಾದ ಪ್ರಮಾದ. ಅದೆಷ್ಟೋ ಪ್ರಯಾಣಿಕರು ನಿರ್ವಾಹಕನಿಂದ ಟಿಕೆಟ್ ಕೇಳಿ ಪಡೆಯಲು ಮರೆಯುತ್ತಾರೆ. ಟಿಕೆಟ್ ಚೆಕಿಂಗ್‌ಗೆ ಬಂದಾಗ ನಿರ್ವಾಹಕನನ್ನೇ ದೂರುವುದು ಮತ್ತು ತರಾಟೆಗೆ ತೆಗೆದುಕೊಳ್ಳುವುದು ತೀರಾ ಮಾಮೂಲು. ಹಾಗೆಯೇ ಟಿಕೆಟ್ ಪಡೆಯುವಾಗ ಇಳಿಯುವ ಸ್ಥಳವನ್ನು ಸರಿಯಾಗಿ ಹೇಳದೇ ಕೊನೆಗೆ ಇಳಿಯುವಾಗ ನಿರ್ವಾಹಕನನ್ನೇ ತಪ್ಪುಗಾರರನ್ನಾಗಿ ಮಾಡಿ ಸಂಘರ್ಷಕ್ಕೆ ಇಳಿಯುತ್ತಾರೆ. ನಿರ್ವಾಹಕರು ಅದೆಷ್ಟೋ ಬಾರಿ ಪ್ರಯಾಣಿಕರನ್ನು ಮೊದಲು ಟಿಕೆಟ್ ಪಡೆಯಿರಿ, ಆ ಮೇಲೆ ಮೊಬೈಲ್ ನೋಡಿ ಎಂದು ಗದರಿಸುವ ಪ್ರಮೇಯಗಳೂ ಇಲ್ಲದಿಲ್ಲ. ಅದಕ್ಕೂ ಮಿಗಿಲಾಗಿ ಈ ಮೊಬೈಲ್‌ಗಳಿಂದಾಗಿ ಅದೆಷ್ಟೋ ಜನರು ತಮ್ಮ ಕೈ ಚೀಲ ಮತ್ತು ಇತರ ಸಾಮಾನುಗಳನ್ನು ಬಸ್ಸಿನಲ್ಲಿಯೇ ಮರೆತು ಇಳಿದು ಅಮೇಲೆ ಪರಿತಪಿಸುವವರು ಇದ್ದಾರೆ. ಹಾಗೆಯೇ ಮೊಬೈಲ್‌ನಲ್ಲಿ ಮುಳುಗಿರುವಾಗ ತಮ್ಮ ಕಿಸೆಗೆ ಕತ್ತರಿ ಬಿದ್ದರೂ ಗಮನಿಸದೆ ಕಳೆದುಕೊಂಡವರ ಸಂಖ್ಯೆ ಸಾಕಷ್ಟು ಇದೆ. ದಶಕಗಳ ಹಿಂದೆ ಮೊಬೈಲ್ ಕೇವಲ ಟೆಲಿಫೋನ್‌ಗೆ ಬದಲಿಯಾಗಿತ್ತು. ಈಗ ಇದು ಅಂಗೈಯಲ್ಲಿ ಅರಮನೆಯಾಗಿದ್ದು ಕೇಳುವುದಕ್ಕಿಂತ ಹೆಚ್ಚು ನೋಡುವುದಕ್ಕೆ ಹೆಚ್ಚು ಬಳಕೆಯಾಗುತ್ತಿದ್ದು ಇಂತಹ ಅವಾಂತರಗಳಿಗೆ ಕಾರಣವಾಗುತ್ತಿದೆ ಎಂದು ಹೇಳಲಾಗುತ್ತದೆ.

ಮದುವೆ–ಮುಂಜಿಗಳು ಬಹುತೇಕ ಬಂಧುಗಳು, ನೆಂಟರಿಷ್ಟರು, ಹಿತೈಷಿಗಳು ಮತ್ತು ಸ್ನೇಹಿತರು ದೊಡ್ಡಪ್ರಮಾಣದಲ್ಲಿ ಸೇರುವ ಸ್ಥಳವಾಗಿದ್ದು, ಬಹುದಿನಗಳ ಮೇಲೆ ಪರಸ್ಪರ ಭೇಟಿ ಆಗುತ್ತಿರುವುದಿಂದ ಸಂತಸದಿಂದ ಹಳೆಯದನ್ನುಮೆಲುಕು ಹಾಕುತ್ತಾ ಲೋಕಾಭಿರಾಮವಾಗಿ ಮತ್ತು ಆತ್ಮೀಯವಾಗಿ ಮಾತನಾಡುವುದು, ಹರಟುವುದು ತೀರಾ ಇತ್ತೀಚಿನವರೆಗೆ ಕಾಣುತ್ತಿತ್ತು. ಈಗ ಈ ದೃಶ್ಯಾವಳಿಯಲ್ಲಿ ಭಾರೀ ಬದಲಾವಣೆಯಾಗಿದೆ. ಎದುರಿಗೆ ಕಾಣಿಸಿದಾಗ, ಹಾಯ್ ಹೇಗಿದ್ದೀರಿ.. ಚೆನ್ನಾಗಿದ್ದೀರ? ಎಂದು ಮುಂ ಜಾನೆ ಎದುರಿಗೆ ಕಂಡವರಿಗೆ ಗುಡ್ ಮಾರ್ನಿಂಗ ಅಥವಾ ರಾಮ್ ರಾಮ್ ಹೇಳುವಂತೆ ಯಾಂತ್ರಿಕವಾಗಿ ಹೇಳಿ ಮೊಬೈಲ್‌ನಲ್ಲಿ ತಲ್ಲೀನರಾಗುತ್ತಾರೆ. ಮಾತುಕತೆ ಮತ್ತು ಇನ್ನಿತರ ಉಭಯ ಕುಶಲೋಪರಿಗಳು ಒಂದೆರಡು ಶಬ್ದಗಳನ್ನು ದಾಟಿ ಮುಂದೆ ಹೋಗುವುದಿಲ್ಲ. ಇಂಥ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಹವಾಮಾನ, ಪರಸ್ಪರ ಆರೋಗ್ಯ ಕ್ರಿಕೆಟ್, ರಾಜಕೀಯ, ಬಾಲಿವುಡ್, ಮ ಳೆ –ಬೆಳೆ, ಬೆಲೆ ಏರಿಕೆ, ಮಕ್ಕಳ ಮದುವೆ,ಅವರ ವಿದ್ಯಾಭ್ಯಾಸ, ಉದ್ಯೋಗ ಮುಂತಾದವುಗಳು ಅನೌಪಚಾರಿಕವಾಗಿ ತೀರಾ ಇತ್ತೀಚಿನ ವರೆಗೆ ಬರುತ್ತಿದ್ದವು. ಕೆಲವರು ತಮ್ಮ ಆತ್ಮೀರೊಂದಿಗೆ ತಮ್ಮ ಸುಖ–ದುಃಖಗಳನ್ನು ಸಂಕ್ಷಿಪ್ತವಾಗಿ ಹಂಚಿಕೊಳ್ಳುತ್ತಿದ್ದ ರು. ಈಗ ಮೊಬೈಲ್ ಕೃಪೆಯಿಂದಾಗಿ ಇವಲ್ಲವೂ ನೇಪಥ್ಯಕ್ಕೆ ಸರಿದಿದ್ದು, ಪ್ರತಿಯೊಬ್ಬರು ಖುರ್ಚಿ ಹಿಡಿದು ಕುಳಿತು ತಮ್ಮಷ್ಟಕ್ಕೆ ತಾವೇ ತಮ್ಮ ಮೊಬೈಲ್ ಲೋಕದಲ್ಲಿ ಮುಳುಗಿರುತ್ತಾರೆ. ಅವರು ಆ ಲೋಕದಿಂದ ಹೊರಜಗತ್ತಿಗೆ ಬರುವುದು ಊಟಕ್ಕೆ ಎಲೆ ಹಾಕಿದಾಗ ಅಥವಾ ಉಡುಗೊರೆಗೆ ಸಿದ್ಧವಾದಾಗ. ಕೆಲವರು ಊಟ ಮಾಡುವಾಗ ಕೂಡಾ ಮೊಬೈಲ್‌ನಲ್ಲಿ ಮಾತನಾಡುತ್ತ ಲೇ ಇರುತ್ತಾರೆ. ಮೊಬೈಲ್ ಗೀಳು ಇಷ್ಟು ಹೆಚ್ಚಿದೆಯೆಂದರೆ ಇತ್ತೀಚಿನ ಒಂದು ಮದುವೆ ಸಮಾರಂಭದಲ್ಲಿ ಪುರೋಹಿತರು ಮಧುಮಕ್ಕಳನ್ನು ಮೊಬೈಲ್ ಆಫ್ ಮಾಡದಿದ್ದರೆ ತಾವು ಮದುವೆ ಶಾಸ್ತ್ರವನ್ನು ಮುಂದುವರೆಸುವುದಿಲ್ಲ ಎಂದು ಎಚ್ಚರಿಸಿದ್ದರಂತೆ. ಮೊಬೈಲ್‌ನಿಂದಾಗಿ ಕಾರ್ಯಗಳು ಸಮಯ ಪರಿಮಿತಿಯೊಳಗೆ ಮುಗಿಯುವದಿಲ್ಲವೆಂದು ಮನೆ ಹಿರಿಯರು ಅಲವತ್ತುಕೊಳ್ಳುವುದು ಸಾಮಾನ್ಯ ದೃಶ್ಯ.

ಇಂದು ಬಹುತೇಕ ಕಚೇರಿಗಳಲ್ಲಿ ಶೀಘ್ರ ಸೇವೆ ನೀಡಲು ಸಿಬ್ಬಂದಿಗಳಿಗೆ ಮೊಬೈಲ್‌ನ್ನು ನೀಡಲಾಗುತ್ತಿದೆ ಅಥವಾ ಮೊಬೈಲ್ ಶುಲ್ಕವನ್ನು ಅವರಿಗೆ ಮರುಪೂರಣ ಮಾಡಲಾಗುತ್ತದೆ. ಇಂದು ಯಾವುದೇ ಕಚೇರಿಗೆ ಬೇಟಿ ನೀಡಿದರೂ ಸಿಬ್ಬಂದಿಗಳು ಮೊಬೈಲ್‌ನಲ್ಲಿ ಬ್ಯುಜಿ ಇರುವುದನ್ನು ನೋಡಬಹುದು. ಅವರು ಕಚೇರಿ ಕೆಲಸದಲ್ಲಿ ಇರುತ್ತಾರೋ ಅಥವಾ ಕಚೇರಿ ಕೆಲಸದ ಹೆಸರಿನಲ್ಲಿ ವೈಯಕ್ತಿಕ ಕೆಲಸದಲ್ಲಿ ಮಗ್ನರಾಗಿರುತ್ತಾರೋ ಎನ್ನುವುದು ಹೊರಗಿನವರಿಗೆ ತಿಳಿಯದು. ಒಂದು ಕಚೇರಿಯಲ್ಲಿ ಸಿಬ್ಬಂದಿಯೊಬ್ಬರು ಸಮಯ ಪರಿಮಿತಿ ಮೀರಿ ಮೊಬೈಲ್‌ನಲ್ಲಿ ಮಾತನಾಡುತ್ತಿರುವುದನ್ನು ನೋಡಿ ತನ್ನ ಕೆಲಸ ವಿಳಂಬವಾಗುವುದನ್ನು ಸಹಿಸದ ಕಚೇರಿಗೆ ಯಾವುದೋ ಕೆಲಸಕ್ಕೆ ಬಂದಿರುವ ಸಾರ್ವಜನಿಕರೊಬ್ಬರು ಅ ಸಿಬ್ಬಂದಿಯ ಮೊಬೈಲ್‌ಅನ್ನು ಕಿತ್ತು ಎಸೆದಿದ್ದರಂತೆ. ಎಷ್ಟೋ ಬಾರಿ ಸಿಬ್ಬಂದಿಗಳು ತಮ್ಮ ಖುರ್ಚಿಯಲ್ಲಿ ಕುಳಿತು ಮೊಬೈಲ್ ನೋಡುತ್ತಿರುತ್ತಾರೆ ಎನ್ನುವ ದೂರು ಕೇಳುತ್ತಿರುತ್ತದೆ.

ಯಾವುದೇ ಅವಿಷ್ಕಾರ ಅಥವಾ ಅವಕಾಶವನ್ನು ದುರುಪಯೋಗ ಪಡಿಸಿಕೊಳ್ಳುವುದರಲ್ಲಿ ನಾವು ಭಾರತೀಯರು ಮುಂದೆ ಎಂಬುದರಲ್ಲಿ ಭಿನ್ನಮತ ಇಲ್ಲ. ಅಂತೆಯೇ ಮೊಬೈಲ್ ಕೂಡಾ. ಶೀಘ್ರ ಸಂವಹನ, ಮನರಂಜನೆ ಮತ್ತು ಸಂಪರ್ಕಕ್ಕೆ ಎಂದೇ ರೂಪಿಸಲಾದ ಮೊಬೈಲ್ ಈ ಹಿಂದಿನ ಎಲ್ಲ ಇಂಥಹ ಅವಿಷ್ಕಾರಗಳನ್ನು ನಿವಾಳಿಸಿ ತೆಗೆದಿದೆ. ಗ್ರಾಮಾ ಫೋನ್, ರೇಡಿಯೋ, ಟ್ರಾನ್ಸಿಸ್ಟರ್, ಪಾಕೆಟ್ ರೇಡಿಯೋ, ಟೇಪ್ ರೆಕಾರ್ಡರ್, ಸಿಡಿ, ಇವು ಕಾಲಘಟ್ಟದಲ್ಲಿ ಆ ಕಾಲಕ್ಕೆ ತಕ್ಕಂತೆ ಜನರ ಮನ ಗೆದ್ದ ಅವಿಷ್ಕಾರಗಳು. ಅದರೆ, ಇವು ಕೆಲವು ಅನಿವಾರ್ಯವಾದ ಅಪವಾದಗಳನ್ನು ಹೊರತು ಪಡಿಸಿದರೆ, ಸಾರ್ವಕಾಲಿಕ ಉಪಯೋಗವನ್ನು ಮರೆತು ಟೀಕೆಗೆ ಒಳಗಾಗಿಲ್ಲ ಮತ್ತು ಮೊಬೈಲ್ ಎಬ್ಬಿಸಿದಂತ ಧೂಳನ್ನು ಎಬ್ಬಿಸಿರಲಿಲ್ಲ. ಇಂದು ಯಾವುದೇ ಸಮಾರಂಭಗಳು ನಡೆಯಲಿ, ಭಾಷಣ ಮಾಡುವವರನ್ನು ಬಿಟ್ಟು, ವೇದಿಕೆಯಲ್ಲಿರುವವರೂ ಸೇರಿ ಪ್ರತಿಯೊಬ್ಬರೂ ಮೊಬೈಲ್‌ನಲ್ಲಿ ತಲ್ಲೀನರಾಗಿರುತ್ತಾರೆ. ಅವರು ಮೊಬೈಲ್ ವೀಕ್ಷಿಸುತ್ತಿರುತ್ತಾರೆ ಅಥವಾ ಕ್ಷಣಕ್ಕೊಮ್ಮೆ ಅದನ್ನು ತೆಗೆದುನೋಡುತ್ತಿರುತ್ತಾರೆ. ಕಚೇರಿಗಳಲ್ಲಿ ಮೀಟಿಂಗ್ ಕರೆದಾಗ ಸಿಬ್ಬಂದಿಗಳು ಕಲಾಪದಲ್ಲಿ ಲಕ್ಷಕೊಡದೆ ಮೊಬೈಲ್‌ನಲ್ಲಿ ತಲ್ಲೀನರಾಗುತ್ತಾರೆ ಎಂದು ಎಷ್ಟೋ ಕಚೇರಿಗಳಲ್ಲಿ ಸಭೆಗೆ ಮೊಬೈಲ್ ಬಿಟ್ಟು ಬರುವಂತೆಯೋ ಅಥವಾ ಮೊಬೈಲ್ ಸ್ವಿಚ್ ಅಫ್ ಮಾಡುವಂತೆ ಕೇಳಲಾಗುತ್ತದೆಯಂತೆ. ಕಲಾಪದ ಮದ್ಯೆಯೂ ಮೊಬೈಲ್ ಬಳಸಿದ್ದಕ್ಕೆ ಕೆಲವು ಸಿಬ್ಬಂದಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಿದ ಉದಾಹರಣೆಗಳು ಇವೆಯಂತೆ.

ಮೊಬೈಲ್ ಇಂದು ಸರ್ವಾಂತರವ್ಯಾಮಿಯಾಗಿದೆ. ಸಾವಿಲ್ಲದ ಮನೆಯಿಂದ ಸಾಸಿವೆಯನ್ನಾದರೂ ತರಬಹುದು. ಆದರೆ ಮೊಬೈಲ್ ಇಲ್ಲದ ಮನೆಯನ್ನು ಹುಡುಕಲಾಗದು ಎನ್ನುವುದು ದಿಟ. ಮನೆಗೊಂದು ಅಥವಾ ಎರಡು ಮೊಬೈಲ್ ಅದರೆ ಅದು ಬೇರೆ ಮಾತು. ಅದರೆ ಇಂದು ಪ್ರತಿಯೊಬ್ಬರಿಗೂ ಮೊಬೈಲ್ ಅನಿವಾರ್ಯವಾದ ಸಂಗಾತಿಯಾಗಿದೆ. ಕೆಲವರು ಎರಡೆರಡು ಮೊಬೈಲ್‌ಗಳನ್ನು ಇಟ್ಟು ಕೊಳ್ಳುವುದು ಉತ್ಪ್ರೇಕ್ಷೆಯಲ್ಲ. ಮೊಬೈಲ್ ಇಲ್ಲದ ಬದುಕೂ ಬದುಕೇ? ಏನ್ನುವಷ್ಟು ಅದು ಜನರ ಜೀವನದಲ್ಲಿ ಹಾಸು ಹೊಕ್ಕಾಗಿದೆ. ಪಾಲಕರು ಮೊಬೈಲ್ ಕೊಡಿಸಲಿಲ್ಲವೆಂದು ಮಕ್ಕಳು ಅತ್ಮಹತ್ಯೆ ಮಾಡಿಕೊಂಡ, ಮನೆ ಬಿಟ್ಟು ಹೋದ ಎಂಬ ಉದಾಹರಣೆಗಳು ಎಷ್ಟೊಂದಿದೆ. ಮಕ್ಕಳು ಯಾವಾಗಲೂ ಮೊಬೈಲ್‌ನಲ್ಲಿ ಮುಳುಗಿರುತ್ತಾರೆ, ಓದಿನ ಕಡೆ ಮತ್ತು ಇತರ ಚಟುವಟಿಕೆಗಳ ಬಗೆಗೆ ಅವರಿಗೆ ಗಮನವಿಲ್ಲ ಎನ್ನುವುದು ಪ್ರತಿ ಮನೆಯ, ಪ್ರತಿ ತಾಯಂದಿರ ಆಳಲು. ಶಾಲೆಮುಗಿದ ಮೇಲೆ ಸಂಜೆ ಮನೆ ಯ ಎದುರುಗಡೆ ರಸ್ತೆಯಲ್ಲೋ, ಪಕ್ಕದ ಮೈದಾನದಲ್ಲೋ ಅಥವಾ ಅಪಾರ್ಟ್‌ಮೆಂಟ್‌ನ ಬೇಸ್‌ಮೆಂಟನಲ್ಲೋ ಮೊದಲಿನಂತೆ ಕ್ರಿಕೆಟ್ ಮತ್ತು ಇತರ ಆಟಗಳನ್ನು ಅಡದೇ ಮೊಬೈಲ್‌ನಲ್ಲಿ ಬೆರಳಾಡಿಸುತ್ತಾರೆ ಎಂದು ಮನೆಯ ಹಿರಿಯರು ಗೋಗರೆಯುತ್ತಾರೆ. ತಮ್ಮ ಮಕ್ಕಳು ಶೌಚಾಲಯಕ್ಕೆ ಹೋಗುವಾಗ, ಸ್ನಾನದ ಮನೆಯಲ್ಲಿರುವಾಗ ಮತ್ತು ಊಟ ಮಾಡುವಾಗ ಕೂಡಾ ಪಕ್ಕದಲ್ಲಿ ಮೊಬೈಲ್ ಇರಿಸಿಕೊಳ್ಳುತ್ತಾರೆ ಎನ್ನುವುದು ಇನ್ನೊಂದು ತೀರಾ ಸಾಮಾನ್ಯವಾದ ಗೊಣಗು. ವರ್ಷದಾಟಿರದ ಮಕ್ಕಳ ಕೈಯಲ್ಲಿ ಮೊಬೈಲ್ ನೀಡಿ ಮಕ್ಕಳನ್ನು ಸುಧಾರಿಸುವುದು ಜೋಕ್ ಅಗಿರದೆ, ವಾಸ್ತವವಾಗಿರುವುದು ಸತ್ಯ. ಇದು ಚಿಕ್ಕಮಕ್ಕಳನ್ನು ನೋಡಿಕೊಳ್ಳುವ ತೀರಾ ಇತ್ತೀಚಿನ ಪರಿಣಾಮಕಾರಿ ಕರಾಮತ್ತು ಎನ್ನಬಹುದು.

ಮೊಬೈಲ್ ನಿಸ್ಸಂಶಯವಾಗಿ ಅಂಗೈಯಲ್ಲಿ ಅರಮನೆ ಎನ್ನುವಂತೆ ಬಹುಉಪಯೋಗಿ ಅವಿಷ್ಕಾರ. ಕೇವಲ ಫೋನ್‌ಗೆ ಬದಲಾಗಿ ಅವತರಿಸಿದ ಈ ಅವಿಷ್ಕಾರ ಜನಜೀವನದ ಅವಿಭಾಜ್ಯ ಅಂಗವಾಗಿ ಬಿಡುತ್ತದೆ. ಮತ್ತು ಬದುಕಿನ ವೈಖರಿಯನ್ನು ಅಮೂಲಾಗ್ರವಾಗಿ ಈ ರೀತಿ ಬದಲಿಸಿಬಿಡುತ್ತದೆ ಎಂದೂ ಯಾರೂ ಊಹಿಸಿರಲಿಲ್ಲವೇನೋ? ಅಪರಾಧ ಶೋಧನೆಯಲ್ಲಿ, ಸಂಪರ್ಕ ಸಾಧಿಸುವಲ್ಲಿ, ಹೊರ ಜಗತ್ತಿನ ಜ್ಞಾನವನ್ನು ಒಂದು ಬಟನ್ ಒತ್ತುವ ಮೂಲಕ ಪಡೆಯುವಲ್ಲಿ, ಜನಸಾಮಾನ್ಯನ ದಿನನಿತ್ಯದ ಬಹುತೇಕ ವ್ಯವಹಾರಗಳನ್ನು, ಅದರಲ್ಲೂ ಮುಖ್ಯವಾಗಿ ಬ್ಯಾಂಕಿಂಗ್ ವ್ಯವಹಾರವನ್ನು ಬೆರಳ ತುದಿಯ ಮೂಲಕ ನಿರ್ವಹಿಸುವಲ್ಲಿ ಮೊಬೈಲ್ ಮಾಡಿದ ಕ್ರಾಂತಿ ಸ್ಮರಣೀಯ. ಒಂದು ವ್ಯವಸ್ಥೆ ಅವತರಿಸಿದಾಗ ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ಅನು ಕೂಲತೆಯನ್ನು ನಿರೀಕ್ಷಿಸಲಾಗದು. ಈ ನಿಟ್ಟಿನಲ್ಲಿ ಮಾರ್ಜಿನ ಅನಿವಾರ್ಯ. ಹಾಗೆಯೇ ಅನಪೇಕ್ಷಣೀಯವಾದುದನ್ನು ಹತ್ತಿಕ್ಕಿ, ಎದುರಿಸಿ, ಸಮುದ್ರ ಮಥನದಲ್ಲಿ ಹಾಲಾಹಲವನ್ನು ನಿರ್ಲಕ್ಷಿಸಿ ಅಮೃತವನ್ನು ಚಪ್ಪರಿಸಿದಂತೆ ಹೊಂದಾಣಿಕೆ ಮಾಡಿಕೊಳ್ಳಬೇಕು.

(ಲೇಖಕರು: ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಪ್ರಸ್ತುತ

ಉತ್ಕರ್ಷ್ ಕೆ.ಎಸ್.

ಸಮ್ಮಿಶ್ರ ಯುಗದ ಪುನರಾಗಮನ

ಲೋಕಸಭೆ 2024 ರ ಚುನಾವಣೆಯು ಎರಡು ದಶಕದ ಸುದೀರ್ಘ ವಿರಾಮದ ನಂತರ ಸಮ್ಮಿಶ್ರ ಯುಗದ ಪುನರಾಗಮನವನ್ನು ಗುರುತಿಸಿತು, ಆಡಳಿತಾರೂಢ ಬಿಜೆಪಿಯು ತನ್ನದೇ ಆದ ಅರ್ಧದಷ್ಟು ಮಾರ್ಕ್ಸ್ ಅನ್ನು ಕಳೆದುಕೊಂಡಿತು ಆದರೆ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವಾಗಿ ಹುದ್ದೆಯನ್ನು ಮೀರುವಲ್ಲಿ ಯಶಸ್ವಿಯಾಗಿದೆ. ತೆಲುಗು ದೇಶಂ ಪಕ್ಷದ ಚಂದ್ರಬಾಬು ನಾಯ್ಡು ಅವರು ಆಂಧ್ರಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ್ದಾರೆ ಮತ್ತು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಕ್ರಮವಾಗಿ 16 ಮತ್ತು 12 ಸ್ಥಾನಗಳನ್ನು ಗಳಿಸುವ ಮೂಲಕ ಪ್ರಮುಖ ಮಿತ್ರಪಕ್ಷಗಳಾಗಿ ಹೊರಹೊಮ್ಮಿದ್ದಾರೆ. ಹೊಸ ಸರಕಾರದಲ್ಲಿ ಅವರ ಪಾತ್ರವು ಸ್ಥಿರತೆಯನ್ನು ಖಾತ್ರಿಪಡಿಸುವಲ್ಲಿ ಪ್ರಮುಖವಾಗಿರುತ್ತದೆ.

ಆದರೆ, ಇದು ತಮ್ಮ ಪಕ್ಷಕ್ಕೆ ಸತತ ಮೂರನೇ ಅವಧಿಗೆ ಸರಕಾರ ರಚಿಸಲು ಜನಾದೇಶವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು. ಜನರು ಬಿಜೆಪಿ ಮತ್ತು ಎನ್‌ಡಿಎಯಲ್ಲಿ ತಮ್ಮ ಸಂಪೂರ್ಣ ನಂಬಿಕೆಯನ್ನು ವ್ಯಕ್ತಪಡಿಸಿದ್ದಾರೆ... 1962 ರಿಂದ ಸತತ ಮೂರನೇ ಅವಧಿಗೆ ಸರಕಾರ ಅಧಿಕಾರಕ್ಕೆ ಬಂದಿರುವುದು ಇದೇ ಮೊದಲು ಎಂಬುದನ್ನು ಪ್ರಭಾವಿಗಳು ಮತ್ತು ಅಭಿಪ್ರಾಯ ತಯಾರಕರು ಗಮನಿಸಬೇಕೆಂದು ನಾನು ಬಯಸುತ್ತೇನೆ ಎಂದು ಅವರು ಹೇಳಿದ್ದಾರೆ.

2014ರಲ್ಲಿ ಮೋದಿ ಪ್ರಧಾನಿಯಾದಾಗ ಭಾರತದ ರಾಜಕೀಯದಲ್ಲಿ ಕ್ಲೀನ್ ಬ್ರೇಕ್ ಆಗಿತ್ತು. ಅಸ್ತಿತ್ವಕ್ಕಾಗಿ ಯಾವುದೇ ಮಿತ್ರಪಕ್ಷಗಳ ಮೇಲೆ ಅವಲಂಬಿತವಾಗದಂತೆ ಬಿಜೆಪಿ ತನ್ನ ಸ್ಥಾನಗಳನ್ನು ಹೊಂದಿತ್ತು. ಭಾರತವು ದಶಕಗಳಿಂದ ಸಮ್ಮಿಶ್ರ ರಾಜಕೀಯವನ್ನು ಕಂಡಿತ್ತು, ಆಗಾಗ ಅಸ್ಥಿರವಾಗಿರುವ ಮತ್ತು ವಿವಿಧ ಎಳೆತಗಳು ಮತ್ತು ತಳ್ಳುವಿಕೆಗಳಿಂದ ಗುರುತಿಸಲ್ಪಟ್ಟ ಸಮ್ಮಿಶ್ರ ಸರಕಾರಗಳು ಸಾಮಾನ್ಯವಾಗಿದ್ದವು. ಮೋದಿಯರ ನಿರ್ಣಾಯಕ ಜನಾದೇಶ ಭಾರತದ ರಾಜಕೀಯವನ್ನು ಬದಲಾಯಿಸಿತು. ಮಿತ್ರಪಕ್ಷಗಳು ಪ್ರಧಾನ ಮಂತ್ರಿಯನ್ನು ಸುಲಿಗೆ ಮಾಡಲು ಹಿಡಿದ ದಿನಗಳು ಕಳೆದುಹೋದವು. ಸೋನಿಯಾ ಗಾಂಧಿ ನೇತೃತ್ವದ ಯುಪಿಎ ಐಐ ಸರಕಾರದ ಅವಧಿಯಲ್ಲಿ, ಸಮ್ಮಿಶ್ರ ರಾಜಕೀಯವು ಭ್ರಷ್ಟಾಚಾರ ಮತ್ತು ನೀತಿ ಪಾರ್ಶ್ವವಾಯುವಿಗೆ ಕಾರಣವಾಯಿತು. ಮೋದಿ ಅವರು ಸಮ್ಮಿಶ್ರ ನಿರ್ಬಂಧಗಳಿಂದ ಮುಕ್ತರಾಗಿದ್ದರು ಮತ್ತು ತಮ್ಮ ಇಚ್ಛೆಗೆ ಅನುಗುಣವಾಗಿ ಆರ್ಥಿಕತೆ ಮತ್ತು ಆಡಳಿತವನ್ನು ರೂಪಿಸಲು ಸಮರ್ಥರಾಗಿದ್ದರು. ಬಿಜೆಪಿಯ ಪೂರ್ಣ ಬಹುಮತದಿಂದಾಗಿ ಪ್ರಮುಖ ಸುಧಾರಣೆಗಳು ಸಾಧ್ಯವಾಯಿತು. ವಾಸ್ತವವಾಗಿ, ಬಿಜೆಪಿಯು ತನ್ನ ಹಲವಾರು ಮಿತ್ರಪಕ್ಷಗಳೊಂದಿಗೆ, ವಿಶೇಷವಾಗಿ ಶಿವಸೇನೆ ಮತ್ತು ಅಕಾಲೀಸ್‌ಗಳೊಂದಿಗೆ ಹೊರಗುಳಿಯಿತು. ಈ ಲೋಕಸಭೆ ಚುನಾವಣೆಗೂ ಮುನ್ನ ಬಿಜೆಪಿ ಎಐಎಡಿಎಂಕೆ ಜತೆಗಿನ ಸಂಬಂಧವನ್ನು ಕಡಿದುಕೊಂಡಿತ್ತು. ಭಾರತ ಏಕಪಕ್ಷೀಯ ಆಡಳಿತದತ್ತ ಸಾಗುತ್ತಿದೆ ಎಂದು ಹಲವರು ಭಾವಿಸಿದ್ದರು ಆದರೆ ಅದು ನಿಜವಾಗಲಿಲ್ಲ.

ಬಿಜೆಪಿಯು ಈ ಹಿಂದೆ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದಲ್ಲಿ ಸಮ್ಮಿಶ್ರ ಸರಕಾರಗಳನ್ನು ನಡೆಸಿದ್ದರಿಂದ, ಅದು ಈ ರಾಜಕೀಯ ಸಂಸ್ಕೃತಿಯೊಂದಿಗೆ ಸಂವಾದಿಸುತ್ತಿದೆ. ಆದರೆ ಅದು ಇನ್ನು ಮುಂದೆ ಒಗ್ಗಿಕೊಂಡಿರದ ಹಲವಾರು ಮಿತ್ರ ಪಾಲುದಾರರೊಂದಿಗೆ ಬದುಕಲು ಕಲಿಯಬೇಕಾಗುತ್ತದೆ. ಬಿಜೆಪಿಯ ಸಮ್ಮಿಶ್ರ ಯುಗದ ನಾಯಕರಾದ ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ ಜೋಶಿ ಅವರೆಲ್ಲ ನೇಪಥ್ಯಕ್ಕೆ ಸರಿದಿದ್ದಾರೆ. ಇಂದು ಪಕ್ಷದ ಮೇಲಿರುವ ಕೆಲವರಿಗೆ ಚಂಚಲ ಪಾಲುದಾರರನ್ನು ಹೇಗೆ ನಿರ್ವಹಿಸುವುದು ಎಂಬುದು ಮೋದಿ–ಶಾ ಅಂತ ನಾಯಕರಿಗೆ ತಿಳಿದೇ ಇರುತ್ತದೆ.

10 ವರ್ಷಗಳ ವಿರಾಮದ ನಂತರ 1989 ರಿಂದ 2014 ರವರೆಗೆ ಮುಂದುವರಿದ ಸಮ್ಮಿಶ್ರ ಯುಗಕ್ಕೆ ಮರಳಲು ಬಿಜೆಪಿಯ ಕಾರ್ಯಶೈಲಿಯಲ್ಲಿ ಬದಲಾವಣೆಗಳ ಅಗತ್ಯವಿರುತ್ತದೆ. ಪಕ್ಷವು 2014ರ ಗೆಲುವಿನ ಒಂದೆರಡು ವರ್ಷಗಳಲ್ಲಿ ಅದರ ಮಿತ್ರಪಕ್ಷಗಳೊಂದಿಗೆ ಸ್ಟೀರಿಂಗ್ ಕಮಿಟಿ ಸಭೆಗಳನ್ನು ನಡೆಸುವುದನ್ನು ನಿಲ್ಲಿಸಿತ್ತು ಮತ್ತು ಅದರ ಕೆಲವು ಅತ್ಯಂತ ನಿಷ್ಠಾವಂತ ಮಿತ್ರಪಕ್ಷಗಳಾದ ಶಿರೋಮಣಿ ಅಕಾಲಿದಳ ಮತ್ತು ಶಿವಸೇನೆ ಇತ್ತೀಚಿನ ವರ್ಷಗಳಲ್ಲಿ NDA ಯಿಂದ ಹೊರಬಂದವು. ನಾಯ್ಡು ನೇತೃತ್ವದ ಟಿಡಿಪಿಯು 2018ರಲ್ಲಿ ಎನ್ಡಿಎ ಜೊತೆಗಿನ ಸಂಬಂಧವನ್ನು ಕಡಿದುಕೊಂಡಿತ್ತು. ಬಿಜೆಪಿಯ ಪ್ರಮುಖ ಘೋಷಣೆಗಳಾದ 'ಏಕರೂಪ ನಾಗರಿಕ ಸಂಹಿತೆ' ಮತ್ತು 'ಒಂದು ರಾಷ್ಟ್ರ ಒಂದು ಚುನಾವಣೆ'ಯನ್ನು ಜಾರಿಗೆ ತರಲು ತನ್ನ ಮಿತ್ರ ಪಕ್ಷಗಳ ಸಂಪೂರ್ಣ ಸಹಕಾರ ಬೇಕಾಗುತ್ತದೆ. ಮೂರು ದಶಕಗಳಿಂದ ಜನರು ವಿಭಜಿತ ಜನಾದೇಶಗಳನ್ನು ನೀಡುತ್ತಿರುವ ಭಾರತದಲ್ಲಿ, ಸಮ್ಮಿಶ್ರ ರಾಜಕಾರಣವು ರೂಢಿಯಲ್ಲಿದೆ. 80, 90 ರ ದಶಕಗಳಲ್ಲಿ ಮತ್ತು ಈ ಶತಮಾನದ ಮೊದಲ ದಶಕದಲ್ಲಿ ಯಾವುದೇ ಪಕ್ಷವು ಲೋಕಸಭೆಯಲ್ಲಿ ಬಹುಮತವನ್ನು ಪಡೆಯಲಿಲ್ಲ.

ಸಮ್ಮಿಶ್ರ ಯುಗದ ಅನಿಶ್ಚಿತತೆ ಮತ್ತು ಅನಿಶ್ಚಿತತೆಯು ಆರ್ಥಿಕತೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ನೋಡಬೇಕಾಗಿದೆ. ಭಾರತದಲ್ಲಿ ಬಲಿಷ್ಠ ನಾಯಕತ್ವಕ್ಕೆ ಬುನಾದಿ ಆಗಿರುವ ಮೋದಿಯವರು ಮಿತ್ರ ಪಕ್ಷಗಳೊಡನೆ ಭಾರತವನ್ನು ವಿಶ್ವದಲ್ಲಿ ಮೂರನೇ ಅತಿದೊಡ್ಡ ಆರ್ಥಿಕ ರಾಷ್ಟ್ರವನ್ನಾಗಿ ಮಾಡುವ ದೊಡ್ಡ ಸವಾಲು ಕೂಡ ಇದೆ. ಸಮ್ಮಿಶ್ರ ಸರಕಾರದಲ್ಲಿ ಮೋದಿಯವರ ಗೆಲುವು ನಿರೀಕ್ಷೆಯಿಲ್ಲದಿದ್ದರೂ ಅಚ್ಚರಿಯೇನಲ್ಲ. ಮೋದಿಯವರ ಕಾರ್ಯಸೂಚಿಯು ಹೊಸ ಮತ್ತು ಕಿರಿಯ ಸಮ್ಮಿಶ್ರ ಸಂಪುಟದಿಂದ ಕಾರ್ಯಗತಗೊಳ್ಳುವ ಸಾಧ್ಯತೆಯಿದೆ, ಆದರೂ ನಿಖರವಾದ ಖಾತೆಗಳು ಮತ್ತು ಅಧಿಕಾರಿಗಳನ್ನು ಇನ್ನೂ ಘೋಷಿಸಬೇಕಾಗಿದೆ. ಸಮ್ಮಿಶ್ರ ಸರಕಾರದ ಅಡಿಯಲ್ಲಿಯೂ ಸಹ, ಇದು ಭಾರತದ ಆರ್ಥಿಕ ಬೆಳವಣಿಗೆ ಮತ್ತು ವ್ಯಾಪಾರ ವಾತಾವರಣಕ್ಕೆ ಒಳ್ಳೆಯ ಸುದ್ದಿಯಾಗಿದೆ. ಅಜೆಂಡಾವು ಕೈಗಾರಿಕಾ ಉತ್ಪಾದನೆ, ಮೂಲಸೌಕರ್ಯ, ಡಿಜಿಟಲೀಕರಣ, ಪ್ರಾದೇಶಿಕ ವ್ಯಾಪಾರ, ಪೂರೈಕೆ ಸರಪಳಿ ಒಪ್ಪಂದಗಳು ಮತ್ತು ಭೂಸುಧಾರಣೆಗೆ ಸುಧಾರಣೆಗಳನ್ನು ಒಳಗೊಂಡಿರುತ್ತದೆ – ಸಮ್ಮಿಶ್ರ ಸರಕಾರವು ಅರ್ಥಶಾಸ್ತ್ರಕ್ಕೆ ಒತ್ತು ನೀಡುವ ಸಾಧ್ಯತೆಯಿದೆ.

ಅಟಲ್ ಬಿಹಾರಿ ವಾಜಪೇಯಿ ಅವರು ಹೇಳಿದಂತಹ ಸಮ್ಮಿಶ್ರ ಧರ್ಮ 2024ರ ಲೋಕಸಭಾ ಚುನಾವಣೆಯಲ್ಲಿ ಮತ್ತೆ ಪ್ರಸ್ತುತತೆಯನ್ನ ಪಡೆದಿರುವುದು ಗಮನಾರ್ಹ ಸಂಗತಿ. ಮುಂದಿನ ಕೆಲವು ದಿನಗಳು ಸಮ್ಮಿಶ್ರ ಯುಗದ ಸುವಾಸನೆಯನ್ನು ಮರಳಿ ತರುತ್ತವೆ, ಪ್ರತಿಪಕ್ಷ INDIA ಬಣವು ನಿತೀಶ್ ಮತ್ತು ನಾಯ್ಡು ಅವರನ್ನು ಓಲೈಸಲು ಪ್ರಯತ್ನಿಸುತ್ತಿದ್ದಾರೆ ಅವರು ಈಗ ಬಿಜೆಪಿಗೆ ಅಂಟಿಕೊಂಡರು ಭವಿಷ್ಯದಲ್ಲಿ ಯಾವಾಗ ಬೇಕಾದರೂ ಪರಿಸ್ಥಿತಿ ಬದಲಾಗಬಹುದು ಏಕೆಂದರೆ ನಿತೀಶ್ ಮತ್ತು ನಾಯ್ಡು ಇಬ್ಬರೂ ಸಹ ಮೋದಿಯನ್ನ ಒಂದು ಕಾಲದಲ್ಲಿ ಕಟುವಾಗಿ ಟೀಕಿಸಿದ್ದರು.

ಒಟ್ಟಾರೆ ಈಗಿನ ಸಮಿಶ್ರ ಮಿಶ್ರಿತ ಸರಕಾರವನ್ನು ಯಶಸ್ವಿಯಾಗಿ ನಡೆಸುವ ಬಹುದೊಡ್ಡ ಜವಾಬ್ದಾರಿ ಮೋದಿ ಹೆಗಲಿಗಿದೆ.

(ಲೇಖಕರು: ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:180

ಸಮಾಚಾರ ಸಣ್ಣದಲ್ಲ

ಶಾಸಕನ ಪತ್ನಿ ಆತ್ಮಹತ್ಯೆ

ಹೈದ್ರಾಬಾದ್: ತೆಲಂಗಾಣದ ಕಾಂಗ್ರೆಸ್ ಶಾಸಕನ ಪತ್ನಿ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಚೊಪ್ಪದಂಡಿ ಕ್ಷೇತ್ರದ ಶಾಸಕ ಡಾ.ಮೇಡಿಪಲ್ಲಿ ಸತ್ಯಂ ಎಂಬುವವರ ಪತ್ನಿ ಆತ್ಮ ಹತ್ಯೆಗೆ ಶರಣಾಗಿದ್ದಾರೆ. ಮೃತರನ್ನು ರೂಪಾ ದೇವಿ ಎಂದು ಗುರುತಿಸಲಾಗಿದೆ. ಅಲ್ವಾಲ್‌ನ ಪಂಚಶೀಲ ಕಾಲೋನಿಯ ನಿವಾಸದ ಟೆರೇಸ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ರೂಪಾ ದೇವಿ ದೇಹ ಪತ್ತೆಯಾಗಿದೆ. ತೀವ್ರ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಅವರು ಆತ್ಮಹತ್ಯೆಯಂತಹ ನಿರ್ಧಾರ ಕೈಗೊಂಡಿದ್ದಾರೆ ಎನ್ನಲಾಗಿದೆ. ಆತ್ಮಹತ್ಯೆ ಘಟನೆ ಸಂಬಂಧ ಪ್ರಕರಣ ದಾಖಲಾಗಿದ್ದು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ವ್ಯಕ್ತಿ ಸಜೀವ ದಹನ

ಇಸ್ಲಾಮಾಬಾದ್: ಕುರಾನ್‌ಗೆ ಅಪಮಾನ ಮಾಡಿದ ಆರೋಪದ ಮೇಲೆ ವ್ಯಕ್ತಿಯನ್ನ ಉದ್ರಿಕ್ತರ ಗುಂಪು ಜೀವಂತ ಸುಟ್ಟ ಘಟನೆ ಗುರುವಾರ ಪಾಕಿಸ್ತಾನದ ಸ್ವಾತ್ ಪ್ರದೇಶದಲ್ಲಿ ನಡೆದಿದೆ. ಮೃತನನ್ನ ಸಿಯಾಲ್ ಕೋಟ್ ನಿವಾಸಿ ಎಂದು ಗುರುತಿಸಲಾಗಿದೆ. ಆರೋಪಿಯನ್ನು ಸ್ಥಳೀಯರು ಪೊಲೀಸರಿಗೆ ಒಪ್ಪಿಸಿದ್ದಾರೆ. ಆದರೆ ಉದ್ರಿಕ್ತರ ಗುಂಪು ಪೊಲೀಸ್ ಠಾಣೆ ಮೇಲೆ ದಾಳಿ ನಡೆಸಿದ್ದು, ಆರೋಪಿಯನ್ನು ತಮಗೊಪ್ಪಿಸುವಂತೆ ಬೇಡಿಕೆ ಇಟ್ಟಿದೆ. ಗುಂಪು ನಿಯಂತ್ರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಆರೋಪಿಯನ್ನು ಠಾಣೆಯಿಂದ ಹೊರತಂದು ಬಡಿಗೆಗಳಲ್ಲಿ ಬಡಿದು ಜೀವಂತ ಸುಟ್ಟಿದ್ದಾರೆ ಜತೆಗೆ ಠಾಣೆಗೂ ಬೆಂಕಿ ಹಚ್ಚಲಾಗಿದೆ.

ಯೋಗ ಜಾಗತಿಕ ಕ್ಷೇಮದ ರಾಯಭಾರಿ: ಮೋದಿ

ಇಸ್ರೇಲ್, ಅಮೆರಿಕಾದಲ್ಲೂ ಯೋಗಾಭ್ಯಾಸ | 15 ಸಾವಿರ ಅಡಿ ಎತ್ತರದಲ್ಲಿ ಯೋಧರಿಂದ ಪ್ರಾಣಾಯಾಮ

ಶ್ರೀನಗರ: 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಪ್ರಧಾನಿ ಮೋದಿ ಶ್ರೀನಗರದ ದಾಲ್ ಸರೋವರದ ದಂಡೆಯ ಮೇಲೆ ಯೋಗಾಭ್ಯಾಸ ಮಾಡಿ ವಿಶ್ವಕ್ಕೆ ಯೋಗದ ಮಹತ್ವವನ್ನು ಸಾರಿದ್ದಾರೆ. ' ಭಾರತ ಈಗ ಯೋಗ ಪ್ರವಾಸಿ ಕೇಂದ್ರವಾಗಿದೆ. ಯೋಗ ಕಲಿಯಲು ಭಾರತಕ್ಕೆ ಜನ ಪ್ರವಾಸ ಕೈಗೊಳ್ಳುವಂತಾಗಿದೆ' ಎಂದು ಮೋದಿ ಪ್ರಾಚೀನ ಯೋಗ ಕಲಿಕೆಯಲ್ಲಿ ಭಾರತದ ಮಹತ್ವವನ್ನು ಬಣ್ಣಿಸಿದ್ದಾರೆ. ಸ್ವಯಂ ಮತ್ತು ಸಮಾಜಕ್ಕಾಗಿ ಯೋಗ ಎಂಬ ಧ್ಯೇಯವಾಕ್ಯದಡಿ ದೇಶಾದ್ಯಂತ ಯೋಗದಿನಾಚರಣೆ ಆಚರಿಸಲಾಗಿದೆ.

ಕಣಿವೆ ಪ್ರದೇಶದಲ್ಲಿ ಬೆಳಗಿನಿಂದ ಮಳೆ ಹಿನ್ನೆಲೆ ಹುಲ್ಲುಹಾಸಿನ ಮೇಲೆ ನಡೆಯಬೇಕಿದ್ದ ಕಾರ್ಯ ಕ್ರಮದ ಸ್ಥಳವನ್ನು ಬದಲಾಯಿಸಲಾಗಿದೆ. ಒಳಾಂಗಣ ದಲ್ಲಿ ಪ್ರಧಾನಿ ಮೋದಿ ಯೋಗಾಭ್ಯಾಸ ನಡೆಸಿದ್ದಾರೆ. ಶೇರ್-ಇ-ಕಾಶ್ಮೀರ್ ಅಂತಾರಾಷ್ಟ್ರೀಯ ಸಭಾಂಗಣದಲ್ಲಿ ಆಯೋಜಿಸಲಾದ ಯೋಗ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ,ಯೋಗವನ್ನು ಜಾಗತಿಕ ಕ್ಷೇಮದ ರಾಯಭಾರಿ ಎಂದು ಪರಿಗಣಿಸಲಾಗುತ್ತಿದೆ. ಹೃಷಿಕೇಶ ಮತ್ತು ಕಾಶಿಯಿಂದ ಕೇರಳವರೆಗೆ ಯೋಗ ಪ್ರವಾಸೋದ್ಯಮದ ಅಲೆ ಆರಂಭವಾಗಿದೆ ಎಂದು ಮೋದಿ ಹೇಳಿದ್ದಾರೆ. 2014ರಲ್ಲಿ ವಿಶ್ವಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಮುಂದಿಟ್ಟಾಗ 117 ದೇಶಗಳು ಬೆಂಬಲ ಸೂಚಿಸಿದ್ದು ಒಂದು ಇತಿಹಾಸ. ಆ ಬಳಿಕ ಪ್ರತಿವರ್ಷವೂ ಯೋಗ ದಿನದಂದು ಒಂದೊಂದು ದಾಖಲೆ ಸೃಷ್ಟಿಯಾಗಿದೆ, ಯೋಗದಿಂದ ಸಿಗುವ ಶಕ್ತಿ ಶ್ರೀನಗರದಲ್ಲಿ ಅನುಭವಕ್ಕೆ ಬಂದಿದೆ ಎಂದು ಪ್ರಧಾನಿ ಹೆಮ್ಮೆ ವ್ಯಕ್ತಪಡಿಸಿದ್ದಾರೆ.

ಸ್ವಯಂ ಮತ್ತು ಸಮಾಜಕ್ಕಾಗಿ ಯೋಗ: ನಾವು ಶಾಂತವಾಗಿದ್ದಾಗ ಸಮಾಜದ ಮೇಲೆ ಧನಾತ್ಮಕ ಪರಿ ಣಾಮ ಬೀರಲು ಸಾಧ್ಯ. ಈ ಧನಾತ್ಮಕ ಬದಲಾವಣೆ ತರಲು ಹೊಸ ಮಾರ್ಗಗಳನ್ನು ಯೋಗ ಪರಿಚಯಿ ಸುತ್ತದೆ. ವೈಯಕ್ತಿಕ ಯೋಗಕ್ಷೇಮಕ್ಕೂ ಸಮಾಜದ ಕ್ಷೇಮಕ್ಕೂ ಇರುವ ನಂಟನ್ನು ಯೋಗ ಅರ್ಥೈಸುತ್ತದೆ ಎಂದು ಪ್ರಧಾನಿ ಪ್ರತಿಪಾದಿಸಿದ್ದಾರೆ. ಭಾರತ ಮಾತ್ರವಲ್ಲ ಯೋಗವನ್ನು ಸೌದಿ ಅರೇಬಿಯಾ, ತುರ್ಕ್‌ಮೆನಿಸ್ತಾನ್, ಮುಂಗೋಲಿಯಾ, ಜರ್ಮನಿ ಸೇರಿ ಅನೇಕ ಯುರೋಪ್ ದೇಶಗಳು ಯೋಗವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿವೆ. ಮಾನಸಿಕ ಮತ್ತು ದೈಹಿಕ ಕ್ಷೇಮಕ್ಕೆ ಯೋಗ ಪ್ರಬಲ ವಿಧಾನ ಎಂದು ಜಗತ್ತು ಅರಿತುಕೊಂಡಿದೆ, ಪ್ರಚಲಿತದಲ್ಲಿ ಬದುಕುವುದನ್ನು ಯೋಗ ಕಲಿಸುತ್ತದೆ ಎಂದು ಮೋದಿ ಹೇಳಿದ್ದಾರೆ.

ಶ್ರೀನಗರದಲ್ಲಿ ಪ್ರಧಾನಿ ಮೋದಿ ಜತೆ ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಕೇಂದ್ರ ಸಚಿವ ಪ್ರತಾಪ್ ರಾವ್ ಗಣಪತ್‌ರಾವ್ ಜಾಧವ್, ಸೇರಿ ಅನೇಕ ಮುಖಂಡರು ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು.

ದೇಶದ ಪ್ರತಿ ಜಿಲ್ಲೆಯಲ್ಲೂ ಶುಕ್ರವಾರ ಯೋಗ ಕಾರ್ಯಕ್ರಮಗಳು ನಡೆದಿದ್ದು, ರಾಜಕೀಯ ಮುಖಂಡರೂ ಕೂಡ ಪಕ್ಷ ಬೇಧ ಮರೆತು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ. ದೆಹಲಿಯ ಕರ್ತವ್ಯ ಪಥದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಯೋಗ ದಿನಾಚರಣೆಯಲ್ಲಿ ಭಾಗಿಯಾಗಿದ್ದರು.

ಭಾರತ ಎಂದರೆ ಯೋಗ.. ಯೋಗ ಎಂದರೆ ಭಾರತ

ಭಾರತ ಮಾತ್ರವಲ್ಲ ಅಮೆರಿಕಾ, ಜಪಾನ್, ಇಸ್ರೇಲ್ ಸೇರಿ ಹಲವು ರಾಷ್ಟ್ರಗಳಲ್ಲಿ ಸಾಮೂಹಿಕ ಯೋಗಾಚರಣೆ ಮಾಡಲಾಗಿದೆ. ನ್ಯೂಯಾರ್ಕ್ ನಗರದ ಟೈಮ್ಸ್ ಸ್ಕ್ವೇರ್‌ನಲ್ಲಿ ಸಾವಿರಾರು ಮಂದಿ ಯೋಗಭ್ಯಾಸ ಮಾಡಿದ್ದು ಬಿನಾಯಾ ಪ್ರಧಾನ್ ಎಂಬುವವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ವಾರ್ಫ್ ನಗರದ ಬೀದಿಯಲ್ಲೂ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಜನ ಯೋಗ ಮಾಡಿ ಗಮನ ಸೆಳೆದಿದ್ದಾರೆ. ಇಸ್ರೇಲ್ ನಗರ ಟೆಲ್ ಅವೀವ್‌ನಲ್ಲಿ ಭಾರತದ ರಾಯಭಾರಿ ಕಚೇರಿ ಆಯೋಜಿಸಿದ್ದ ಯೋಗ ಕಾರ್ಯಕ್ರಮದಲ್ಲಿ ನೂರಾರು ಮಂದಿ ಭಾಗಿಯಾಗಿದ್ದು ವಿಶೇಷವಾಗಿತ್ತು. ಭಾರತ ಎಂದರೆ ಯೋಗ..ಯೋಗ ಎಂದರೆ ಭಾರತ. ಯೋಗವನ್ನು ಭಾರತದ ವಿಚಾರವೆಂದು ಶಾಶ್ವತವಾಗಿ ಬಣ್ಣಿಸಲಾಗು ವುದು ಎಂದು ಇಸ್ರೇಲ್‌ನ ಕಾನ್ಸುಲ್ ಜನರಲ್ ಕೊಬ್ಬಿ ಶೋಶಣಿ ಹೇಳಿದ್ದಾರೆ.

ಮರಳುಗಾಡಿನಲ್ಲೂ ಯೋಧರ ಯೋಗಾಭ್ಯಾಸ

ಪೂರ್ವ ಲಡಾಕ್, ಸಿಕ್ಕಿಂ ಉತ್ತರದ ಗಡಿ ಸೇರಿ 15 ಸಾವಿರ ಡಿ ಎತ್ತರದ ಸಿಯಾಚಿನ್ ಗ್ಲೇಸಿಯರ್‌ನಲ್ಲಿ ಕೊರೆವ ಚಳಿಯಲ್ಲೂ ಯೋಧರೂ ಪ್ರಾಣಾಯಾಮ, ಯೋಗಾಭ್ಯಾಸ ಮಾಡಿ ಗಮನ ಸೆಳೆದಿದ್ದಾರೆ. ಹಿಮಾವೃತ ಪ್ರದೇಶದಲ್ಲಿ ಸಶಸ್ತ್ರ ಪಡೆಗಳ ಯೋಗ ಮೆಚ್ಚುಗೆ ಗಳಿಸಿದೆ. ಗಡಿ ಭದ್ರತಾ ಸಿಬ್ಬಂದಿಗಳು ಕೂಡ ಯೋಗ ದಿನಾಚರಣೆಯಲ್ಲಿ ಭಾಗವಹಿಸಿದ್ದು ಜೈಸಲ್ಮೇರ್ನ ಥಾರ್ ಮರುಭೂಮಿಯಲ್ಲಿ ವಿವಿಧ ಆಸನಗಳನ್ನು ಮಾಡಿ ಯೋಗ ದಿನಾಚರಣೆಯಲ್ಲಿ ಭಾಗಿಯಾಗಿದ್ದಾರೆ. ಅಖ್ನೂರ್ ಸೆಕ್ಟರ್‌ನ ಲೈನ್ ಆಫ್ ಕಂಟ್ರೋಲ್ ಪ್ರದೇಶದಲ್ಲಿ ಯೋಧರ ಜೊತೆ ಶ್ವಾನ ದಳದ ನಾಯಿಗಳು ಕೂಡ ಯೋಗ ಆಸನ ಮಾಡಿದ್ದು ವಿಶೇಷವಾಗಿತ್ತು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ-1, ಕೆ.ಐ.ಎ.ಡಿ.ಬಿ (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನೆಲಮಂಗಲ,
ನಂ. 14/3, 1ನೇ ಮಹಡಿ, ಮಹರ್ಷ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು-560 001. ದೂ: 080-22236840
ಸಂಖ್ಯೆ : ಕೆಐಎಡಿಬಿ/ಎಲ್‌ಎಕ್ಯೂ/ಬೆಂ.ಗ್ರಾ.ನೆ/316/2024-25 ದಿನಾಂಕ: 14.06.2024

ಸಾರ್ವಜನಿಕ ನೋಟೀಸ್ (ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(4)ರ ಅನ್ವಯ)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಹಾದಿಹೊಸಹಳ್ಳಿ ಮತ್ತು ಮದ್ದೇನಹಳ್ಳಿ ಗ್ರಾಮಗಳಲ್ಲಿ ಈ ಕೆಳಕಂಡ ಸರ್ವೆ ನಂಬರ್ ಜಮೀನುಗಳನ್ನು ಕೈಗಾರಿಕಾ ಪ್ರದೇಶದ ಸ್ಥಾಪನೆಗಾಗಿ ಕೆಐಡಿಬಿ ಕಾಯ್ದೆ 1966 ಕಲಂ 28(4)ರಡಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 242 ಎಸ್‌ಪಿಕ್ಯೂ 2020, ದಿ: 04.06.2024ರ ಪ್ರಕಾರ ಹೊರಡಿಸಿ, ಕರ್ನಾಟಕ ರಾಜ್ಯ ಪತ್ರ ದಿ: 10.06.2024ರಲ್ಲಿ ಪ್ರಕಟಿಸಿದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28(4) ಪ್ರಕಾರ ಈ ಕೆಳಗೆ ವಿವರಿಸಿರುವ ಸ್ವತ್ತುಗಳು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಎಲ್ಲಾ ರೀತಿಯ ಋಣಭಾರಗಳಿಂದ ವಿಮುಕ್ತಗೊಂಡು ಸರ್ಕಾರಕ್ಕೆ ನಿಹಿತಗೊಂಡಿರುತ್ತದೆ.

ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ಸರ್ವೆ ನಂಬರ್ ವಿವರಗಳು

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ.	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ ಐನು ಎ-ಗು	ಖರಾಬು ಎ-ಗು	ಉಳಿಕೆ ಎ-ಗು
	ಗ್ರಾಮ:- ಹಾದಿಹೊಸಹಳ್ಳಿ ಹೋಬಳಿ:- ತ್ಯಾಮಗೊಂಡ್ಲು ತಾಲ್ಲೂಕು:- ನೆಲಮಂಗಲ ಜಿಲ್ಲೆ:- ಬೆಂಗಳೂರು ಗ್ರಾಮಾಂತರ					
1.	ರುದ್ರಪ್ಪ ಬಿನ್ ನಂಜುಂಡಪ್ಪ, ಹೆಚ್.ವಿ.ಶಿವರುದ್ರಯ್ಯ ಬಿನ್ ವೀರಣ್ಣ, ಕಿಡಿಯಪ್ಪ ಬಿನ್ ಚನ್ನಬಸಪ್ಪ, ಲಕ್ಷ್ಮಮ್ಮ ಕೋಂ ವೀರಭದ್ರಪ್ಪ, ವಿ. ಬಸವರಾಜು ಬಿನ್ ವೀರಣ್ಣ, ಮಂಜು ಬಿನ್ ಲೇ. ವಿ.ಸಿದ್ದಗಂಗಯ್ಯ, ವಿರೂಪಾಕ್ಷಯ್ಯ ಬಿನ್‌ಲೇ. ವಿ. ಸಿದ್ದಗಂಗಯ್ಯ, ರಾಷ್ಟ್ರೀಯ ಹೆದ್ದಾರಿ, ರುದ್ರಸ್ವಾಮಿ ಬಿನ್ ಲೇ. ವೀರಭದ್ರಯ್ಯ, ಶಿವರಾಜು ಬಿನ್ ಕಿಡಿಯಪ್ಪ, ಗಂಗರಾಜು ಬಿನ್ ಕಿಡಿಯಪ್ಪ	ರುದ್ರಪ್ಪ ಬಿನ್ ನಂಜುಂಡಪ್ಪ, ಹೆಚ್.ವಿ.ಶಿವರುದ್ರಯ್ಯ ಬಿನ್ ವೀರಣ್ಣ, ಕಿಡಿಯಪ್ಪ ಬಿನ್ ಚನ್ನಬಸಪ್ಪ, ಲಕ್ಷ್ಮಮ್ಮ ಕೋಂ ವೀರಭದ್ರಪ್ಪ, ವಿ. ಬಸವರಾಜು ಬಿನ್ ವೀರಣ್ಣ, ಮಂಜು ಬಿನ್ ಲೇ. ವಿ.ಸಿದ್ದಗಂಗಯ್ಯ, ವಿರೂಪಾಕ್ಷಯ್ಯ ಬಿನ್‌ಲೇ. ವಿ. ಸಿದ್ದಗಂಗಯ್ಯ, ರಾಷ್ಟ್ರೀಯ ಹೆದ್ದಾರಿ, ರುದ್ರಸ್ವಾಮಿ ಬಿನ್ ಲೇ. ವೀರಭದ್ರಯ್ಯ, ಶಿವರಾಜು ಬಿನ್ ಕಿಡಿಯಪ್ಪ, ಗಂಗರಾಜು ಬಿನ್ ಕಿಡಿಯಪ್ಪ	2ರ ಪೈಕಿ	0-01½	-	0-01½
2.	ಚಿದಾನಂದ. ಡಿ.ಕೆ. ಬಿನ್ ಕಂಬೇಗೌಡ, ಕೆ.ನಾರಾಯಣಸ್ವಾಮಿ ಬಿನ್ ಲೇಟ್ ಕೆಂಪಯ್ಯ	ಚಿದಾನಂದ. ಡಿ.ಕೆ. ಬಿನ್ ಕಂಬೇಗೌಡ, ಕೆ.ನಾರಾಯಣಸ್ವಾಮಿ ಬಿನ್ ಲೇಟ್ ಕೆಂಪಯ್ಯ	3/2ಎ1	1-23	0-01	1-22
3.	ಕೆ.ವಿ. ಯಾಲಕ್ಕಿಗೌಡ ಬಿನ್ ಕೆ. ವೆಂಕಟಗಿರಿಯಪ್ಪ	ಕೆ.ವಿ. ಯಾಲಕ್ಕಿಗೌಡ ಬಿನ್ ಕೆ. ವೆಂಕಟಗಿರಿಯಪ್ಪ	3/2ಎ2 ರ ಪೈಕಿ	1-34	0-02	1-32
4.	ಕೆ.ವಿ. ಯಾಲಕ್ಕಿಗೌಡ ಬಿನ್ ಕೆ. ವೆಂಕಟಗಿರಿಯಪ್ಪ	ಕೆ.ವಿ. ಯಾಲಕ್ಕಿಗೌಡ ಬಿನ್ ಕೆ. ವೆಂಕಟಗಿರಿಯಪ್ಪ	3/3 ರ ಪೈಕಿ	0-29	-	0-29
5.	ಚಿದಾನಂದ ಡಿ.ಕೆ. ಬಿನ್ ಕಂಬೇಗೌಡ, ಕೆ. ನಾರಾಯಣಸ್ವಾಮಿ ಬಿನ್ ಲೇಟ್ ಕೆಂಪಯ್ಯ	ಚಿದಾನಂದ ಡಿ.ಕೆ. ಬಿನ್ ಕಂಬೇಗೌಡ, ಕೆ. ನಾರಾಯಣಸ್ವಾಮಿ ಬಿನ್ ಲೇಟ್ ಕೆಂಪಯ್ಯ	3/4	0-30.12	0-02	0-28.12
6.	ನಾಗರಾಜು ಬಿನ್ ಲೇ. ಬಸೆಟಪ್ಪ ಭೂ.ಪ	ನಾಗರಾಜು ಬಿನ್ ಲೇ. ಬಸೆಟಪ್ಪ ಭೂ.ಪ	3/5	0-35.12	-	0-35.12
7.	ವಸಿಲಮಣಿ ಬಿನ್ ಲೇ. ಕೆ.ಪಿ. ನಟೇಶ, ಜಗದೀಶನ್ ಎನ್ ಬಿನ್ ಲೇ. ಕೆ.ಪಿ. ನಟೇಶನ್, ಎನ್. ವೆಂಕಟೇಶ್ ಬಿನ್ ಲೇ. ಕೆ.ಪಿ. ನಟೇಶನ್, ತಿಲ್ಲೈನಾಯಕಿ ಬಿನ್ ಲೇ. ಕೆ.ಪಿ. ನಟೇಶನ್, ಎನ್. ಲಕ್ಷ್ಮೀ ಬಿನ್ ಲೇ. ಕೆ.ಪಿ. ನಟೇಶನ್, ಎನ್. ಸರಸ್ವತಿ ಬಿನ್ ಲೇ. ಕೆ.ಪಿ. ನಟೇಶನ್, ಎನ್. ಪದ್ಮಾವತಿ ಬಿನ್ ಲೇ. ಕೆ.ಪಿ. ನಟೇಶನ್, ಟಿ. ಲಕ್ಷ್ಮೀ ಕೋಂ ಲೇ. ಎನ್. ತಿರುನಾವುಕರಸ್	ವಸಿಲಮಣಿ ಬಿನ್ ಲೇ. ಕೆ.ಪಿ. ನಟೇಶ, ಜಗದೀಶನ್ ಎನ್ ಬಿನ್ ಲೇ. ಕೆ.ಪಿ. ನಟೇಶನ್, ಎನ್. ವೆಂಕಟೇಶ್ ಬಿನ್ ಲೇ. ಕೆ.ಪಿ. ನಟೇಶನ್, ತಿಲ್ಲೈನಾಯಕಿ ಬಿನ್ ಲೇ. ಕೆ.ಪಿ. ನಟೇಶನ್, ಎನ್. ಲಕ್ಷ್ಮೀ ಬಿನ್ ಲೇ. ಕೆ.ಪಿ. ನಟೇಶನ್, ಎನ್. ಸರಸ್ವತಿ ಬಿನ್ ಲೇ. ಕೆ.ಪಿ. ನಟೇಶನ್, ಎನ್. ಪದ್ಮಾವತಿ ಬಿನ್ ಲೇ. ಕೆ.ಪಿ. ನಟೇಶನ್, ಟಿ. ಲಕ್ಷ್ಮೀ ಕೋಂ ಲೇ. ಎನ್. ತಿರುನಾವುಕರಸ್	4ರ ಪೈಕಿ	0-00½	-	0-00½
8.	ನಂಜಪ್ಪ ಬಿನ್ ಯಲ್ಲಪ್ಪ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ	ನಂಜಪ್ಪ ಬಿನ್ ಯಲ್ಲಪ್ಪ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ	41/1	2-14	-	2-14
9.	ಚಿದಾನಂದ ಡಿ.ಕೆ. ಬಿನ್ ಕಂಬೇಗೌಡ, ಕೆ. ನಾರಾಯಣಸ್ವಾಮಿ ಬಿನ್ ಲೇಟ್ ಕೆಂಪಯ್ಯ	ಚಿದಾನಂದ ಡಿ.ಕೆ. ಬಿನ್ ಕಂಬೇಗೌಡ, ಕೆ. ನಾರಾಯಣಸ್ವಾಮಿ ಬಿನ್ ಲೇಟ್ ಕೆಂಪಯ್ಯ	41/2	1-08	-	1-08
10.	ಸೌಭಾಗ್ಯ ಕೋಂ ಲೇಟ್ ಸಿದ್ದರಾಜು	ಸೌಭಾಗ್ಯ ಕೋಂ ಲೇಟ್ ಸಿದ್ದರಾಜು	41/3	1-08	-	1-08
11.	ಸಿದ್ದಗಂಗಯ್ಯ ಬಿನ್ ಲೇ. ಸಿದ್ದಪ್ಪ, ಮಹಂತಯ್ಯ ಬಿನ್ ಲೇ. ಸಿದ್ದಪ್ಪ	ಸಿದ್ದಗಂಗಯ್ಯ ಬಿನ್ ಲೇ. ಸಿದ್ದಪ್ಪ, ಮಹಂತಯ್ಯ ಬಿನ್ ಲೇ. ಸಿದ್ದಪ್ಪ	41/4	1-08	-	1-08
12.	ವಿ. ಬಸವರಾಜು ಬಿನ್ ವೀರಣ್ಣ, ಮಂಜು ಬಿನ್ ಲೇ. ವಿ. ಸಿದ್ದಗಂಗಯ್ಯ, ವಿರೂಪಾಕ್ಷಯ್ಯ ಬಿನ್ ಲೇ. ವಿ. ಸಿದ್ದಗಂಗಯ್ಯ	ವಿ. ಬಸವರಾಜು ಬಿನ್ ವೀರಣ್ಣ, ಮಂಜು ಬಿನ್ ಲೇ. ವಿ. ಸಿದ್ದಗಂಗಯ್ಯ, ವಿರೂಪಾಕ್ಷಯ್ಯ ಬಿನ್ ಲೇ. ವಿ. ಸಿದ್ದಗಂಗಯ್ಯ	43/1ರ ಪೈಕಿ	0-03	-	0-03
13.	ಹೆಚ್.ವಿ. ಶಿವರುದ್ರಯ್ಯ ಬಿನ್ ವೀರಣ್ಣ	ಹೆಚ್.ವಿ. ಶಿವರುದ್ರಯ್ಯ ಬಿನ್ ವೀರಣ್ಣ	43/2ರ ಪೈಕಿ	0-02	-	0-02
14.	ನಾಗರತ್ನಮ್ಮ, ನಾಗರತ್ನಮ್ಮ - ಭೂ.ಪ.	ನಾಗರತ್ನಮ್ಮ, ನಾಗರತ್ನಮ್ಮ - ಭೂ.ಪ.	48/2ರ ಪೈಕಿ	0-01½	-	0-01½
15.	ಗೌರಮ್ಮ, ಗೌರಮ್ಮ - ಭೂ.ಪ.	ಗೌರಮ್ಮ, ಗೌರಮ್ಮ - ಭೂ.ಪ.	48/3ರ ಪೈಕಿ	0-01	-	0-01
16.	ಮಂಜುನಾಥ ವಿ.ಈ. ಬಿನ್ ಈಶ್ವರಯ್ಯ, ಮಂಜುನಾಥ ವಿ.ಈ. ಬಿನ್ ಈಶ್ವರಯ್ಯ ಭೂ.ಪ	ಮಂಜುನಾಥ ವಿ.ಈ. ಬಿನ್ ಈಶ್ವರಯ್ಯ, ಮಂಜುನಾಥ ವಿ.ಈ. ಬಿನ್ ಈಶ್ವರಯ್ಯ ಭೂ.ಪ	48/4ರ ಪೈಕಿ	0-01	-	0-01
17.	M/s. ERSTKEN Biotech Private Limited Rep. by its Director ಮಲ್ಲಿಕಾರ್ಜುನಸ್ವಾಮಿ ಎಂ. ಬಿನ್ ಎಸ್. ಮಹದೇವಯ್ಯ-ಭೂ.ಪ, ಚಂದ್ರಶೇಖರ ಎಂ. ಬಿನ್ ಎಸ್. ಮಹದೇವಯ್ಯ-ಭೂ.ಪ	M/s. ERSTKEN Biotech Private Limited Rep. by its Director ಮಲ್ಲಿಕಾರ್ಜುನಸ್ವಾಮಿ ಎಂ. ಬಿನ್ ಎಸ್. ಮಹದೇವಯ್ಯ-ಭೂ.ಪ, ಚಂದ್ರಶೇಖರ ಎಂ. ಬಿನ್ ಎಸ್. ಮಹದೇವಯ್ಯ-ಭೂ.ಪ	48/5ರ ಪೈಕಿ	0-01	-	0-01
18.	ನಂಜುಂಡಯ್ಯ	ನಂಜುಂಡಯ್ಯ	49/1ರ ಪೈಕಿ	0-01 ½	-	0-01 ½
19.	ನಾಗರಾಜು ಬಿನ್ ಕಿಡಿಯಪ್ಪ	ನಾಗರಾಜು ಬಿನ್ ಕಿಡಿಯಪ್ಪ	49/2ರ ಪೈಕಿ	0-00½	-	0-00½
20.	ರುದ್ರಮ್ಮ ಕೋಂ ಸಿದ್ದಗಂಗಯ್ಯ	ರುದ್ರಮ್ಮ ಕೋಂ ಸಿದ್ದಗಂಗಯ್ಯ	49/3ರ ಪೈಕಿ	0-01	-	0-01
ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ.	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ ಐನು ಎ-ಗು	ಖರಾಬು ಎ-ಗು	ಉಳಿಕೆ ಎ-ಗು
	ಗ್ರಾಮ:- ಮದ್ದೇನಹಳ್ಳಿ ಹೋಬಳಿ:- ತ್ಯಾಮಗೊಂಡ್ಲು ತಾಲ್ಲೂಕು:- ನೆಲಮಂಗಲ ಜಿಲ್ಲೆ:- ಬೆಂಗಳೂರು ಗ್ರಾಮಾಂತರ					
1	ಪುಟ್ಟತಾಯಮ್ಮ ಕೋಂ ರುದ್ರಪ್ಪ, ನಾಗರತ್ನಮ್ಮ ಕೋಂ ಶಿವಕುಮಾರ್, ಪುಟ್ಟಮ್ಮ ಕೋಂ ಲೇ. ಸಿದ್ದಪ್ಪ	ಪುಟ್ಟತಾಯಮ್ಮ ಕೋಂ ರುದ್ರಪ್ಪ, ನಾಗರತ್ನಮ್ಮ ಕೋಂ ಶಿವಕುಮಾರ್, ಪುಟ್ಟಮ್ಮ ಕೋಂ ಲೇ. ಸಿದ್ದಪ್ಪ	27/2ಎ1 ರ ಪೈಕಿ	0-24	-	0-24
2	ಸಿದ್ದಗಂಗಯ್ಯ ಬಿನ್ ಲೇ. ಎಸ್. ರುದ್ರೇಶ್	ಸಿದ್ದಗಂಗಯ್ಯ ಬಿನ್ ಲೇ. ಎಸ್. ರುದ್ರೇಶ್	27/2ಎ2 ರ ಪೈಕಿ	0-05	-	0-05

ಘೋಷ್ವಾರೆ

ಕ್ರ. ಸಂ.	ಗ್ರಾಮದ ಹೆಸರು	ಭೂಸ್ವಾಧೀನಕ್ಕೆ ಒಳಪಟ್ಟ ಬಾಕಿ ಐನು (ಎ-ಗು)	ಖರಾಬು (ಎ-ಗು)	ಬಾಕಿ (ಎ-ಗು)
1	ಹಾದಿಹೊಸಹಳ್ಳಿ	12-05	0-05	12-00
2	ಮದ್ದೇನಹಳ್ಳಿ	0-29	-	0-29
	ಒಟ್ಟು	**12-34**	**0-05**	**12-29**

ವಾಸಾಸಂಇ/ಉನಿ-ಸಿ.ಪಿ/499/ಕೆಎಸ್‌ಎಂಸಿಎ/2024-25
ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿ-1, ಕೆಐಎಡಿಬಿ (ಬಿಎಂಐಸಿಪಿ) ಮತ್ತು ಬೆಂ.ಗ್ರಾಂ., ನೆಲಮಂಗಲ ತಾಲ್ಲೂಕು, ಬೆಂಗಳೂರು

5-6 ಲಕ್ಷಕ್ಕೆ ನೆಟ್ ಪ್ರಶ್ನೆ ಪತ್ರಿಕೆ ಮಾರಾಟ!

ತನಿಖೆ ಆರಂಭಿಸಿದ ಸಿಬಿಐ | ದೇಶಾದ್ಯಂತ ಯುವಕರ ಪ್ರತಿಭಟನೆ

ದೆಹಲಿ: ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆ ಜೂನ್ 18ರಂದು ನಡೆದ ನೆಟ್ ಯುಜಿಸಿ ಪರೀಕ್ಷೆಯನ್ನು ರದ್ದುಗೊಳಿಸಲಾಗಿದೆ. ಪ್ರಕರಣ ಸಂಬಂಧ ಸಿಬಿಐ ತನಿಖೆ ಆರಂಭಿಸಿದ್ದು 5-6 ಲಕ್ಷ ರು.ಗೆ ಪ್ರಶ್ನೆ ಪತ್ರಿಕೆ ಮಾರಾಟವಾಗಿದೆ ಎಂದು ತಿಳಿದುಬಂದಿದೆ.

ಪ್ರಶ್ನೆ ಪತ್ರಿಕೆ ಸೋರಿಕೆ ಸಂಬಂಧ ಅಪರಿಚಿತ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಪ್ರಾಥಮಿಕ ತನಿಖೆಯಲ್ಲಿ ಸೋಮವಾರ (ಜೂನ್ 17) ಅಂದರೆ ಪರೀಕ್ಷೆಗೆ ಒಂದು ದಿನ ಮುಂಚಿತವಾಗಿ ಪೇಪರ್ ಲೀಕ್ ಆಗಿದೆ ಎಂದು ಹೇಳಲಾಗಿದ್ದು ಪ್ರಶ್ನೆ ಪತ್ರಿಕೆಗಳನ್ನು ಎನ್‌ಕ್ರಿಪ್ಟೆಡ್ ಸಾಮಾಜಿಕ ಜಾಲತಾಣದಲ್ಲಿ ಹರಿಬಿಡಲಾಗಿದೆ. ಜತೆಗೆ ಸಂಪರ್ಕ ಮಾಧ್ಯಮಗಳಲ್ಲಿ 5-6 ಲಕ್ಷದ ವರೆಗೆ ಪ್ರಶ್ನೆ ಪತ್ರಿಕೆ ಡೀಲಿಂಗ್ ನಡೆದಿದೆ ಎಂದು ಹೇಳಲಾಗಿದೆ.

ಮಂಗಳವಾರ ಪರೀಕ್ಷೆಯ ದಿನ ಸೈಬರ್ ಕ್ರೈಂನ ರಾಷ್ಟ್ರೀಯ ಸೈಬರ್ ಅಪರಾಧ ಬೆದರಿಕೆ ಪರಿಶೀಲನಾ ಘಟಕ, ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ತಿಳಿಸಿದೆ. ಜತೆಗೆ ಪೇಪರ್ ಡಾರ್ಕ್‌ನೆಟ್‌ನಲ್ಲಿ ಲಭ್ಯವಿರುವುದಾಗಿ ಹಾಗೂ ಲಕ್ಷ ಲಕ್ಷ ಹಣಕ್ಕೆ ಮಾರಾಟವಾದ ಬಗ್ಗೆ ಮಾಹಿತಿ ನೀಡಿದೆ. ಸಿಬಿಐ ಭಾರತೀಯ ಸೈಬರ್ ಅಪರಾಧ ದಳದ ಜತೆ ಜಂಟಿಯಾಗಿ ತನಿಖೆ ನಡೆಸಲಿದ್ದು ಸ್ವಂತ ಡಾರ್ಕ್‌ನೆಟ್ ಸಂಶೋಧನೆ ತಂತ್ರಜ್ಞಾನದ ಮೂಲಕ ಅಪರಾಧಿಗಳನ್ನು ಪತ್ತೆಹಚ್ಚಲಿದೆ ಎಂದು ಹೇಳಲಾಗಿದೆ. ಜತೆಗೆ ಕೋಚಿಂಗ್ ಸೆಂಟರ್‌ಗಳ ಮೇಲೆ ಸಿಬಿಐ ನಿಗಾ ವಹಿಸಿದ್ದು, ಕೆಲವು ಸಂಸ್ಥೆಗಳನ್ನು ತನಿಖೆಗೆ ಒಳಪಡಿಸುವ ಸಾಧ್ಯತೆ ಇದೆ.

ಕಾಂಗ್ರೆಸ್ ಪ್ರತಿಭಟನೆ, ರಸ್ತೆಗಿಳಿದ ವಿದ್ಯಾರ್ಥಿಗಳು

ನೆಟ್ ಮತ್ತು ನೀಟ್ ಪರೀಕ್ಷೆ ಪ್ರಕ್ರಿಯೆಯಲ್ಲಿ ಲೋಪದೋಷಗಳು ಕಂಡುಬಂದ ಹಿನ್ನೆಲೆ ದೇಶದ ಹಲವೆಡೆ ಸ್ಪರ್ಧಾತ್ಮಕ ಪರೀಕ್ಷೆ ಆಕಾಂಕ್ಷಿಗಳು ಪ್ರತಿಭಟನೆ ನಡೆಸಿದ್ದಾರೆ. ದೆಹಲಿ, ಹೈದ್ರಾಬಾದ್, ಲಖನೌ, ಪಾಟ್ನಾ ಭಾಗದಲ್ಲಿ ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆ ನಡೆಸಿದ್ದಾರೆ. ದೆಹಲಿ, ರಾಜಸ್ಥಾನ, ಚಂಡೀಗಢ, ಉತ್ತರಪ್ರದೇಶ, ಮಧ್ಯಪ್ರದೇಶ , ಹೈದರಾಬಾದ್, ಮಹಾರಾಷ್ಟ್ರ ಸೇರಿ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದ್ದು ನೀಟ್ ಪರೀಕ್ಷೆ ರದ್ದುಗೊಳಿಸಬೇಕು ಎಂದು ಆಗ್ರಹಿಸಲಾಗಿದೆ.

ದೆಹಲಿಯ ಬಿಜೆಪಿ ಕೇಂದ್ರ ಕಚೇರಿ ಎದುರು ದೇವೇಂದ್ರ ಯಾದವ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಧರಣಿ ನಡೆಸಿದ್ದು , ಕೇಂದ್ರ ಸರಕಾರದ ವಿರುದ್ಧ ಘೋಷಣೆ ಕೂಗಿದ್ದಾರೆ. ನೀಟ್ ಮತ್ತು ನೆಟ್ ಪರೀಕ್ಷೆ ಅಕ್ರಮ ಪ್ರಕರಣದಲ್ಲಿ ಸುಪ್ರಿಂ ಕೋರ್ಟ್ ಹಾಲಿ ನ್ಯಾಯಾಧೀಶರ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಯಬೇಕು ಎಂದು ಆಗ್ರಹಿಸಲಾಗಿದೆ. ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಶನ್ ಕಪ್ಪು ಬಾವುಟ ಹಿಡಿದು ಪರೀಕ್ಷಾ ಅಕ್ರಮದ ವಿರುದ್ಧ ದೆಹಲಿ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಪ್ರತಿಭಟನೆ ನಡೆಸಿದೆ.

ಸಚಿವೆಯಿಂದ ಜಲ ಸತ್ಯಾಗ್ರಹ ಆರಂಭ

ದೆಹಲಿ: ಆಪ್ ಸಚಿವೆ ಆತಿಶಿ ಶುಕ್ರವಾರದಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ. ದೆಹಲಿಗೆ ನೆರೆಯ ರಾಜ್ಯಗಳು ನೀರು ಬಿಡಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಯುತ್ತಿದ್ದು ಸುನಿತಾ ಕೇಜ್ರಿವಾಲ್, ಸಂಜಯ್ ಸಿಂಗ್ ಸೇರಿ ಆಮ್ ಆದ್ಮಿ ಪಕ್ಷದ ಶಾಸಕರು ಬೆಂಬಲ ನೀಡಿದ್ದಾರೆ. ದೆಹಲಿ ಜಲ ಕ್ಷಾಮದಿಂದ ತತ್ತ ರಿಸಿದ್ದು ಪ್ರತಿದಿನ ಹರಿಯಾಣ ಸರಕಾರ ದೆಹಲಿಗೆ ಬರಬೇಕಾದ 100 ಮಿಲಿಯನ್ ಗ್ಯಾಲೆನ್ ನೀರು ಬಿಡಬೇಕು ಎಂದು ಆಗ್ರಹಿಸಿ ದಕ್ಷಿಣ ದೆಹಲಿಯ ಭೋಗಲ್‌ನಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಆರಂಭಿಸಲಾಗಿದೆ. ಸತ್ಯಾಗ್ರಹಕ್ಕೂ ಮೊದಲು ಆತಿಶಿ, ಸುನಿತಾ ಕೇಜ್ರಿವಾಲ್, ಸಂಜಯ್ ಸಿಂಗ್ ಸೇರಿ ಅನೇಕ ನಾಯಕರು ರಾಜ್‌ಘಾಟ್‌ಗೆ ತೆರಳಿ ಮಹಾತ್ಮಾ ಗಾಂಧಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದ್ದಾರೆ.

ಎಲ್ಲಾ ಪ್ರಯತ್ನಗಳ ಬಳಿಕವೂ ಹರಿಯಾಣ ಬಿಜೆಪಿ ಸರಕಾರ ದೆಹಲಿ ಪಾಲಿನ ನೀರು ಬಿಡಲು ಒಪ್ಪುತ್ತಿಲ್ಲ ಎಂದ ಅವರು ಬುಧವಾರ ದೆಹಲಿ ಜಲ ಬಿಕ್ಕಟ್ಟು ಪರಿಹರಿಸಲು ಪ್ರಧಾನಿ ಮಧ್ಯಸ್ಥಿಕೆ ಕೋರಿ ಆತಿಶಿ ಪತ್ರ ಕೂಡ ಬರೆದಿದ್ದಾರೆ. ದೆಹಲಿಯ 28 ಲಕ್ಷ ಜನರು ನೀರಿನ ಕೊರತೆಯಿಂದ ಸಮಸ್ಯೆ ಎದುರಿಸುತ್ತಿದ್ದಾರೆ. ಪ್ರಧಾನಿ ಮೋದಿ ಎಲ್ಲಿಂದ ಲಾದರೂ ದೆಹಲಿಗೆ ನೀರು ತರಬೇಕು. ಹರಿಯಾಣ ದಿಂದ 613 ಎಂಜಿಡಿ ನೀರಿನಲ್ಲಿ 513 ಎಂಜಿಡಿಯಷ್ಟು ನೀರು ದೆಹಲಿಗೆ ಸಿಕ್ಕಿದೆ. 100 ಎಂಜಿಡಿ ನೀರು ಕಡಿಮೆಯಾಗಿದೆ ಎಂದು ಆತಿಶಿ ಆರೋಪಿಸಿದ್ದಾರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿರವರ ಕಛೇರಿ,
ಜಿಲ್ಲಾ ಪಂಚಾಯತ್, ಮಂಡ್ಯ. ದೂ. ಸಂಖ್ಯೆ:08232-224027
ಇ-ಮೇಲ್ : dho.mandya@gmail.com
ಸಂಖ್ಯೆ:ಸರಬ/49/2023-24 ದಿನಾಂಕ:20.06.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಷಯ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಮಂಡ್ಯ ರವರ ಅಧೀನದ ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇರುವ 21 ಫಾರ್ಮಸಿ ಅಧಿಕಾರಿ ಮತ್ತು 11 ಕಿರಿಯ ವೈದ್ಯಕೀಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯಲು **e- Procurement** ಮೂಲಕ ಅಲ್ಪಾವಧಿ ಟೆಂಡರ್ (ಕಾಲ್-02) ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ: (1) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಪತ್ರ ಸಂಖ್ಯೆ:ಎಸ್‌ಆರ್‌ಸಿ/08/2017-18(ಭಾಗ) ಇ-1228383 ದಿನಾಂಕ:17.02.2024. (2) ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರು ಕಂಡಿಕೆ 59 ರಲ್ಲಿ ಅನುಮೋದಿಸಿರುವ ದಿನಾಂಕ:18.06.2024

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖರಲ್ಲಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸೂಚಿಸಿರುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಮಂಡ್ಯರವರ ಅಧೀನದ ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇರುವ 21 ಫಾರ್ಮಸಿ ಅಧಿಕಾರಿ ಮತ್ತು 11 ಕಿರಿಯ ವೈದ್ಯಕೀಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯಲು ಹೊರಗುತ್ತಿಗೆ ಏಜೆನ್ಸಿ ಸಂಸ್ಥೆಗಳ ಮೂಲಕ ಮಾನವ ಸಂಪನ್ಮೂಲ ಏಜೆನ್ಸಿಯಿಂದ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000 ರ ಪ್ರಕಾರ **E-Procurement** ಮೂಲಕ ಅಲ್ಪಾವಧಿ ಟೆಂಡರ್ (ಕಾಲ್-02) ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ವಿಳಾಸ **http://eproc.karnataka.gov.in** ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ-ಪೋರ್ಟಲ್‌ನಲ್ಲಿ ಕಾಣಿಸಿದ ನಿಬಂಧನೆಗಳು ಟೆಂಡರ್ ಇ.ಎಂ.ಡಿ ಮೊತ್ತ ಹಾಗೂ ಇತರ ವಿವರಗಳನ್ನು ಗಮನಿಸಿ ಕ್ರಮವಹಿಸುವುದು. ಟೆಂಡರ್ ದಿನಾಂಕಗಳ ವಿವರ ಈ ಕೆಳಕಂಡಂತೆ ಇರುತ್ತದೆ. ಮುಂದಿನ ಯಾವುದೇ ಬದಲಾವಣೆಗಳನ್ನು ಇ- ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

(1) ಟೆಂಡರ್ ಪ್ರಕಟಣೆ ದಿನಾಂಕ ಸಂಖ್ಯೆ: **ಸರಬ/49/2023-24 ದಿ: 20.06.2024**. (2) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : **20.06.2024**. (3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **29.06.2024 ರ ಸಂಜೆ 05:30 ಗಂಟೆ ಒಳಗೆ.** (4) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ ದಿನಾಂಕ: **01.07.2024 ಬೆಳಿಗ್ಗೆ 11-00 ಗಂಟೆ ನಂತರ.** (5) ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ ತಾಂತ್ರಿಕ ದಾಖಲಾತಿಗಳನ್ನು ತೆರೆದ ನಂತರದ ದಿನಗಳಲ್ಲಿ ತೆರೆಯಲಾಗುವುದು. (6) ಟೆಂಡರ್‌ನ ಒಟ್ಟು ಅಂದಾಜು ಮೊತ್ತ**ರೂ. 83,20,000/- (ಎಂಬತ್ತ ಮೂರು ಲಕ್ಷದ ಇಪ್ಪತ್ತು ಸಾವಿರ ರೂಗಳು ಮಾತ್ರ)**. (7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ಶೇ.2.5) : **ರೂ.2,08,000/-**. (8) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : 08232-224027 ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/-ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಮಂಡ್ಯ ಜಿಲ್ಲೆ.
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/077/2024-25

ಕರ್ನಾಟಕ ಸರ್ಕಾರದ ಸಚಿವಾಲಯ
ಆರ್ಥಿಕ ಇಲಾಖೆ, ವಿದಾನಸೌಧ, ಬೆಂಗಳೂರು-560 001.
ಸಂಖ್ಯೆ: ಆಇ/03/ಬಿಎಂಬಿ/2024 ದಿನಾಂಕ : 21-06-2024

ಪತ್ರಿಕಾ ಪ್ರಕಟಣೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ **ಎಫ್.ಡಿ.01 ಬಿಎಂಬಿ 2014, ದಿನಾಂಕ: 18ನೇ ಜುಲೈ 2014** ನಿಬಂಧನೆಯ ಮೇರೆಗೆ ಹೊರಡಿಸಲಾದ **8.97%, ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2024, (Karnataka SDL 2024)** ದಿನಾಂಕ: **22ನೇ ಜುಲೈ 2024** ದಿನಾಂಕವೂ ಸೇರಿ ಆವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, ದಿನಾಂಕ: **23ನೇ ಜುಲೈ 2024**ರಂದು ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನಸ್ಟುಮೆಂಟ್ಸ್ ಅಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. **23ನೇ ಜುಲೈ 2024** ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.

2) ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ / ನೋಂದಾಯಿತವಾಗಿವೆಯೋ, ಅಂತಹ ಬ್ಯಾಂಕ್‌ಗಳಲ್ಲಿ, ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3) ಅದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ / ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, **8.97% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2024 (Karnataka SDL 2024)** ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು, ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ.

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/- (ಡಾ. ಪಿ .ಸಿ. ಜಾಫರ್)
ಸರ್ಕಾರದ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ
DIPR/CP/RO483/AAPL/2024-25



ದಾಖಲೆ ಬರೆದ ರಿಷಭ್ ಪಂತ್

ಆಂಟಿಗುವಾ: ಗುರುವಾರ ನಡೆದ ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 8 ಪಂದ್ಯದಲ್ಲಿ ರಿಷಭ್ ಪಂತ್ ಒಂದೇ ಆವೃತ್ತಿಯಲ್ಲಿ ಅತಿ ಹೆಚ್ಚು ಕ್ಯಾಚ್ ಹಿಡಿದ ಸಾಧನೆ ಮಾಡಿದ್ದಾರೆ. ಈ ಬಾರಿಯ ವಿಶ್ವಕಪ್‌ನಲ್ಲಿ ಬ್ಯಾಟಿಂಗ್ ಅಲ್ಲದೆ ವಿಕೆಟ್ ಕೀಪಿಂಗ್‌ನಲ್ಲೂ ಭರ್ಜರಿ ಪ್ರದರ್ಶನ ನೀಡುತ್ತಿರುವ ಅವರು, ರಿಚರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರಹಮಾನುಲ್ಲಾ ಗುರ್ಬಾಜ್, ಗುಲ್ಬಾದಿನ್ ನೈಬ್ ಮತ್ತು ನವೀನ್ ಉಲ್ ಹಕ್ ಅವರ ಕ್ಯಾಚ್ ಹಿಡಿಯುವ ಮೂಲಕ ಪಂತ್ ಪಂದ್ಯಾವಳಿಯ ಒಂದೇ ಆವೃತ್ತಿಯಲ್ಲಿ ನಾಲ್ಕು ಪಂದ್ಯಗಳಿಂದ ಹತ್ತು ಕ್ಯಾಚ್‌ಗಳೊಂದಿಗೆ ಅತಿ ಹೆಚ್ಚು ಕ್ಯಾಚ್ ಹಿಡಿದ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅಲ್ಲದೆ, ಎಬಿ ಡಿವಿಲಿಯರ್ಸ್, ಆಡಮ್ ಗಿಲ್‌ಕ್ರಿಸ್ಟ್ ಮತ್ತು ಕುಮಾರ ಸಂಗಕ್ಕಾರ ಅವರಂತಹ ಹಲವಾರು ಆಟಗಾರರನ್ನು ರಿಷಭ್ ಹಿಂದಿಕ್ಕಿದ್ದಾರೆ.



ನಾನು ಮೊದಲಿನಿಂದಲೂ ವಿರಾಟ್ ಕೊಹ್ಲಿ ಅವರನ್ನು ಮೂರನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಲು ಹೇಳುತ್ತಿದ್ದೇನೆ. ವಿಶೇಷವಾಗಿ ಅವರು ಈಗ ಆಡಲಿರುವ ಉತ್ತಮ ವಿಕೆಟ್‌ಗಳಲ್ಲಿ, ವಿರಾಟ್ ಮೂರನೇ ಕ್ರಮಾಂಕದಲ್ಲಿ ಆಡಲು ಸಮರ್ಥರಿದ್ದಾರೆ. ಅವರು ಆಕ್ರಮಣಕಾರಿ ಆಟವನ್ನು ಆಡಬಹುದು ಮತ್ತು ಅಗತ್ಯವಿದ್ದರೆ ಒತ್ತಡವನ್ನು ತಡೆದುಕೊಳ್ಳಬಹುದು.

-ಎಬಿಡಿ ವಿಲಿಯರ್ಸ್, ಮಾಜಿ ಕ್ರಿಕೆಟಿಗ

ಟಿಟಿ: ಆಕಾಶ್, ಖುಷಿಗೆ ಗೆಲುವು

ಬೆಂಗಳೂರು: ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ನಡೆದ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಆಕಾಶ್ ಕೆ.ಜೆ. ಮತ್ತು ಖುಷಿ ವಿ. ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡರು.

ವಿವಿ ಪುರಂನ ಮ್ಯಾಚ್ ಪಾಯಿಂಟ್‌ನಲ್ಲಿ ನಡೆದ ಪುರುಷರ ಫೈನಲ್‌ನಲ್ಲಿ ಆಕಾಶ್ 9-11, 11-8, 11-4, 13-11, 11-8ರಿಂದ ಯಶವಂತ್ ಪಿ. ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ಆಕಾಶ್ ಅವರು ಎಂ. ಕಲೈವನನ್ ಹಾಗೂ ಯಶವಂತ್ ಅವರು ಅಭಿನವ್ ಕೆ. ಮೂರ್ತಿ ವಿರುದ್ಧ ಗೆಲುವು ಸಾಧಿಸಿದ್ದರು. ಮಹಿಳೆಯರ ಫೈನಲ್ನಲ್ಲಿ ಖುಷಿ 7-11, 11-4, 5-11, 11-8, 9-11, 11-9, 11-5ರಿಂದ ಅನರ್ಘ್ಯ ಮಂಜುನಾಥ್ ಸೋಲಿಸಿದರು. ಸೆಮಿಫೈನಲ್‌ನಲ್ಲಿ ಖುಷಿ ಅವರು ಪ್ರಣವಿ, ನಿಹಾರಿಕಾ ಎ. ವಿರುದ್ಧ ಗೆಲುವು ಸಾಧಿಸಿದ್ದರು.

ಶಿಬಿರಕ್ಕೆ ಹಾಕಿ ತಂಡ ಪ್ರಕಟ

ಬೆಂಗಳೂರು: ಪ್ಯಾರಿಸ್ ಒಲಿಂಪಿಕ್ ಪೂರ್ವ ರಾಷ್ಟ್ರೀಯ ಶಿಬಿರಕ್ಕೆ 27 ಆಟಗಾರರ ಪಟ್ಟಿಯನ್ನು ಹಾಕಿ ಇಂಡಿಯಾ ಪ್ರಕಟಿಸಿದ್ದು, ತಂಡದಲ್ಲಿ ಉತ್ತಮ ಪ್ರದರ್ಶನ ನೀಡಿರುವ ಹಾಲಿ ಆಟಗಾರರನ್ನೇ ಆಯ್ಕೆ ಮಾಡಿದೆ. ಇನ್ನೇನು ಒಲಿಂಪಿಕ್ಸ್‌ಗೆ ಸ್ವಲ್ಪೇ ದಿನ ಉಳಿದಿದ್ದು, ಶಿಬಿರ ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಕೇಂದ್ರದಲ್ಲಿ ಜೂನ್ 21 ರಿಂದ ಜುಲೈ 8 ರವರೆಗೆ ನಡೆಯಲಿದೆ. ಒಲಿಂಪಿಕ್ಸ್ ಹಾಕಿಯಲ್ಲಿ ಭಾರತ 'ಬಿ' ಗುಂಪಿನಲ್ಲಿದ್ದು, ಬೆಲ್ಜಿಯಂ, ಅರ್ಜೆಂಟೀನಾ, ನ್ಯೂಜಿಲೆಂಡ್, ಆಸ್ಟ್ರೇಲಿಯಾ ಮತ್ತು ಐರ್ಲೆಂಡ್ ಗುಂಪಿನಲ್ಲಿರುವ ಇತರ ತಂಡಗಳು. ಟೋಕಿಯೊ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದ ಭಾರತ ತನ್ನ ಮೊದಲ ಪಂದ್ಯವನ್ನು ಜುಲೈ 27ರಂದು ನ್ಯೂಜಿಲೆಂಡ್ ವಿರುದ್ಧ ಆಡಲಿದೆ.

ಸೂಪರ್ 8ರಲ್ಲಿ ಮಾರ್ಷ್ ಪಡೆಗೆ ಮೊದಲ ಗೆಲುವು | ಹ್ಯಾಟ್ರಿಕ್ ಪಡೆದ ಕಮಿನ್ಸ್

ಬಾಂಗ್ಲಾಗೆ ಕಾಂಗರೂ ಶಾಕ್

ಬಾಂಗ್ಲಾ ಬೌಲರ್‌ಗಳನ್ನು ದಂಡಿಸಿದ ಆಸ್ಟ್ರೇಲಿಯಾ ಆರಂಭಿಕ ಹೆಡ್ ಹಾಗೂ ವಾರ್ನರ್.

ಆಂಟಿಗುವಾ: ಆಸ್ಟ್ರೇಲಿಯಾ ಆರಂಭಿಕರಾದ ಟ್ರಾವಿಸ್ ಹೆಡ್ ಹಾಗೂ ಡೇವಿಡ್ ವಾರ್ನರ್ ಅವರ ಭರ್ಜರಿ ಜತೆಯಾಟದಿಂದಾಗಿ ವಿಶ್ವಚಾಂಪಿಯನ್ ಆಸಿಸ್ ಭಾರೀ ಗೆಲುವು ದಾಖಲಿಸಿದೆ. ಮೂಲಕ ಬಿ ಗುಂಪಿನಿಂದ ಮೊದಲ ತಂಡವಾಗಿ ಎಂಟರ ಘಟ್ಟಕ್ಕೆ ಬಂದಿದ್ದ ಆಸ್ಟ್ರೇಲಿಯಾ, ತನ್ನ ಗೆಲುವಿನ ನಾಗಾಲೋಟ ಮುಂದುವರಿಸಿದೆ. ಇದರೊಂದಿಗೆ ಎಂಟರ ಘಟ್ಟದ ಮೊದಲನೇ ಗುಂಪಿನಲ್ಲಿ ಮೊದಲ ಗೆಲುವು ಸಾಧಿಸಿದ ನಂತರ ಆಸ್ಟ್ರೇಲಿಯಾ ಅಗ್ರ ಸ್ಥಾನಕ್ಕೆ ತಲುಪಿದ್ದು, ಭಾರತಕ್ಕೆ ಎರಡನೇ ಸ್ಥಾನಕ್ಕೆ ನೂಕಿದೆ. ಆಂಟಿಗುವಾದಲ್ಲಿ ನಡೆದ ಆಸ್ಟ್ರೇಲಿಯಾ ಹಾಗೂ ಬಾಂಗ್ಲಾದೇಶದ ನಡುವಣ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾ ಆಸಿಸ್ ವೇಗಿಗಳ ಮಾರಕ ಬೌಲಿಂಗ್ ದಾಳಿಗೆ ಸಿಲುಕಿಕೊಂಡು 8 ವಿಕೆಟ್‌ಗೆ 140 ರನ್ ಗಳಿಸಿತು. ಅದನ್ನು ಬೆನ್ನತ್ತಿದ ಆಸ್ಟ್ರೇಲಿಯಾ 11.2 ಓವರ್‌ಗಳಲ್ಲಿ 2 ವಿಕೆಟ್ ಕಳೆದು ಕೊಂಡು 100 ರನ್ ಗಳಿಸಿತು. ಪಂದ್ಯ ನಡೆಯುವ ಮಧ್ಯೆ ಮಳೆ ಬಂದ ಕಾರಣ ಡಕ್ವರ್ತ್ ಲೂಯಿಸ್ ನಿಯಮದನ್ವಯ 28 ರನ್‌ಗಳಿಂದ ಆಸ್ಟ್ರೇಲಿಯಾ ಜಯ ಸಾಧಿಸಿತು.

ಶಾಂಟೋ, ತೌಹಿದ್ ಆಸರೆ

ಬ್ಯಾಟಿಂಗ್ ಆಹ್ವಾನ ಪಡೆದ ಬಾಂಗ್ಲಾ ಕಾಂಗೂರು ಪಡೆಯ ಎಡಗೈ ಬೌಲರ ಮಿಚೆಲ್ ಸ್ಟಾರ್ಕ್ ತಮ್ಮ ಮೂರನೇ ಎಸೆತದಲ್ಲೇ ತಂಝಿದ್ ಹಸನ್ ಶೂನ್ಯಕ್ಕೆ ಔಟಾದರು. ಇದಾದ ಬಳಿಕ ತಾಳ್ಮೆಯ ಆಟವಾಡಿದ ಲಿಟನ್ ದಾಸ್(16) ಹಾಗೂ ನಾಯಕ ನಜ್ಮುಲ್ ಹೊಸೈನ್ ಶಾಂಟೋ (41) ಗಳಿಸಿ 58 ರನ್ ತಂಡಕ್ಕೆ ಆಸರೆಯಾದರು. ಆದರೆ ಈ ವೇಳೆ ಲಿಟನ್ ಔಟಾದ ಬೆನ್ನಲ್ಲೇ ಬಾಂಗ್ಲಾದೇಶ ನಿರಂತರವಾಗಿ ವಿಕೆಟ್ ಕಳೆದುಕೊಳ್ಳುತ್ತ ಸಾಗಿತು. ತೌಹಿದ್ ಹೃದಯ್ 28 ಎಸೆತಗಳಲ್ಲಿ 40 ರನ್ ಗಳಿಸಿ ತಂಡಕ್ಕೆ ನೆರವಾದರೆ, ವೇಗಿ ಟಸ್ಕಿನ್ ಅಹ್ಮದ್13 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಶಕಿಬ್(8) ಸೇರಿದಂತೆ ಇನ್ನುಳಿದ ಬ್ಯಾಟರ್‌ಗಳಿಂದ ಎರಡಂಕಿ ಮೊತ್ತ ಕಲೆ ಹಾಕಲು ಸಾಧ್ಯವಾಗಲ್ಲ. ರಿಶದ್ ಹೊಸೈನ್, ಮೊಹಮ್ಮದುಲ್ಲಾ ತಲಾ 2 ರನ್ ಹಾಗೂ ಮಹೆದಿ ಹಸನ್ ಶೂನ್ಯಕ್ಕೆ ಔಟಾದರು. ಹೀಗಾಗಿ ಬಾಂಗ್ಲಾದೇಶ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 140 ರನ್‌ಗಳಿಸಲಷ್ಟೇ ಶಕ್ತವಾಯಿತು.

ವಾರ್ನರ್ ಹೆಡ್‌ಎಕ್

ಅಲ್ಪ ಮೊತ್ತವಾದರೂ ಈ ಬಾರಿಯ ವಿಶ್ವಕಪ್‌ನಲ್ಲಿ ಸ್ಪರ್ಧಾತ್ಮಕ ಗುರಿಯನ್ನು ಬೆನ್ನಟ್ಟಿದ ಕಾಂಗರೂ ಪಡೆಗೆ ಭರ್ಜರಿ ಆರಂಭ ದೊರೆಯಿತು. ಆರಂಭಿಕ ಡೇವಿಡ್ ವಾರ್ನರ್ ಹಾಗೂ ಟ್ರಾವಿಸ್ ಹೆಡ್ ಆರಂಭದಲ್ಲೇ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. ಪಂದ್ಯ ಬೇಗ ಮುಗಿಸುವ ಉದ್ದೇಶದಿಂದ ಆಡಿದ ಇವರು, ಮೊದಲ ವಿಕೆಟ್‌ಗೆ 65 ರನ್ ಕಲೆ ಹಾಕಿದರು. ಈ ವೇಳೆ ಹೆಡ್ 31 ರನ್‌ಗೆ ಔಟಾದರು. ಬಳಿಕ ಮೂರನೇ ಕ್ರಮಾಂಕದಲ್ಲಿ ಬಂದ ನಾಯಕ ಮಿಚೆಲ್‌ಮಾರ್ಷ್ ಕೇವಲ 1 ರನ್‌ಗೆ ವಿಕೆಟ್ ಕಳೆದುಕೊಂಡರು. ಆದರೆ ಈ ಬಳಿಕ ವಾರ್ನರ್ ಜತೆಗೂಡಿದ ಗ್ಲೆನ್ ಮ್ಯಾಕ್ಸ್‌ವೆಲ್ 14★ ರನ್ ಗಳಿಸಿದ್ದರು. ಈ ಸಮಯದಲ್ಲ ವೇಳೆ ಮಳೆ ಶುರುವಾಯಿತು. ಆಗ ಕಾಂಗೂರು ಪಡೆ 11.2 ಓವರ್‌ಗಳಲ್ಲಿ 2 ವಿಕೆಟ್‌ಗೆ 100 ರನ್ ಗಳಿಸಿತ್ತು. ಮಳೆ ನಿಲ್ಲದ ಕಾರಣ ಡಕ್ವರ್ತ್ ಲೂಯಿಸ್ ನಿಯಮದ ಪ್ರಕಾರ ಆಸ್ಟ್ರೇಲಿಯಾವನ್ನು 28 ರನ್‌ಗಳಿಂದ ವಿಜೇತ ತಂಡ ಎಂದು ಘೋಷಿಸಲಾಯಿತು. ಈ ಮೂಲಕ ಸೂಪರ್-8 ಹಂತದಲ್ಲಿ ಮಾರ್ಷ್ ಪಡೆ ಗೆಲುವಿನ ಆರಂಭ ಪಡೆಯಿತು.

ಕಮಿನ್ಸ್‌ಗೆ ಹ್ಯಾಟ್ರಿಕ್, ಸ್ಟಾರ್ಕ್ ದಾಖಲೆ

ಆಸಿಸ್ ಆಲ್‌ರೌಂಡರ್ ಪ್ಯಾಟ್ ಕಮಿನ್ಸ್ ಹೊಸ ದಾಖಲೆ ಬರೆದಿದ್ದು, ಹ್ಯಾಟ್ರಿಕ್ ವಿಕೆಟ್ ತೆಗೆದು ಮಿಂಚಿದ್ದಾರೆ. ಬಾಂಗ್ಲಾ ವಿರುದ್ಧದ ಪಂದದಲ್ಲಿ ಡೆತ್ ಓವರ್ ಮಾಡಲು ಬಂದ ಅವರು, 18ನೇ ಓವರ್‌ನ 5, 6 ನೇ ಎಸೆತ ಹಾಗೂ 20ನೇ ಓವರ್‌ನ ಮೊದಲ ಎಸೆತದಲ್ಲಿ ಬಾಂಗ್ಲಾದ ಮೊಹಮದುಲ್ಲಾ, ಮೆಹದಿ ಹಸನ್ ಮತ್ತು ತೌಹಿದ್ ಹ್ರದೋಯ್ ಅವರ ವಿಕೆಟ್ ಗಳನ್ನು ಕಿತ್ತಿದ್ದು, ಕಮಿನ್ಸ್ ಟಿ20 ವಿಶ್ವಕಪ್‌ನ ಇತಿಹಾಸದಲ್ಲಿ ಹ್ಯಾಟ್ರಿಕ್ ಪಡೆದ ಎರಡನೇ ಆಸ್ಟ್ರೇಲಿಯಾ ಆಟಗಾರರಾದರು. ಈ ಹಿಂದೆ ಆಸ್ಟ್ರೇಲಿಯಾ ಪರ 2007ರಲ್ಲಿ ಬ್ರೆಟ್ ಲಿ ಅವರು ವಿಶ್ವಕಪ್ ಹ್ಯಾಟ್ರಿಕ್ ಪಡೆದಿದ್ದರು. 17 ವರ್ಷದ ಬಳಿಕ ಕಮಿನ್ಸ್ ಈ ದಾಖಲೆ ಸರಿಗಟ್ಟಿದ್ದಾರೆ. ಅಲ್ಲದೆ ಬಾಂಗ್ಲಾ ವಿರುದ್ಧದ ಪಂದ್ಯದಲ್ಲಿ ಮಿಚೆಲ್ ಸ್ಟಾರ್ಕ್ ಸಹ ದಾಖಲೆ ಸೃಷ್ಟಿಸಿದ್ದು, ಆರಂಭಿಕ ಓವರ್‌ನಲ್ಲಿ ತಂಜಿದ್ ಹಸನ್ ಅವರನ್ನು ಔಟ್ ಮಾಡುವ ಮೂಲಕ ವೈಟ್ ಬಾಲ್ ಕ್ರಿಕೆಟ್ ವಿಶ್ವಕಪ್ ಇತಿಹಾಸದಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಆದರು. ತಂಜಿದ್ ಹಸನ್ ವಿಕೆಟ್ ಸ್ಟಾರ್ಕ್ ಅವರ 95ನೇ ವಿಶ್ವಕಪ್ ವಿಕೆಟ್ ಆಗಿದೆ.

ಸ್ಕೋರ್

ಬಾಂಗ್ಲಾ: 140/8 ತೌಹಿದ್ 40, ಶಾಂಟೋ 41, ಕಮಿನ್ಸ್ 29/3, ಜಂಪಾ 24/2
ಆಸ್ಟ್ರೇಲಿಯಾ: 11.2 ಓವರ್‌ಗಳಿಗೆ 100: ವಾರ್ನರ್ 53★, ಹೆಡ್ 31

ಸೆಮಿಸ್ ಟಿಕೆಟ್ ಖಚಿತ ಪಡಿಸಿಕೊಂಡ ದ.ಆಫ್ರಿಕಾ

ಆಂಗ್ಲರ ಮಣಿಸಿದ ಹರಿಣಗಳು

ಸೇಂಟ್ ಲೂಸಿಯಾ: ಕ್ವಿಂಟನ್ ಡಿಕಾಕ್, ಡೆವಿಡ್ ಮಿಲ್ಲರ್ ಅವರ ಸ್ಫೋಟಕ ಬ್ಯಾಟಿಂಗ್ ಹಾಗೂ ಹರಿಣರ ಸಾಂಘಿಕ ಬೌಲಿಂಗ್ ದಾಳಿಗೆ ಇಂಗ್ಲೆಂಡ್ ತತ್ತರಿಸಿದ್ದು, ರೋಚಕ ಸೋಲನುಭವಿಸಿದೆ. ಆ ಮೂಲಕ ಸೂಪರ್ 8ನಲ್ಲಿ ಸತತ ಎರಡನೇ ಗೆಲುವು ದಾಖಲಿಸಿದ್ದು, ಅಗ್ರಸ್ಥಾನ ಗಳಿಸುವುದರೊಂದಿಗೆ ಬಹುತೇಕ ಸೆಮಿಫೈನಲ್ ಟಿಕೆಟ್ ಪಡೆದುಂಮಡಿದೆ. ಇಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ದ. ಆಫ್ರಿಕಾ 6 ವಿಕೆಟ್ ನಷ್ಟಕ್ಕೆ 163 ರನ್ ಗಳಿಸಿತು. ಅದನ್ನು ಬೆನ್ನು ಹತ್ತಿದ ಇಂಗ್ಲೆಂಡ್ ಕೊನೆಯವರೆಗೂ ಹೋರಾಡಿ 6 ವಿಕೆಟ್ ಕಳೆದುಕೊಂಡು 156 ರನ್ ಅಷ್ಟೇ ಗಳಿಸಲು ಶಕ್ತವಾಯಿತು.

ಮಿಂಚಿದ ಡಿಕಾಕ್, ಮಿಲ್ಲರ್: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ದ. ಆಫ್ರಿಕಾ ತಂಡಕ್ಕೆ ಸ್ಫೋಟಕ ಆರಂಭ ಸಿಕ್ಕಿತು. ಆರಂಭದಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡಿದ ಕ್ವಿಂಟನ್ ಡಿಕಾಕ್ ಆಂಗ್ಲರನ್ನು ದಂಡಿಸಿದರು. 171 ರ ಸ್ಟ್ರೈಕ್‌ರೇಟ್ ನಲ್ಲಿ ಆಡಿದ ಅವರು 38 ಎಸೆತದಲ್ಲಿ 65 ರನ್ ಗಳಿಸಿದರು. ಆದರೆ ಇನ್ನೊಬ್ಬ ಆರಂಭಿಕ ರೀಜಾ 19 ರನ್ ಗಳಿಸಿ ಔಟಾದರು. ಕ್ಲಾಸೆನ್ 13 ರನ್ ಗಳಿಸಿ ವಿಕೆಟ್ ಒಪ್ಪಿಸಿದರೆ, ನಾಯಕ ಮಾರ್ಕರಂ 1 ರನ್ ಗಳಿಸಿ ಔಟಾದರು. ಉಳಿದಂತೆ ಸ್ಟಬ್ಸ್ 13, ಮಹಾರಾಜ 5 ರನ್ ಗಳಿಸಿದರು. ಆದರೆ ಈ ಮಧ್ಯೆ ಸ್ಫೋಟಕ ಬ್ಯಾಟಿಂಗ್ ಮಾಡಿದ ಡೆವಿಡ್ ಮಿಲ್ಲರ್ ಮತ್ತೊಮ್ಮೆ ಆಸರೆಯಾದರು. 28 ಎಸೆತಗಳನ್ನು ಎದುರಿಸಿದ ಅವರು, 43 ರನ್ ಗಳಿಸಿ ತಂಡದ ಮೊತ್ತ ಏರಿಸಿದರು.

ಬ್ರೂಕ್, ಲೀವಿಂಗ್‌ಸ್ಟೋನ್ ಹೋರಾಟ: ಅದನ್ನು ಬೆನ್ನುಹತ್ತಿದ ಇಂಗ್ಲೆಂಡ್ ತಂಡಕ್ಕೆ ಆರಂಭಿಕ ಆಘಾತ ಉಂಟಾಯಿತು. ಸ್ಫೋಟಕ ಬ್ಯಾಟರ್ ಸಾಲ್ಟ್ 11 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಬೈರ್ಸ್ಟೋವ್ 16 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅವರ ಹಿಂದಯೇ ನಾಯಕ ಬಟ್ಲರ್ ಸಹ 17 ರನ್ ಗಳಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಮೋಯಿನ್ ಅಲಿ ಸಹ 9 ರನ್ ಗಳಿಸಿ ವಿಕೆಟ್ ನೀಡಿದರು. ಆದರೆ ಈ ವೇಳೆ ಜತೆಗೂಡಿದ ಹ್ಯಾರಿ ಬ್ರೂಕ್ ಹಾಗೂ ಲೀವಿಂಗ್‌ಸ್ಟೋನ್ ಸ್ಫೋಟಕ ಜತೆಯಾಟವಾಡಿದರು. ಕುಸಿದ ಇಂಗ್ಲೆಂಡ್ ತಂಡಕ್ಕೆ ಆಸರೆಯಾದ ಅವರು, ಗೆಲುವಿನ ಹಂತಕ್ಕೆ ತೆಗೆದುಕೊಂಡು ಹೋದರು. ಆದರೆ ಈ ವೇಳೆ ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದ ಲೀವಿಂಗ್‌ಸ್ಟೋನ್ 33 ರನ್ ಗಳಿಸಿ ವಿಕೆಟ್ ನೀಡಿದರು. ಆದರೆ ಹೋರಾಟ ಮುಂದುವರಿಸಿದ ಬ್ರೂಕ್ (53) ಬಿರುಸಿನ ಅರ್ಧ ಶತಕ ಬಾರಿಸಿದರು. ಆದರೆ ದ.ಆಫ್ರಿಕಾ ಆಂಗ್ಲರನ್ನು ತಡೆಯುವಲ್ಲಿ ಯಶಸ್ವಿಯಾದರು.

ಸೂಪರ್ ಎಂಟರ ಎ ಗುಂಪು

ತಂಡ	ಪಂದ್ಯ	ಗೆಲುವು	ಸೋಲು	ಪಾಯಿಂಟ್ಸ್	ರನ್‌ರೇಟ್
ಆಸ್ಟ್ರೇಲಿಯಾ	1	1	0	2	+2.471
ಭಾರತ	1	1	0	2	+2.350
ಅಫ್ಘಾನಿಸ್ಥಾನ	1	0	1	0	-2.350
ಬಾಂಗ್ಲಾದೇಶ	1	0	1	0	-2.471

ಗುಂಪು ಬಿ

ತಂಡ	ಪಂದ್ಯ	ಗೆಲುವು	ಸೋಲು	ಪಾಯಿಂಟ್ಸ್	ರನ್‌ರೇಟ್
ದ.ಆಫ್ರಿಕಾ	2	2	0	4	+0.625
ಇಂಗ್ಲೆಂಡ್	2	1	1	2	+0.412
ಅಮೆರಿಕ	1	0	1	0	-1.343
ವೆಸ್ಟ್ ಇಂಡಿಸ್	1	0	1	0	-1.343

ಮಹಿಳಾ ಕಬಡ್ಡಿ: ಕುಣಿಗಲ್ ಪ್ರಥಮ

ಬೆಂಗಳೂರು: ತುಮಕೂರು ವಿಶ್ವವಿದ್ಯಾಲಯದ ಅಂತರ ಕಾಲೇಜು ಮಹಿಳೆಯರ ಕಬಡ್ಡಿ ಪಂದ್ಯಗಳು ಇಲ್ಲಿನ ಕುಣಿಗಲ್ ತಾಲೂಕಿನ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದಿದ್ದು, ಕುಣಿಗಲ್ ಕಾಲೇಜು ತಂಡ ಪ್ರಥಮ, ತಿಪಟೂರು ಕಾಲೇಜು ತಂಡ ದ್ವಿತೀಯ ಪ್ರಶಸ್ತಿ ಪಡೆಯಿತು. ಒಟ್ಟು 8 ತಂಡಗಳು ಭಾಗವಹಿಸಿದ್ದು, ಅತ್ಯುತ್ತಮ ರೈಡರ್ ಪ್ರಶಸ್ತಿಯನ್ನು ಕುಣಿಗಲ್ ಕಾಲೇಜಿನ ಮೈತ್ರಾ, ಅತ್ಯುತ್ತಮ ಕ್ಯಾಚರ್ ಪ್ರಶಸ್ತಿಯನ್ನು ತಿಪಟೂರು ಕಾಲೇಜಿನ ಶಿವಗಾಯತ್ರಿ ಮತ್ತು ಆಲ್ ರೌಂಡರ್ ಪ್ರಶಸ್ತಿಯನ್ನು ಕುಣಿಗಲ್ ಕಾಲೇಜಿನ ವಿನುತಾ ಪಡೆದುಕೊಂಡರು. ಬಹುಮಾನಗಳನ್ನು ಪ್ರಾಂಶುಪಾಲೆ ಮಾಯಾ ಸಾರಂಗಪಾಣಿ ವಿತರಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ರವೀಶ್, ಪ್ರಾಧ್ಯಾಪಕರಾದ ಗೋವಿಂದರಾಯ, ರಾಮಾಂಜನೇಯ, ಶಿವರಾಮ ಪಾಲ್ಗೊಂಡಿದ್ದರು.

ಸೂಪರ್ 8ರಲ್ಲಿ ಇಂದು ಭಾರತ-ಬಾಂಗ್ಲಾ ಕದನ

ಭಾರತ ಗೆದ್ದರೆ ಸೆಮಿಫೈನಲ್‌ಗೆ ಲಗ್ಗೆ

ದೆಹಲಿ: ಟಿ20 ವಿಶ್ವಕಪ್ ಇನ್ನೇನು ಮುಗಿಯುವ ಹಂತಕ್ಕೆ ಬಂದಿದ್ದು, ಸೂಪರ್ 8 ಪಂದ್ಯಗಳು ನಡೆಯುತ್ತಿವೆ. ಈ ಮಧ್ಯೆ ಭಾರತ ಎಂಟರ ಘಟ್ಟದಲ್ಲಿ ಮೊದಲ ಗೆಲುವು ಸಾಧಿಸಿದ ನಂತರ ತನ್ನ ಎರಡನೇ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಸೆಣಸಲಿದೆ.

ಪಂದ್ಯವು ಆಂಟಿಗುವಾದಲ್ಲಿ ನಡೆಯಲಿದ್ದು, ಈ ಪಂದ್ಯ ಸ್ಥಳೀಯ ಕಾಲಮಾನ ಬೆಳಗ್ಗೆ 10.30ಕ್ಕೆ ಆರಂಭವಾಗಲಿದೆ. ಅಂದರೆ ಭಾರತೀಯ ಕಾಲಮಾನ ರಾತ್ರಿ 8 ಗಂಟೆಗೆ ಪಂದ್ಯ ಆರಂಭವಾಗಲಿದೆ. ಸೂಪರ್ 8 ಪಂದ್ಯದಲ್ಲಿ ಮೊದಲ ಗೆಲುವು ಸಾಧಿಸಿದ ಭಾರತವು ಸೇಫ್ ಆಗಿದ್ದು, ಬಾಂಗ್ಲಾಗೆ ಈ ಪಂದ್ಯದಲ್ಲಿ ಗೆಲುವು ಅನಿವಾರ್ಯವಾಗಿದೆ.

ಪಿಚ್ ರಿಪೋರ್ಟ್: ವಿಶ್ವಕಪ್‌ನಲ್ಲಿ ಇದುವರೆಗೆ 6 ಪಂದ್ಯಗಳನ್ನು ಆಡಲಾಗಿದ್ದು, ಇದರಲ್ಲಿ ಬೌಲಿಂಗ್ ಆಯ್ಕೆ ಮಾಡಿಕೊಂಡ ತಂಡವು 4 ಪಂದ್ಯಗಳಲ್ಲಿ ಗೆದ್ದಿದ್ದರೆ, ಕೇವಲ 2 ಪಂದ್ಯಗಳಲ್ಲಿ ಮೊದಲು ಬ್ಯಾಟ್ ಮಾಡಿದ ತಂಡ ಗೆಲುವು ಸಾಧಿಸಿದೆ. ಆದರೆ ಎರಡನೇ ಇನ್ನಿಂಗ್ಸ್‌ಗೆ ಮಳೆ ಅಡ್ಡಿಯಾಗಲಿದೆ ಎನ್ನಲಾಗಿದೆ. ಪಿಚ್‌ನಲ್ಲಿ ಅಲ್ಪ ಟರ್ನ್ ಇರಲಿದ್ದು ಬೌಲರ್‌ಗಳಿಗೆ ಭರ್ಜರಿ ಸಹಾಯ ಮಾಡಲಿದೆ. ಹೀಗಾಗಿ ಮೊದಲು ಬೌಲಿಂಗ್ ಮಾಡುವುದು ಉತ್ತಮ.

ಬಾಂಗ್ಲಾಕ್ಕೆ ಇದು ನಿರ್ಣಾಯಕ ಪಂದ್ಯ

ಬಾಂಗ್ಲಾ ವಿರುದ್ಧ ಭಾರತ ಗೆದ್ದರೆ ಬಹುತೇಕ ಸೆಮಿಫೈನಲ್ ತಲುಪಲಿದೆ. ಒಂದು ವೇಳೆ ಬಾಂಗ್ಲಾದೇಶ ಸೋತರೆ ಟೂರ್ನಿಯಿಂದ ಹೊರಬೀಳಬಹುದು. ಈ ಕಾರಣಕ್ಕೆ ಈ ಪಂದ್ಯ ಅತ್ಯಂತ ಮಹತ್ವ ಪಡೆದುಕೊಂಡಿದೆ. ಆದರೆ, ಆಂಟಿಗುವಾದ ಹವಾಮಾನ ವರದಿ ಪ್ರಕಟ ಮಾಡಿದ್ದು, ಪಂದ್ಯಕ್ಕೆ ಮಳೆ ಅಡ್ಡಿಪಡಿಸುವ ಸಾಧ್ಯತೆಗಳಿವೆ. ವಾಸ್ತವವಾಗಿ, ಹಗಲಿನಲ್ಲಿ 23% ಮಳೆಯಾಗುವ ಮುನ್ಸೂಚನೆ ಇದೆ. ಮಳೆಯಾದರೆ ಭಾರತ-ಬಾಂಗ್ಲಾದೇಶ ಪಂದ್ಯಕ್ಕೆ ಅಡ್ಡಿಯಾಗುವ ಸಾಧ್ಯತೆ ಇದೆ. ಆದರೆ, ಸರ್ ವಿವಿಯನ್ ರಿಚರ್ಡ್ಸ್ ಕ್ರೀಡಾಂಗಣದಲ್ಲಿ ಸೌಲಭ್ಯಗಳು ಉತ್ತಮವಾಗಿವೆ. ಆದ್ದರಿಂದ, ಮಳೆ ನಿಂತ ಸ್ವಲ್ಪ ಸಮಯದ ನಂತರ ಪಂದ್ಯವನ್ನು ಪ್ರಾರಂಭಿಸಬಹುದು.

ವಲಸಿಗ ಪದವೀಧರರಿಗೆ ಗ್ರೀನ್ ಕಾರ್ಡ್ ಗ್ಯಾರಂಟಿ: ಟ್ರಂಪ್

ವಾಷಿಂಗ್ಟನ್: ಅಮೆರಿಕಾದ ಕಾಲೇಜುಗಳಿಂದ ಪದವಿ ಪಡೆಯುವ ವಲಸಿಗ ವಿದ್ಯಾರ್ಥಿಗಳಿಗೆ ಪೌರತ್ವ ನೀಡುವುದಾಗಿ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭರವಸೆ ನೀಡಿದ್ದಾರೆ. ಗ್ರೀನ್ ಕಾರ್ಡ್ ಹೊಂದಿರುವವರ ಸಂಗಾತಿ ಮತ್ತು ಮಕ್ಕಳಿಗೆ ಪೌರತ್ವ ನೀಡುವ ಯೋಜನೆ ಬಗ್ಗೆ ಜೋ ಬೈಡನ್ ಹೇಳಿಕೆ ಬೆನ್ನಲ್ಲೇ ಟ್ರಂಪ್ ಕೂಡ ಇದೇ ರೀತಿಯ ಘೋಷಣೆ ಮಾಡಿದ್ದಾರೆ.



ಗುರುವಾರ ಪ್ರಕಟವಾದ ಪಾಡ್‌ಕಾಸ್ಟ್ ವೊಂದರಲ್ಲಿ ಟ್ರಂಪ್ ಈ ಹೇಳಿಕೆ ಹೊರಬಿದ್ದಿದ್ದು ವಲಸಿಗ ಯುವಕರಲ್ಲಿ ಗ್ರೀನ್ ಕಾರ್ಡ್ ಆತಂಕ ಕೊಂಚ ಕಡಿಮೆಯಾಗಿದೆ. ಟೆಕ್ ಸಂಸ್ಥೆಗಳಿಗೆ ವಿದೇಶಗಳ ಪ್ರತಿಭಾನ್ವಿತರನ್ನು ನೇಮಿಸಿಕೊಳ್ಳುವ ಬಗ್ಗೆ ಕೇಳಿದ ಪ್ರಶ್ನೆಗೆ ಟ್ರಂಪ್ ಈ ರೀತಿಯ ಪ್ರತಿಕ್ರಿಯೆ ನೀಡಿದ್ದಾರೆ.

''ಚುನಾವಣೆಯಲ್ಲಿ ಗೆದ್ದರೆ ಅಮೆರಿಕಾ ಕಾಲೇಜುಗಳಿಂದ ಪದವಿ ಪಡೆದ ಯುವಕ ರಿಗೆ ಸ್ವಯಂ ಚಾಲಿತವಾಗಿ ಗ್ರೀನ್ ಕಾರ್ಡ್ ಸಿಗಬೇಕು. ಡಿಪ್ಲೊಮಾದ ಭಾಗವಾಗಿ ಈ ದೇಶದಲ್ಲಿ ನೆಲೆಸಲು ಪೌರತ್ವ ನೀಡಲಾಗು ವುದು. ಎಷ್ಟು ವರ್ಷ ಬೇಕಾದರೂ ಓದಲಿ ಪದವಿ ಸಿಕ್ಕ ಬಳಿಕ ಅವರಿಗೆ ಅಮೆರಿಕಾ ಪೌರತ್ವ ನೀಡಲಾಗುವುದು'' ಎಂದು ಡೊನಾಲ್ಡ್ ಟ್ರಂಪ್ ಭರವಸೆ ನೀಡಿದ್ದಾರೆ. ಅಮೆರಿಕಾದಲ್ಲಿ ಓದಿ ಇಲ್ಲಿ ಕೆಲಸ ಸಿಗದಿದ್ದಾಗ ಭಾರತಕ್ಕೆ ವಾಪಸ್ಸು ಹೋಗಿ ಅಲ್ಲಿ ತಮ್ಮದೇ ಸಂಸ್ಥೆ ಆರಂಭಿಸಿ ಕೋಟ್ಯಾಧಿಪತಿ ಗಳಾಗುತ್ತಿದ್ದಾರೆ.

ಹೀಗಾಗಿ ಅವರನ್ನು ದೇಶದಲ್ಲೇ ಉಳಿಸಿಕೊಳ್ಳಲು ಗ್ರೀನ್ ಕಾರ್ಡ್ ನೆರವಾಗಲಿದೆ ಎಂದು ಟ್ರಂಪ್ ಹೇಳಿದ್ದಾರೆ. ಈ ಹಿಂದೆ ವಲಸಿಗರ ಮೇಲಿನ ಟ್ರಂಪ್ ವಿಚಾರಗಳು ಭಿನ್ನವಾಗಿದ್ದವು. ಅಮೆರಿಕಾ ಉದ್ಯೋಗಿಗಳ ಹಿತ ರಕ್ಷಣೆಯ ಸಲುವಾಗಿ ಕುಟುಂಬ ಆಧಾರಿತ ವೀಸಾ ಮತ್ತು ಲಾಟರಿ ವೀಸಾಗಳ ಮೇಲೆ ನಿರ್ಬಂಧ ಹೇರುವಂತೆ ಒತ್ತಾಯಿಸಿದ್ದರು. 'ಅಮೆರಿಕಾ ಮೊದಲು' ಎಂಬುದು ಅವರ ಯೋಚನೆಯಾಗಿತ್ತು. ಆದರೆ ಈಗ ಆಶ್ಚರ್ಯವೆಂಬಂತೆ ಟ್ರಂಪ್ ವಲಸಿಗರಿಗೆ ಗ್ರೀನ್ ಕಾರ್ಡ್ ನೀಡುವ ಗ್ಯಾರಂಟಿ ನೀಡಿದ್ದಾರೆ. 2023ರಲ್ಲಿ ಯುಎಸ್‌ಎ 1,40,000 ಭಾರತೀಯ ವಿದ್ಯಾರ್ಥಿಗಳಿಗೆ ವೀಸಾ ನೀಡಿದೆ.

ಅತ್ತ ಕೋರ್ಟ್ ಭೀತಿ, ಇತ್ತ ಗದ್ದುಗೆ ಆತಂಕ, ವಿಭಜನೆ ನೆಪದಲ್ಲಿ ಸುಪ್ರೀಂಗೆ ಮೊರೆ ?

ಬಿಬಿಎಂಪಿಗೆ ಚುನಾವಣೆ ತಯಾರಿಗೆ ಮೀನಮೇಷ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಬಹುಚರ್ಚಿತ ಬಿಬಿಎಂಪಿ ಚುನಾವಣೆಗೆ ರಾಜ್ಯ ಸರಕಾರ ಅರೆಮನಸ್ಸಿನ ಸಿದ್ಧತೆ ನಡೆಸುತ್ತಿದೆ.

ಒಂದು ಕಡೆ ಬಿಬಿಎಂಪಿ ವಿಭಜನೆ ಮೂಲಕ ಚುನಾವಣೆ ಮುಂದೂಡಲು ಪರೋಕ್ಷ ಯತ್ನ ನಡೆಸುತ್ತಿರುವ ಸರಕಾರ, ಮತ್ತೊಂದೆಡೆ ಸುಪ್ರೀಂ ಕೋರ್ಟ್ ಕೆಂಗಣ್ಣಿಗೆ ಗುರಿಯಾಗುವ ಭೀತಿಯಲ್ಲಿ ಚುನಾವಣೆ ಸಿದ್ಧತೆಯನ್ನೂ ನಡೆಸಿದೆ. ಈ ಎರಡೂ ಉದ್ದೇಶಗಳ ಹಿನ್ನೆಲೆ ಯಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿರಂತರ ಸಭೆಗಳನ್ನು ನಡೆಸುತ್ತಿದ್ದು, ಶನಿವಾರ ಮತ್ತೆ ಕೆಪಿಸಿಸಿ ಕಚೇರಿಯಲ್ಲಿ ಮಹತ್ವದ ಸಭೆ ನಡೆಸಲಿದ್ದಾರೆ. ಬಿಬಿಎಂಪಿ ಮಾಜಿ ಮೇಯರ್ ಗಳು, ಆಡಳಿತ ಪಕ್ಷದ ನಾಯಕರು ಹಾಗೂ ಇತರ ಬೆಂಗಳೂರು ಸಚಿವರು, ನಾಯಕರ ಜತೆ ಚುನಾವಣೆ ನಡೆಸುವ ಮತ್ತು ಮುಂದೂಡುವ ಸಾಧ್ಯಾಸಾಧ್ಯತೆಗಳ ಬಗ್ಗೆ ಚರ್ಚಿಸಲಿದ್ದಾರೆ ಎಂದು ತಿಳಿದುಬಂದಿದೆ.

ವಾಸ್ತವದಲ್ಲಿ ಬಿಬಿಎಂಪಿ ಚುನಾವಣೆ ನಡೆಸುವ ವಿಚಾರದಲ್ಲಿ ಸರಕಾರ ತೀರಾ ಗೊಂದಲದಲ್ಲಿದೆ. ಅಂದರೆ ಚುನಾವಣೆ ನಡೆಸದಿದ್ದರೆ, ಸುಪ್ರೀಂಕೋರ್ಟ್ ಪ್ರಹಾರ ಮಾಡಬಹುದು ಎನ್ನುವ ಭೀತಿ. ಚುನಾವಣೆ ನಡೆಸಿದರೆ, ಪಕ್ಷಕ್ಕೆ ಅಧಿಕಾರ ಸಿಗದಿದ್ದರೆ ಗತಿ ಏನು ಎನ್ನುವ ಆತಂಕ. ಹೀಗಾಗಿ 225 ವಾರ್ಡ್‌ಗಳಾಗಿ ಈಗಾಗಲೇ ವಿಂಗಡಣೆಯಾಗಿರುವ ಬಿಬಿಎಂಪಿಗೆ ಮತ್ತೆ ವಾರ್ಡ್‌ಗಳ ಸೃಷ್ಟಿಸಿ ಆಪರೇಷನ್ ಮಾಡುವ ಇಂಗಿತ ವ್ಯಕ್ತಪಡಿಸಿದೆ. ಹಾಗೆಯೇ ಬಿಬಿಎಂಪಿಯನ್ನು ಐದು ಭಾಗಗಳಾಗಿ ವಿಂಗಡಿಸುವ ಪ್ರಸ್ತಾಪ ಮಾಡಿ ಚುನಾವಣೆ ಮುಂದೂಡಲು ಕೋರ್ಟ್ ನಿಂದ ಕಾಲವಕಾಶ ಸಿಗಬಹುದೇ ಎಂದು ಯತ್ನಿಸುತ್ತಿದೆ.

ಈ ಪ್ರಯತ್ನ ಕೈಕೊಟ್ಟು, ಕೋರ್ಟ್ ಕಟ್ಟುನಿಟ್ಟಿನ ಆದೇಶ ನೀಡಿದರೆ, ಚುನಾವಣೆ ನಡೆಸಿಯೇ ಬಿಡೋಣ ಎಂದು ಸಿದ್ಧತೆಯನ್ನೂ ನಡೆಸುತ್ತಿದೆ. ಹಾಗೆ ನೋಡಿದರೆ ಬಿಬಿಎಂಪಿ ಚುನಾವಣೆ ಸಿದ್ಧತೆ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ, ಬಿಜೆಪಿಗಿಂತ ಒಂದು ಕೈ ಮುಂದೆಯೇ ಇದೆ. ಆದರೆ ತಕ್ಷಣವೇ ಚುನಾವಣೆ ನಡೆಸುತ್ತದೆ ಎನ್ನುವ ಯಾವುದೇ ಸೂಚನೆಗಳು ಕಾಣುತ್ತಿಲ್ಲ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ದೋಸ್ತಿ ಭೀತಿಯೂ ಇದೆ

ಚುನಾವಣೆ ನಡೆಸುವ ದಿಟ್ಟ ಪ್ರಯತ್ನಕ್ಕೆ ಕಾಂಗ್ರೆಸ್ ನ ಕೆಲವರು ಮೀನಮೇಷ ಎಣಿಸಲು ಬಿಜೆಪಿ ಮತ್ತು ಜೆಡಿಎಸ್ ದೋಸ್ತಿಯೂ ಕಾರಣ ಎನ್ನಲಾಗಿದೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ- ಕಾಂಗ್ರೆಸ್ ದೋಸ್ತಿಯಿಂದಾಗಿ ಕಾಂಗ್ರೆಸ್ ಬೆಂಗಳೂರು ಉತ್ತರ, ಕೇಂದ್ರ, ದಕ್ಷಿಣ ಹಾಗೂ ಗ್ರಾಮಾಂತರ ಕ್ಷೇತ್ರಗಳನ್ನು ಕಳೆದುಕೊಂಡಿದೆ. ಹೀಗೆ ಸೋಲಿನ ಆಘಾತದಲ್ಲಿರುವ ಸಂದರ್ಭದಲ್ಲಿ ಮತ್ತೆ ಬಿಬಿಎಂಪಿ ಚುನಾವಣೆ ನಡೆಸಿದರೆ, ದೋಸ್ತಿಯಿಂದ ಹೊಡೆತ ಬೀಳಬಹುದೇ ಎನ್ನುವ ಆತಂಕ ಕಾಂಗ್ರೆಸ್ ನದ್ದಾಗಿದೆ. ಹೇಗಾದರೂ ಮಾಡಿ ಮುಂದೂ ಡುವ ಪ್ರಯತ್ನ ಮಾಡಿ, ಬಿಜೆಪಿ ಅಕ್ರಮಗಳನ್ನು ಹೊರತೆಗೆದು ಪ್ರದರ್ಶಿಸಿ ನಂತರ ಚುನಾವಣೆಗೆ ಹೋಗುವ ಆಲೋಚನೆ ಇದೆ. ಹಾಗೆಯೇ ಬೆಂಗಳೂರು ಹೊರ ವಲಯದ ಸುತ್ತಲ ಭಾಗವನ್ನು ಬಿಬಿಎಂಪಿಗೆ ಸೇರಿಸಿ 80 ವಾರ್ಡ್‌ಗಳನ್ನು ಹೊಸದಾಗಿ ಸೃಷ್ಟಿಸಿ ಆ ಮೂಲಕ ಮೂರು ಅಥವಾ ಐದು ವಲಯಗಳಾಗಿ ವಿಭಜನೆ ಮಾಡುವ ಪ್ರಸ್ತಾಪ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ನಿಜಕ್ಕೂ ಚುನಾವಣೆ ನಡೆಯುತ್ತಾ?

ಬಿಬಿಎಂಪಿಯಲ್ಲಿ ಜನಪ್ರತಿನಿಧಿಗಳ ಆಳ್ವಿಕೆ ಮುಗಿದು ನಾಲ್ಕು ವರ್ಷಗಳೇ ಕಳೆದಿವೆ. 2021ರಲ್ಲಿ ಬಿಬಿಎಂಪಿ ಮೇಯರ್ ಅವಧಿ ಮುಗಿಯುತ್ತಿದ್ದಂತೆ ಸರಕಾರ ಚುನಾವಣೆ ನಡೆಸಬೇಕಿತ್ತು. ಬೆಳೆದು ನಿಂತ ಬೆಂಗಳೂರಿಗೆ ಸರಿಯಾದ ಆಡಳಿತ ಮತ್ತು ಸೇವಾ, ಸೌಲಭ್ಯಗಳನ್ನು ನೀಡಲು ಪುನಾರಚನೆ ಮಾಡುವ ಪ್ರಸ್ತಾಪ ಬಂದಿತ್ತು. ನಂತರ ಬಂದ ಬಿಜೆಪಿ ಸರಕಾರ ಬಿಬಿಎಂಪಿ ವಾರ್ಡ್ ವಿಂಗಡಣೆ ಮಾಡಿ 243ರಿಂದ 225ಕ್ಕೇರಿಸಿತ್ತು. ಆನಂತರ ಮೀಸಲಾತಿ ಸಮಸ್ಯೆ ತಲೆದೋರಿ ಚುನಾವಣೆ ಮುಂದೆ ಹೋಗಿತ್ತು. ಹೈಕೋರ್ಟ್ ಮತ್ತು ನಂತರದಲ್ಲಿ ಸುಪ್ರೀಂಕೋರ್ಟ್‌ತನಕವೂ ಹೋಗಿತ್ತು. ಸದ್ಯ ಸುಪ್ರೀಂಕೋರ್ಟ್, ಮುಂದಿನ ವಾರದ ವೇಳೆ ಚುನಾವಣೆ ಕುರಿತು ಸ್ಪಷ್ಟ ಆದೇಶ ನೀಡುವ ನಿರೀಕ್ಷೆ ಇದೆ. ಈ ಹಿನ್ನೆಲೆಯಲ್ಲಿ ಸರಕಾರ ಚುನಾವಣೆ ನಡೆಸಲೇಬೇಕಾದ ಅನಿವಾರ್ಯದೊಂದಿಗೆ ಭರದ ಸಿದ್ಧತೆ ನಡೆಸಿದೆ. ಇದಲ್ಲದೆ, ಚುನಾವಣೆ ಮುಂದೂಡುವ ಸರಕಾರದ ಪ್ರಯತ್ನಕ್ಕೆ ಹಿಂದಿನ ಸರಕಾರದಲ್ಲಿ ಶಾಸಕರ ಪಕ್ಷಾತೀತ ಬೆಂಬಲವಿತ್ತು ಎನ್ನಲಾಗಿದೆ. ಆದರೆ ಈಗ ಆ ಪರಿಸ್ಥಿತಿ ಅಷ್ಟಾಗಿ ಕಾಣುತ್ತಿಲ್ಲ. ಈ ಕಾರಣದಿಂದ ಸರಕಾರಕ್ಕೆ ಚುನಾವಣೆಯೊಂದೇ ದಾರಿ ಎನ್ನುವಂತಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸುಪ್ರೀಂಕೋರ್ಟ್ ಆದೇಶದಂತೆ ಸರಕಾರವಂತೂ ಚುನಾವಣೆ ನಡೆಸಲು ಸಿದ್ಧವಿದೆ. ಆದರೆ ಆಡಳಿತ ದೃಷ್ಟಿಯಿಂದ ವಿಭಜನೆ ಮಾಡಿದರೆ ಹೇಗೆ ಎನ್ನುವ ಚಿಂತನೆ ಮಾಡಲಾಗಿದೆ. ಇದಕ್ಕೆ ಕೋರ್ಟ್ ಒಪ್ಪಿಗೆ ಸಿಗದಿದ್ದರೆ, ಚುನಾವಣೆ ನಡೆಸಿಯೇ ತೀರುತ್ತೇವೆ.

-ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವರು

ಅಧೀರ್ ರಂಜನ್ ಚೌಧರಿ ರಾಜೀನಾಮೆ

ಕೋಲ್ಕತ್ತ: ಪಶ್ಚಿಮ ಬಂಗಾಳ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಅಧೀರ್ ರಂಜನ್ ಚೌಧರಿ ರಾಜೀನಾಮೆ ನೀಡಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಕಳಪೆ ಪ್ರದರ್ಶನ ಹಿನ್ನೆಲೆ ನೈತಿಕ ಹೊಣೆ ಹೊತ್ತು ಅಧಿರ್ ರಂಜನ್ ಚೌಧರಿ ಪಶ್ಚಿಮ ಬಂಗಾಳ ಕಾಂಗ್ರೆಸ್ ರಾಜ್ಯಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎನ್ನಲಾಗಿದೆ.

ಲೋಕಸಭಾ ಚುನಾವಣೆಯಲ್ಲಿ ಮುರ್ಷಿದಾಬಾದ್‌ನ ಬಹರಾಮ್‌ಪುರ ಕ್ಷೇತ್ರದಲ್ಲಿ ಐದು ಬಾರಿ ಗೆಲುವು ಸಾಧಿಸಿದ್ದ ಚೌಧರಿ ಈ ಬಾರಿ ಟಿಎಂಸಿ ಅಭ್ಯರ್ಥಿ ಯೂಸುಫ್ ಪಠಾಣ್ ವಿರುದ್ಧ ಸೋಲು ಅನುಭವಿಸಿದ್ದರು.

ಶುಕ್ರವಾರ ಕೊಲ್ಕತ್ತಾದಲ್ಲಿ ಕಾಂಗ್ರೆಸ್ ಪ್ರಾಂತೀಯ ಸಭೆ ನಡೆದಿದ್ದು ಸಭೆ ಬಳಿಕ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಾದ ಬಳಿಕ ಯಾರೂ ರಾಜ್ಯಾಧ್ಯಕ್ಷರಿರಲಿಲ್ಲ, ನಾನೂ ಹಂಗಾಮಿ ಅಧ್ಯಕ್ಷನೇ. ಪೂರ್ಣಾವಧಿ ಅಧ್ಯಕ್ಷರ ಆಯ್ಕೆ ಯಾವಾಗ ಎಂಬ ಬಗ್ಗೆ ಸದ್ಯದಲ್ಲೇ ತಿಳಿದು ಬರಲಿದೆ ಎಂದು ಹೇಳಿದ್ದಾರೆ.

ಅಧೀರ್ ರಂಜನ್ ಚೌಧರಿ ರಾಜೀನಾಮೆಯನ್ನು ಕಾಂಗ್ರೆಸ್ ಹೈಕಮಾಂಡ್ ಸ್ವೀಕರಿಸಿದೆ ಎಂದು ಹೇಳಲಾಗಿದೆ.

ವಿಶ್ವವಾಣಿ
22.06.2024. ಶನಿವಾರ
vishwavani.news

ಸಾಮಾಜಿಕ ತಾಣ ಪಯಣ

ವಿ ಟಾಕೀಸ್

ಜಗ ಮನ

ಜಗದಲಿ
ಜನ-
ಕಾಫಿ
ಕೊಟ್ಟವರ
ನೆನೆವರೇ
ವಿನಃ
ಕೋಟಿ
ಕೊಟ್ಟವರ
ನೆನೆದವರ
ಕಾಣೆನೋ
ನಮೋ
ನಮಃ

● ಕೆ ನಟರಾಜ್

ಮಳೆಯ ಚೆಲ್ಲಾಟ

ಬಿಸಿಲ ಝಳಕೆ ಸೋತಿದ್ದ ಮನ
ಆಗಸದಲಿ ಕಂಡ ಆಶಾಕಿರಣ..
ಕಾಯ್ವ ಚಾತಕಪಕ್ಷಿಯ ಸುತ್ತಾಟ
ಹಸಿರಿಗೆ ಅಭಿಲಾಷಿಗಳ ಹೊಯ್ದಾಟ

ಗಗನಕೀಗ ಮೋಡಗಳೇ ಆಭರಣ
ಪೃಥ್ವಿಯ ಮೇಲದರ ಹನಿಸಿಂಚನ..
ತಂಗಾಳಿಯಿಂದುರುಳುವ ಸಂಭ್ರಮ
ಒಡಲಲಿ ನವಜೀವಗಳ ಆಗಮನ

ತೊಯ್ದ ಮಣ್ಣಿನಲ್ಲಿ ಬೀಜ ಬೆರೆತಾವು
ಗಟ್ಟಿ ಮನಗಳು ಮುದಗೊಂಡಾವು...
ಧರೆಗಿಳಿವ ಮಳೆಗೆ ಇರುಳಿನ ಸರಸ
ಮೊಳಕೆಯೊಡೆವ ಸಸಿಗೆ ನವೋಲ್ಲಾಸ

ಕನಸು ಕಟ್ಟಿದ ಮಾತುಗಳು
ಮನದಲ್ಲೇ ಹರಿದಾಡಿದ ಭಾಷೆಗಳು...
ಒಲಿದ ಹೃದಯಗಳ ವಿಹಾರ
ಭರವಸೆಗಳ ಭವಿಷ್ಯದಿ ಸಾಕಾರ

● ವಿಜಯಲಕ್ಷ್ಮೀ. ಎಸ್

ಮನದಾಸೆ

ಘಾಸಿಗೊಂಡಿಹ ಬಿಸಿಮನದುಸಿರಿಗೆ
ಸುರಿಸದಿರು ರಣ ಮಳೆಯ,
ಮೂಸದಿದ್ದರು ಸರಿಯೆ
ಮುಗ್ಧ ಮಲ್ಲಿಗೆಯ ಬುಡಕೆ
ಚೂಪುಗೊಡಲಿಯಾಗದಿರು ಸಾಕು

ಹಾಲುಗೂಡದ ಬಾಣಂತಿಯೆದೆಗೆ
ಸಿಡಿಸದಿರು ಬಿರುಸು ಬಾಣಗಳ,
ನೆರವುಗೊರಳಾಗದಿದ್ದರು ಸರಿಯೆ
ಹಸುಗಂದನ ಹಾಲ್ದುಟಿಗೆ
ಪೂತನಿಯಾಗದಿರು ಸಾಕು

ಬೆಂದು ಬಸವಳಿದ ಒಡಲಕಿಚ್ಚಿಗೆ
ಸುರಿಯದಿರು ಕೆಂಡದುಂಡೆಗಳ,
ನೆರಳಾಗದಿದ್ದರು ಸರಿಯೆ
ಹುಗಿದ ಹೆಣದ ಮೇಲಿನ
ನಗುವ ಹೂವಾಗದಿರು ಸಾಕು

ನಿಡುಸುಯ್ವ ಬಡವನೆದೆಗೂಡಿಗೆ
ಚುಚ್ಚದಿರು ವಿಷದ ಭರ್ಚಿಗಳ,
ತಳಿರು ತೋರಣವಾಗದಿದ್ದರು ಸರಿಯೆ
ಹರಕೆ ಕುರಿಯ ತಲೆ ಕಡಿವ
ಕಟುಕನಾಗದಿರು ಸಾಕು

ದೇವ ನೀಡಿದ ಜೀವದೀ ಘಟಕೆ
ಎಸೆಯದಿರು ಹಿಡಿಗಲ್ಲುಗಳ ,
ಹೂವು ಹಾಸಿ ಲಾಲಿ ಹಾಡದಿದ್ದರು ಸರಿಯೆ
ಶರಪಂಜರದೊಳಿಟ್ಟ ಮೋಜಿನ
ಮೃತ್ಯುವಾಗದಿರು ಸಾಕು

● ನೀ.ಶ್ರೀಶೈಲ ಹುಲ್ಲೂರು

ಕಾರ್ಟೂನ್



ಮಾರ್ಕೆಟ್ ಹೋಗಿದ್ದೆ ,,ಅಲ್ಲಿಂದ ಟೊಮೆಟೊ ಬೀನ್ಸ್ ಫೋಟೊ ತಗೊಂಡು ಬಂದಿದ್ದೀನಿ ,,!!!

● ಎಚ್.ಎಸ್. ವಿಶ್ವನಾಥ್

ಮೇಘದಾಟ

ಏಣಾಂಕನೊಡಗೂಡಿ
ಅನಂತ ಆಗಸವಿಂದು
ಚಂದ್ರಿಕೆಯ ಮಳೆಯನ್ನು
ತಾ ಸುರಿಸುತಿಹುದು;

ದೇವ ಕನ್ನಿಕೆಯರಿಂದು
ಹಾಲ್ನೆನೆಯ ಮೋಡವನು
ಒಯ್ಯನೆ ಬಾನಿನಲ್ಲಿ
ತೇಲಿ ಬಿಡಿತಿಹರು ;

ಹಾಲ್ಗಡಲ ರಥವೇರಿ
ಕುಳಿತ ಉಡುಪನನು
ಅಗಣಿತ ತಾರೆಯರು
ಆವರಿಸುತಿಹರು;

ಅಕಲ್ಪಿತ ನಗೆಯೊಂದು
ತುಟಿಯಂಚಿನಲಿ ಮಿಂಚಿ
ಮೇಘದಾಟಕೆ ಸಾಕ್ಷಿ
ತಾನಾಗುತಿಹುದು !!

● ಶ್ರೀವಲ್ಲಿ ಮಂಜುನಾಥ

ತರ್ಲೆ-ತಿಮ್ಮಾ

ಇಂಥಾ ಚೆಲುವೆಯನ್ನು ಕಾಯಿಸುತ್ತಿರುವ ಕಲ್ಲು ಹೃದಯಿ ಯಾರಿರಬಹುದು..? ಚಿತ್ರದಲ್ಲಿರುವವರು ರೇಚಲ್ ಡೇವಿಡ್

ಬತ್ತದ ಬುತ್ತಿಯ ನೆನಪು!

● ಮಹೇಶ್ ಹೊಸಮನಿ

ಬುತ್ತಿಯ ಶಬ್ದವನ್ನು ಇತ್ತೀಚೆಗೆ ನಾವು ಕೇಳುವುದೇ ಅಪರೂಪ. ಆದರಿಂದು ನನ್ನವಳು ಜೋಳದ ರೊಟ್ಟಿ ತಟ್ಟುತ್ತಿದ್ದು ನಾನು ಪುಂಡಿ ಅಥವಾ ಪುಂಡೀ ಪಲ್ಯದ ಜತೆಗೆ ಬಿಸಿ ಬಿಸಿ ರೊಟ್ಟಿ ತಿನ್ನುವಾಗ ನನಗೆ ಏಕೋ ಏನೋ ಚಿಕ್ಕಂದಿನ ದಿನದ ಬುತ್ತಿಯ ನೆನಪಾಯಿತು. ಅದನ್ನು ನಿಮ್ಮ ಜತೆ ಹಂಚಿಕೊಳ್ಳೋಣ ಅನ್ನಿಸಿತು.

ಬುತ್ತಿ ಎಂದಾಕ್ಷಣ ನಮ್ಮ ಮನಸ್ಸಿಗೆ ಬರುತ್ತಿದ್ದ ನೆನಪೆಂದರೆ ರೈಲಿನ ಪ್ರಯಾಣ. ನಮ್ಮಂತಹ ಹೈದರಾಬಾದ್ ಕರ್ನಾಟಕ ಹಾಗೂ ಮುಂಬೈ ಕರ್ನಾಟಕದ ಮಂದಿಗೆ ನಮ್ಮ ಸಂಬಂಧಿಕರನ್ನು ಭೇಟಿ ಮಾಡಲು ಊರುಗಳಿಗೆ ಹೋಗುವುದೆಂದರೆ ಅದು ಶಾಲೆಗಳಿಗೆ ಬೇಸಿಗೆ ರಜ ಕೊಟ್ಟಾಗ ಮಾತ್ರ. ಅದೂ ಆ ಕಾಲಕ್ಕೆ ವಿದೇಶ ಪ್ರಯಾಣ ಮಾಡಿದಂತೆ. ಸ್ನೇಹಿತರೆಲ್ಲರಿಗೂ ನಾವು ಊರಿಗೆ ಹೋಗುತ್ತಿದ್ದೇವೆ ಎಂದು ಕೊಚ್ಚಿಕೊಳ್ಳಲು ಪ್ರಾರಂಭಿಸುತ್ತಿದ್ದೆವು.

ರಜಕ್ಕೆ ಹೊರಟು ನಿಂತಾಗ ಮನೆಯಲ್ಲಿ ಹಿಂದಿನ ದಿನ ರಾತ್ರಿಯೆಲ್ಲ ಅಮ್ಮನಿಗೆ ಕೆಲಸ. ಮೊದಲು ಅಪ್ಪನ ಹಳೆಯ ಅಥವ ಹರಿದ ಪಂಚೆಗೆ ಕತ್ತರಿಯ ಪ್ರಯೋಗ ಮಾಡಿ ಎರಡೆರಡಡಿ ಅಥವಾ ಮೂರು, ಮೂರಡಿ ಅಳತೆಗೆ ಕತ್ತರಿಸಿ, ಅದರ ಮಧ್ಯಭಾಗದಲ್ಲಿ ಜೋಳದ ರೊಟ್ಟಿಗಳನ್ನು ಪೇರಿಸಿ, ಅದರ ಮೇಲೆ ಸಪ್ಪನೆಯ ಬೇಳೆ, ಹುಣಿಸೇಖಾರ, ಬಗೆಬಗೆಯ ಪುಡಿಚಟ್ನಿಗಳ ಇಟ್ಟು ಅದರ ಮೇಲೆ ಇನ್ನೂ ಐದಾರು ರೊಟ್ಟಿಗಳ ಮತ್ತೆ ಪೇರಿಸಿ ಅದರ ಮೇಲೆ ಅನ್ನವು ಕಳಶಪ್ರಾಯವಾಗಿ ಕಂಗೊಳಿಸುವಂತೆ ಮಾಡಿ ಅದರ ಮೇಲೆ ಮತ್ತೆರಡು ರೊಟ್ಟಿ ಇಟ್ಟು ಪಂಚೆಯನ್ನು ಕಟ್ಟಿದಾಗ ಬುತ್ತಿ, ರೈಲಿನ ಪ್ರಯಾಣಕ್ಕೆ ಸಿದ್ಧವಾಗುತ್ತಿತ್ತು. ರೊಟ್ಟಿಯ ಸ್ವಾದ ಹೆಚ್ಚಿಸಲು ತಿನ್ನುವಾಗ ಹೆಚ್ಚಿದ ಅಥವಾ ಜಜ್ಜಿದ ಈರುಳ್ಳಿ ಅಲ್ಲದೆ ಹಸಿಮೆಣಸಿನಕಾಯಿ ಅಥವ ಹುರಿದ ಮೆಣಸಿನಕಾಯಿ. ಅದರ ಜತೆಗೆ ಬೇರೊಂದು ಗಿಂಡಿಯಲ್ಲಿ ಮೊಸರು ಹಾಗೂ ಕುಡಿಯುವ ನೀರಿಗಾಗಿ ಹಿತ್ತಾಳೆಯ ತಿರುಣಿಗಿ ತಂಬಿಗೆ.

ಈ ಬುತ್ತಿಯಲ್ಲದೆ ಸಂಬಂಧಿಕರಿಗೆ ಸಿಹಿ ಉಂಡೆ, ಶಂಕರಪಾಳ್ಯ, ಕರಜೀಕಾಯಿ ಹಾಗೂ ಖಾರದ ಚಕ್ಕುಲಿ, ಕೋಡುಬಳೆ ಮುಂತಾದುವನ್ನೂ ಒಯ್ಯುತ್ತಿದ್ದೆವು. ರೈಲಿಯ ಪ್ರಯಾಣದಲ್ಲಿ ಇಂತಹ ಬುತ್ತಿಯನ್ನು ಸವಿಯುವಾಗ ಸ್ವರ್ಗವೇ ಧರೆಗಿಳಿದ ಅನುಭವವಾಗುತ್ತಿತ್ತು.

ಊರು ಮುಟ್ಟಿದ ಮೇಲೆಯೂ ಆ ಹಳ್ಳಿಗಳಲ್ಲಿ ರೈತಾಪಿ ವರ್ಗದ ಸಂಬಂಧಿಕರ ಹೊಲಗಳಿಗೆ ಅಲ್ಲಿಯ ಮನೆಗಳಿಂದ ಮಧ್ಯಾಹ್ನ ಬುತ್ತಿ ಒಯ್ದು ಹೊಲಗಳ ಬದುವುಗಳ ಮೇಲೆ ಗಿಡಮರಗಳ ನೆರಳಲ್ಲಿ ಊಟ ಮಾಡಿ ಕಾಲುವೆಗಳಲ್ಲಿ ನೀರು ಕುಡಿದು ಈಜಾಡಿದಾಗ ಸಿಕ್ಕ ಸುಖವನ್ನು ಬಣ್ಣಿಸಲು ಶಬ್ದಗಳು ಸಾಲವು.

ಬದಲಾದ ಈ ವೇಳೆಯಲ್ಲಿ ಬುತ್ತಿಯ ನೆನಪು ಬತ್ತಿದಂತಾಗಿದೆ. ಆ ಸಮಯದಲ್ಲಿ ಸಿಗುತ್ತಿದ್ದ ಧಾನ್ಯ ತರಕಾರಿಗಳ ರುಚಿ ಕಡಿಮೆಯಾದಂತಿದೆ. ಕಾಲುವೆಯಲ್ಲಿ ಹಳ್ಳ ಕೆರೆಗಳಲ್ಲಿ ಕುಡಿಯುತ್ತಿದ್ದ ನೀರು ಕಲುಷಿತವಾಗಿ ಬಾಟಲಿಗಳಲ್ಲಿ ನೀರು ಕುಡಿಯುವಂತಾಗಿದೆ. ನೀರಿನ ರುಚಿಯೂ ಈಗ ಬತ್ತಿದಂತಿದೆ.

ಆದರೆ ಆದರೆ.. ಬುತ್ತಿಯ ನೆನಪು ಬತ್ತದೇ ಇನ್ನೂ ಹಸಿರಾಗೇ ಇದೆ.

ಮಾತನಾಡುವ ಭರದಲಿ!

● ಲೀಲಾವತಿ ವಿಜಯಕುಮಾರ

ನಮಗೆ ದೇವರಿತ್ತ ಅತ್ಯಮೂಲ್ಯ ಕೊಡುಗೆ ಮಾತು. ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೋಯ್ತು ಎನ್ನುವ ಮಾತು, ಮಾತಿನ ಮಹತ್ವವನ್ನು ತಿಳಿಸುತ್ತದೆ. ಮಾತು ಆಡುವಾಗಲೇ ಆಲೋಚಿಸಿ ಮಾತಾಡಬೇಕು. ನಂತರ ಪಶ್ಚಾತ್ತಾಪ ಪಟ್ಟರೂ ಪ್ರಯೋಜನವಿಲ್ಲ ಎನ್ನುವುದಾಗಿದೆ. ಏನನ್ನೂ ಕೊಡುವಂತಿಲ್ಲ, ಏನ್ನನ್ನೂ ತೆಗೆದುಕೊಳ್ಳುವಂತಿಲ್ಲ, ಒಳ್ಳೆಯ ಮಾತನಾಡಿದರೆ ಸಾಕು, ಜಗತ್ತೇ ವಶವಾಗುವುದು, ಎನ್ನುವ ಸುಭಾಷಿತದಂತೆ, ಒಳ್ಳೆಯ ಮಾತಿನಿಂದ ಎಲ್ಲರೂ ನಮ್ಮವರಾಗುವರು.

ಒಳ್ಳೆಯ ಮಾತಾಡುವುದಕ್ಕೂ, ನಯವಂಚನೆಯಿಂದ ಮಾತಾನಾಡುವುದಕ್ಕೂ ಸೂಕ್ಷ್ಮ ವ್ಯತ್ಯಾಸವಿದೆ, ಅರಿಯಬೇಕಷ್ಟೆ. ನಾವು ಒಳ್ಳೆಯ ಮಾತುಗಾರರಾಗುವ ಮೊದಲು, ಆವಶ್ಯಕವಾಗಿ ಒಳ್ಳೆಯ ಕೇಳುಗರಾಗಬೇಕು. ಹೌದು, ತಾಳ್ಮೆಯಿಂದ ಆಲಿಸಿದರೆ ಎದುರಿಗಿರುವ ವ್ಯಕ್ತಿಯ ಮನಸ್ಥಿತಿಯೂ ಅರಿವಾಗುವುದು. ಕೇವಲ ಎದುರಿನವರನ್ನು ಅರಿಯದೆ, ಅವರು ಕೇಳುತ್ತಿದ್ದರಾ? ಕೇಳುತ್ತಾ ಬೇಸರಿಸುತ್ತಿದ್ದಾರಾ? ಅಂತ ಯೋಚಿಸದೇ ಮಾತಲ್ಲೇ ಮನೆ ಕಟ್ಟಿದರೇನು ಸಾರ್ಥಕ? ಉಪಯೋಗಕ್ಕೆ ಬಾರದು.

ನಿಜ, ಮಾತು ಅರಿತು ಆಡಿದರೆ ಎಷ್ಟು ಒಳಿತೋ, ಅರಿಯದೇ ಆಡಿದ ಮಾತು, ಅನೇಕ ಸಂಕಷ್ಟಗಳಿಗೆ ದಾರಿಯಾಗಬಹುದು. ಮಾತು ಒಳ್ಳೆಯವರನ್ನಾಗಿ ಮಾಡುತ್ತದೆ. ಕ್ಷಣಾರ್ದದಲ್ಲಿ ಕೆಟ್ಟವರನ್ನಾಗಿ ಮಾಡಿಬಿಡಬಹುದು. 'ನಾಲಿಗೆ ಒಳ್ಳೆಯದಾದರೆ ನಾಡೆಲ್ಲಾ ಒಳ್ಳೆಯದು' ಎಂಬಂತೆ, ಮಾತಿನ ದಾಟಿಯೂ ಕೆಲವು ಸಹ ವ್ಯಕ್ತಿತ್ವದ ಅಳತೆಗೋಲಾಗಬಹುದು. ಕೆಲವೊಮ್ಮೆ ಮಾತಿನ ದಾಟಿ ಹೇಗೆಂದರೆ ಕೇಳುತ್ತಿದ್ದರೆ ಕೇಳಬೇಕೆಂಬ ಬಯಕೆ. ಕೆಲವರದು ಅವರ ಮಾತಿನಿಂದ ತಪ್ಪಿಸಿಕೊಳ್ಳಬೇಕೆಂಬ ಭಾವ ಬರುವುದು ಅತಿಶಯವಲ್ಲ. ಮತ್ತೂ ಹಲವರದು ಎದುರಿನವರಿಗೆ ಒಂದು ಮಾತು ಆಡಲು ಅವಕಾಶ ಕೊಡದಿರುವುದು. ಇದರಿಂದ ಹೇಳಬೇಕಾದ ವಿಷಯ/ ಮಾತನ್ನು ಮಾತನಾಡದ ಪ್ರಸಂಗಗಳು ಎಷ್ಟೋ ಇವೆ. ನಮಗೂ ಈ ಅನುಭವಗಳು ಆಗಿರಬಹುದು. ಮತ್ತೆ ಕೆಲವರದು ಹೇಳಿದ್ದನ್ನೇ ಪದೇ ಪದೇ ಹೇಳುವ ರೂಡಿ. ಸುಮ್ನೆ ಕಣ್ಬಿಟ್ಟು ಕೇಳುತ್ತಿರಬೇಕಷ್ಟೆ. ಮತ್ತೆ ಕೆಲವು ಮಾತಿನ ದಾಟಿ ಸಮಸ್ತ ಸಂಗತಿಗಳೂ ತಮಗೆ ತಿಳಿದಿದೆ ಎನ್ನುವಂತೆ ಕೇಳಲಿ ಬಿಡಲಿ, ಸಂಬಂದಿಸಿದ್ದಾ ಅಲ್ಲವಾ? ಎಂದೂ ಯೋಚಿಸದೇ ಮಾತಲ್ಲೆ ಮನೆ ಕಟ್ಟುವರು. ಮತ್ತೆ ಕೆಲವರದು ಎಲ್ಲಾ ಗೊತ್ತಿದ್ದರೂ ಗೊತ್ತೇ ಇರದಂತೆ ಮೌನ ವಹಿಸಿರುವುದು. ಎರಡೂ ಒಂದು ರೀತಿ ಅಪಾಯವೇ. ಸದಾ ವಟಗುಡುವುದು ಆಗಬೇಕಿಲ್ಲ, ಮೌನಗೌರಿಯೂ, ಮೌನಶಂಕರನೂ ಆಗಬೇಕಿಲ್ಲ. ಹಿತಮಿತವಾದ ಮಾತು ಎಲ್ಲರಿಗೂ ಒಳ್ಳೆಯದು.

ಕೇವಲ ಕಾಲಹರಣಕ್ಕೆ ಸುಳ್ಳೋ, ನಿಜವೋ, ಹುರುಳಿದೆಯಾ, ನಮ್ಮಗಳ ಮಾತಿನಿಂದ ನಕಾರಾತ್ಮಕತೆಗೆ ಮನಸ್ಸು ವಾಲುತಿದೆಯಾ? ನಮಗೆ ಸಮಯ ಸರಿಯುತ್ತಿಲ್ಲವೆಂದು ಮತ್ತೊಬ್ಬರ ಸಮಯ ಹರಣಕ್ಕೆ ಮಾತಾನಾಡುತ್ತಿದ್ದೇವಾ? ಪೊಳ್ಳು ಮಾತಾ? ಎಂದು ಯೋಚಿಸದೇ ಮಾತಾಡುವುದಕ್ಕಿಂತ, ಸ್ವಲ್ಪ ಸಮಯವಾದರೂ ತೂಕದ ಮಾತಾಡಿದರೆ ಈರ್ವರಿಗೂ ಒಳ್ಳೆಯದು.

ಪೊಳ್ಳು ಮಾತುಗಳ ಮಂಟಪ ನಿರ್ಮಿಸುವ ಬದಲು ಕಾಲಹರಣಕೆ ದಾರಿ ಮಾಡಿಕೊಡದೆ , ತೂಕದ ಮಾತಾನಾಡಿ ನಮ್ಮತನವನ್ನು ಉಳಿಸಿಕೊಂಡು ಮಾತಿಗೆ ಘನತೆ ತರುವುದು ಮಾತಿನ ಜಾಣ್ಮೆ . ಮಾತಾಡುವ ಪುಣ್ಯ ಇರುವ ಮನುಷ್ಯರಾದ ನಮ್ಮಗಳ ಜವಾಬ್ದಾರಿ ಸಹ ಹೌದು.

ರಿಷಿಯ ರುದ್ರ ಗರುಡ ಪುರಾಣ

ಕಾವಲುದಾರಿಯಲಿ ಸಾಗಿ ಗೆಲುವಿನ ದಡ ಸೇರಿ, ರಾಮನ ಅವತಾರದಲ್ಲಿ ಮಿಂಚಿದ ರಿಷಿ, ಗರುಡಪುರಾಣ ಹೇಳಲು ಬಂದಿದ್ದಾರೆ. ರಿಷಿಯ ಹುಟ್ಟುಹಬ್ಬದ ಪ್ರಯುಕ್ತ ರುದ್ರ ಗರುಡ ಪುರಾಣ ಚಿತ್ರದ ಪೋಸ್ಟರ್ ಬಿಡುಗಡೆಯಾಗಿದೆ. ಈ ಪೋಸ್ಟರ್‌ನಲ್ಲಿ ರಿಷಿ ಪೊಲೀಸ್ ಆಫೀಸರ್ ಗೆಟಪ್‌ನಲ್ಲಿ ಮಿಂಚಿದ್ದಾರೆ. ಈಗಾಗಲೇ ಚಿತ್ರೀಕರಣ ಪೂರೈಸಿರುವ ರುದ್ರ ಗರುಡ ಪುರಾಣ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿದೆ. ರಿಷಿ ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ನಾಯಕಿಯಾಗಿ ಪ್ರಿಯಾಂಕಾ ಕುಮಾರ್ ಬಣ್ಣಹಚ್ಚಿದ್ದಾರೆ. ಉಳಿದಂತೆ ವಿನೋದ್ ಆಳ್ವ, ಅವಿನಾಶ್, ಶಿವರಾಜ್ ಕೆ.ಆರ್ ಪೇಟೆ, ಗಿರಿ, ಕೆ.ಎಸ್ ಶ್ರೀಧರ್, ಅಶ್ವಿನಿ ಗೌಡ, ರಾಮ್ ಪವನ್, ವಂಶಿ, ಆಕರ್ಷ್, ಜೋಸೆಫ್, ಪ್ರಭಾಕರ್, ಗೌತಮ್ ಮೈಸೂರು, ಸ್ನೇಕ್ ಶ್ಯಾಮ್, ರಂಗನಾಥ್ ಭಾರದ್ವಾಜ್, ಕಾಮಿಡಿ ಕಿಲಾಡಿಗಳು ಜಗಪ್ಪ, ಪ್ರಸನ್ನ ಹಂಡ್ರಂಗಿ, ರಿದ್ವಿ ತಾರಾಬಳಗದಲ್ಲಿದ್ದಾರೆ. ಅಶ್ವಿನಿ ಆರ್ಟ್ಸ್ ಲಾಂಛನದಲ್ಲಿ ಅಶ್ವಿನಿ ಲೋಹಿತ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ಕೆ.ಎಸ್.ನಂದೀಶ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ರಘು ನಿಡುವಳ್ಳಿ ಸಂಭಾಷಣೆ, ಕೆಪಿ ಸಂಗೀತ ನಿರ್ದೇಶನ, ಸಂದೀಪ್ ಕುಮಾರ್ ಛಾಯಾಗ್ರಹಣ ಹಾಗೂ ಮನು ಶೇಡ್ಗಾರ್ ಸಂಕಲನ ಈ ಚಿತ್ರಕ್ಕಿದೆ. ಸದ್ಯದಲ್ಲೇ ಚಿತ್ರದ ಹಾಡುಗಳನ್ನು ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಆಗಸ್ಟ್‌ನಲ್ಲಿ ಚಿತ್ರ ತೆರೆಗೆ ಬರಲಿದೆ.

ಆ್ಯಕ್ಷನ್‌ಗೆ ಸೈ ಎಂದ ಸನ್ನಿ ಡಿಯೋಲ್



ಗದರ್ 2 ಚಿತ್ರದ ಮೂಲಕ ಮತ್ತೆ ಯಶಸ್ಸಿನ ಹಾದಿಗೆ ಮರಳಿರುವ ನಟ ಸನ್ನಿ ಡಿಯೋಲ್ ಮತ್ತೊಂದು ಹೊಸ ಚಿತ್ರದಲ್ಲಿ ನಟಿಸಲು ಗ್ರೀನ್ ಸಿಗ್ನಲ್ ನೀಡಿದ್ದಾರೆ. ಸನ್ನಿ ಡಿಯೋಲ್ ಈ ಬಾರಿಯೂ ಆ್ಯಕ್ಷನ್‌ನಲ್ಲಿ ಮಿಂಚಲು ಸಿದ್ಧವಾಗಿದ್ದು, ತೆಲುಗಿನಲ್ಲಿ ವೀರಸಿಂಹ ರೆಡ್ಡಿ ಚಿತ್ರವನ್ನು ನಿರ್ದೇಶಿಸಿದ್ದ ಗೋಪಿಚಂದ್ ಮಲಿನೇನಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಈ ಚಿತ್ರದ ಮೂಲಕ ಗೋಪಿಚಂದ್ ಬಾಲಿವುಡ್ ಅಂಗಳಕ್ಕೂ ಕಾಲಿಟ್ಟಿದ್ದಾರೆ. ಸನ್ನಿ ಡಿಯೋಲ್ ಅಭಿನಯದ ಹೊಸ ಚಿತ್ರ, ಎಸ್‌ಡಿಜಿಎಂ ಟೈಟಲ್‌ನಲ್ಲಿ ಸೆಟ್ಟೇರಿದೆ. ಇದು ಹೈಬಜೆಟ್ ಸಿನಿಮಾವಾಗಿದ್ದು, ಮೈತ್ರಿ ಮೂವೀ ಮೇಕರ್ಸ್ ಮತ್ತು ಪೀಪಲ್ ಮೀಡಿಯಾ ಫ್ಯಾಕ್ಟರಿ ಜಂಟಿಯಾಗಿ ನಿರ್ಮಾಣಕ್ಕೆ ಬಂಡವಾಳ ಹೂಡಿವೆ. ಗೋಪಿಚಂದ್ ಹೇಳಿದ ಕಥೆಗೆ ಸನ್ನಿ ಡಿಯೋಲ್ ಕೂಡ ಥ್ರಿಲ್ ಆಗಿದ್ದಾರೆ. ದೊಡ್ಡ ಕ್ಯಾನ್ವಾಸ್‌ನಲ್ಲಿ ಚಿತ್ರ ಮೂಡಿ ಬರಲಿದ್ದು, ಶೂಟಿಂಗ್ ಕೂಡ ಆರಂಭವಾಗಿದೆ. ಸೈಯಾಮಿ ಖೇರ್ ಮತ್ತು ರೆಜಿನಾ ಕ್ಯಸಂದ್ರ, ಚಿತ್ರದ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ರಿಷಿ ಪಂಜಾಬಿ ಛಾಯಾಗ್ರಹಣ, ಎಸ್.ತಮನ್ ಸಂಗೀತ ನಿರ್ದೇಶನ, ನವೀನ್ ನೂಲಿ ಸಂಕಲನ ಈ ಚಿತ್ರಕ್ಕಿದೆ.

ಸೆಂಟಿಮೆಂಟ್‌ನಲ್ಲಿ ಮನಗೆದ್ದ ದೇಸಾಯಿ

ತೊಂಬತ್ತರ ದಶಕದಲ್ಲಿ ಎಂತಹ ಅದ್ಭುತ ಸಿನಿಮಾಗಳು ತೆರೆಗೆ ಬರುತ್ತಿದ್ದವು. ಮನೆಮಂದಿಯೆಲ್ಲಾ ಒಟ್ಟಾಗಿ ಕುಳಿತು ಸಿನಿಮಾ ನೋಡಿ ಖುಷಿಪಡುತ್ತಿದ್ದರು. ಈ ವಾರ ತೆರೆಗೆ ಬಂದಿರುವ ದೇಸಾಯಿ ಮೂರು ದಶಕದ ಹಿಂದಿನ ಕೌಟುಂಬಿಕ ಕಥೆಯ ಸಿನಿಮಾಗಳನ್ನು ನೆನಪಿಸಿದೆ. ನಾಯಕ ಗರಡಿ ಮನೆಯ ಪಟು, ಕುಸ್ತಿ ಎಂದರೆ ಆತನಿಗೆ ಜೀವ, ಎಲ್ಲೇ ಕುಸ್ತಿ ನಡೆದರೂ ಗೆಲುವು ನಾಯಕನದೆ. ಈ ನಡುವೆ ದೇಸಾಯಿ ಕುಟುಂಬಕ್ಕೆ ಎದುರಾದ ಸಂಕಷ್ಟವನ್ನು ನಾಯಕ ಹೇಗೆ ಪರಿಹರಿಸುತ್ತಾನೆ ಎಂಬುದು ಕುತೂಹಲಕಾರಿಯಾಗಿ ಸಾಗುತ್ತದೆ. ಇದರ ಜತೆಗೆ ನವಿರಾದ ಪ್ರೇಮಕಥೆಯೂ ಮನಸೂರೆಗೊಳ್ಳುತ್ತದೆ. ಲವ್, ಸೆಂಟಿಮೆಂಟ್, ಕ್ರೀಡಾ ಸ್ಫೂರ್ತಿ ಹೀಗೆ ಎಲ್ಲಾ ಅಂಶಗಳು ಚಿತ್ರದಲ್ಲಿ ಬೆರೆತಿವೆ. ಉತ್ತರ ಕರ್ನಾಟಕದ ಸೊಗಡು, ಹಳ್ಳಿಯ ಸಂಸ್ಕೃತಿಯ ಸಿರಿವಂತಿಕೆ ಮನಸಿಗೆ ಮುದ ನೀಡುತ್ತದೆ. ಮಹಂತೇಶ್.ವಿ.ಚೋಳಗುಡ್ಡ ಅದ್ಭುತವಾದ ಕಥೆ ಹೆಣೆದಿದ್ದು, ನಿರ್ದೇಶಕ ನಾಗಿರೆಡ್ಡಿ ಭಡ ಆ ಕಥೆಯನ್ನು ಅಷ್ಟೇ ಅಚ್ಚುಕಟ್ಟಾಗಿ ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಚಿತ್ರ : ದೇಸಾಯಿ
ನಿರ್ದೇಶನ : ನಾಗಿರೆಡ್ಡಿ ಭಡ
ನಿರ್ಮಾಪಕರು : ಮಹಂತೇಶ್ ವಿ ಚೋಳಗುಡ್ಡ
ತಾರಾಗಣ : ಪ್ರವೀಣ್, ರಾಧ್ಯಾ, ಮಧುಸೂದನ್, ಹರಿಣಿ, ಮುಂತಾದವರು.
ರೇಟಿಂಗ್ : ★★★

ನಟ ಪ್ರವೀಣ್ ಎರಡನೇ ಚಿತ್ರದಲ್ಲಿ ಪ್ರಬುದ್ಧ ನಟನೆ ತೋರಿದ್ದಾರೆ, ತಮ್ಮ ಪಾತ್ರಕ್ಕೆ ತಕ್ಕಂತೆ ಅವರ ತಯಾರಿಯನ್ನು ಮೆಚ್ಚಲೇಬೇಕು. ಆ್ಯಕ್ಷನ್, ಸೆಂಟಿಮೆಂಟ್ ಹೀಗೆ ಎಲ್ಲದರಲ್ಲೂ ಸೈ ಎನಿಸಿಕೊಂಡಿದ್ದಾರೆ. ನಟಿ ರಾಧ್ಯಾ ಮುಗ್ಧತೆಯಲ್ಲಿಯೇ ಮನಗೆಲ್ಲುತ್ತಾರೆ, ಚಿತ್ರದುದ್ದಕ್ಕೂ ಮುದ್ದಾಗಿ ಕಂಗೊಳಿಸಿದ್ದಾರೆ. ಊರ ಮುಖಂಡನಾಗಿ ಮಧುಸೂದನ್ ರಾವ್ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದು, ಈ ಪಾತ್ರಕ್ಕೆ ಹೇಳಿ ಮಾಡಿಸಿದಂತೆ ಹೊಂದಿಕೊಳ್ಳುತ್ತಾರೆ. ಉಳಿದಂತೆ ಕಲ್ಯಾಣಿ, ಹರಿಣಿ, ಮಂಜುನಾಥ್ ಹೆಗಡೆ ಎಲ್ಲರೂ ತಮ್ಮ ಪಾತ್ರಕ್ಕೆ ಜೀವತುಂಬಿ ನಟಿಸಿದ್ದಾರೆ. ಚಿತ್ರದ ಸಂಗೀತ ಹಾಗೂ ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಸಾಯಿಕಾಂತ್ ಸಂಗೀತ ಮನದಲ್ಲಿ ರಿಂಗಣಿಸುತ್ತದೆ. ಒಟ್ಟಾರೆ ದೇಸಾಯಿ ಮನೆಮಂದಿಯೆಲ್ಲಾ ಕುಳಿತು ನೋಡುವ ಮನರಂಜನಾತ್ಮಕ ಚಿತ್ರವಾಗಿದೆ.

ಇಬ್ಬನಿ ತಬ್ಬಿದ ಓ ಅನಾಹಿತ

ಚಂದ್ರಜಿತ್ ಬೆಳ್ಳಿಯಪ್ಪ ನಿರ್ದೇಶನದ ಇಬ್ಬನಿ ತಬ್ಬಿದ ಇಳೆಯಲಿ ಶೀರ್ಷಿಕೆಯ ಮೂಲಕವೇ ಗಮನಸೆಳೆಯುತ್ತಿದೆ. ಸುಮಧುರ ಪ್ರೇಮಕಾವ್ಯದ ಈ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ಓ ಅನಾಹಿತ.. ಎಂಬ ಹಾಡು ಇದಾಗಿದ್ದು ಇಂದ್ರಜಿತ್ ಅವರೇ ಸಾಹಿತ್ಯ ರಚಿಸಿದ್ದಾರೆ. ಗಗನ್ ಬಡೇರಿಯಾ ಸಂಗೀತ ಸಂಯೋಜಿಸಿರುವ ಈ ಗೀತೆಗೆ ಸಪ್ತ ಸಾಗರ ಖ್ಯಾತಿಯ ಕಪಿಲ್ ಕಪಿಲನ್ ದನಿಯಾಗಿದ್ದಾರೆ. ವಿಹಾನ್ ಹಾಗೂ ಅಂಕಿತಾ ಅಮರ್ ಹಾಡಿನಲ್ಲಿ ಕಾಣಿಸಿಕೊಂಡಿದ್ದು, ಹಾಡು ಬಿಡುಗಡೆಯಾದ ಕೆಲವೇ ನಿಮಿಷಗಲ್ಲಿ ಲಕ್ಷಾಂತರ ವೀಕ್ಷಣೆ ಕಂಡಿದೆ. ದೀಕ್ಷಿತ್ ಈ ಗೀತೆಗೆ ನೃತ್ಯ ಸಂಯೋಜನೆ ಮಾಡಿದ್ದಾರೆ. ಕಿರಿಕ್ ಪಾರ್ಟಿ ಹಾಗೂ ಅವನ್ನೇ ಶ್ರೀಮನ್ನಾರಾಯಣ ಚಿತ್ರಗಳಲ್ಲಿ ಸಂಭಾಷಣೆ ಬರೆದಿದ್ದ ಚಂದ್ರಜಿತ್ ಬೆಳಿಯಪ್ಪ, ಕಥಾ ಸಂಗಮ ಚಿತ್ರವನ್ನು ನಿರ್ದೇಶಿಸಿದ್ದರು, ಆ ಬಳಿಕ ಇಬ್ಬನಿ ತಬ್ಬಿದ ಮಳೆಯಲಿ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಚಿತ್ರದ ಶೂಟಿಂಗ್ ಮುಕ್ತಾಯವಾಗಿದ್ದು ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಬ್ಯುಸಿಯಾಗಿದೆ. ಪಂಚತಂತ್ರದ ಮೂಲಕ ಮನ ಗೆದ್ದಿದ್ದ ವಿಹಾನ್ ಈ ಚಿತ್ರದಲ್ಲಿಯೂ ನಾಯಕನಾಗಿ ನಟಿಸಿದ್ದು, ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಅಂಕಿತಾ ಅಮರ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಗಿರಿಜಾ ಶೆಟ್ಟರ್, ಮಯೂರಿ ನಟರಾಜ್ ಮತ್ತಿತರರು ಚಿತ್ರದ ತಾರಾಬಳಗದಲ್ಲಿದ್ದಾರೆ. ಶ್ರೀವತ್ಸನ್ ಸೆಲ್ವರಾಜನ್ ಛಾಯಾಗ್ರಹಣ, ರಕ್ಷಿತ್ ಕಾಪ್ ಇಬ್ಬನಿ ತಬ್ಬಿದ ಇಳೆಯಲಿ ಚಿತ್ರಕ್ಕಿದೆ. ಪರಂವಃ ಸ್ಟುಡಿಯೋಸ್ ಲಾಂಛನದಲ್ಲಿ ಚಿತ್ರ ನಿರ್ಮಾಣವಾಗಿದೆ.

ದಿನ ದರ್ಶಿಕೆ

ಜೇಷ್ಠ ಮಾಸ, ನಕ್ಷತ್ರ ಮೂಲ, ಪೂರ್ಣಿಮಾ, ಯೋಗ ಶುಕ್ಲ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ.

ಮನೆಮದ್ದು

ಕೆಮ್ಮು ನಿವಾರಿಸಲು ಬಲು ಪ್ರಾಚೀನವಾದ ವಿಧಾನವೆಂದರೆ ಬಾದಾಮಿ ಅರೆದು ಸೇವಿಸುವುದು. ಸುಮಾರು ಏಳೆಂಟು ಬಾದಾಮಿಗಳನ್ನು ರಾತ್ರಿಯಿಡೀ ತಣ್ಣೀರಿನಲ್ಲಿ ನೆನೆಸಿಡಿ. ಮರುದಿನ ಸಿಪ್ಪೆ ಸುಲಿದು ನುಣ್ಣಗೆ ಅರೆಯಿರಿ. ಇದಕ್ಕೆ ಕೊಂಚ ಬೆಣ್ಣೆ ಮತ್ತು ಸಕ್ಕರೆ ಬೆರೆಸಿ ದಿನಕ್ಕೆರಡು ಬಾರಿ ಸೇವಿಸಿ.

ಸೌಂದರ್ಯ ಸೂತ್ರ

ಜೇನುತುಪ್ಪ ಚರ್ಮದ ತೇವಾಂಶವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಅರ್ಧ ಚಮಚ ನಿಂಬೆ ರಸಕ್ಕೆ, 2 ಚಮಚ ಜೇನುತುಪ್ಪ, 1 ಚಮಚ ಅಡಿಗೆ ಸೋಡಾವನ್ನು ಮಿಶ್ರಣ ಮಾಡಿ. ಈ ಮಿಶ್ರಣವನ್ನು ತ್ವಚೆಯ ಮೇಲೆ ಹಚ್ಚಿ 20-30 ನಿಮಿಷಗಳ ನಂತರ ತಣ್ಣೀರಿನಿಂದ ತೊಳೆಯಿರಿ.

ದಿನ ಭವಿಷ್ಯ

ಮೇಷ ಪ್ರಸ್ತುತ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು, ಭವಿಷ್ಯದ ಯೋಜನೆಗಳನ್ನು ಚರ್ಚಿಸಲು ಸೂಕ್ತ ಸಮಯ. ಖರ್ಚು ಮಾಡುವಾಗ ಬಜೆಟ್‌ನ್ನು ನಿರ್ಲಕ್ಷಿಸಬೇಡಿ.

ವೃಷಭ ವ್ಯಾಪಾರ ಚಟುವಟಿಕೆಗಳು ಸಾಮಾನ್ಯವಾಗಿರುತ್ತವೆ. ನಕಾರಾತ್ಮಕ ಚಟುವಟಿಕೆ ಹೊಂದಿರುವ ಜನರಿಂದ ದೂರವಿರಿ. ದಾಂಪತ್ಯ ಜೀವನ ಸುಖಕರ.

ಮಿಥುನ ಇಂದು ನೀವು ಕೆಲವು ಪ್ರಮುಖ ನಿರ್ಧಾರ ತೆಗೆದುಕೊಳ್ಳಬಹುದು. ಅದು ನಿಮ್ಮ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಡಲು ಸಹಾಯಕವಾಗಬಹುದು.

ಕಟಕ ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ಆಸಕ್ತಿ ಹೊಂದಿರುತ್ತೀರಿ. ನಿಕಟ ಸ್ನೇಹಿತ ಅಥವಾ ಸಂಬಂಧಿಗಳಿಂದ ತೊಂದರೆ.

ಸಿಂಹ ವೃತ್ತಿಪರ ಕೆಲಸದ ಅಭ್ಯಾಸಗಳಲ್ಲಿ ಕೆಲವು ಬದಲಾವಣೆ. ಕೌಟುಂಬಿಕ ವಾತಾವರಣ ಉತ್ತಮ. ದೈನಂದಿನ ದಿನಚರಿ ಮತ್ತು ಆಹಾರಕ್ರಮಕ್ಕೆ ಗಮನ ಕೊಡಿ.

ಕನ್ಯಾ ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿರುವ ಕೆಲಸ ಯಾರದ್ದಾದರೂ ನೆರವಿನಿಂದ ಇಂದು ಪೂರ್ಣಗೊಳ್ಳಬಹುದು. ಮನಸ್ಸಿಗೆ ನೆಮ್ಮದಿ.

ತುಲಾ ಮಕ್ಕಳು ಮತ್ತು ಮನೆಯ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸಹಾಯ ಮಾಡಲು ಸ್ವಲ್ಪ ಸಮಯವನ್ನು ಕಳೆಯಿರಿ.

ವೃಶ್ಚಿಕ ಹತ್ತಿರದ ಪ್ರಯಾಣವನ್ನು ತಪ್ಪಿಸಿದರೆ ಉತ್ತಮ. ಕಚೇರಿಯಲ್ಲಿನ ಸಿಬ್ಬಂದಿ, ನೌಕರರ ಸಹಕಾರದಿಂದ ಸ್ಥಗಿತಗೊಂಡ ಚಟುವಟಿಕೆಗಳನ್ನು ಪುನರಾರಂಭಿಸಬಹುದು.

ಧನು ಪ್ರಮುಖ ಕೆಲಸಗಳನ್ನು ಪೂರ್ಣಗೊಳಿಸಲು ಇಂದು ಅನುಕೂಲಕರ. ನಿಮ್ಮ ಶಕ್ತಿಯನ್ನು ಸರಿಯಾದ ದಿಕ್ಕಿನಲ್ಲಿ ಇರಿಸಿ.

ಮಕರ ಪ್ರಸ್ತುತ ಸಮಯವನ್ನು ಶಾಂತವಾಗಿ ಮತ್ತು ತಾಳ್ಮೆಯಿಂದ ಕಳೆಯಬೇಕು. ಪರಸ್ಪರ ಸಹಕಾರವನ್ನು ಮುಂದುವರಿಸಿ.

ಕುಂಭ ಸಕಾರಾತ್ಮಕತೆ ಯೋಚನೆಯಿಂದ ಕಾರ್ಯಗಳು ಯೋಜಿತ ರೀತಿಯಲ್ಲಿ ನಡೆಯುತ್ತವೆ. ಸಂಗಾತಿಯ ಆರೋಗ್ಯದ ಬಗ್ಗೆ ಕಾಳಜಿ ಇರಲಿ. ಜಾಗರೂಕರಾಗಿರಿ.

ಮೀನ ಎಲ್ಲಾ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಮತ್ತು ಸಾಮರಸ್ಯದಿಂದ ಇಟ್ಟುಕೊಳ್ಳುವುದರಿಂದ ಯಶಸ್ಸು ಸಿಗುತ್ತದೆ. ಅತಿಯಾದ ಭಾವನಾತ್ಮಕತೆಯು ಹಾನಿಕಾರಕ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1974 - ತಮಿಳು ಚಿತ್ರರಂಗದ ಖ್ಯಾತ ನಟ ವಿಜಯ್ ಜನನ
- 2016 - ಇಸ್ರೋ 20 ಉಪಗ್ರಹಗಳನ್ನು ಉಡಾವಣೆ ಮಾಡಿ ಇತಿಹಾಸ ಸೃಷ್ಟಿಸಿತು.
- 2009 - 21 ನೇ ಶತಮಾನದ ಸುದೀರ್ಘ ಸೂರ್ಯಗ್ರಹಣವು ಭಾರತದಲ್ಲಿ ಗೋಚರಿಸಿತು.
- 1555 - ಅಕ್ಬರ್‌ನ್ನು ತನ್ನ ಉತ್ತರಾಧಿಕಾರಿ ಎಂದು ಘೋಷಿಸಿದ ಹುಮಾಯೂನ್.

ಚಿತ್ರಸ್ಫೂರ್ತಿ



ನೀನು ಹೂವು,
ನಾನು ಚಿಟ್ಟೆ ; ನಿನ್ನ
ನೊಲಿವುದೆನ್ನ ನಿಟ್ಟೆ//
ನನ್ನ ಬಾಳರಸದ ಬಟ್ಟೆ,
ನೀನು ಮುನಿಯಲಾನು
ಕೆಟ್ಟೆ// ನಿನ್ನ ಮೇಲೆ
ನನಗೆ ಸಿಟ್ಟೆ? ಆಡಬೇಡ
ಅನೃತವ//
ವಿರಹದುರಿಯೊಳಯ್ಯೊ
ಸುಟ್ಟೆ! ಸಾಕು ಮಾಡು;
ಬೇಗ ನೀಡು
ಅಧರಮಿಲನದಮೃತವ!
– ಜಿ ಎಸ್ ಶಿವರುದ್ರಪ್ಪ.

ಚಿತ್ರಕೃಪೆ
ರಾಹುಲ್ ಗೋಯಲ್

ಭಗೀರಥನ ಪ್ರಯತ್ನದಿಂದ ಪಿತೃಗಳಿಗೆ ಸದ್ಗತಿ

ಸಗರ - ಇಕ್ಷ್ವಾಕು ವಂಶದ ಅಸಿತ್ ಅಥವಾ ಬಾಹುಕನ ಮಗ; ತಾಯಿ ಯಾದವಿ. ಇವನು ಹುಟ್ಟುವಾಗಲೇ ವಿಷಸಹಿತನಾಗಿ (ಸಗರನಾಗಿ) ಜನಿಸಿದ್ದರಿಂದ ಸಗರನೆಂಬ ಹೆಸರು ಬಂತು. ಇವನ ಗುರು ಭಾರ್ಗವ ಮುನಿ. ಇವನಿಗೆ ಸಕಲ ವೇದಶಾಸ್ತ್ರಗಳನ್ನು ಕಲಿಸಿ, ಆಗ್ನೇಯಾಸ್ತ್ರವನ್ನು ಕೊಟ್ಟ. ಇದರ ಸಹಾಯದಿಂದ ವಿಷಯ ಲಂಪಟತೆ ಹಾಗೂ ದ್ಯೂತಾಸಕ್ತಿಯಿಂದ ಕಳೆದುಕೊಂಡಿದ್ದ ತನ್ನ ತಂದೆಯ ರಾಜ್ಯವನ್ನು ಈತ ಮರಳಿ ಪಡೆದ.

ಇವನಿಗೆ ಇಬ್ಬರು ಪತ್ನಿಯರು. ಒಬ್ಬಳು ವಿದರ್ಭರಾಜನ ಮಗಳು, ಕೇಶಿನಿ ಮತ್ತೊಬ್ಬಳು ಶಿಬಿರಾಜನ ಪುತ್ರಿ ಸುಮತಿ. ಕೇಶಿನಿಯಿಂದ ಅಸಮಂಜನೆಂಬ ಪುತ್ರನನ್ನು ಪಡೆದ, ಸುಮತಿಗೆ ಅರವತ್ತು ಸಾವಿರ ಮಕ್ಕಳಾದರು. ಅಸಮಂಜನು ಕ್ರೂರಿಯೂ ಕೇಡುಗನೂ ಆಗಿದ್ದ. ಆದುದರಿಂದ ಸಗರ ಆತನನ್ನು ತೊರೆದ.

ಈತ ಅಶ್ವಮೇಧಯಾಗವನ್ನು ಮಾಡಿ ಯಜ್ಞದ ಕುದುರೆಯನ್ನು ಬಿಟ್ಟ, ಇಂದ್ರ ಪದವಿಯನ್ನು ಕಳೆದುಕೊಳ್ಳುವ ಭೀತಿಯಿಂದ ಇಂದ್ರ ಯಜ್ಞದ ಕುದುರೆಯನ್ನು ರಾಕ್ಷಸ ವೇಷದಿಂದ ಬಂದು ಕದ್ದ. ಕುದುರೆಯನ್ನು ಹುಡುಕಿಕೊಂಡು ಇವನ ಅರವತ್ತು ಸಾವಿರ ಮಕ್ಕಳೂ ಹೊರಟರು. ಎಲ್ಲಿಯೂ ಕುದುರೆ ಕಾಣದೆ ಪಾತಾಳ ಲೋಕವನ್ನು ಹೊಕ್ಕು ತಪಸ್ಸು ಮಾಡುತ್ತಿದ್ದ ಕಪಿಲ ಮುನಿಯ ಬಳಿ ಕಟ್ಟಿದ್ದ ಕುದುರೆಯನ್ನು ನೋಡಿ, ಮುನಿಯೇ ಕುದುರೆಗಳ್ಳನೆಂದು ತಪ್ಪಾಗಿ ತಿಳಿದರು. ಮುನಿಯನ್ನು ಬಹುವಾಗಿ ಬಾಧಿಸಿದರು. ಕೋಪಗೊಂಡ ಆತ ತಪಶ್ಶಕ್ತಿಯಿಂದ ಅವರನ್ನು ಸುಟ್ಟುಹಾಕಿದ. ಅವರು ಬೂದಿಯಾದರು. ಸಗರನಿಗೆ ಈ ವಿಚಾರ ತಿಳಿಯದೆ ಆತಂಕಗೊಂಡಿದ್ದ. ಅಸಮಂಜನ ಮಗನಾದ ಅಂಶುಮಂತನನ್ನು ಕರೆದು ಚಿಕ್ಕಪ್ಪಂದಿರನ್ನೂ ಕುದುರೆಯನ್ನೂ ಹುಡುಕಿ ತರಲು ಹೇಳಿದ. ತನ್ನ ಚಿಕ್ಕಪ್ಪಂದಿರೆಲ್ಲಾ ಸತ್ತು ಬೂದಿಯಾದುದನ್ನು ತಿಳಿದ ಆತ ಅವರಿಗೆ ಸದ್ಗತಿ ದೊರಕಿಸಲು, ಚಿಕ್ಕಪ್ಪಂದಿರು ಬೂದಿಯಾದ ಸ್ಥಳಕ್ಕೆ ಗಂಗಾನದಿಯನ್ನು ತರಲು

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಬಹಳ ಕಷ್ಟಪಟ್ಟ. ಆದರೆ ಗಂಗೆ ಬರಲಿಲ್ಲ. ಕುದುರೆಯನ್ನು ಹುಡುಕಿ ತಂದು ತಾತನಿಗೆ ಒಪ್ಪಿಸಿದ. ಕೆಲಕಾಲದ ಅನಂತರ ಇವರಿಬ್ಬರೂ ಮೃತರಾದರು. ಅನಂತರ ಅಂಶುಮಂತನ ಮೊಮ್ಮಗ ಭಗೀರಥ ತಪಸ್ಸು ಮಾಡಿ ಗಂಗಾನದಿಯನ್ನು ಭೂಮಿಗೆ ತರಲು ಸಂಕಲ್ಪಮಾಡಿ ಶಿವನ ಸಹಾಯವನ್ನು ಪಡೆದ. ಜಹ್ನು ಮುನಿಯ ಆಶ್ರಮವನ್ನು ಗಂಗೆ ತೋಯಿಸಿದಳು. ಇದರಿಂದ ಕೋಪಗೊಂಡ ಮುನಿ, ನದಿಯನ್ನು ಕುಡಿದ. ಭಗೀರಥ ಪ್ರಾರ್ಥಿಸಲಾಗಿ ಮುನಿ ತನ್ನ ಕಿವಿಯಿಂದ ನದಿಯನ್ನು ಬಿಟ್ಟ, ಗಂಗೆಯು ಜಾಹ್ನವಿ ಎಂದು ಹೆಸರಾದಳು. ಅನಂತರ ಈತ ತನ್ನ ಅಜ್ಜಂದಿರ ಬೂದಿಯ ಮೇಲೆ ಗಂಗೆಯನ್ನು ಹರಿಸಿ, ಅವರಿಗೆ ಸದ್ಗತಿಯನ್ನು ದೊರಕಿಸಿದ.

ಇದನ್ನೇ ನಾವು ಭಗೀರಥ ಪ್ರಯತ್ನ ಎಂದು ಕರೆಯುತ್ತೇವೆ. ಜೀವನದಲ್ಲಿ ಏನನ್ನಾದರೂ ಸಾಧಿಸಲು ಈ ರೀತಿಯ ಭಗೀರಥ ಪ್ರಯತ್ನದ ಅವಶ್ಯಕತೆ ನಮ್ಮೆಲ್ಲರಿಗೂ ಇದೆ. ಏನನ್ನಾದರೂ ಸಾಧಿಸುವುದು ಒಂದು ದಿನದ ಕೆಲಸವಲ್ಲ. ದಿನವೂ ತಪಸ್ಸಿನಂತೆ ನಾವು ಆ ಸಾಧನೆ ಎಡೆಗೆ ಪ್ರಜ್ಞಾಪೂರ್ವಕವಾಗಿ ಪ್ರಯತ್ನ ಪಡುತ್ತಲೇ ಇರಬೇಕು. ನಾನ ರೀತಿಯ ಬಾಧೆಗಳು, ಎಡರು ತೊಡರುಗಳು ನಮ್ಮ ಗುರಿಯತ್ತ ನಮ್ಮ ನಡಿಗೆಯನ್ನು ಸದಾ ಕುಂಠಿತಗೊಳಿಸುತ್ತಲೇ ಇರುತ್ತವೆ. ಆಗಾಗ ಆತಂಕ ಖಿನ್ನತೆಯಿಂದ ನಡೆಯುವ ದಾರಿ ಮರೆತಂತಾಗಿ ಮಂಕಾಗಿ ಕುಳಿತುಬಿಡುತ್ತೇವೆ. ಆದರೆ ಮತ್ತೆ ನಮ್ಮಲ್ಲಿ ನಾವೇ ಆತ್ಮವಿಶ್ವಾಸವನ್ನು ಮೂಡಿಸಿಕೊಳ್ಳುತ್ತಾ ಜೀವನೋತ್ಸಾಹದಿಂದ ಗುರಿಯೆಡೆಗೆ ನಿರಂತರವಾಗಿ ಬಿಡದೆ ನಡೆಯುತ್ತಿರಬೇಕು. ಅನೇಕ ಬಾರಿ ನಮ್ಮ ಬೆನ್ನ ಹಿಂದೆ ನಮ್ಮ ಕುಟುಂಬದವರು ಸ್ನೇಹಿತರು ಹಿತೈಷಿಗಳು ಇರುತ್ತಾರೆ. ಮುಂದೆ ಹೋಗುತ್ತಾ ಹೋಗುತ್ತಾ ಅನೇಕರು ಇರದೆಯೂ ಇರಬಹುದು.

ಆಗಲು ನಾವು ಧೃತಿ ಗೆಡದೆ ಮುನ್ನಡೆಯಲೇಬೇಕು.

ಆಗ ಮಾತ್ರ ನಮಗೆ ಜೀವನದ ಸಾರ್ಥಕ್ಯ, ಬದುಕಿಗೊಂದು ಅರ್ಥ. ಯಶಸ್ಸಿನ ಹೊಂಬಿಸಿಲು ನಮ್ಮ ಬದುಕಿನಲ್ಲೂ ಕೂಡ ಹೊಸ ಬೆಳಕನ್ನು ಬೀರುತ್ತದೆ. ಇಂತಹ ಭಗೀರಥ ಮನಸ್ಸು, ಪ್ರಯತ್ನ ನಿಮ್ಮೆಲ್ಲರದೂ ಆಗಲಿ ನಿಮ್ಮ ಕನಸುಗಳು ನನಸಾಗಲಿ ಎನ್ನುವ ಹಾರೈಕೆ ನನ್ನದು.

ಒಂದೊಳ್ಳೆ ಮಾತು

ಪದಬಂಧ



ಎಡದಿಂದ ಬಲಕ್ಕೆ

1. ಕಟ್ಟಡ ಭದ್ರವಾಗಿರಲು ಅಗತ್ಯವಾದ ಬುನಾದಿ (4)
3. ಮೋಸಮಾಡುವುದನ್ನು ವ್ಯಂಗ್ಯವಾಗಿ ಹೇಳುವ ಪದ (4)
5. ನೂರರ ಗುಂಪಿದು (3)
7. ಶತ್ರುವಿನ ಪರ್ಯಾಯ ಪದ (2)
9. ಅಸ್ತವ್ಯಸ್ತವಾಗಿ ಬಂದಿರುವ ಚಿನ್ನ (3)
11. ಹರಿತಗೊಳಿಸುವ ಸಾಧನ (2)
12. ದಾನವನಿಗೆ ಮತ್ತೊಂದು ಹೆಸರು (3)
13. ಇದೊಂದು ಬಗೆಯ ಚಿನ್ನದ ನಾಣ್ಯ (3)
14. ರವಕೆಯ ಬಟ್ಟೆ (2)
15. ಜನರು ಸಲ್ಲಿಸಿದ ಕಾಣಿಕೆ (3)
17. ಕವನ ರಚಿಸಿದಾತ (2)
19. ಚರ್ಮದಲ್ಲಿ ಉಂಟಾದ ನವೆ (3)
21. ಮರ ಕತ್ತರಿಸುವ ಸಾಧನ (4)
22. ಮರದ ಮಧ್ಯೆ ಕಾಣುವ ಪರ್ವತ (4)

ಮೇಲಿನಿಂದ ಕೆಳಕ್ಕೆ

1. ತರಕಾರಿ ತರಲು ಅದೇನು ಅವಸರ (4)
2. ಎರಡಕ್ಷರದ ಕೀರ್ತಿ (2)
3. ಮತ್ತೊಂದು ಬೀಸಣಿಗೆ (2)
4. ಸವಿಯನ್ನು ಹೀರುವ ಭ್ರಮರ (4)
6. ಅತಿಯಾದ ಆತುರವಿದು (3)
8. ಪ್ರಾಚೀನ ಗ್ರಂಥ ಅಥವಾ ಹಳೆಯ ಕಥೆ (3)
9. ನಗುವಿನೊಂದಿಗೆ ಬಂದಿರುವ ಜಿಲ್ಲಾಕೇಂದ್ರ (3)
10. ಗಂಡು ಕುರಿ (3)
11. ಅಣ್ಣ ಮಾಡಿದ ಹಾಸ್ಯ (3)
14. ನಾಲ್ಕು ಯುಗಗಳಲ್ಲಿ ಈಗಿನದ್ದು (4)
16. ಧಾನ್ಯಗಳನ್ನು ಹಸನು ಮಾಡುವ ಒಂದರಿ (3)
18. ಅಡ್ಡಿ ಆತಂಕಗಳನ್ನು ನಿವಾರಿಸುವ ಗಣಪ (4)
19. ಬೇಡವಾದ ವಸ್ತು (2)
20. ಕತ್ತಲೆ ಎರಡಕ್ಷರದಲ್ಲಿ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಅರಸ 4. ಸದರ 5. ಮಹಾನುಭಾವ 6. ಚಾಮರ 8. ರುಕಮ 10. ತಪಲಿ 12. ಕಡಿವಾಣ 13. ಕರಗತ 14. ಪತನ 16. ಉನೆರ 18. ಹಸುಳೆ 19. ಪರಿಗಣಿಸು 20. ತರುಣ 21. ಗೆಬರು

ಮೇಲಿನಿಂದ ಕೆಳಕ್ಕೆ: 2. ಸಮರ 3. ಅನುಕಂಪ 4. ಸವರು 7. ಮಹಡಿಮನೆ 9. ಕಡೆಗಣಿಸು 10. ತಣಪ 11. ಲಿಕನ 15. ತರಗತಿ 17. ರಪಣ 18. ಹಸುಗೆ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಆಮೆ ಮೊಟ್ಟೆಯಿಡುವ ಕಡಲತೀರ

ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಗಳ ಕಡಲತೀರದಲ್ಲಿ, ವಿರಳವೆನಿಸಿ ರುವ ಮೂರು ಜಾತಿಯ ಸಮುದ್ರ ಆಮೆಗಳು ಗೂಡು ಕಟ್ಟಿ, ಮೊಟ್ಟೆಗಳನ್ನು ಇಡುತ್ತವೆ. ಹಾಕ್ಸ್ಬಿಲ್, ಹಸಿರು ಆಮೆ ಮತ್ತು ವಿಶ್ವದ ಅತಿದೊಡ್ಡ ಸಮುದ್ರ ಆಮೆಗಳು ಮೊಟ್ಟೆಯಿಡಲು ಇಲ್ಲಿನ ಕಡಲ ತೀರಕ್ಕೆ ಧಾವಿಸು ತ್ತವೆ. ಸಾಮಾನ್ಯವಾಗಿ ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಆಮೆಗಳು ಮೊಟ್ಟೆಗಳನ್ನು ಇಡುತ್ತವೆ. ಪ್ರಶಾಂತ ಮತ್ತು ಸುಂದರವಾದ ನೀಲ್ ದ್ವೀಪವು ಅಂಡಮಾನ್ ಮೊಟ್ಟೆಯಿಡುವ ಆಮೆಗಳಿಗೆ ಅತ್ಯಂತ ಅಚ್ಚುಮೆಚ್ಚಿನ ತಾಣ.

ಪುಸ್ತಕ ಲೋಕ

ಒಂದು ಗುಲಾಬಿಯ ಕತೆ

ಕಂ.ಕ ಮೂರ್ತಿಯವರ ಒಂದು ಗುಲಾಬಿಯ ಕತೆ ಕಥಾ ಸಂಕಲನ ಯಾವುದೇ ತಂತ್ರಗಾರಿಕೆ, ಕೌಶಲ್ಯದ ನಿರ್ವಹಣೆ ಗೋಜಿಗೆ ಹೋಗದೆ, ತಮ್ಮ ಪಾಡಿಗೆ ತಾವು ಕೂತು ಕತೆ ಹೇಳುವ ಬಗೆಯದ್ದು. ಕೆಂಡ ಸಂಪಿಗೆ ಕಟ್ಟೆ, ಸಂಪಿಗೆ ಮರದ ಕಟ್ಟೆ, ಮಾದಾಪುರ, ಪ್ರಾದೇಶಿಕತೆಯ ಸಹಜ ಸೊಗಡು, ತೀರಾ ಹತ್ತಿರದಲ್ಲೇ ನಡೆದ ಕತೆಗಳು ಎನಿಸುವ ಮಟ್ಟಿಗಿನ ನಿರೂಪಣಾ ಶೈಲಿಯಲ್ಲಿ ಓದಿಸಿಕೊಳ್ಳುತ್ತವೆ. ಅವರು ಓಡಾಡಿದ, ಒಡನಾಡಿದ ಸಂಗತಿಗಳ ಮೂಲಕವೇ ಕಥನವನ್ನು ಹೆಣೆದಿರುವುದರಿಂದ ಅವು ಕೃತಕ ಎನಿಸುವುದಿಲ್ಲ. ಬರಹದ ಬಗೆಗಿನ ಉತ್ಸಾಹ, ಹೇಳಬೇಕೆನ್ನುವ ಹಂಬಲ ಮತ್ತು ಬದುಕನ್ನು ಅತ್ಯಂತ ತೀವ್ರವಾಗಿ ಬದುಕಬೇಕೆನ್ನುವ ಗುಣಗಳು ಇಲ್ಲಿ ಕಾಣಬಹುದು.

ಟ್ವೀಟ್‌ಮೆಂಟ್

ಡಾ.ಮನು ಕುಮಾರ್

ನೀವು ಸತ್ತಾಗ, ನಾನು ಸತ್ತಿದ್ದೇನೆ ಎಂದು ನಿಮಗೆ ತಿಳಿಯುವುದಿಲ್ಲ. ಆದರೆ ಅದು ಇತರರಿಗೆ ಮಾತ್ರ ನೋವು ಉಂಟುಮಾಡುತ್ತದೆ. ನೀವು ಮೂರ್ಖರಾಗಿದ್ದಾಗಲೂ ಅದೇ ರೀತಿ.

ಕ್ರಿಸ್

ಇದಕ್ಕೆ ಹೇಳುವುದು ಜಾಗೃತಿ ಮುಖ್ಯವೆಂದು. ಸುಧಾರಣೆಯ ಅಗತ್ಯತೆ ಎಲ್ಲಿದೆ ಎಂಬುದನ್ನು ನೀವು ಗುರುತಿಸಿದಾಗ ಬೆಳವಣಿಗೆ ಪ್ರಾರಂಭವಾಗುತ್ತದೆ.

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ಏನಿದು 'ಕವಾಸಕಿ ಕಾಯಿಲೆ'?

- ಎ. ಕಿವಿಗಳ ಅಸ್ವಸ್ಥತೆ.
- ಬಿ. ಅಪರೂಪದ ಹೃದ್ರೋಗ.
- ಸಿ. ಶಿಲೀಂಧ್ರಗಳಿಂದ ಬರುವ ಕಾಯಿಲೆ.
- ಡಿ. ಮೆದುಳಿಗೆ ಸ್ಟ್ರೋಕ್ ಆಗುವುದು.



ಉತ್ತರ: ಬಿ. ಅಪರೂಪದ ಹೃದ್ರೋಗ

ಮಾಹಿತಿ

ಇತ್ತೀಚೆಗೆ ಕವಾಸಕಿ ಕಾಯಿಲೆಯಿಂದ ಬಳಲುತ್ತಿರುವ ಇಬ್ಬರು ಹೆಣ್ಣು ಶಿಶುಗಳಿಗೆ ಕೊಯಮತ್ತೂರು ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ (ಸಿ ಎಮ್ ಸಿ ಎಚ್) ಯಶಸ್ವಿಯಾಗಿ ಚಿಕಿತ್ಸೆ ನೀಡಲಾಗಿದೆ. ಕವಾಸಕಿ ಕಾಯಿಲೆ, ಅಪರೂಪದ ಹೃದಯ ಸ್ಥಿತಿ. ಇದು ಪ್ರಾಥಮಿಕವಾಗಿ 5 ವರ್ಷದೊಳಗಿನ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ, ಅಧಿಕ ಜ್ವರ ಮತ್ತು ಉರಿಯೂತದ ರಕ್ತನಾಳಗಳಿಗೆ ಕಾರಣವಾಗುತ್ತದೆ. ಪರಿಧಮನಿಯ ಅಪಧಮನಿಗಳನ್ನು ಗುರಿಯಾಗಿಸಿಕೊಂಡು ಮಕ್ಕಳಲ್ಲಿ ಹೃದ್ರೋಗಕ್ಕೆ ಗಮನಾರ್ಹ ಕಾರಣವಾಗಿದೆ. ರೋಗಲಕ್ಷಣಗಳು ಜ್ವರ, ದದ್ದು, ಊದಿಕೊಂಡ ಕೈ ಮತ್ತು ಪಾದಗಳು ಮತ್ತು ಉರಿಯೂತದ ಲೋಳೆಯ ಪೊರೆಗಳನ್ನು ಒಳಗೊಂಡಿರುತ್ತದೆ. ಇನ್ನೂ ಸರಿಯಾಗಿ ಈ ರೋಗದ ಕಾರಣ ತಿಳಿದು ಬಂದಿಲ್ಲ, ಚಳಿಗಾಲದ ಕೊನೆಯಲ್ಲಿ ಮತ್ತು ವಸಂತಕಾಲದ ಆರಂಭದಲ್ಲಿ ಕವಾಸಾಕಿ ಪ್ರಕರಣಗಳು ಉತ್ತುಂಗಕ್ಕೇರುತ್ತವೆ ಎನ್ನುತ್ತಾರೆ ತಜ್ಞರು.

ಸೂಪರ್ ಫ್ರೂಟ್ ಡ್ರ್ಯಾಗನ್

ಡ್ರ್ಯಾಗನ್ ಹಣ್ಣು, ಅಮೇರಿಕಾ ಮೂಲದ ಕಳ್ಳಿ ಜಾತಿಗೆ ಸೇರಿದೆ. ಪಿಟಾಯಾ ಅಥವಾ ಪಿಟಾಹಯಾ ಎಂದು ಕರೆಯಲ್ಪಡುವ ಇದು ಹೈಲೋಸೀರಿಯಸ್ ಹಣ್ಣಿನ ಕುಲಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಹೈಲೋಸೆರಿಯಸ್ ಉಂಡಟಸ್ ಮತ್ತು

ಇದು ಕ್ಯಾಕ್ಟೇಸಿ ಕುಟುಂಬಕ್ಕೆ ಸೇರಿದೆ. ಇದು ವೇಗವಾಗಿ ಬೆಳೆಯುತ್ತಿರುವ ದೀರ್ಘಕಾಲಿಕ ಅರೆ-ಎಪಿಫೈಟಿಕ್ ಬಳ್ಳಿಯಾಗಿದೆ. ಇದನ್ನು ಆರಂಭದಲ್ಲಿ ಅಲಂಕಾರಿಕ ಸಸ್ಯವಾಗಿ ಪರಿಚಯಿಸಲಾಯಿತು. ಆದರೆ ಅದರ ಪೌಷ್ಟಿಕಾಂಶದ ಗುಣಗಳು, ಆರೋಗ್ಯ ಪ್ರಯೋಜನಗಳು ಮತ್ತು ಮಾರುಕಟ್ಟೆ ಮೌಲ್ಯದಿಂದಾಗಿ ಇದು ಹೊಸ ಸೂಪರ್ ಹಣ್ಣಾಗಿ ಹೊರಹೊಮ್ಮಿದೆ. ಡ್ರಾ ್ಯಗನ್ ಹಣ್ಣಿನಲ್ಲಿ ಉತ್ತಮ ಪೋಷಕಾಂಶಗಳಿವೆ. ತಿನ್ನಲು ರುಚಿಕರವಾಗಿರುವ ಈ ಹಣ್ಣಿನ ತಿರುಳು ಸಿಹಿ ಯಾಗಿರುತ್ತದೆ. ಈ ಹಣ್ಣಿನ ರಸ ಕೂಡಾ ಉಪಯೋಗಿಸ ಬಹುದು. ಇದರ ರಸವನ್ನು ವೈನ್ ಅಥವಾ ಇತರ ಪಾನೀಯಗಳಲ್ಲೂ ಪರಿಮಳಕ್ಕಾಗಿ ಉಪಯೋಗಿಸುತ್ತಾರೆ. ಇದರ ಹೂ ಕೂಡಾ ತಿನ್ನಲು ಉಪಯುಕ್ತವಾಗಿದೆ. ಮಾತ್ರವಲ್ಲದೆ ಚಹಾ ತಯಾರಿಸಲು ಕೂಡಾ ಉಪಯೋಗಿಸಬಹುದು.

ಡ್ರ್ಯಾಗನ್ ಫ್ರೂಟ್‌ನಲ್ಲಿ ಕ್ಯಾಲೊರಿಗಳು ಕಡಿಮೆ ಆದರೆ ಅಗತ್ಯ ಪೋಷಕಾಂಶಗಳು, ಜೀವಸತ್ವಗಳು ಮತ್ತು ಖನಿಜಗಳು ಹೆಚ್ಚಿನ ಪ್ರಮಾಣದಲ್ಲಿವೆ. ಇದರಲ್ಲಿ ಸಾಕಷ್ಟು ಪ್ರಮಾಣದ ಕರಗುವ ನಾರು ಸಹಾ ಇದೆ.

ಒಂದು ಕಪ್‌ನಷ್ಟು ಪ್ರಮಾಣದಿಂದ (227 ಗ್ರಾಂ) ಲಭಿಸಿರುವ ಮುಖ್ಯ ಪೋಷಕಾಂಶಗಳ ವಿವರಣೆ ಇಲ್ಲಿದೆ

ಕ್ಯಾಲೋರಿಗಳು: 136
ಪ್ರೋಟೀನ್: 3 ಗ್ರಾಂ
ಕೊಬ್ಬು: 0 ಗ್ರಾಂ
ಕಾರ್ಬೋಹೈಟುಗಳು: 29 ಗ್ರಾಂ
ಕರಗುವ ನಾರು : 7 ಗ್ರಾಂ

ಫಲಾಮೃತ

ಕಬ್ಬಿಣ: ಆರ್‌ಡಿಐನ ಶೇ 8ರಷ್ಟು
ಮೆಗ್ನೀಸಿಯಮ್: ದಿನದ ಅಗತ್ಯೆಗೆ ತಕ್ಕಂತೆ ಶೇ. 18ರಷ್ಟು
ವಿಟಮಿನ್ ಸಿ: (ಆರ್‌ಡಿಐ)ನ ಶೇ 9.
ವಿಟಮಿನ್ ಇ: (ಆರ್‌ಡಿಐ)ನ ಶೇ 4.

ಇದಕ್ಕೂ ಹೊರತಾಗಿ ಪಾಲಿಫೆನಾಲುಗಳು, ಕ್ಯಾರೋಟಿನಾಯ್ಡುಗಳು ಮತ್ತು ಬೀಟಾಸೈಯಾನಿನ್ಸ್ ಮೊದಲಾದ ಪೋಷಕಾಂಶಗಳೂ ಹೇರಳವಾಗಿವೆ.

ಡ್ರ್ಯಾಗನ್ ಹಣ್ಣನ್ನು ಸೇವಿಸುವುದರಿಂದ ಹಲವಾರು ಆರೋಗ್ಯಕರ ಪ್ರಯೋಜನಗಳಿವೆ.

- ರೋಗನಿರೋಧಕ ಶಕ್ತಿ ಹೆಚ್ಚಿಸುತ್ತದೆ.
- ತೂಕ ಇಳಿಸಿಕೊಳ್ಳಲು ಮತ್ತು ಹೃದಯದ ಆರೋಗ್ಯಕ್ಕೆ ಡ್ರ್ಯಾಗನ್ ಹಣ್ಣು ತುಂಬಾ ಪ್ರಯೋಜನಕಾರಿ. ಇದರ ಸೇವನೆಯಿಂದ ತೂಕವು ವೇಗವಾಗಿ ಕಡಿಮೆಯಾಗಲು ಪ್ರಾರಂಭಿಸುತ್ತದೆ. ಈ ಹಣ್ಣು ಸೇವಿಸಿದ ತಕ್ಷಣ ಶಕ್ತಿಯನ್ನು ಪಡೆಯುತ್ತೀರಿ.
- ಈ ಹಣ್ಣಿನಲ್ಲಿ ಉತ್ಕರ್ಷಣ ನಿರೋಧಕಗಳು ಸಮೃದ್ಧವಾಗಿದ್ದು,. ಇದನ್ನು ನಿಯಮಿತವಾಗಿ ಸೇವಿಸಿದರೆ ಇದು ಚಿರಯವ್ವನ ಕಾಪಾಡಿಕೊಳ್ಳಬಹುದು.
- ಹೃದಯದ ಆರೋಗ್ಯ ಸದೃಢವಾಗಿರಲು ಈ ಹಣ್ಣನ್ನು ಸೇವಿಸುವುದು.

ಹರ್ಯಾಣ ಸರ್ಕಾರ ಯೋಜನೆಯೊಂದರಡಿ ಈ ಹಣ್ಣನ್ನು ಬೆಳೆಸಲು 1.20 ಲಕ್ಷ ರೂ. ಸಹಾಯಧನ ನೀಡುತ್ತಿದೆ. ಕೆಲವು ರಾಜ್ಯಗಳು ಸಹ ಈ ಹಣ್ಣನ್ನು ಬೆಳೆಸುವ ಬಗ್ಗೆ ರೈತರಿಗೆ ಸಲಹೆ ನೀಡುತ್ತಿವೆ.

ಜಗತ್ತಿನ ಅಚ್ಚರಿಯ ಸಂಗತಿಗಳು

ನಮ್ಮ ಸುತ್ತಲೂ ಪ್ರಕೃತಿಯಲ್ಲಿ ಅನೇಕ ಘಟನೆಗಳು ನಡೆಯುತ್ತಿರುತ್ತವೆ. ಅವುಗಳಲ್ಲಿ ಕೆಲವು ಸಾಮಾನ್ಯ ಮತ್ತು ಕೆಲವು ಅಸಾಮಾನ್ಯ ಘಟನೆಗಳಾಗಿರಬಹುದು. ಆದರೆ ಅವುಗಳನ್ನು ನೋಡುವ ಅಸಾಮಾನ್ಯ ದೃಷ್ಟಿ ಮಾತ್ರ ನಮ್ಮಲ್ಲಿರಬೇಕಾಗುತ್ತದೆ. ಅಂತದ್ದೇ ಕೆಲವು ಪ್ರಪಂಚದ ವಿಸ್ಮಯಕಾರಿ ವಿಚಾರಗಳು ಇಲ್ಲಿವೆ.

ಸಾವಿನ ಕಣಿವೆಯ ರಹಸ್ಯ!

ಕುಬೆಟಾವೋ ಬ್ರೆಜಿಲ್ ದೇಶದ ಒಂದು ಪಟ್ಟಣ. ಇದಕ್ಕಿರುವ ಅಡ್ಡಹೆಸರೇ ಸಾವಿನ ಕಣಿವೆ (ದಿ ವ್ಯಾಲಿ ಆಫ್ ಡೆತ್). ಇದಕ್ಕೆ ಕಾರಣ ಈ ಪಟ್ಟಣ ಪ್ರಪಂಚದಲ್ಲೇ ಅತ್ಯಂತ ಹೆಚ್ಚು ಮಾಲಿನ್ಯ ನಗರವಾಗಿರುವುದು. ಈ ನಗರದ ಹೊರವಲಯವನ್ನು ಅಣ್ವಸ್ತ್ರಗಳ ಸ್ಫೋಟಕ



ವಲಯವಾಗಿ ಬಳಸಲಾಗುತ್ತಿದೆ. ಪರಿಣಾಮವಾಗಿ ಸುತ್ತಲಿನ ಅರಣ್ಯದಲ್ಲಿ ಸಸ್ಯವರ್ಗ ನಿರ್ನಾಮವಾಗಿ ಹೋಗಿದೆ. ಈ ಪರಮಾಣು ಸ್ಫೋಟಗಳಿಂದ ಇಲ್ಲಿಯ ನೀರು, ಗಾಳಿ ಮತ್ತು ಭೂಮಿ ವಿಷಮಯವಾಗಿದೆ.

ಈ ಹಿಂದೆ 1984ರಲ್ಲಿ ಇಲ್ಲಿ ತೈಲಾಗಾರಗಳು ಸ್ಫೋಟಿಸಿ ಅಪಾರ ಪ್ರಮಾಣದ ತೈಲವು ಭೂಮಿಯಲ್ಲಿ ಸೋರಿ ಹೋಯಿತು. ಇದನ್ನು ಶುಚಿಗೊಳಿಸಲು ಸುಮಾರು 24 ಕೈಗಾರಿಕೆಗಳು ಅಹೋರಾತ್ರಿ ಶ್ರಮಿಸಿದವು. ಇದಕ್ಕೆ ಅಮೆರಿಕ 120 ಶತಕೋಟಿ ಡಾಲರ್ ನೆರವು ನೀಡಿತು. ಆದರೆ ಇಂದಿಗೂ ಶುಚಿತ್ವದ ಕೆಲಸ ಇಲ್ಲಿ ನಡೆಯುತ್ತಲೇ ಇದೆ. ಈ ನಗರದ ಇನ್ನೊಂದು ದುರದೃಷ್ಟದ ಸಂಗತಿ ಎಂದರೆ ಇಲ್ಲಿ ಹುಟ್ಟುತ್ತಿರುವ ಮಕ್ಕಳು ! ಇಲ್ಲಿ ಇತ್ತೀಚೆಗೆ ಜನಿಸುತ್ತಿರುವ ಬಹಳಷ್ಟು ಮಕ್ಕಳು 'ಅನೆನ್ಸಫೇಲಿ' ಎಂಬ ಭೀಕರ ರೋಗಕ್ಕೆ ತುತ್ತಾಗಿ ಜನಿಸುತ್ತಿವೆ. ಅಂದರೆ ಮಕ್ಕಳು ಜನಿಸುವಾಗಲೇ ಅವುಗಳ ಮೆದುಳು, ತಲೆಬುರುಡೆ ಮತ್ತು ನೆತ್ತಿಯ ಭಾಗಗಳು ಕೇವಲ ಅರ್ಧಭಾಗ ಮಾತ್ರ ಇವೆ. ಹೀಗೆ ಹುಟ್ಟಿದ ಮಕ್ಕಳು ಕೆಲವೇ ಗಂಟೆಗಳಲ್ಲಿ ಇಹಲೋಕ ತ್ಯಜಿಸುತ್ತಿವೆ. ಇಂತಹ ಅತ್ಯಂತ ಭಯಾನಕ ಮಲಿನಕಾರಿ ಪಟ್ಟಣದಲ್ಲಿ ಇನ್ನೂ 1.10 ಲಕ್ಷ ಜನ ಬಾಳುತ್ತಿರುವುದೇ ಪರಮಾದ್ಭುತ !

ಜನಸಂಖ್ಯಾಭರಿತ ಏಷ್ಯಾಖಂಡ

ನಾವು ವಾಸಿಸುತ್ತಿರುವುದು ಏಷ್ಯಾ ಖಂಡದಲ್ಲಿ ಎಂಬುದು ನಿಮಗೆಲ್ಲಾ ಗೊತ್ತಿರುವ ವಿಷಯವೇ. ಇದು ಭೂಮಂಡಲದ ಶೇಕಡ 30ರಷ್ಟು ಪ್ರದೇಶವನ್ನು

ವಿಜ್ಞಾನ ವಿಸ್ಮಯ

ಕೆ. ನಟರಾಜ್



ಆವರಿಸಿದ್ದು, ಅತ್ಯಂತ ದೊಡ್ಡ ಖಂಡವಾಗಿದೆ. 17,212,000 ಚದರ ಮೈಲಿ ಇದರ ವಿಸ್ತಾರ. 2006ರ ಜನಗಣತಿಯಂತೆ ಇಲ್ಲಿರುವ ಸಂಖ್ಯೆ 4,162,966,086. ಅಂದರೆ 400 ಕೋಟಿಗಿಂತಲೂ ಜಾಸ್ತಿ ! ಈ ಖಂಡದಲ್ಲಿ ಸುಮಾರು 47 ರಾಷ್ಟ್ರಗಳಿದ್ದು ಸುಮಾರು 40ಕ್ಕಿಂತಲೂ ಹೆಚ್ಚು ಭಾಷೆಗಳನ್ನು ಬಳಸಲಾಗುತ್ತಿದೆ. ಇಂದು ಏಷ್ಯಾಖಂಡದಲ್ಲೇ ಅದ್ಭುತ ಪ್ರಗತಿಯನ್ನು ಸಾಧಿಸಿದ ರಾಷ್ಟ್ರವೆಂದರೆ ದಕ್ಷಿಣ ಕೊರಿಯಾ. 1960ಕ್ಕಿಂತ ಮುಂಚೆ ಅತಿ ಹಿಂದುಳಿದ ರಾಷ್ಟ್ರಗಳ ಗುಂಪಿಗೆ ಸೇರಿದ್ದ ಈ ದೇಶವು ಈಗ ಅಪಾರ ಆರ್ಥಿಕ ಪ್ರಗತಿಯನ್ನು ಸಾಧಿಸಿ 'ಏಷ್ಯಾದ ಹುಲಿ' ಎಂಬ ಪ್ರಶಂಸೆಗೆ ಪಾತ್ರವಾಗಿದೆ. ಕೊರಿಯಾದ ಯುದ್ಧ ನಡೆದ ಕೇವಲ 20 ವರ್ಷಗಳಲ್ಲಿ ದಕ್ಷಿಣ ಕೊರಿಯಾ ಸಾಧಿಸಿದ ಪ್ರಗತಿ ಒಂದು ದೊಡ್ಡ ವಿಸ್ಮಯ!

ಬಾಹ್ಯಾಕಾಶದಲ್ಲಿ ಭೂಮಿಯ ವೇಗ

ನಿಮಗೆ ತಿಳಿದಿರಲಿ, ನಮ್ಮ ಭೂಮಿ ಪ್ರತಿ ಗಂಟೆಗೆ 66,700 ಮೈಲಿಗಳ ವೇಗದಲ್ಲಿ ಬಾಹ್ಯಾಕಾಶದಲ್ಲಿ ಸೂರ್ಯನ ಸುತ್ತ ಸುತ್ತುತ್ತಿದೆ. ಸೌರವ್ಯೂಹದಲ್ಲಿ ಬೇರೆ ಯಾವುದೇ ಗ್ರಹಕ್ಕಿರದ ವಿಶೇಷ ಸೌಲಭ್ಯಗಳು ನಮ್ಮ ಗ್ರಹವಾದ ಭೂಮಿಗಿದೆ. ನಮ್ಮ ಭೂಮಿಯ ಮೇಲಿನ ಒಟ್ಟು ವಿಸ್ತಾರ ಪ್ರದೇಶ 19.7 ದಶಲಕ್ಷ ಚದರ ಮೈಲಿಗಳು. ಈ ವಿಸ್ತೀರ್ಣವು ನೀರು, ಭೂಮಿ ಮತ್ತು ಹಿಮಪ್ರದೇಶವನ್ನೂ ಒಳಗೊಂಡಿದೆ. ಭೂಮಿಯ ಮೇಲಿನ ಅಪಾರ ಪ್ರಮಾಣದ ನೀರು, ಸೂರ್ಯನ ಬೆಳಕನ್ನು ಹೆಚ್ಚು ಪ್ರತಿಫಲಿಸುವುದರಿಂದ ಇಡೀ ಸೌರಮಂಡಲದಲ್ಲೇ ಅತ್ಯಂತ ಪ್ರಕಾಶಮಾನವಾದ ಗ್ರಹವಾಗಿದೆ.



ಸೂಪರ್ ಫ್ರೂಟ್ ಡ್ರ್ಯಾಗನ್



ರಿಷಿಯ ರುದ್ರ ಗರುಡ ಪುರಾಣಿತ್ರ

ಬಿ ಪಾಸಿಟಿವ್

ಭಯದ ಬೇರನ್ನು ಅರಸುತ್ತಾ

ಭಯವೆಂಬ ಅನುಭವ ನಮಗಾಗುವುದು ಯಾವಾಗ ಎಂದು ಯೋಚಿಸಿದಾಗ, ಒಂದು ಸಾಮಾನ್ಯ ಅಂಶ ಎಲ್ಲ ಬಗೆಯ ಭಯದ ವಾತಾವರಣದಲ್ಲಿ

ಇರುವುದು ನಮಗೆ ಗೋಚರಿಸುತ್ತದೆ. ನಾವು ಏನನ್ನಾದರೂ ಕಳೆದುಕೊಳ್ಳುತ್ತೇವೆ' ಎಂಬ ಅಭದ್ರತೆಯೇ ನಮ್ಮ ಹೆದರಿಕೆಗೆ ಮೂಲ ಕಾರಣ. ಇಷ್ಟವಾದ ವ್ಯಕ್ತಿ, ವಸ್ತು, ಸ್ಥಾನ ಮಾನ, ಆಸ್ತಿ ಪಾಸ್ತಿಗಳು, ಹೀಗೆ ಒಂದಲ್ಲ ಒಂದು ನಮ್ಮನ್ನು ಬಿಟ್ಟು ಹೋಗುತ್ತದೆ ಎಂಬ ಅಸ್ಥಿರತೆ ಮನದಲ್ಲಿ ಭಯದ ಸಂಚಲನವನ್ನು ಮೂಡಿಸುತ್ತದೆ. ಅಂದರೆ, ನಮ್ಮ ಬಳಿ ಏನಿದೆಯೋ ಅವೆಲ್ಲವೂ ನಮಗೆ ಭಯ ತರುವಂತವು. ಕಳೆದುಕೊಳ್ಳುವ ಭೀತಿ ನಮ್ಮನ್ನು ಶಾಶ್ವತವಾಗಿ ಭಯದ ನೆರಳಿನಲ್ಲಿ ಇರಿಸಿಬಿಡುತ್ತದೆ. ಹೊರಗಿನಿಂದ ಗಳಿಸಿದ ಅದೃಷ್ಟ, ಐಶ್ವರ್ಯಗಳು ನಿಜಕ್ಕೂ ದುರದೃಷ್ಟಗಳೇ. ಅವೆಲ್ಲ ನಮ್ಮಲ್ಲಿ ಭಯ ಹುಟ್ಟಿಸುತ್ತದೆ. ಹಾಗೆಯೇ ನಾವು ನಿರಂತರ ಭಯದಲ್ಲಿ ಬದುಕುತ್ತಿದ್ದೇವೆ ಎಂಬುದು ಕಟು ಸತ್ಯ. ನಮ್ಮ ಇರುವಿಕೆಯನ್ನು ಭಯದ ಗೂಡು ಮಾಡಿಕೊಂಡ ನಾವು, ನಾವು ಇಹಲೋಕ ತ್ಯಜಿಸದ ನಂತರವೂ ನಮ್ಮ ಇಷ್ಟಬಂಧುಗಳನ್ನು, ಗಳಿಕೆಯನ್ನು ಕಳೆದುಕೊಳ್ಳುವ, ನಾವು ಅಳಿದ ಮೇಲೆ ನಮ್ಮನ್ನು ಆಧರಿಸಿರುವವರು ಅತಂತ್ರಗೊಳ್ಳುವ ಚಿಂತೆಯಲ್ಲಿ ಬಳಲುತ್ತೇವೆ. ಆದರೆ, ನಮ್ಮ ಈ ಭಯ ಸಂಪೂರ್ಣ ಅರ್ಥಹೀನ. ನಮ್ಮ ಆತ್ಮದ ಸ್ವರೂಪವೊಂದೇ ಅವಿನಾಶಿ, ಬಾಹ್ಯ ಪ್ರಪಂಚದ ಕೊಂಡಿಗಳು ಎಂದೂ ನಮ್ಮದಲ್ಲ, ಅವು ಎಂದೂ ನಮ್ಮದಾಗಿರಲಿಲ್ಲ. ಅವೆಲ್ಲ ನಮ್ಮದೇ, ನಮಗಾಗಿ, ನಮ್ಮಿಂದ ಎನ್ನುವ ಭ್ರಾಂತಿ ನಮ್ಮನ್ನು ಆವರಿಸಿ ನಮ್ಮ ಕಣ್ಣಿಗೆ ಪಟ್ಟಿ ಕಟ್ಟಿರುತ್ತದೆ. ಅದನ್ನು ಜ್ಞಾನದ ಹಸ್ತದಿಂದ ಬಿಚ್ಚಿದಾಗ, ಭಯ ಹುಟ್ಟಿಸುವ ಸಂಗತಿಗಳೆಲ್ಲ ನಮ್ಮ ಹೃದಯವೆಂಬ ಪೆಟ್ಟಿಗೆಯಲ್ಲಿಯೇ ಇರುವುದು ಎಂಬುದು ಮನವರಿಕೆಯಾಗುತ್ತದೆ. ಅವನ್ನೆಲ್ಲ ಪ್ರಯತ್ನಪೂರ್ವಕವಾಗಿ ಹೊರಗೆ ತಳ್ಳಬೇಕು, ಆಗಲೇ ಭಯವೇ ಇಲ್ಲದ ಶಾಶ್ವತ ನಿರುಮ್ಮಳತೆಯು ಸಾಕಾರವಾಗಬಲ್ಲುದು.

● ವಿದ್ಯಾ ಶಂಕರ್ ಶರ್ಮ

ಲವ್‌ಎವೆರಿ ಬಾಡಿ

ಮೈಗ್ರೇನ್ ಕೆಲವರಲ್ಲಿ ಬದುಕಿನ ಬಗ್ಗೆ ಜಿಗುಪ್ಸೆ ಮೂಡಿಸಿದ್ದರೆ ಇನ್ನೂ ಕೆಲವರಿಗೆ ತಲೆನೋವಿಗೆ ಕಾರಣವೇ ತಿಳಿದಿಲ್ಲ! ಅತೀ ಬಿಸಿಲೂ ತಲೆ ನೋವಿಗೆ ಕಾರಣವಾಗುತ್ತದೆ ಎಂಬುದು ತಜ್ಞರ ಅಭಿಪ್ರಾಯವೂ ಹೌದು. ಅಲ್ಲದೆ ಕೆಲವರಲ್ಲಿ ಹೆಚ್ಚು ಕಾಲ ಹಸಿದೇ ಇರುವುದರಿಂದಲೂ ತಲೆ ನೋವು ಬರಬಹುದು. ಅತಿಯಾದ ಒತ್ತಡದಿಂದ ಕೆಲಸ ಮಾಡುವುದರಿಂದ ತಲೆನೋವು ಬರುತ್ತದೆಂಬುದನ್ನು ಇತ್ತೀಚಿನ ಸಂಶೋಧನೆ ದೃಢಪಡಿಸಿರುವುದಲ್ಲದೆ ಇದು ಮನುಷ್ಯನ ಆರೋಗ್ಯದ ಮೇಲೆ ಆಘಾತಕಾರಿ ಪರಿಣಾಮ ಬೀರುತ್ತದೆ ಎಂದೂ ಅಭಿಪ್ರಾಯಪಟ್ಟಿದೆ. ಒಂದು ಸಮಸ್ಯೆಯ ಬಗ್ಗೆ ತಾಳ್ಮೆಯಿಂದ ವಿವೇಚಿಸಿ ನಿರ್ಧಾರಕ್ಕೆ ಬರುವ ಬದಲು ಅತಿಯಾಗಿ ತಲೆಬಿಸಿ ಮಾಡಿಕೊಳ್ಳುವುದು, ಹೆಚ್ಚಿನ ಕೆಲಸ ಮಾಡುವುದಕ್ಕೆ ಒಪ್ಪಿಕೊಳ್ಳುವುದು ನಂತರ ಮಾಡಲಾಗದೇ ಚಿಂತೆ ಮಾಡುವುದು ಈ ಎಲ್ಲವೂ ಅತಿಯಾದ ತಲೆನೋವಿಗೆ ಕಾರಣವಾಗುತ್ತವೆಯಂತೆ.

● ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೂರನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಇಂದಿನ ಒತ್ತಡಯುಕ್ತ ಜೀವನಶೈಲಿಯಿಂದಾಗಿ ಹಿಂದೆಂದೂ ಕಂಡೂ ಕೇಳರಿಯದಂತಹ ಖಾಯಿಲೆಗಳು ಸಾಮಾನ್ಯವಾಗಿಬಿಟ್ಟಿವೆ. ಕೆಲವೊಂದು ಸಮಸ್ಯೆಗಳಂತೂ, ನಮ್ಮ ದೇಹವನ್ನು ಅಲ್ಲಾಡಿಸುವವರೆಗೂ, ಇದರ ಬಗ್ಗೆ ತಿಳಿದೇ ಇರುವುದಿಲ್ಲ. ಇಂಥ ಸಮಸ್ಯೆಯ ಪೈಕಿ ಆಂಟಿಫಾಸ್ಫೋಲಿಪಿಡ್ ಸಿಂಡ್ರೋಮ್ ಸಹ ಒಂದು. ಮಹಿಳೆಯರನ್ನು ಹೆಚ್ಚಾಗಿ ಕಾಡುವ ಈ ಖಾಯಿಲೆಗೆ, ಸೂಕ್ತ ಔಷಧಿ ಲಭ್ಯವಿಲ್ಲದಿರುವುದೇ ವಿಷಾದದ ಸಂಗತಿ.



ಜೀವಕೋಶಗಳ ಜೀವನ್ಮುದ್ಧ!

ಸುಸ್ವಾಸ್ಥ್ಯ

● ಸುದರ್ಶನ್ ಪ್ರಸಾದ್ ಕೊಪ್ಪ

ನಮ್ಮ ದೇಹವನ್ನು ಹೊರಗಿನ ಬೇಡದ ವಸ್ತುಗಳಿಂದ ರಕ್ಷಿಸಲು ಆಂಟಿಬಾಡಿಗಳು ಅತೀ ಮುಖ್ಯ. ಈ ಆಂಟಿಬಾಡಿಗಳು ಅತ್ಯಂತ ಸಂವೇದನಾಶೀಲವಾಗಿದ್ದು ದೇಹದ ಆಂತರಿಕ ವಸ್ತುಗಳು ಮತ್ತು ಬಾಹ್ಯ ವಸ್ತುಗಳು ಯಾವುದೆಂದು ಗುರುತಿಸುವುದರಲ್ಲಿ ಅತ್ಯಂತ ಜಾಗರೂಕರಾಗಿರುತ್ತವೆ. ಆದರೆ ಒಂದುವೇಳೆ ಅವುಗಳ ಈ ಗುರುತಿಸುವ ಸಾಮರ್ಥ್ಯ ವಿಫಲವಾದರೆ ದೇಹದ ಪ್ರೋಟೀನ್‌ಗಳನ್ನೇ ಬಾಹ್ಯ ಪ್ರೋಟೀನ್‌ಗಳೆಂದು ತಿಳಿದು ನಾಶಮಾಡತೊಡಗುತ್ತವೆ. ಅದೇ ಆಂಟಿಫಾಸ್ಫೋಲಿಪಿಡ್ ಸಿಂಡ್ರೋಮ್. ಇದೊಂದು ಆಟೋ ಇಮ್ಯೂನ್ ಖಾಯಿಲೆಯಾಗಿದ್ದು ಪುರುಷರಿಗೆ ಹೋಲಿಸಿದರೆ ಮಹಿಳೆಯರನ್ನು ಹೆಚ್ಚು ಕಾಡುವ ಇದಕ್ಕೆ ಸಧ್ಯದ ಮಟ್ಟಿಗೆ ಯಾವುದೇ ಔಷಧಿಗಳು ಲಭ್ಯವಿಲ್ಲ.

ಈ ಖಾಯಿಲೆಯ ಆರಂಭಿಕ ಲಕ್ಷಣಗಳನ್ನು ನೋಡುವುದಾದರೆ.

1. ಮೂಗಿನಲ್ಲಿ ರಕ್ತಸ್ರಾವ
2. ವಸುಡುಗಳಲ್ಲಿ ರಕ್ತ ಕಾಣಿಸಿಕೊಳ್ಳುವುದು
3. ಋತುಚಕ್ರದ ಸಮಯದಲ್ಲಿ ಅತಿಯಾದ ರಕ್ತಸ್ರಾವ
4. ವಾಕರಿಕೆ ಮತ್ತು ವಾಂತಿ
5. ರಕ್ತದಿಂದ ಕೂಡಿದ ಮಲವಿಸರ್ಜನೆ
6. ಹೊಟ್ಟೆಯಲ್ಲಿ ವಿಪರೀತ ನೋವು.. ಮುಂತಾದವು.

ಈ ಖಾಯಿಲೆಯ ಮುಂದುವರಿದ ಹಂತಗಳಲ್ಲಿ

1. ಕಾಲಿನಲ್ಲಿ ರಕ್ತದ ಗಂಟುಗಳು (Deep vein thrombosis) ಕಾಣಿಸಿಕೊಂಡು ನೋವು, ಊತ ಉಂಟುಮಾಡಬಹುದು, ಅಷ್ಟೇ ಅಲ್ಲದೇ ಅವು ಶ್ವಾಸಕೋಶಕ್ಕೆ ಸೇರಿಕೊಂಡು ಪಲ್ಮನರಿ ಎಂಬಾಲಿಸಮ್‌ಗೆ ಸಹಾ ಕಾರಣವಾಗಬಹುದು.
2. ಗರ್ಭಪಾತ ಮತ್ತು ಬಂಜೆತನ ಉಂಟಾಗಬಹುದು. ಗರ್ಭಿಣಿಯರಲ್ಲಿ ರಕ್ತದೊತ್ತಡ, ರಕ್ತಸ್ರಾವ, ರಕ್ತಹೀನತೆ, ಮತ್ತು

ಅವಧಿಪೂರ್ವ ಜನನ ಸಂಭವಿಸಬಹುದು.
3. ಅತೀ ಕಿರಿಯ ವಯಸ್ಸಿನಲ್ಲಿ ಈ ಖಾಯಿಲೆ ಉಂಟಾದರೆ ಅವರು ಸ್ಟ್ರೋಕ್ ಗೆ ಒಳಗಾಗಬಹುದು.
4. ಹೃದಯ ಬಡಿತದಲ್ಲಿ ವ್ಯತ್ಯಾಸ, ಎದೆನೋವು, ಲಘು ಹೃದಯಾಘಾತ ಕಾಣಿಸಿಕೊಳ್ಳಬಹುದು.
5. ಚರ್ಮ ಸಂಬಂಧಿ ಸಮಸ್ಯೆಗಳಾದ ಚರ್ಮ ಕೆಂಪೇರುವುದು, ಉರಿ, ತುರಿಕೆ, ಗುಳ್ಳೆಗಳು ಮುಂತಾದ ಲಕ್ಷಣಗಳನ್ನು ಕಾಣಬಹುದು.
6. ನರಗಳ ತೊಂದರೆ, ತಲೆನೋವು, ಕೈ ಕಾಲುಗಳಲ್ಲಿ ಸೆಳೆತ, ರಕ್ತದಲ್ಲಿ ಪ್ಲೇಟ್ಲೆಟ್ ಕೊರತೆ ಉಂಟಾಗಬಹುದು.

ಈ ಖಾಯಿಲೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲವಾದರೂ ವೈದ್ಯಕೀಯ ಲೋಕ ಕಂಡುಕೊಂಡಿರುವಂತೆ

1. ಗರ್ಭಸಂಬಂಧಿ ತೊಂದರೆಗಳು
2. ಚಟುವಟಿಕೆ ರಹಿತ ಜೀವನ
3. ಧೂಮಪಾನ
4. ಗರ್ಭನಿರೋಧಕ ಮಾತ್ರೆಗಳ ಅತಿಯಾದ ಬಳಕೆ
5. ಅತಿಯಾದ ಬೊಜ್ಜು
6. ಅತಿಯಾದ ವ್ಯಾಯಾಮ ಮುಂತಾದವುಗಳಿಂದ ಈ ಖಾಯಿಲೆ ಉಂಟಾಗಬಹುದು. ಯಾವುದಾದರೂ ಇತರ ಆಟೋಇಮ್ಯೂನ್ ಖಾಯಿಲೆ ಹೊಂದಿದ್ದರೂ ಸಹಾ ಅದು ಆಂಟಿಫಾಸ್ಫೋಲಿಪಿಡ್ ಸಿಂಡ್ರೋಮ್‌ಗೆ ಬದಲಾಗಬಹುದು.

ಈ ಖಾಯಿಲೆಯು ಮುಂದುವರಿದ ಹಂತಗಳಲ್ಲಿ ಹೃದಯ ಸ್ಥಂಭನ, ಶ್ವಾಸಕೋಶಗಳ ತೊಂದರೆ, ಮೂತ್ರಪಿಂಡಗಳ ವೈಫಲ್ಯ, ಶಾಶ್ವತ ಬಂಜೆತನ ಮುಂತಾದ ತೊಂದರೆಗಳಿಗೆ ದಾರಿಯಾಗುವುದರಿಂದ ಲಕ್ಷಣಗಳು ಕಂಡುಬಂದ ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ ಪರೀಕ್ಷಿಸಿಕೊಳ್ಳುವುದು ಉತ್ತಮ. ಒಂದುವೇಳೆ ಖಾಯಿಲೆ ದೃಢವಾದರೆ ರಕ್ತ ಹೆಪ್ಪುಗಟ್ಟದೇ ಇರುವಂತೆ ಔಷಧಿಗಳನ್ನು ನೀಡುವ ಹಾಗು ಗರ್ಭಿಣಿಯರಿಗೆ ಅವಶ್ಯವಾದ ಆರೈಕೆ ನೀಡುವ ಮುಖಾಂತರ ನಿಯಂತ್ರಿಸಬಹುದು. ಖಾಯಿಲೆ ಬರುವ ಮೊದಲೇ ಆರೋಗ್ಯಕರ ಅಭ್ಯಾಸಗಳನ್ನು ಮೈಗೂಡಿಸಿಕೊಳ್ಳುವ ಮುಖಾಂತರ ಸುರಕ್ಷತೆ ಕಾಯ್ದುಕೊಳ್ಳುವುದು ಅತ್ಯವಶ್ಯ. ಅನಾವಶ್ಯಕವಾಗಿ ಗರ್ಭನಿರೋಧಕಗಳ ಬಳಕೆ ಮಾಡದಿರುವುದು ಉತ್ತಮ. ಇನ್ನು ದೇಹಕ್ಕೆ ಚಟುವಟಿಕೆ ನೀಡದೇ ಇರುವವರು ಮತ್ತು ಅತಿಯಾಗಿ ವ್ಯಾಯಾಮಾದಿಗಳನ್ನು ಮಾಡುವವರು ತಮ್ಮ ಅಭ್ಯಾಸಗಳನ್ನು ಒಂದಿಷ್ಟು ಬದಲಿಸಿಕೊಳ್ಳಬೇಕಿರುವುದು ಅನಿವಾರ್ಯ. ಆರೋಗ್ಯ ಕಾಳಜಿಯಿರುವ ಸರ್ವರೂ ಇದನ್ನು ಪಾಲಿಸುತ್ತಾರೆಂಬ ಆಶಾಭಾವ ವೈದ್ಯಕೀಯ ಲೋಕದ್ದು.

ಎಲ್ಲೆಲ್ಲೂ ಸಂಗೀತವೇ..

● ಅಜಯ್ ಅಂಗಡಿ

ಸಂಗೀತವೆಂದರೆ ಮನುಷ್ಯನಿಗೆ ದೊರೆತ ಡಿವೈನ್ ಗಿಫ್ಟ್. ಪ್ರಕೃತಿಯ ಕಣ ಕಣದಲ್ಲೂ ಸಂಗೀತವುಂಟು. ಮಾಧುರ್ಯಭರಿತವಾದುದನ್ನು ಕೇಳಿಸಿಕೊಳ್ಳುವ ವ್ಯವಧಾನ ಕೇಳುಗನಿಗಿರಬೇಕಷ್ಟೆ. ಸಂಗೀತ ಭಾಷೆಗಳ ಗಡಿಮೀರಿದ ವಿಶ್ವವ್ಯಾಪಿ. ಹೇಗೆ ಪಂಚಭೂತಗಳು ಅಸೀಮಿತವೋ ಸಂಗೀತವೂ ಹಾಗೆಯೇ. ಎಲೆಯ ಮರ್ಮರವೂ ಒಂದು ಸಂಗೀತದಂತೆ. ಬರೀ ಏಳು ಸ್ವರಗಳಿಂದ ಹೊಮ್ಮುವ ಸಂಗೀತದ ಅಲೆಗಳು ಭಾವಲೋಕದ ಕಡಲತೀರಕ್ಕೆ ಹಿತವಾಗಿ ಚುಂಬಿಸುವಂತೆ ಅಪ್ಪಳಿಸಿದಾಗ ಆಗುವ ಖುಷಿಯಿದೆಯಲ್ಲಾ ಅದು ಅವರ್ಣನೀಯ. ಸುಮ್ಮನೆ ಗುನುಗಿದರೂ ಗುನುಗುವಿಕೆಯಲ್ಲಿ ಶ್ರದ್ಧೆಯಿದ್ದರೆ ಸಂಗೀತವಾಗುತ್ತದೆ. ಸಂಗೀತದ ಶಕ್ತಿಯೇ ಅಂತಹದ್ದು.

ಸಂಗೀತಕ್ಕೇ ಒಂದು ಮಾಂತ್ರಿಕತೆಯಿದೆ. ಅದು ಎಂಥವರನ್ನೂ ಮಂತ್ರಮುಗ್ಧರನ್ನಾಗಿಸುತ್ತದೆ. ಪ್ರಪಂಚದಲ್ಲಿ ಆಗಿಹೋಗಿರುವ, ಆಗುತ್ತಿರುವ ಮತ್ತು ಆಗಲಿರುವ ಸಂಗೀತಜ್ಞರೆಲ್ಲರದ್ದೂ ಇದೇ ಮಾತು. ಎಲ್ಲೆಲ್ಲೂ ಸಂಗೀತವೇ ಇರುವಾಗ ಒಂಚೂರು ಮನಸ್ಸು ಮಾಡಿದರೆ ಸಾಮಾನ್ಯ ಕೂಡ ಸಂಗೀತದ ಮೇರು ಪರ್ವತವನ್ನೇ ಏರಬಲ್ಲ. ಮಾನಸಿಕ ರೋಗಗಳು ಸಂಗೀತದ ಸಾಮೀಪ್ಯದಿಂದ ಗುಣವಾಗುವುದೆಂದರೆ ಅದೇನು ಸಾಮಾನ್ಯವೇ? ಜಗತ್ತಿನ ಹಲವು ಕಡೆ ಇಂಥ ಘಟನೆಗಳು ಆಗಾಗ ಸಂಭವಿಸುತ್ತವೆ. ಸಂಗೀತವೂ ಅಷ್ಟೆ! ಯಾವ ದೇಶಕಾಲಗಳ ಹಂಗಿಲ್ಲದೆ ಸದಾ ಹರಿಯುವುದು ಪ್ರತಿ ಮನಸಿನ ಒಳಗೂ.

ಅವರವರ ಭಾವಕ್ಕೆ ಅವರವರ ಭಕುತಿಗೆ

ಪ್ರಸ್ತುತ ಜಗತ್ತಿನಲ್ಲಿ ಅನೇಕಾನೇಕ ಸಂಗೀತದ ಉಪಕರಣಗಳು ಇವೆ. ಅದರಿಂದ ಹೊರಹೊಮ್ಮುವ ನಾದದಲೆಗಳೂ ವಿಶಿಷ್ಟವೆ. ಯಾವ ಪ್ರಕಾರವನ್ನೂ ಹೀಗಳೆಯಲಾಗುವುದಿಲ್ಲ. ಕೆಲವರಿಗೆ ಶುದ್ಧ ಶಾಸ್ತ್ರೀಯ ಸಂಗೀತ ಇಷ್ಟ. ಹಲವರಿಗೆ ಸುಗಮ, ರ್‍ಯಾಪ್, ಪಾಪ್, ಜಾಝ್ ಇತ್ಯಾದಿ. ಅದು ಅವರವರ ಅಭಿರುಚಿ, ಸಂಗೀತವನ್ನು ಆಸ್ವಾದಿಸುವ ರೀತಿ. ಎಲ್ಲವೂ ಅವರವರ ಮೂಡ್‌ಗೆ ಸಂಬಂಧಿಸಿದಂತೆ. ಆದರೆ ನಿಸರ್ಗದ ಸಂಗೀತವಿದೆಯಲ್ಲಾ ಅದು ಯಾವತ್ತಿಗೂ ಸುಮಧುರ ಮತ್ತು ಶಾಶ್ವತ. ಹರಿವ ನೀರಿನ ಜುಳುಜುಳು ಸದ್ದು, ಪಕ್ಷಿಗಳ ಕಲರವ, ದುಂಬಿಯ ಝೇಂಕಾರ ಪ್ರತಿಯೊಂದಕ್ಕೂ ಅದರದ್ದೇ ಆದ ವೈಶಿಷ್ಟ್ಯತೆ ಮತ್ತು ಮಹತ್ವ ಖಂಡಿತಾ ಇದೆ. ಹೇಗೆ ಕೋಗಿಲೆಯ ಗಾನ ಸುಮಧುರ ನಾದವೋ..... ಹಾಗೆಯೇ ಸಿಂಹಗರ್ಜನೆ ಮತ್ತಿತರ ಪ್ರಾಣಿಗಳ ಸದ್ದು ಸಹ ಒಂದು ಸಂಗೀತದ ಲಹರಿ. ಒಟ್ಟಿನಲ್ಲಿ ಸಂಗೀತದ ಗಾಳಿ ಬೀಸದಿರುವ ಜಾಗವಿಲ್ಲ. ಸಂಗೀತವನ್ನು ಉಸಿರಾಡದ ಜೀವಸಂಕುಲವಿಲ್ಲ. ಯಾಕೆಂದರೆ ಅದೊಂದು ನಿರಂತರ ಧ್ಯಾನ. ಯು ವಿಲ್ ಗೆಟ್ ಮೋರ್ ದೆನ್ ಯು ಗಿವ್, ಹಾಗಾಗಿ ಎಲ್ಲವನ್ನೂ ಬದಿಗೊತ್ತಿ ಒಂದಷ್ಟು ಸಮಯ, ಸಂಗೀತ ಲೋಕದಲ್ಲಿ ಮನಸಾರೆ ವಿಹರಿಸೋಣ.

ಕೆಲವು ಹಾಡುಗಳು, ಕೆಲವು ಟ್ಯೂನ್‌ಗಳೇ ಹಾಗೇ. ಪದೇ ಪದೇ ನೆನಪಾಗುವ, ಪದೇ ಪದೇ ಕಾಡುವ ಎವರ್‌ಗ್ರೀನ್‌ಗಳು. ಅದೆಷ್ಟು ಹಳೆಯದಾದರೂ ಈಗಷ್ಟೇ ಮೂಡಿದ ತಾಜಾತನವಿರುತ್ತೆ ಅದರಲ್ಲಿ. ಸುಗಮ ಸಂಗೀತವಂತೂ ಜನಸಾಮಾನ್ಯರಿಗೂ ಅರ್ಥವಾಗುವಂಥದ್ದು. ಕವಿಯ ಭಾವನೆಗಳ ಹೊಳೆಯಲ್ಲಿ ಮಿಂದ ಸಾಲುಗಳನ್ನು ಜೇನಲ್ಲದ್ದಿ ತೆಗೆದಂತೆ ಸುಗಮ ಸಂಗೀತದ ಭಾವಗೀತೆಗಳ ಆಸ್ವಾದನ. ಆ ಅನುಭವವೇ ಕಿವಿಗೆ ಇಂಪು.

ಗಾನ ಲೋಕದಲ್ಲಿ ಛಾಪು ಮೂಡಿಸಿದವರು

ಜಗತ್ತಿನಲ್ಲಿ ಸಂಗೀತವನ್ನು ತಮ್ಮ ಅಗಾಧ ಪಾಂಡಿತ್ಯದಿಂದ, ಸತತ ಪರಿಶ್ರಮದಿಂದ ಕಲಿತು ಪ್ರಸ್ತುತಪಡಿಸಿ ಜನರ ಹೃದಯಕ್ಕೆ ಹತ್ತಿರವಾದವರು ಬಹಳಷ್ಟು ಮಂದಿ. ಆ ನಿಟ್ಟಿನಲ್ಲಿ ನೋಡುವುದಾದರೆ ಪಾಶ್ಚಾತ್ಯ ಸಂಗೀತದಲ್ಲಿ ಬಿಥೋವನ್, ಭಾರತೀಯ ಸಂಗೀತದಲ್ಲಿ ತಾನ್ ಸೇನ್, ಅಲಿ ಅಕ್ಬರ್ ಖಾನ್, ಪಂಡಿತ್ ರವಿಶಂಕರ್, ಎಸ್.ಪಿ.ಬಿ, ಭೀಮಸೇನ ಜೋಶಿ ಹಾಗೂ ಇತ್ತೀಚೆಗೆ ನಮ್ಮನ್ನಗಲಿದ ಪಂಡಿತ್ ರಾಜೀವ್ ತಾರಾನಾಥರಂತಹ ಮಹಾನ್ ಗಾನಮಾಂತ್ರಿಕರು, ವಾದ್ಯಪ್ರವೀಣರು ಸಂಗೀತವನ್ನೇ ಉಸಿರಾಡಿದವರು. ಹಿಂದೂಸ್ತಾನಿ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಮನಸೂರರು, ಗವಾಯಿಗಳು, ಗಂಧರ್ವರು, ಗಂಗೂಬಾಯಿ ಹಾನಗಲ್ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಪ್ರತಿಯೊಬ್ಬರೂ ಈ ಹಾದಿಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಸಾರ್ವಜನಿಕರ ಸಂಪತ್ತು ಅಪ್ಪರ್ ನ್ಯೂ ಪೋರ್ಟ್‌ಬೇ

● ಮಂಜುನಾಥ ಡಿ. ಎಸ್.

ಅಮೆರಿಕದ ದಕ್ಷಿಣ ಕ್ಯಾಲಿಫೋರ್ನಿಯದಲ್ಲಿ ಪ್ರಸ್ತುತ ಉಳಿದುಕೊಂಡಿರುವ ಕೆಲವೇ ಅಳಿವೆಗಳಲ್ಲಿ ಅಪ್ಪರ್ ನ್ಯೂ ಪೋರ್ಟ್ ಬೇ ಸಹ ಒಂದಾಗಿದೆ. ಇದು ಅತಿ ದೊಡ್ಡದಾದ ಹಾಗು ಮೂಲರೂಪದಲ್ಲಿರುವ ನದೀಮುಖವಾ ಗಿದೆ. ಪುರಾತನ ನದೀಪಾತ್ರದಲ್ಲಿ ಅಡಗಿಕೊಂಡಿರುವ ಇದು ಸ್ಯಾನ್ ಡಿಯೆಗೊ ಕೊಲ್ಲಿಯಿಂದ ನ್ಯೂ ಪೋರ್ಟ್ ಬಂದರಿನವರೆಗೆ ಹರಡಿಕೊಂಡಿದೆ. ಇದೊಂದು ಸಂರಕ್ಷಿತ ಪ್ರದೇಶವಾಗಿದೆ.

ಮೆಡಿಟರೇನಿಯನ್ ವಾತಾವರಣ ಹೊಂದಿರುವ ಈ ಪ್ರದೇಶವು 500ಕ್ಕೂ ಅಧಿಕ ಸಸ್ಯ ಸಂಕುಲಗಳಿಗೂ, 450ಕ್ಕೂ ಹೆಚ್ಚು ಪ್ರಾಣಿ ಪ್ರಭೇದಗಳಿಗೂ ತವರಾಗಿದೆ. ಇವುಗಳಲ್ಲಿ ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಸಸ್ಯಗಳು ಹಾಗು ಪ್ರಾಣಿಗಳೂ ಸೇರಿವೆ. ಇಲ್ಲಿ ಸುಮಾರು 200 ಸಂಕುಲಗಳಿಗೆ ಸೇರಿದ ಬಾನಾಡಿಗಳನ್ನು ಗುರ್ತಿಸಲಾಗಿದೆ. ಚಳಿಗಾಲದಲ್ಲಿ ಸುಮಾರು 30,000 ಪಕ್ಷಿಗಳು ಕೆನಡಾ, ಅಲಾಸ್ಕಾ, ಮತ್ತು ದಕ್ಷಿಣದ ಸಮತಟ್ಟು ಪ್ರದೇಶಗಳಿಂದ ಇಲ್ಲಿಗೆ ವಲಸೆ ಬರುತ್ತವೆಂದು ಅಂದಾಜಿಸಲಾಗಿದೆ. ಇತರ ಋತುಗಳಲ್ಲಿ ಮೆಕ್ಸಿಕೊ ಮತ್ತು ದಕ್ಷಿಣ ಅಮೆರಿಕದಿಂದ ಹಕ್ಕಿಗಳು ವಂಶಾಭಿವೃದ್ಧಿಗಾಗಿ ಇಲ್ಲಿಗೆ ಬರುತ್ತವಂತೆ. ಇವಲ್ಲದೆ ಇಪ್ಪತ್ತು ಬಗೆಯ ಸಸ್ತನಿಗಳು, ಎಪ್ಪತ್ತು ರೀತಿಯ ಮೀನುಗಳು ಸಹ ಇಲ್ಲಿವೆಯಂತೆ.





ಜ್ಞಾನಾರ್ಜನೆಯ ಕೇಂದ್ರ

ಈ ಪ್ರದೇಶದಲ್ಲಿ ನ್ಯೂ ಪೋರ್ಟ್ ಅಕ್ವಾಟಿಕ್ ಸೆಂಟರ್, ವಿಸ್ಟಾ ಪಾಯಿಂಟ್, ಬಿಗ್ ಕ್ಯಾನ್ಯನ್ ಟ್ರೇಯ್ಲ್, ಬ್ಯಾಕ್ ಬೇ ಸೈನ್ಸ್ ಸೆಂಟರ್, ಮತ್ತು ಪೀಟರ್ ಅಂಡ್ ಮೇರಿ ಮುತ್ ಇಂಟರ್‌ಪ್ರಿಟೀವ್ ಸೆಂಟರ್ ಇವೆ. ಜ್ಞಾನಾರ್ಜನೆಯ ದೃಷ್ಟಿಯಿಂದ ಇವುಗಳಲ್ಲಿ ಪ್ರಮುಖ ಎನಿಸುವುದು ಪೀಟರ್ ಅಂಡ್ ಮೇರಿ ಮುತ್ ನಿರೂಪಣಾ ಕೇಂದ್ರ. ಹತ್ತುಸಾವಿರ ಚದರಡಿ ವಿಸ್ತೀರ್ಣದ ಈ ಕಟ್ಟಡ ಪ್ರದರ್ಶನಾಲಯ, ಥಿಯೇಟರ್, ಕ್ರಿಯಾತ್ಮಕ ಕಲಿಕೆಗೆ ಅನುಕೂಲ ಕಲ್ಪಿಸುವ ಸ್ಟುಡಿಯೊ, ಗ್ರಂಥಾಲಯ, ಸಭಾಂಗಣ, ಇತ್ಯಾದಿಗಳನ್ನು ಒಳಗೊಂಡಿದೆ. ಮರುಬಳಕೆಯ ವಸ್ತುಗಳನ್ನು ಬಳಸಿ ನಿರ್ಮಿಸಲಾಗಿರುವುದು ಈ ಕಟ್ಟಡದ ಅನನ್ಯತೆ.

ಹನ್ನೆರಡು ಸಾವಿರ ಚದರಡಿಯ ಹೊರಾಂಗಣದಲ್ಲಿ ವೃತ್ತರಂಗಭೂಮಿಯೂ ಸೇರಿದಂತೆ ಹಲವಾರು ಸೌಲಭ್ಯಗಳಿವೆ. ಗರಿಗೆದರಿದ ಹಕ್ಕಿಗಳ ಕಂಚಿನ ಪ್ರತಿಮೆಗಳು ಈ ಕೇಂದ್ರದ ಪ್ರವೇಶ ದ್ವಾರದ ಬಳಿ ಇವೆ.ಮಾರ್ಷ್ ಬರ್ಡ್ಸ್ ರೈಸಿಂಗ್ ಎಂಬ ಶೀರ್ಷಿಕೆಯ ಈ ಕಲಾಕೃತಿಗಳ ಶಿಲ್ಪಿ ಟಾಂ ವ್ಯಾನ್ ಜಾಂಟ್. ನಿರೂಪಣಾ ಕೇಂದ್ರಕ್ಕೆ ದೇಣಿಗೆ ನೀಡಿದ ದಾನಿಗಳಿಗೆ ಗೌರವ ಸೂಚಿಸಲು ಈ ಶಿಲ್ಪಗಳನ್ನು 2003ರಲ್ಲಿ ಸ್ಥಾಪಿಸಲಾಯಿತು.

ಬೆಳೆದು ಬಂದ ಹಾದಿ

ಅಪ್ಪರ್ ನ್ಯೂ ಪೋರ್ಟ್ ಬೇ ಸಾರ್ವಜನಿಕ ಸಂಪತ್ತಾಗಿ ಮುಂದಿನ ಪೀಳಿಗೆಗಳ ಒಳಿತಿಗಾಗಿ ಉಳಿಯಬೇಕೆಂದು ಸಂಕಲ್ಪಿಸಿದ ಫ್ರಾನ್ಸೆಸ್ ಮತ್ತು ಫ್ರ್ಯಾಂಕ್ ರಾಬಿನ್ಸನ್ ಇದಕ್ಕಾಗಿ 1963ರಲ್ಲಿ ಹೋರಾಟ ಆರಂಭಿಸಿದರು. ಈ ದಂಪತಿಯ ಪರಿಶ್ರಮ 1973ರಲ್ಲಿ ಫಲಪ್ರದವಾಯಿತು. 1975ರ ಏಪ್ರಿಲ್ 11ರಂದು ಈ ಬೇ ಅಸ್ತಿತ್ವಕ್ಕೆ ಬಂದಿತು. ಇವರಿಬ್ಬರ ಇಚ್ಛಾಶಕ್ತಿ ಈ ಸುಂದರ ಪರಿಸರದ ಉಳಿವಿಗೆ ಕಾರಣವಾಗಿದೆ. ಫ್ರಾನ್ಸೆಸ್ ತನ್ನ ಎಂಬತ್ತೆರಡನೆಯ ವಯಸ್ಸಿನಲ್ಲಿ 2001ರಲ್ಲಿ ಅಸುನೀಗಿದರೆ, ಎರಡು ವರ್ಷಗಳ ನಂತರ ಆಕೆಯ ಪತಿ ಫ್ರ್ಯಾಂಕ್ ತನ್ನ ಎಂಬತ್ನಾಲ್ಕರ ಹರೆಯದಲ್ಲಿ ಇಹಲೋಕ ತ್ಯಜಿಸಿದರು. ಈ ಜೋಡಿ, ನ್ಯೂ ಪೋರ್ಟ್ ಬೇ ಆಸುಪಾಸಿನಲ್ಲಷ್ಟೇ ಅಲ್ಲದೆ ಇಡೀ ಆರೆಂಜ್ ಕೌಂಟಿಯಲ್ಲೇ ಪ್ರಖ್ಯಾತರಾದರು. ಇವರನ್ನು ಆರೆಂಜ್ ಕೌಂಟಿ ಸಂರಕ್ಷಣಾ ಚಳವಳಿಯ ಮಾತಾಪಿತರೆಂದು ಪರಿಗಣಿಸಲಾಗಿದೆ.

ಚಿಣ್ಣರನ್ನು ಪರಿಸರದೆಡೆಗೆ ಆಕರ್ಷಿಸುವ ಸಾಧನ

ಈ ಕೇಂದ್ರದಲ್ಲಿ ವಿಶೇಷವಾಗಿ ಮಕ್ಕಳು ತಮ್ಮ ಪರಿಸರದ ಬಗ್ಗೆ ಅರಿತುಕೊಳ್ಳಲು ನೆರವಾಗುವ ಸಾಧನಗಳಿವೆ. ಹಾವುಗಳು ಹಾಗು ಜಲಚರಗಳನ್ನೂ ಇಲ್ಲಿ ಪ್ರದರ್ಶಿಸಲಾಗಿದೆ. ಮಾದರಿಗಳನ್ನು ಬಳಸಿಕೊಂಡು ಹಕ್ಕಿಗಳ ಕುರಿತ ಮಾಹಿತಿ

ನೀಡುವ ವ್ಯವಸ್ಥೆ ಇಲ್ಲಿದೆ. ಪ್ರಾಣಿಗಳ ಹೆಜ್ಜೆಗುರುತುಗಳನ್ನಾಧರಿಸಿ ಅವುಗಳನ್ನು ಗುರುತಿಸಲು ನೆರವಾಗುವ ಫಲಕವನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಇಲ್ಲಿನ ಪ್ರಕಟಣಾ ಫಲಕದಲ್ಲಿ ದೈನಂದಿನ ಹವಾಮಾನ, ಅಂದಿನ ಪ್ರಕೃತಿ ವಿಶೇಷ, ಅರಳಿದ ಪುಷ್ಪಗಳ ಮಾಹಿತಿ, ಅಂದು ವಿಶೇಷವಾಗಿ ಗೋಚರಿಸಿದ ವನ್ಯಜೀವಿ, ಇತ್ಯಾದಿ ವಿವರಗಳನ್ನು ಪ್ರಕಟಿಸುತ್ತಾರೆ. ಇದರಿಂದಾಗಿ ಅಲ್ಲಿನ ಮಕ್ಕಳು ಎಳವೆಯಿಂದಲೇ ಪರಿಸರ ಪ್ರೇಮ ಹಾಗು ಪರಿಸರ ಕಾಳಜಿ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.

ಈ ಕೇಂದ್ರದಲ್ಲಿ ಫೆಬ್ರವರಿಯಲ್ಲಿ ವರ್ಲ್ಡ್ ವೆಟ್ ಲ್ಯಾಂಡ್ಸ್ ಡೇ, ಏಪ್ರಿಲ್ ತಿಂಗಳಲ್ಲಿ ಅರ್ಥ್ ಡೇ, ಸೆಪ್ಟಂಬರ್‌ನಲ್ಲಿ ಕೋಸ್ಟಲ್ ಕ್ಲೀನ್ ಅಪ್ ಡೇ ಆಚರಿಸಲಾಗುತ್ತದೆ. ಪ್ರತಿ ದಿನ ಬೆಳಗಿನ ಹತ್ತರಿಂದ ಸಂಜೆ ನಾಲ್ಕರ ತನಕ ಈ ನಿರೂಪಣಾ ಕೇಂದ್ರ ಸಾರ್ವಜನಿಕರ ಭೇಟಿಗೆ ತೆರೆದಿರುತ್ತದೆ. ಸೋಮವಾರ ರಜಾದಿನ. ಇದರ ವೀಕ್ಷಣೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ.